
ಮೈಸೂರು ಮತ್ತು ಸುರಪುರ ಸಾಂಪ್ರದಾಯಿಕ ಕಲಾಕೃತಿಗಳ : ತೌಲನಿಕ ಅಧ್ಯಯನ

ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನ ಸಂಪ್ರಬಂಧ





ಸಂಶೋಧಕರು

ನೋಂದಣಿ ಸಂಖ್ಯೆ : ೧೮೦೧೧೫೦೩೦೦೭೮

ಚಿತ್ರಕಲಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೯

ಮೈಸೂರು ಮತ್ತು ಸುರಪುರ ಸಾಂಪ್ರದಾಯಿಕ ಕಲಾಕೃತಿಗಳ : ತೌಲನಿಕ ಅಧ್ಯಯನ

(ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಸಾದರಪಡಿಸಿದ ಸಂಶೋಧನ ಸಂಪ್ರಬಂಧ)

ಸಂಶೋಧಕರು
ಎಂ.ಫಿಲ್ ವಿದ್ಯಾರ್ಥಿ
ನೋಂ ಸಂಖ್ಯೆ : ೧೮೦೧೧೫೦೩೦೦೨೪

ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೯

ಪರಿವಿಡಿ

ಅಧ್ಯಾಯ– ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ ೦೧–೦೭

ಅಧ್ಯಾಯ– ಎರಡು

ಭಾರತೀಯ ಸಾಂಪ್ರದಾಯಿಕ ಕಲಾಕೃತಿಗಳ ಐತಿಹಾಸಿಕ ನೋಟ ೦೮–೨೦

ಅಧ್ಯಾಯ– ಮೂರು

ಮೈಸೂರು ಸಾಂಪ್ರದಾಯಿಕ ಕಲಾಕೃತಿಗಳ ಹುಟ್ಟು ಮತ್ತು ಬೆಳವಣಿಗೆ ೨೧–೪೭

ಅಧ್ಯಾಯ– ನಾಲ್ಕು

ಸುರಪುರ ಸಾಂಪ್ರದಾಯಿಕ ಕಲಾಕೃತಿಗಳ ಹುಟ್ಟು ಮತ್ತು ಬೆಳವಣಿಗೆ ೪೮–೮೨

ಅಧ್ಯಾಯ– ಐದು

ಮೈಸೂರು ಮತ್ತು ಸುರಪುರ ಸಾಂಪ್ರದಾಯಿಕ ಕಲಾಕೃತಿಗಳ ತೌಲನಿಕ ಅಧ್ಯಯನ ೮೩–೯೫

ಅಧ್ಯಾಯ– ಆರು

ಸಮಾರೋಪ ೯೬–೧೦೦

ಅನುಬಂಧಗಳು

೧. ಗ್ರಂಥಋಣ
೨. ಸಂಕ್ಷೇಪಗಳು
೩. ಅಂತರಜಾಲ
೪. ವಕ್ತೃಗಳ ಪಟ್ಟಿ

ಅಧ್ಯಾಯ-ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

'ಕಲೆಯು ಪ್ರಾಚೀನ ಕಾಲದಿಂದ ಇಂದಿನವರೆಗೆ ಜನರ ಮಧ್ಯ ಇರುವ ಒಂದು ಬಗೆಯ ಸಂವಾಹನ ಮಾಧ್ಯಮವಾಗಿ ಕಾರ್ಯ ನಿರ್ವಹಿಸುತ್ತಾ ಬಂದಿದೆ. ಆದಿಮಾನವನ ಕಾಲದಿಂದಲೂ ತಮ್ಮ ಅಭಿಪ್ರಾಯಗಳನ್ನು ಮತ್ತೊಬ್ಬರಿಗೆ ಸನ್ನೆಯ ಮೂಲಕ ಹಾಗೂ ಚಿತ್ರಕಲೆಯ ಮೂಲಕ ತಿಳಿಸುವ ಪ್ರಕ್ರಿಯೇ ಪ್ರಾಚೀನ ಕಾಲದಿಂದಲೇ ನಡೆದುಬಂದಿದೆ. ಮುಂದೆ ಮನುಷ್ಯ ನಾಗರಿಕ ನಾದೆಂತೆಲ್ಲ ತಮ್ಮ ಜೀವನಶೈಲಿಯ ಬದಲಾಗುತ್ತ ತಮ್ಮ ದೈನಂದಿನ ಕಾರ್ಯ ಚಟುವಟಿಕೆಗಳು ಬದಲಾಗುತ್ತಾ ಹೋದವು. ಹೀಗೆ ಕಲೆಯ ಉಗಮವು ಹಲವಾರು ಕಾರಣಗಳಿಂದ ಉದ್ಭವಗೊಂಡಿತು. ಇಂದಿನ ಭಾಷೆ ಹೇಗೆ ಜನರ ಅನಿಸಿಕೆ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಒಂದು ಮಾಧ್ಯಮವಾಗಿದೆಯೇ ಹಾಗೆಯೇ ಅದಿಮಾನವ ಕಾಲದ ಜನರಿಗೆ ಕಲೆಯ ಅಷ್ಟೇ ಪ್ರಭಾವಶಾಲಿ ಮಾಧ್ಯಮವಾಗಿತ್ತು. ಅದಿಮಾನವರು ತಮ್ಮ ಅಭಿಪ್ರಾಯಗಳನ್ನು ಸನ್ನೆಯ ಮೂಲಕ ಅಥವಾ ಶಬ್ದದ ಮೂಲಕ ವ್ಯಕ್ತಪಡಿಸಲಾಗದ್ದನ್ನು ಚಿತ್ರದ ಮೂಲಕ ವ್ಯಕ್ತಪಡಿಸಿ ಸಂತೋಷ ಪಡುತ್ತಿದ್ದರು. ಆ ಸಂತೋಷ ಉಲ್ಲಾಸವನ್ನು ಕಲೆಯ ಮೂಲಕ ಪಡೆದುಕೊಂಡು ತಮ್ಮ ದಿನದ ಆಯಾಸವನ್ನು ಚಿತ್ರವನ್ನು ಕೆತ್ತುವುದರ ಮೂಲಕ ಎಲ್ಲಾ ಆಚಾರ ವಿಚಾರಗಳನ್ನು ಸಂತೋಷವನ್ನು ಅನಿಸಿಕೆಗಳನ್ನು ಗೆಲುವಿನ ಸಂಕೇತವನ್ನು ಧೃಡತೆಗಾಗಿ ನಂಬಿಕೆಗಾಗಿ, ಭಕ್ತಿಗಾಗಿ, ಸಂಪ್ರೀತಿಗಾಗಿ ರಚಿಸುತ್ತಿದ್ದರು. ಇದು ಅದಿಮಾನವ ಜನಾಂಗದ ಕಲೆ ಎಂದು ಜಾನಪದಕಲೆ ಎಂದು ಮಾರ್ಗ ಅಥವಾ ಶಿಷ್ಟ ಪದಕಲೆ ಎಂದು ಮುಂದುವರಿಯುತ್ತಾ ಇಂದಿನವರೆಗೂ ತನ್ನ ಸ್ಥಾನಮಾನವನ್ನು ಉಳಿಸಿಕೊಂಡು ಬಂದಿದೆ.

ಮೇಲೆ ಹೇಳಿದ ಹಾಗೇ ಅದಿಮಾನವ ಕಲೆಯ ಮುಂದುವರಿದ ಭಾಗ ಜಾನಪದ, ಜಾನಪದದ ಮುಂದುವರಿದ ಭಾಗ ಶಿಷ್ಟಪದ ಎಂದು ಒಪ್ಪಿಕೊಂಡಿದ್ದೇವೆ. ಮಾನವನ್ನು ನಾಗರೀಕನಾದಂತೆಲ್ಲ ತನ್ನ ಜೀವನ ಶೈಲಿ ಬದಲಾಯಿಸಿಕೊಳ್ಳುತ್ತಾ ಬಂದಿರುವುದು ತಿಳಿದ ವಿಷಯ, ಬಂಡೆಯ ಮೇಲೆ ರೂಪಿತವಾದ ಚಿತ್ರಗಳು, ಸಮ ನೆಲದ ಮೇಲೆ ನಿರ್ಮಾಣಗೊಂಡ ಗುಡಿಸಲು, ಮನೆಗಳಿಗೆ ರೂಪಿತವಾದವು. ಮನುಷ್ಯ ದೇವಾಲಯಗಳನ್ನು ನಿರ್ಮಾಣ ಮಾಡುವ ಆಲೋಚನೆ ಬಂದಿದ್ದು, ತಾನು ಒಂದು ವ್ಯವಸ್ಥಿತ ಗೂಡು ನಿರ್ಮಾಣವಾದ ನಂತರ, ತನ್ನಂತೆಯೇ ದೇವರಿಗೂ ಒಂದು ಅದರದ್ದೇ ಆದ ಒಂದು ಗೂಡು ನಿರ್ಮಾಣವಾಗಬೇಕು ಎಂಬ ಆಲೋಚನೆಯಿಂದ ದೇವಾಲಯಗಳು ನಿರ್ಮಾಣ ಗೊಂಡವು. ಆ ದೇವಾಲಯಗಳಲ್ಲಿ ನಿರ್ಮಾಣವಾಗುವ ಚಿತ್ರಗಳು ಹಲವಾರು ಉದ್ದೇಶಗಳಿಂದಕೂಡಿದ್ದವು. ಭಯ, ಭಕ್ತಿ, ನಂಬಿಕೆ, ಸಾಂಸ್ಕೃತಿಕ ಹಿನ್ನೆಲೆ, ಧರ್ಮ ಹಿಂದಿನ ಪೂರ್ವಜರನ್ನು ಗೌರವಿಸುವ ಭಾವನೆ, ನೀತಿ, ಧೈರ್ಯ ಹೀಗೆ ಹಲವಾರು ಉದ್ದೇಶಗಳಿಂದ ರೂಪ ಗೊಂಡವುಗಳಾಗಿವೆ. ಈ ರೀತಿ ರಚನೆಯಾದ ಚಿತ್ರಗಳು, ಧರ್ಮದ ಪ್ರಚಾರಕ್ಕಾಗಿಯೋ, ನೀತಿ ಪಾಠವಾಗಿಯೋ. ಭಕ್ತಿಯ ಸಂಕೇತವಾಗಿಯೋ ಗೌರವದಿಂದಲೋ ರೂಪಗೊಂಡ ಚಿತ್ರಗಳು ಆಯಾ ಧರ್ಮವನ್ನು ಪ್ರತಿನಿಧಿಸುವ ಚಿತ್ರಗಳಾದವು. ಕೆಲವು ಕಡೆ ಎಲ್ಲಾ ಧರ್ಮವನ್ನು ಮೀರಿ ಜನರಿಗೆ ನೈತಿಕತೆಯನ್ನು ತಿಳಿಸಿಕೊಡುವ ಉದ್ದೇಶದಿಂದ ರೂಪಿತವಾದ ಹಲವಾರು ಚಿತ್ರಗಳನ್ನು ನಾವು ನೋಡಬಹುದು.

ಹೀಗೆ ಹಲವಾರು ಉದ್ದೇಶಗಳಿಂದ ರೂಪಗೊಂಡ ಚಿತ್ರವನ್ನು ನಾವು ದೇವಾಲಯ, ಮಠ, ಶ್ರೀಮಂತ ವರ್ಗದ ಜನರ ಮನೆ, ಚರ್ಚ್‌ಗಳಲ್ಲಿ, ಅರಮನೆಗಳಲ್ಲಿ ಇಂದಿಗೂ ನಾಡಿನ ಉದ್ದಕ್ಕೂ ಈ ರೀತಿಯ ಸಾಂಪ್ರದಾಯಿಕ ಭಿತ್ತಿಚಿತ್ರಗಳನ್ನು ಕಾಣಬಹುದು. ಈ ಚಿತ್ರಕಲೆಯು ನಮ್ಮ ಸಮಾಜದ ಹಿಂದಿನ ಜನರ ಜೀವನ ಶೈಲಿ, ಅರ್ಥಿಕತೆ, ಧಾರ್ಮಿಕತೆ ಹಾಗೂ ಸಂಸ್ಕೃತಿಯ ಅನ್ಯನತೆಯನ್ನು ತಿಳಿಸುವುದರ ಜೊತೆಗೆ ಅಂದಿನ ಜನರ ಆನಂದವನ್ನು ನೀಡುವ ಸಮೃದ್ಧಿತೆಯ ಸಂಕೇತವಾಗಿ ಪ್ರತಿನಿಧಿಸುತ್ತವೆ, ಮಾತ್ರವಲ್ಲದೇ ಸಾವಿರಾರು ವರ್ಷಗಳ ಇತಿಹಾಸವನ್ನು ಕಟ್ಟಿಕೊಡುವ ಸಾಮರ್ಥ್ಯ ಕಲೆಗೆ ಇದೆಯೆಂದು ಹೆಮ್ಮೆಯಿಂದ ಹೇಳಬಹುದು. ಏಕೆಂದರೆ ಕಲೆಯು ಇತರೆ ಮಾಧ್ಯಮಗಳಿಗಿಂತ ಭಿನ್ನ ಮತ್ತು ಸರಳ ಭಾಷೆ, ಸನ್ನೆ, ಶಬ್ದ ನಿರ್ವಹಿಸುವ ಕಾರ್ಯವನ್ನು ಚಿತ್ರಕಲೆಯೊಂದು ನಿಭಾಯಿಸಬಲ್ಲ, ಅರ್ಥ ಮಾಡಿಸಬಲ್ಲ ಶಕ್ತಿ ಕಲೆಗಿದೆ"[೧]. ಉದಾಹರಣೆ ನಮ್ಮ ಪವಿತ್ರ ಗ್ರಂಥಗಳಾದ ರಾಮಾಯಣ ಮತ್ತು ಮಹಾಭಾರತದ ಕಥೆ ದೃಶ್ಯಗಳನ್ನು ಬಹಳ ಸರಳವಾಗಿ ಮತ್ತು ಸ್ಪಷ್ಟವಾಗಿ ಜನರಿಗೆ ತಿಳಿದಿರುವುದು ಭಾಷೆಯಿಂದಲ್ಲಾ ಚಿತ್ರಗಳಿಂದ ಎಂದು ಹೇಳಬಹುದು.

೧. ಕಾಂತರಾಜು ಸಿ.ಎಸ್ : ಕೆರೆಗೋಡಿ ಮತ್ತು ರಂಗಾಪುರದ ಭಿತ್ತಿ ಚಿತ್ರಗಳು ಒಂದು ತೌಲನಿಕ ಅಧ್ಯಯನ. (ಅ.ಪ್ರ, ಕಿ.ಪ್ರ). ಪು.ಸಂ-೧

ಅಧ್ಯಯನ ಉದ್ದೇಶ :

ಪದವಿ ಹಂತದ ಪಠ್ಯಕ್ರಮದಲ್ಲಿ ಹಲವಾರು ವಿಷಯಗಳಲ್ಲಿ ನನ್ನ ನೆಚ್ಚಿನ ವಿಷಯಗಳಾದ ವಸ್ತು ಚಿತ್ರ, ನಿಸರ್ಗ ಚಿತ್ರ, ನೈಜ ಚಿತ್ರ ಹೀಗೆ ಕೆಲವು ಪ್ರಾಯೋಗಿಕ ವಿಷಯಗಳಲ್ಲಿ ಸಾಂಪ್ರದಾಯಿಕ ಚಿತ್ರಕಲೆಯು ಒಂದಾಗಿದೆ, ಹೀಗಾಗಿ ನಾನು ಅನೇಕ ಸಾಂಪ್ರದಾಯಿಕ ಚಿತ್ರಗಳನ್ನು ರಚಿಸಿಸುವುದರ ಜೊತೆಗೆ ಅಲ್ಪಸ್ವಲ್ಪ ಇತಿಹಾಸ ಕೂಡ ಓದಿಕೊಂಡಿದ್ದೆನೆ. ಈ ವಿಷಯದ ಬಗ್ಗೆ ಮೊದಲಿನಿಂದಲೂ ಹೆಚ್ಚಿನ ವಿದ್ಯಾಭಾಸ ಮಾಡಬೇಕೆಂದು ಅನಿಸಿತ್ತು, ಅದ್ದರಂತೆ ಈ ವಿಷಯದ ಕುರಿತು ಡಾ. ಮೋಹನ್‌ರಾವ್ ಬಿ. ಪಂಚಾಳ ಮಾರ್ಗದಶಕರೊಂದಿಗೆ ಚರ್ಚಿಸಿದಾಗ ಅವರು ಒಪ್ಪಿಗೆ ನೀಡಿದ್ದರು. ಹೀಗಾಗಿ ಮೈಸೂರು ಮತ್ತು ಸುರಪುರ ಸಾಂಪ್ರದಾಯಿಕ ಕಲಾಕೃತಿಗಳ ತೌಲನಿಕ ಅಧ್ಯಯನ ಮಾಡಲು ಇದೊಂದು ಉತ್ತಮವಾದ ಅವಕಾಶವಾಯಿತ್ತು.

ಲಲಿತಕಲೆಗಳು ಅಂದಿನಿಂದ ಇಂದಿನವರೆಗೆ ಜನಾಂಗದ ಪ್ರತಿಬಿಂಬವಾಗಿ ಪ್ರತಿನಿಧಿಕರಣವಾಗಿ ಸಮಾಜದ ಆಯಾ ಕಾಲದ ಸಂಗತಿಗಳನ್ನು ಅಂದಿನ ಸಂಸ್ಕ್ರತಿಯನ್ನು ಮುಂದಿನ ಪೀಳಿಗೆಗೆ ಸಾರುತ್ತ ನಾಡಿನ ಹಿರಿಮೆಯನ್ನು ಇತಿಹಾಸವಾಗಿಸಿ ನಾಡಿನ ಏಳಿಗೆಗೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಕಾರ್ಯನಿರ್ವಹಿಸುತ್ತಾ ಬಂದಿದೆ. ಈ ಕ್ಷೇತ್ರವು ನೀಡುತ್ತಿರುವ ಕೊಡುಗೆ ಅನಂತ. ಹೀಗೆ ಕನ್ನಡ ನಾಡಿನ ಕಲೆಯು, ಕಲಾ ಕ್ಷೇತ್ರಕ್ಕೆ ತನ್ನದೇ ಆದ ಕೊಡುಗೆಯನ್ನು ಸಾಂಪ್ರದಾಯಿಕ ಚಿತ್ರಗಳು ನೀಡುತ್ತಾ ಬಂದಿವೆ. ಈ ಹಿನ್ನೆಲೆಯಲ್ಲಿ ನಾಡಿನ ಹಲವಾರು ಸ್ಥಳಗಳಲ್ಲಿ ಅತ್ಯುತ್ತಮ ಸಾಂಪ್ರದಾಯಿಕ ಕಲಾಕೃತಿಗಳ ನಿರ್ಮಾಣಗೊಂವೆ, ಕಲಾವಿದರ ನೈಪುಣ್ಯತೆ, ಪ್ರಾವೀಣ್ಯತೆ, ರೇಖಾ ಲಾಲಿತ್ಯ, ವೈವಿಧ್ಯಮಯವಾಗಿದೆ. ಒಂದು ನಾಡಿನ ಒಂದು ಪ್ರದೇಶದ ಹಿರಿಮೆ, ಸಾಂಸ್ಕ್ರತಿಕ ಹಿನ್ನೆಲೆಯನ್ನು ಆ ಸ್ಥಳದ ಇತಿಹಾಸವನ್ನು ಕಟ್ಟಿಕೊಂಡುವುದರ ಮುಖಾಂತರ ವ್ಯಕ್ತಿ ಅಥವಾ ಜನಾಂಗ ತಮ್ಮ ಸಾಂಸ್ತ್ರತಿಕ ಹಿನ್ನೆಲೆಯನ್ನು ಹೇಗೆ ಪ್ರತಿಬಿಂಬಿಸಿದ್ದಾರೆ ಎಂಬುದರ ಅರಿವು ಮೂಡಿಸುವಲ್ಲಿ ಸಾಂಪ್ರದಾಯಿಕ ಚಿತ್ರಗಳು ಯಶ್ವಸಿಯಾಗಿದೆ ಎಂಬುದನ್ನು ತಿಳಿಸುವ ಹಿನ್ನೆಲೆಯಲ್ಲಿ ಪ್ರಸುತ್ತ ಅಧ್ಯಯನದ ಉದ್ದೇಶವಾಗಿದೆ.

ಸಾಂಪ್ರದಾಯಿಕ ಕಲೆಯ ಅಧ್ಯಯನದಿಂದ ಅಂದಿನ ರಾಜ ಮನೆತನ ಕಲೆಗೆ ನೀಡಿದ ಪ್ರೋತ್ಸಾಹ ಮತ್ತು ಕಲಾವಿದರಿಗೆ ನೀಡಿದ ಗೌರವ, ಆ ಪ್ರದೇಶದ ಇತಿಹಾಸ ಅಲ್ಲಿನ ಸಾಂಸ್ಕ್ರತಿಕ ಧಾರ್ಮಿಕ, ರಾಜಕೀಯ ಹಾಗೂ ಅರ್ಥಿಕತೆಗಳನ್ನು ತಿಳಿಯಲು ಸಹಕಾರವಾಗುತ್ತದೆ. ಭಿತ್ತಿಯ ರಚನಾ ವಿಧಾನ ಕಲಾಕ್ಷೇತ್ರದಲ್ಲಿ ಹಲವಾರು ತಾಂತ್ರಿಕ ಅಂಶಗಳು, ವಿಧಾನಗಳು, ಕಲಾವಿದನ ಕೌಶಲ್ಯ, ಕಲ್ಪನಾ ಶಕ್ತಿ, ದೈವಭಕ್ತಿ ಸಾಮಾಜಿಕ ಕಳಕಳಿ ಕಲಾವಿದರ ಬದುಕು ಹಾಗೂ ಅರ್ಥಿಕ ಸ್ಥಿತಿಗತಿಗಳನ್ನು ಈ ಎಲ್ಲಾ ಅಂಶಗಳ ಬಗ್ಗೆ ತಿಳಿಯಲು ಈ ಅಧ್ಯಯನ ಸಹಕಾರಿಯಾಗಿದೆ.

ಪ್ರಸ್ತುತ ಅಧ್ಯಯನವು ಮೈಸೂರು ಮತ್ತು ಸುರಪುರ ಸಾಂಪ್ರದಾಯಿಕ ಕಲಾಕೃತಿಗಳ ಶೈಲಿಗಳ ಇತಿಹಾಸ, ರಾಜಮನೆತನದ ಕಲಾವಿದರಿಗೆ ನೀಡಿದ ಪ್ರೋತ್ಸಾಹ, ಕಲಾವಿದರ ಕೊಡುಗೆ, ಈ ಕಲೆಯಿಂದ ಅಲ್ಲಿನ ಜನರ ಸಾಮಾಜಿಕ ಜೀವನ ಕ್ರಮ ಸಾಂಸ್ಕ್ರತಿಕವಾಗಿ ಹೇಗೆ ಬೆಳೆದುಬಂದಿದೆ. ಪ್ರಸುತ್ತ ಸ್ಥಿತಿಗತಿಯ ಬಗ್ಗೆ ಈ ಅಧ್ಯಯನದ ಉದ್ದೇಶಗಳಲ್ಲಿ ಒಂದಾಗಿದೆ. ನಾಡಿನ ಪ್ರಗತಿಯನ್ನು,

ಸಂಸ್ಕೃತಿಯನ್ನು, ಅರ್ಥಿಕತೆಯನ್ನು ಮತ್ತು ಧಾಮಿರ್ಕತೆಯನ್ನು ಗುರುತಿಸಲು ವಾಸ್ತುಶಿಲ್ಪ ಮತ್ತು ಚಿತ್ರಕಲೆಗಳು ತುಂಬಾ ಸಹಕಾರಿಯಾಗಿವೆ. ಹಾಗೆಯೇ ಒಂದು ಪ್ರದೇಶದ ಅರ್ಥಿಕತೆಯನ್ನು ಕುರಿತು ಇತಿಹಾಸವನ್ನು ಶಾಸನಗಳ ಮೂಲಕ, ಚಿತ್ರಕಲೆಯ ಮೂಲಕ ತಿಳಿಯಬಹುದು. ಅದೇ ರೀತಿ ಇಲ್ಲಿಯೂ ಸಾಂಪ್ರದಾಯಿಕ ಚಿತ್ರಗಳ ಶ್ರೀಮಂತಿಕೆಯನ್ನು ಎತ್ತಿ ತೋರಿಸಿವೆ. ಅವುಗಳ ರೇಖಾಲಾಲಿತ್ಯ, ಬಣ್ಣಗಾರಿಕೆ ಕುರಿತಾದಂತೆ ಅಧ್ಯಯನದ ಉದ್ದೇಶವನ್ನು ಹೊಂದಲಾಗಿದೆ.

ಎರಡೂ ಪ್ರದೇಶಗಳ ವೈವಸ್ಥೆಗಳಲ್ಲಿರುವ ಸಾಂಪ್ರದಾಯಿಕ ಶೈಲಿಗಳ ವ್ಯತ್ಯಾಸ, ವೈವಿಧ್ಯತೆಗಳು, ರಾಜ ಮನೆತನದ ಆಡಳಿತ, ಸಾಂಪ್ರದಾಯಿಕ ಶೈಲಿಯ ಕಲಾವಿದರ ಕೈ ಚಳಕ, ಕೌಶಲ್ಯ, ಪ್ರತಿಭೆಯನ್ನು ಎರಡೂ ಶೈಲಿಗಳ ಕಲಾಕೃತಿಗಳಲ್ಲಿರುವ ಸಾಮ್ಯಾ-ವೈವಸ್ಥೆ ಕಲಾವಿದರ ಬದಲಾವಣೆ, ವರ್ಣ ವಿನ್ಯಾಸ, ರೇಖೆಗಳು, ಕಲಾಕೃತಿಯ ರಚನೆ ಕುರಿತಾದ ತೌಲನಿಕ ಅಧ್ಯಯನವನ್ನು ಮಾಡುವುದು, ಪ್ರಸ್ತುತ ಈ ಅಧ್ಯಯನದ ಅಂಶಯವಾಗಿದೆ.

ಮೈಸೂರು ಮತ್ತು ಸುರಪುರ ಸಾಂಪ್ರದಾಯಿಕ ಚಿತ್ರಗಳು ಕರ್ನಾಟಕ, ದೇಶ-ವಿದೇಶ, ಖಾಸಗಿ ಹಾಗೂ ಸರಕಾರಿ ವಸ್ತುಸಂಗ್ರಹಾಲಯಗಳಲ್ಲಿ ಕಾಣಬಹುದು. ಕಾರಣ ಅಂದಿನ ರಾಜ ಮನೆತನದ ಪ್ರೇರಣೆ, ಪ್ರೋತ್ಸಾಹ, ದೇವಾಲಯ ಅಂದಕ್ಕಾಗಿ, ಧರ್ಮ ಪ್ರಚಾರಕ್ಕಾಗಿ, ಸಾಮಾಜಿಕ ತಿಳಿವಳಿಕೆಗಾಗಿ ನಿರ್ಮಿಸಿದ ಚಿತ್ರಗಳ ಆಕಾರ, ಬಣ್ಣ, ರೇಖೆಗಳನ್ನು ಕುರಿತಾಗಿ ಕಲಾತ್ಮಕ ಅಧ್ಯಯನ ಮಾಡುವ ಉದ್ದೇಶ ಹೊಂದಲಾಗಿದೆ.

ಹೀಗೆ ಎರಡೂ ಪ್ರದೇಶದ ಸಾಂಪ್ರದಾಯಿಕ ಕಲೆಗಳ ತಂತ್ರ, ಶೈಲಿ, ಪ್ರಭಾವ-ಪ್ರೇರಣೆ ವಸ್ತುವಿಷಯ ಮುಂತಾದ ಅಂಶಗಳನ್ನು ತೌಲನಿಕವಾಗಿ ಅಧ್ಯಯನ ಮಾಡುವ ಉದ್ದೇಶ ಹೊಂದಿ ಈ ವಿಷಯವನ್ನು ಅಧ್ಯಯನಕ್ಕೆ ಕೈಗೆತ್ತಿಕೊಳ್ಳಲಾಗಿದೆ.

ವಿಜಯನಗರ ಸಾಮ್ರಾಜ್ಯದ ಪತನದ ನಂತರ ಮುಂದೆ ಮೈಸೂರ ಮತ್ತು ಸುರಪುರ ಸಂಸ್ಥಾನಗಳ ಕಿರುರೂಪ ಚಿತ್ರಗಳು ಪ್ರತೇಕವಾಗಿ ಚಿತ್ರಕಲೆಯ ಪರಂಪರೆಯಾಗಿ ಬೆಳೆದು ರಾಷ್ಟ್ರೀಯ, ಅಂತರರಾಷ್ಟ್ರೀಯ ಮಾನ್ಯತೆ ಪಡೆದವು. ಇವುಗಳ ಮೂಲ ಬೇರು ವಿಜಯನಗರ ಶೈಲಿಯಾಗಿದು. ಮುಂದೆ ಇಲ್ಲಿಂದ ಹೋದ ಕಲಾವಿದರು ತಮ್ಮ ಕಲಾಕೃತಿಗಳಲ್ಲಿ ಪ್ರಾದೇಶಿಕ ವಸ್ತು ವಿಷಯ, ತಂತ್ರ, ಶೈಲಿಗಳನ್ನು ಸಂಯೋಜನೆ ಮಾಡಿ ಹೊಸ ರೂಪ ಪಡೆದು ಪ್ರತೇಕವಾಗಿ ತಮ್ಮಯಾದ ಸಾಂಪ್ರದಾಯಿಕ ಶೈಲಿಯಾಗಿ ಬೆಳೆದಿವೆ. ಅದರಲ್ಲಿ ವ್ಯಕ್ತಿಗಳು ರಚಿಸಿದ ಅನೇಕ ಚಿತ್ರಗಳ ವ್ಯತ್ಯಾಸಗಳನ್ನು ನಾವು ಗಮನಿಸುತ್ತೇವೆ. ಇಲ್ಲಿ ಕಾಣುವ ಸಾಂಸ್ಕೃತಿಕ, ಸಾಮಾಜಿಕ, ರಾಜಕೀಯ, ಆರ್ಥಿಕ ಹೀಗೆ ವಿವಿಧ ಆಯಾಮಗಳ ಪ್ರಭಾವದಿಂದ ಕಲಾಕೃತಿಗಳ ರಚನೆಯ ಮೇಲಾದ ವ್ಯತ್ಯಾಸಗಳ ಕುರಿತು ಪ್ರಸ್ತುತ ಈ ಅಧ್ಯಾಯನ ಮಾಡುವ ಉದ್ದೇಶಗಳಲ್ಲಿ ಇದೊಂದಾಗಿದೆ.

ನಮ್ಮ ಕ್ಷೇತ್ರದಲ್ಲಿ ತೌಲನಿಕ ಅಧ್ಯಯನಗಳು ತುಂಬಾ ವಿರಳ ಹೀಗಾಗಿ ಕರ್ನಾಟಕದ ಮೈಸೂರು ಮತ್ತು ಸುರಪುರ ಸಾಂಪ್ರದಾಯಿಕ ಕಲಾಕೃತಿಗಳ ಕುರಿತು ತೌಲನಿಕ ಅಧ್ಯಯನವನ್ನು

ಕೈಗೊಂಡು ಇವುಗಳಲ್ಲಿ ಕಂಡುಬರುವ ತಂತ್ರ, ಶೈಲಿ, ಪ್ರಭಾವ, ಪ್ರೇರಣೆ, ರಚನಾ ವಿಧಾನ, ವಸ್ತುವಿಷಯಗಳಲ್ಲಿ ಕಂಡುಬರುವ ಸಾಮ್ಯತೆ ವೈಸಾಮ್ಯತೆ ನಮ್ಮ ಮುಂದಿನ ಯುವ ಪಿಳಿಗೆಗೆ ತಿಳಿಸುವ ಹಿನ್ನೆಯಲ್ಲಿ ಈ ಸಂಶೋಧನೆ ಮಾಡುವ ಉದ್ದೇಶ ಹೊಂದಲಾಗಿದೆ.

ಅಧ್ಯಯನದ ಸ್ವರೂಪ :

ಈ ಸಂಶೋಧನಾ ಪ್ರಬಂಧವನ್ನು ಅಧ್ಯಯನದ ಅನುಕೂಲಕ್ಕಾಗಿ ಆರು ಅಧ್ಯಾಯಗಳಾಗಿ ವಿಂಗಡಿಸಿಕೊಂಡು, ಪ್ರತಿಯೊಂದು ಅಧ್ಯಾಯದಲ್ಲಿ ಚರ್ಚಿಸುವ ವಿಷಯವನ್ನು ಕುರಿತಂತೆ ಅದರ ಸಂಕ್ಷಿಪ್ತ ವಿವರಗಳನ್ನು ಇಲ್ಲಿ ನೀಡಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ ಕುರಿತು ಹೇಳಲಾಗಿದೆ. ಇಲ್ಲಿ ಯಾವ ಕಾರಣಗಳಿಗೆ ಅಧ್ಯಯನವನ್ನು ಕೈಗೊಳ್ಳಲಾಯಿತು. ಇದರ ಮಹತ್ವವೇನು? ಎಂಬುದನ್ನು ಹೇಳಲಾಗಿದೆ. ಅಧ್ಯಯನದಲ್ಲಿ ಮೂಲ ಅಕರ ಸಾಮಗ್ರಿ, ಅನುಷಂಗಿಕ ಅಕರ ಸಾಮಗ್ರಿ ಇವುಗಳಿಂದ ಮಾಹಿತಿಯನ್ನು ಸಂಗ್ರಹಿಸಿಕೊಂಡು ಯಾವ ವಿಧಾನದಲ್ಲಿ ಅಧ್ಯಯನವನ್ನು ಕೈಗೊಳ್ಳಲಾಗಿದೆ ಎಂಬುವುದನ್ನು ತಿಳಿಸಲಾಗಿದೆ.

ಎರಡನೆಯ ಅಧ್ಯಾಯನವು ಭಾರತೀಯ ಸಾಂಪ್ರದಾಯಿಕ ಕಲಾಕೃತಿಗಳ ಐತಿಹಾಸಿಕ ನೋಟ ಕುರಿತು ವಿವರಿಸಲಾಗಿದೆ. ಈ ಅಧ್ಯಾಯದಲ್ಲಿ ಭಾರತದಲ್ಲಿ ಸಾಂಪ್ರದಾಯಿಕ ಕಲಾಕೃತಿಗಳ ಹುಟ್ಟು-ಬೆಳವಣಿಗೆ ಕುರಿತು ವಿವರಿಸಲಾಗಿದೆ, ಇದರಲ್ಲಿ ಪ್ರಮುಖವಾದ ಚಿಕಣಿ ಚಿತ್ರ ಕಲೆಗಳ ಪ್ರಕಾರಗಳಾದ, ಮೊಘಲ್ ಶೈಲಿ, ರಾಜಸ್ಥಾನಿ ಮತ್ತು ಪಹಾಡಿ ಶೈಲಿಗಳು, ಮೇವಾರ್ ಶೈಲಿ, ಬುಂದಿ, ಕಿಷನ್‌ಗರ್, ಜೈಪುರ, ಬಾಸೋಲಿ, ಕಾಂಗ್ರಾ ಇನ್ನು ಹಲವಾರು ಸಾಂಪ್ರದಾಯಿಕ ಕಿರುರೂಪ, ಚಿತ್ರಕಲೆಯ ಚಾರಿತ್ರಿಕ ಪರಿಚಯ ಕುರಿತು ವಿವರಣೆಯನ್ನು ನೀಡಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಮೈಸೂರು ಕಲಾಕೃತಿಗಳ ಹುಟ್ಟು ಮತ್ತು ಬೆಳೆವಣಿಗೆ ಕುರಿತು ಹೇಳಲಾಗಿದೆ. ಮೈಸೂರು ಪ್ರದೇಶದ ಹುಟ್ಟು, ಸಾಮಾಜಿಕ, ರಾಜಕೀಯ, ಆಡಳಿತಾತ್ಮಕ ಬೆಳವಣಿಗೆ, ಕಲಾವಿದರಿಗೆ ನೀಡಿದ ಪ್ರೋತ್ಸಾಹ, ಒಡೆಯರು ತಮ್ಮ ಕಾಲದಲ್ಲಿ ರಚಿಸಿದ ಭಿತ್ತಿಚಿತ್ರಗಳ ರಚನೆ ಕುರಿತು ವಿವರವಾಗಿ ಹೇಳಲಾಗಿದೆ, ಹಾಗೂ ಸಂಯೋಜನೆ, ತಂತ್ರ, ಶೈಲಿ, ಕಲಾವಿದರ ವಿವರವನ್ನು ಕುರಿತು ಈ ಅಧ್ಯಾಯನದಲ್ಲಿ ವಿವರಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಸುರಪುರ ಕಲಾಕೃತಿಗಳ ಹುಟ್ಟು ಮತ್ತು ಬೆಳೆವಣಿಗೆ ಕುರಿತು ಹೇಳಲಾಗಿದೆ. ಸುರಪುರ ಪ್ರದೇಶದ ಹುಟ್ಟು, ಸಾಮಾಜಿಕ, ರಾಜಕೀಯ, ಆಡಳಿತಾತ್ಮಕ ಬೆಳವಣಿಗೆ, ಕಲಾವಿದರಿಗೆ ನೀಡಿದ ಪ್ರೋತ್ಸಹ, ಸುರಪುರದ ಭಿತ್ತಿಚಿತ್ರಗಳ ರಚನೆ ಕುರಿತು ವಿವರವಾಗಿ ಹೇಳಲಾಗಿದೆ, ಹಾಗೂ ಸುರಪುರ ಸಾಂಪ್ರದಾಯಿಕ ಕಲಾಕೃತಿಗಳ ಪರಿಚಯ, ರಚನಾ ವಿಧಾನ, ರೇಖಾ ವಿನ್ಯಾಸ, ಸಂಯೋಜನೆ, ತಂತ್ರ, ಶೈಲಿ, ಚಿತ್ರಗಾರರ ವಂಶ, ಕಲಾಕೃತಿಗಳ ವಸ್ತು ಮತ್ತು ಚಿತ್ರಗಳ ಮಹತ್ವ ಕುರಿತು ವಿವರವಾಗಿ ವಿವರಿಸಲಾಗಿದೆ.

ಐದನೇ ಅಧ್ಯಾಯದಲ್ಲಿ ಮೈಸೂರು ಮತ್ತು ಸುರಪುರ ಸಾಂಪ್ರದಾಯಿಕ ಕಲಾಕೃತಿಗಳಲ್ಲಿರುವ ವ್ಯತ್ಯಾಸಗಳು. ಸಾಮ್ಯ-ವೈಷಮ್ಯ, ಸಮಾನತೆ-ಅಸಮಾನತೆ, ವೈವಿಧ್ಯತೆಗಳನ್ನು ತೌಲನಿಕವಾಗಿ ವಿವರಿಸಲಾಗಿದೆ. ಸಾಮಾಜಿಕ, ರಾಜಕೀಯ, ಆಡಳಿತಾತ್ಮಕ ಹಾಗೂ ಎರಡೂ ಕಲಾಕೃತಿಗಳ ರಚನಾ ವಿಧಾನ, ತಂತ್ರ, ಶೈಲಿ, ಪ್ರಭಾವ, ಪ್ರೇರಣೆ, ಗುಣಲಕ್ಷಣಗಳ ವ್ಯತ್ಯಾಸಗಳನ್ನು ತೌಲನಿಕವಾಗಿ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಆರನೇಯ ಅಧ್ಯಾಯದಲ್ಲಿ ಈ ಮೇಲಿನ ಐದು ಅಧ್ಯಾಯಗಳ ಸಮೀಕ್ಷೆ ಮಾಡಿದ್ದು, ಒಟ್ಟು ಅಧ್ಯಯನದಲ್ಲಿ ಕಂಡುಬರುವ ಫಲಿತಗಳನ್ನು ಇಲ್ಲಿ ವಿವರಿಸಲಾಗಿದೆ.

ಅಧ್ಯಯನದ ವ್ಯಾಪ್ತಿ :

ಹಲವು ಸಾಂಪ್ರದಾಯಿಕ ಶೈಲಿಯ ಚಿತ್ರಗಳನ್ನು ಒಳಗೊಂಡ ಭಾರತ ದೇಶವು ಬಹು ಪ್ರಸಿದ್ಧವಾದ್ದದು. ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಮೈಸೂರು ಮತ್ತು ಸುರಪುರ ಸಾಂಪ್ರದಾಯಿಕ ಕಲಾಕೃತಿಗಳು ತೌಲನಿಕ ಅಧ್ಯಯವನ್ನು ಕೈಗೊಂಡಿದ್ದು. ದೇಶದ ಹೆಸರಾಂತ ಶೈಲಿಗಳಲ್ಲಿ ಈ ಎರಡು ಕಲಾಕೃತಿಗಳು ತನ್ನದೆಯಾದ ಸ್ಥಾನವನ್ನು ಗಿಟ್ಟಿಸಿಕೊಂಡಿವೆ. ಹೀಗಾಗಿ ದೇಶ ವಿದೇಶಗಳಲ್ಲಿ ಈ ಶೈಲಿಯ ಕಲಾಕೃತಿಗಳು ಸಂಗ್ರಹಗೊಂಡಿವೆ. ಪ್ರಸ್ತುತ ಸಂಶೋಧನ ಅಧ್ಯಯನವು ಅದರ ಮಿತಿಯಲ್ಲಿ ಇರುವುದರಿಂದ ಪ್ರಮುಖವಾಗಿ ಕರ್ನಾಟಕದ ಭೌಗೋಳಿಕ ವ್ಯಾಪ್ತಿಯಲ್ಲಿ ನನ್ನ ಸಂಶೋಧನ ಕಾರ್ಯವನ್ನು ಕೈಗೊಂಡಿದ್ದೆನೆ. ಮೈಸೂರು ಮತ್ತು ಸುರಪುರ ಕೇಂದ್ರ ಸ್ಥಾನಗಳು ಈ ಸಂಶೋಧನೆಯ ಪ್ರಮುಖ ಪ್ರದೇಶಗಳಾಗಿವೆ. ಅದಕ್ಕೆ ಪೂರಕವಾಗಿ ರಾಜ್ಯದಲ್ಲಿ ಸಂಗ್ರಹಗೊಂಡ ಕಲಾಕೃತಿಗಳು ಈ ಸಂಶೋಧನೆಗೆ ಬಳಸಿಕೊಳ್ಳಲಾಗಿದೆ.

ಅಧ್ಯಯನದ ವೈಧಾನಿಕತೆ :

ಈ ಅಧ್ಯಯನಕ್ಕೆ ಎರಡು ರೀತಿಯ ವಿಧಾನವನ್ನು ಅನುಸರಿಸಲಾಗಿದೆ.

೧) **ಮೂಲ ಆಕರ ಸಾಮಗ್ರಿ**

೨) **ಅನುಷಂಗಿಕ ಆಕರ ಸಾಮಗ್ರಿ**

೧) ಮೂಲ ಆಕರ ಸಾಮಗ್ರಿ

ಸಂಶೋಧನೆಯಲ್ಲಿ ಮೂಲ ಆಕರ ಸಾಮಗ್ರಿಯು ಬಹಳ ಮುಖ್ಯವಾದುದ್ದಾಗಿದೆ. ಅಧ್ಯಯನ ವಿಷಯಕ್ಕೆ ಸಂಬಂಧಿಸಿದ ಆಕರ ಸಾಮಗ್ರಿಯ ಕ್ಷೇತ್ರಕಾರ್ಯದ ಮೂಲಕ ನೇರವಾಗಿ ಸ್ಥಳಕ್ಕೆ ಭೇಟಿನೀಡಿ ಆ ಸ್ಥಳದ ಇತಿಹಾಸ, ಸಂಸ್ಕೃತಿ, ಕಲೆಯನ್ನು ತಿಳಿಯಬೇಕಾದರೆ ಕ್ಷೇತ್ರಕಾರ್ಯ ಪ್ರಮುಖ ಪಾತ್ರವಹಿಸುತ್ತದೆ. ಯಾವುದೇ ಅಧ್ಯಯನದ ವಿಷಯವನ್ನು ಸ್ಪಷ್ಟಪಡಿಸಿಕೊಳ್ಳಲು ಸತ್ಯವನ್ನು ಹೊರಹಾಕಲು ಕ್ಷೇತ್ರಕಾರ್ಯದಿಂದ ಮಾತ್ರ ಸಾಧ್ಯ. ಅದರ ಮೂಲ ಸಾಂಪ್ರದಾಯಿಕ ಶೈಲಿಯ ಕಲಾಕೃತಿಗಳನ್ನು ಮೂಲಕ ಆಕರ ಸಾಮಗ್ರಿಯಾಗಿ ಈ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಕ್ಷೇತ್ರಕಾರ್ಯವು ಸತ್ಯ ಸತ್ಯೆಗಳ ಅವಲೋಕನ್ನಕ್ಕೆ ಅತಿಮುಖ್ಯವಾದ ಅಂಶವಾಗಿದ್ದು. ಮೂಲ ಸಾಂಪ್ರದಾಯಿಕ ಸ್ಥಳಗಳಿಗೆ ಹಲವಾರು ಬಾರಿ ಭೇಟಿಕೊಟ್ಟು ಛಾಯಾಚಿತ್ರ ಮಾಡಿ ಕಲಾವಿದರನ್ನು ಸಂದರ್ಶಿಸಿ, ವಿದ್ವಾಂಸರನ್ನು ಭೇಟಿ ಮಾಡಿ ಮೂಲ ಮಾಹಿತಿ ವಿಷಯವನ್ನು ಪಡೆದುಕೊಳ್ಳಲಾಗಿದೆ.

ಹೀಗೆ ಕ್ಷೇತ್ರಕಾರ್ಯ ಮೂಲಕ ಪಡೆದುಕೊಂಡ ಮೂಲ ಆಕರ ಸಾಮಗ್ರಿಯನ್ನು ಅಧ್ಯಯನಕ್ಕೆ ಅನುಕೂಲವಾಗುವಂತೆ ವರ್ಗೀಕರಣ ಮಾಡಿಕೊಂಡು ಪ್ರಸುತ್ತ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ.

೨) ಅನುಷಂಗಿಕ ಆಕರ ಸಾಮಗ್ರಿ

ಪ್ರಬಂಧ ರಚನೆಯಲ್ಲಿ ಎರಡನೇ ವಿಧಾನವಾದ ಹಾಗೂ ಎರಡನೇ ಸ್ಥಾನ ಪಡೆದಿರುವ ವಿಧಾನವೆಂದರೆ ಅದು ಆನುಷಂಗಿಕ ಆಕರ ಸಾಮಗ್ರಿ. ಮೂಲವಲ್ಲದ ಆಕರವನ್ನು ಆನುಷಂಗಿಕ ಆಕರ ಸಾಮಗ್ರಿ ಎಂದು ಕರೆಯುತ್ತಾರೆ. ಈ ವಿಧಾನದ ಸಹಾಯದಿಂದ ಗ್ರಂಥಗಳು, ಲೇಖನಗಳು. ಅಧ್ಯಯನಕ್ಕೆ ಅವಶ್ಯಕವಾದ ಅಕ್ಕ ಪಕ್ಕದ ಸಾಂಪ್ರದಾಯಿಕ ಚಿತ್ರಗಳ ಮಾಹಿತಿ ಮತ್ತು ಛಾಯಚಿತ್ರಣ, ಅಭಿನಂದನಾಗ್ರಂಥ, ಶಾಸನ, ಪ್ರಕಟಿತ ಮತ್ತು ಅಪ್ರಕಟಿತ ಕೃತಿಗಳು ಸಂಶೋಧನ ಮಹಾಪ್ರಬಂಧ, ಕಿರುಪ್ರಬಂಧ, ಪತ್ರಗಳು, ಸಂಪಾದನ ಗ್ರಂಥ ಮುಂತಾದವುಗಳನ್ನು. ಅನುಷಂಗಿಕ ಆಕರ ಸಾಮಾಗ್ರಿಯಾಗಿ ಬಳಸಿಕೊಳ್ಳಲಾಗಿದೆ. ಹಾಗೂ ಗ್ರಂಥಾಲಯಗಳಿಗೆ ಭೇಟಿ ನೀಡಿ ಹಲವು ಪುಸ್ತಕಗಳಲ್ಲಿ ಓದಿ ಅವುಗಳಿಂದ ಮಾಹಿತಿಯನ್ನು ಸಂಗ್ರಹಿಸಿ ಪ್ರಸುತ್ತ ಅಧ್ಯಯನವನ್ನು ಸಿದ್ಧಪಡಿಸಲಾಗಿದೆ.

ಹೀಗೆ ಮೂಲ ಆಕರ ಸಾಮಗ್ರಿ ಮತ್ತು ಆನುಷಂಗಿಕ ಆಕರ ಸಾಮಗ್ರಿಯನ್ನು ಬಳಸಿಕೊಂಡು ಅಧ್ಯಯವನ್ನು ಕೈಗೊಳ್ಳಲಾಗಿದೆ.

ಅಧ್ಯಾಯ–ಎರಡು

ಭಾರತೀಯ ಸಾಂಪ್ರದಾಯಿಕ ಕಲಾಕೃತಿಗಳ ಐತಿಹಾಸಿಕ ನೋಟ

ಅಧ್ಯಾಯ ಎರಡು

ಭಾರತೀಯ ಸಾಂಪ್ರಾಯಿಕ ಕಲಾಕೃತಿಗಳ ಐತಿಹಾಸಿಕ ನೋಟ

'ಭಾರತೀಯ ಚಿತ್ರಕಲೆಯ ಇತಿಹಾಸ ಕ್ರಿ.ಪೂ. ೧ನೇ ಶತಮಾನದಷ್ಟು ಪ್ರಾಚೀನ. ಅಜಂತಾ ಚಿತ್ರಕಲೆ ಭಾರತೀಯ ಅಭಿಜಾತ ಕಲೆ. ಸಾಂಪ್ರದಾಯಕ್ಕೆ ಬುನಾದಿ ಹಾಕಿ, ಕಲಾಪರಂಪರೆಯ ವಿಕಾಸಕ್ಕೆ ತಾಂತ್ರಿಕ ಮತ್ತು ಸೌಂದರ್ಯ ಸೂತ್ರಗಳನ್ನು ರೂಪಿಸುವಲ್ಲಿಯೂ ಸಹ ಕಾರಣವಾಯಿತು. ಆ ಕಲೆಗೆ ಪ್ರೇರಣೆ ಹಾಗೂ ಮುಖ್ಯ ಉದ್ದೇಶ ಬೌದ್ಧ ಮತ ಪ್ರಚಾರ. ಆದರೂ ಬುದ್ಧನ ಪೂರ್ವಜನ್ಮ ನಿರೂಪಣೆಯಲ್ಲಿ, ಬೌದ್ಧ ಜಾತಕ ಕಥಾ ಚಿತ್ರರಚನೆಯಲ್ಲಿ ಆಧ್ಯಾತ್ಮಿಕ ಎನ್ನುವಂಥದೇನೂ ಇಲ್ಲ. ಅಲ್ಲಿ ಚಿತ್ರಿತ ವ್ಯಕ್ತಿಗಳು ಬದುಕಿನ ನಿಗೂಢತೆಯಿಂದ, ಆಧ್ಯಾತ್ಮಿಕ ಚಿಂತನೆಯಿಂದ ವಿಚಲಿತರಾದಂತಿಲ್ಲ. ಕಲಾವಿದರು ಸಮಕಾಲೀನ ಸಾಮಾಜಿಕ ಪರಿಸ್ಥಿತಿಗೆ ತಕ್ಕಂತೆ ಬದಲಾವಣೆಗಳನ್ನೂ ಮಾಡಿಕೊಂಡಿದ್ದಾರೆ. ಅಜಂತಾ ಕಲೆಯಲ್ಲಿ ಅದ್ಭುತ ನಾಟಕೀಯ ದೃಶ್ಯಗಳಿವೆ. ಆದರೆ ಅದರಲ್ಲಿ ದೇವಾನುದೇವತೆಗಳು ಪಾತ್ರಧಾರಿಗಳಲ್ಲ. ರಾಜಕುಮಾರರು, ಸನ್ಯಾಸಿಗಳು, ಯೋಧರು, ಸಾಮಾನ್ಯ ಸ್ತ್ರೀಪುರುಷರಿದ್ದಾರೆ. ಸಮಾಜದ ವಿವಿಧ ಸ್ತರದವರೆಲ್ಲ ಅಲ್ಲಿದ್ದಾರೆ. ಅರಮನೆ, ನಗರದ ಸೌಧಗಳು, ಬೆಟ್ಟ ಗುಡ್ಡಗಳು, ಉದ್ಯಾನವನ ಬಯಲುಗಳು ಹಿನ್ನೆಲೆಯಾಗಿವೆ.

ಅಜಂತೆಯ ಕಲಾತಂತ್ರ ಪರಂಪರೆಯನ್ನು ನಿರ್ಮಾಣ ಮಾಡಿತು. ನಾಟ್ಯಶಾಸ್ತ್ರದ ಬಹುಪಾಲು ಅನುಕರಣೆ ರಚನಾ ವಿಧಾನದಲ್ಲಿ ಕಂಡುಬರುತ್ತದೆ. ಬಣ್ಣಗಳನ್ನು ಬಳಸುವಲ್ಲಿ ಸಾಂಕೇತಿಕತೆಯನ್ನು ಗಮನಿಸಿದೆ. ಆಯಾ ದೇವತೆಗಳಿಗೆ ಪ್ರಾತಿನಿಧಿಕವಾಗಿ ಹಳದಿ, ಕೆಂಪು ಗಾಢನೀಲಿ ಇತ್ಯಾದಿ ವರ್ಣಗಳನ್ನು ಬಳಸಲಾಗಿದೆ. ರಾಜರು, ಸೇವಕರು, ಉತ್ತರದವರು, ದಕ್ಷಿಣದವರು ಮುಂತಾದ ಸೂಕ್ತ ವರ್ಣ ಭೇದಗಳನ್ನು ಕಾಣಬಹುದು. ನೇರ ನಿರೂಪಣೆ, ಅಂಗಾಂಗಗಳ ಚಿತ್ರದಲ್ಲಿ ವರ್ಣಛಾಯೆಗಳ ರೂಪ ವಿಧಾನ, ವ್ಯಕ್ತಿಗಳ ಗುಂಪುಗಳನ್ನು ರಚಿಸುವಲ್ಲಿ ಸ್ಪಷ್ಟ ಸಂಯೋಜನೆಗಳಿವೆ. ಭಾವನೆಗಳ ಮಿಡಿತ ಪ್ರಧಾನವಾಗಿ ವ್ಯಕ್ತಿಗಳಲ್ಲಿ ಚೈತನ್ಯ ತುಂಬುವಂತಿವೆ.

ಬಾದಾಮಿಯ ಗುಹಾಚಿತ್ರಗಳಲ್ಲಿ ಕೊಂಚ ವ್ಯತ್ಯಾಸವನ್ನು ಕಾಣಬಹುದಾಗಿದೆ. ಅಜಂತಾದ ವರ್ಣರೂಪ, ನೆರಲು ಬೆಳಕಿನ ವಿನ್ಯಾಸಕ್ಕಿಂತ ರೇಖಾವಿನ್ಯಾಸಕ್ಕೆ ಹೆಚ್ಚು ಮಹತ್ವವನ್ನು ನೀಡಲಾಗಿದೆ. ರೇಖಾತ್ಮಕ ಶೈಲಿ, ಉತ್ಪ್ರೇಕ್ಷಿತಗಲ್ಲ, ತುಟಿ, ಆಚೆಗಣ್ಣಿನ ಚಾಚು ರೆಪ್ಪೆ ಮುಂತಾದ ಹೊಸ ಸಂಪ್ರದಾಯದ, ಬದಲಾವಣೆಯ ಸೂಚನೆಗಳು. ಬಾದಾಮಿಯ ರಾಣಿಯ ಚಿತ್ರದಲ್ಲಿ ಹೆಣ್ಣಿನ ಆದರ್ಶ ಸೌಂದರ್ಯದ ನೀಳ ತೆಳು ದೇಹ ಕಲ್ಪನೆಯನ್ನು ಕಾಣಬಹುದಾಗಿದೆ. ಬಾದಾಮಿಯ ಈ ಕಲಾ ವಿಧಾನ ದೂರದ ಎಲ್ಲೋರಕ್ಕೂ ಹರಡಿತು. ಅಲ್ಲಿ ದೇವಾನುದೇವತೆಗಳ ಚಿತ್ರಗಳಲ್ಲಿ ಬಣ್ಣಗಳ ರೂಪ ಮೌಲ್ಯವನ್ನು ಕಳೆದುಕೊಂಡಿವೆ. ದಪ್ಪ ಖಚಿತ ರೇಖೆಗಳ ಬೀಸು ಇದೆ.

ಸರಿಸುಮಾರು ಸಾವಿರ ವರ್ಷಗಳ ಚಿತ್ರಕಲಾ ಇತಿಹಾಸದಲ್ಲಿ ಬಹಳಷ್ಟು ನಾಶವಾಗಿರಬೇಕು. ಅರಮನೆ, ಶ್ರೀಮಂತರ, ಅಧಿಕಾರಿಗಳ ಸೌಧಗಳಲ್ಲಿ, ಶಯನಾಗಾರಗಳಲ್ಲಿ ಚಿತ್ರಗಳಿದ್ದ, ಚಿತ್ರಶಾಲೆಗಳಿದ್ದ ಉಲ್ಲೇಖಗಳು ದೊರೆಯುತ್ತವೆ. ಆದರೆ ಆಧಾರಗಳು ಉಳಿದು ಬಂದಿಲ್ಲ. ಹೀಗಾಗಿ ಇನ್ನೂ ಭಕ್ತಿ ಪಂಥದ ತೀವ್ರತೆ ಹರಡದ ಕಾಲದಲ್ಲಿ ವ್ಯಕ್ತಿ ಜೀವನದ ಶೃಂಗಾರ ದೃಶ್ಯಗಳ ನಿರೂಪಣೆ ದೊರೆಯುವುದಿಲ್ಲ. ಉತ್ತರ ಹಾಗೂ ದಕ್ಷಿಣ ಭಾರತಗಳ ದೇವಾಲಯಗಳ ಚಿತ್ರಕಲೆಯೂ ವಿಗ್ರಹ ಲಕ್ಷಣಗಳಿಂದ ಪ್ರಧಾನವಾಯಿತು. ಇಲ್ಲಿ ಮತ, ಪುರಾಣದ ವಸ್ತುಗಳು ಮುಖ್ಯವಾದವು. ಸಮಕಾಲೀನ ಸಮಾಜ, ಬಾಳಿನ ಪ್ರತಿಪಾದನೆ ಉಳಿಯಿತು'[೧]

ಭಾರತೀಯ ಸಂಪ್ರದಾಯಿಕ ಚಿತ್ರಗಳಲ್ಲಿ ಪ್ರಮುಖವಾಗಿ ಮೊಘಲ ಶೈಲಿ, ರಾಜಸ್ಥಾನಿ ಮತ್ತು ಪಹಾಡಿ ಶೈಲಿಗಳು, ಮೇವಾರ್ ಶೈಲಿ, ಬುಂದಿ, ಕಿಷನಗಡ್, ಜೈಪುರ, ಬಾಸೋಲಿ, ಕಾಂಗ್ರಾ, ಚಿಕಣಿ ಇನ್ನು ಹಲವಾರು ಸಾಂಪ್ರದಾಯಿಕ ಚಿತ್ರಗಳ ವಿವರಣೆ ನೀಡಲಾಗಿದೆ.

ಚಿಕಣಿ ಚಿತ್ರಕಲೆ :

'ಮಧ್ಯಕಾಲದಲ್ಲಿ ಬೆಳೆದು ಬಂದ ಭಾರತೀಯ ಚಿಕಣಿ ಚಿತ್ರಕಲೆಯ ಉದಯವನ್ನು ರಾಜಸ್ಥಾನ–ಗುಜರಾತ ಪ್ರದೇಶದಲ್ಲಿ ೧೫ನೆಯ ಶತಮಾನದ ಪೂರ್ವಾರ್ಧದಲ್ಲಿ ರಚನೆಯಾದ ಜೈನ ಗ್ರಂಥಗಳಲ್ಲಿ ಕಾಣುವ ಕಿರುರೂಪದ ಚಿತ್ರಗಳು ಎಂಬುದು ವಿದ್ವಾಂಸರ ಅಭಿಪ್ರಾಯ.

'ಕಲಕಾಚಾರ್ಯ ಕಥಾ' ಮತ್ತು ಕಲ್ಪಸೂತ್ರ' ಗ್ರಂಥಗಳಲ್ಲಿ ಕಥೆಗೆ ಸಂಬಂಧಿಸಿದ ಜೈನ ಧಾರ್ಮಿಕ ಕಿರುಚಿತ್ರಗಳನ್ನು ರಚಿಸಲಾಗಿದೆ. ಆದರೆ ಹೆಸರಾಂತ ವಿದ್ವಾಂಸರಾದ ಶಿವರಾಮ ಕಾರಂತರು ಮೂಡಬಿದ್ರೆಯ ಜೈನ ಗ್ರಂಥಾಲಯದಲ್ಲಿ ಕ್ರಿ.ಶ. ೧೨ನೆಯ ಶತಮಾನದ ಹೊಯ್ಸಳರ ಕಾಲದ ಗ್ರಂಥಗಳೆನ್ನಲಾದ ಧವಳ 'ಜಯಧವಳ' 'ಮಹಾಧವಳ' ಇತ್ಯಾದಿ ಹಸ್ತಪ್ರತಿಗಳಲ್ಲಿ ಕಿರುಚಿತ್ರಗಳು ಇರುವುದನ್ನು ಬೆಳಕಿಗೆ ತಂದಿದ್ದಾರೆ. ಇದರಿಂದ ಕ್ರಿ.ಶ. ೧೪ನೆಯ ಶತಮಾನದಲ್ಲಿ ರಚಿಸಲ್ಪಟ್ಟ ಜೈನ ಗ್ರಂಥಗಳಾದ 'ಕಲ್ಪಸೂತ್ರ' ಮತ್ತು 'ಕಾಲಕಾಚಾರ್ಯ ಕಥಾ'ಗಳಲ್ಲಿ ಕಿರುಚಿತ್ರಗಳಿಗಿಂತ

೧. ಎಂ.ಎಚ್.ಕೃಷ್ಣಯ್ಯ : ಕಲಾ ಸಂಸ್ಕೃತಿ, ಪು.ಸಂ–೪

ಪೂರ್ವದಲ್ಲಿಯೇ ದಕ್ಷಿಣ ಭಾರತದಲ್ಲಿ ಚಿಕಣಿ ಚಿತ್ರಕಲೆ ರಚಿಸುವ ಸಂಪ್ರದಾಯವಿತ್ತೆಂದು ಸ್ಪಷ್ಟವಾಗುತ್ತದೆ. ಇದರ ಬಗ್ಗೆ ಹೆಚ್ಚಿನ ಅಧ್ಯಯಗಳ ಅವಶ್ಯಕತೆ ಇದೆ.

ದಖನ್ನಲ್ಲಿ ಮಧ್ಯಯುಗದ ಸುಲ್ತಾನರ ಕಾಲದ ಚಿಕಣಿ ಚಿತ್ರಕಲೆಯ ಉಗಮವನ್ನು ನಾವು ದಖನ್‌ದ ಉತ್ತರ ಭಾಗದ ಮಾಂಡುವಿನಲ್ಲಿ ರಚನೆಯಾದ ಚಿತ್ರಕಲೆಯಲ್ಲಿ ನೋಡಬಹುದು. ಮಾಂಡುವಿನಲ್ಲಿ ಆಳುತ್ತಿದ್ದ ಖಿಲ್ಜಿ ಸುಲ್ತಾನರ ಕಾಲದಲ್ಲಿ ರಚನೆಯಾದ 'ನಿ-ಮತ್ ನಾಮ' ಕೃತಿಯಲ್ಲಿನ ಕಿರುಚಿತ್ರಗಳು ದಖನಿ ಚಿಕಣಿ ಚಿತ್ರಕಲೆಯ ಉಗಮವೆಂದು ಹೇಳಬಹುದು. ಇದು ಘಿಯಾತ್-ಉದ್-ದಿನ್ ಖಿಲ್ಜಿ (೧೪೬೯-೧೫೦೧) ಯ ಕಾಲದಲ್ಲಿ ರಚನೆಯಾಗಿದೆ. ದಖನಿ ಚಿಕಣಿ ಚಿತ್ರಕಲೆಯ ಉಗಮಕ್ಕಿಂತಲೂ ಪೂರ್ವದಲ್ಲಿ ರಚನೆಯಾದ ಇಲ್ಲಿಯ ಕಿರುಚಿತ್ರಗಳು. ಈ ಚಿತ್ರಗಳ ಶೈಲಿ ಇರಾನದ ೧೪೮೦ ರಲ್ಲಿ ರಚಿಸಲಾದ 'ಖವರ್ನಾಮ' ಗ್ರಂಥದ ಚಿತ್ರಗಳ ಶೈಲಿಗೆ ಹೋಲುತ್ತದೆ ಎಂದು ವಿದ್ವಾಂಸರ ಅಭಿಪ್ರಾಯ ಪಟ್ಟಿದ್ದಾರೆ. (Beach; 1992:11). 'ನಿ-ಮತ್ ನಾಮ'ದಲ್ಲಿ ಅರಮನೆಯಲ್ಲಿ ಸ್ತ್ರೀಯರೊಡನೆ ಕುಳಿತಿರುವ ದೃಶ್ಯದ ಚಿತ್ರಗಳಿವೆ. ಸ್ತ್ರೀಯರು ಇರಾನ್ ದೇಶದ ಸ್ತ್ರೀಯರ ಉಡುಪು ಧರಿಸಿರುವರು. ಇಲ್ಲಿಯ ಆಕೃತಿಗಳ ಲಕ್ಷಣಗಳು ಪರ್ಷಿಯಾ ಶೈಲಿ ಮೂಲವೆಂದು ಕಂಡುಬಂದರೂ ಕೆಲವು ಲಕ್ಷಣಗಳು ದಖನಿ ಮೂಲದವಾಗಿವೆ. ಈ ಚಿತ್ರಗಳಲ್ಲಿ ಕಂಡು ಬರುವ ನಿಸರ್ಗ ದೃಶ್ಯಗಳು ಮತ್ತು ಬಳಸಿದ ವರ್ಣಗಳು ಇವುಗಳನ್ನು ದಖನಿ ಮತ್ತು ಪರ್ಷಿಯಾ ಚಿತ್ರಶೈಲಿಯ ಸಮ್ಮಿಳನಗಳ ಪ್ರಾರಂಭಿಕ ಹಂತವೆಂದು ಗುರುತಿಸಬಹುದು'[೨].

ಮೊಘಲ್ ಶೈಲಿ :

'ಒಂದು ಕಡೆ ಪರ್ಶಿಯಾದ ತೈಮೂರರ ಶೈಲಿಯ ಪ್ರಭಾವ ಪಶ್ಚಿಮ ಭಾರತದ ಜೈನ ಕಲೆಯ ಮೇಲೆ ಒಂದು ಬಗೆಗಾಗಿ ಆದರೆ, ಅತ್ತ ಇಸ್ಲಾಂ ಧರ್ಮದ ಹಿನ್ನೆಲೆಯಲ್ಲಿ, ಮೊಘಲ್ ಸಾಮ್ರಾಜ್ಯ ಸ್ಥಾಪನೆಯಾದ ನಂತರ ಪರ್ಷಿಯಾ ಹಾಗೂ ಭಾರತೀಯ ಅಂಶಗಳ ಸಮೀಕರಣದಿಂದ ಹೊಸ 'ಮೊಘಲ್ ಶೈಲಿ' ರೂಪಗೊಂಡಿತು. ಷಾನಾಮಾ, ಸಿಕಂದರ್ ನಾಮಾಗಳಲ್ಲಿ ಭಾರತೀಯ ಪ್ರಭಾವ ಸ್ಪಷ್ಟ. ಪರ್ಷಿಯಾ ಹಾಗೂ ಭಾರತೀಯ ಮುಖ ವಿನ್ಯಾಸ ಎರಡು ಇವೆ.

ಹುಮಾಯೂನ್ ಹದಿನೈದು ವರ್ಷ ದೇಶಭ್ರಷ್ಟನಾಗಿ ಪರ್ಷಿಯಾ ಹಾಗೂ ಅಫ್ಘಾನಿಸ್ಥಾನಗಳಲ್ಲಿ ಇದ್ದಾಗ ಪ್ರಶಿದ್ದ ಪರ್ಷಿಯಾ ಕಲಾವಿದರ ಬಿಹ್ಜಾದನ ಶಿಷ್ಯರ ಸಂಪರ್ಕ ಪಡೆದ. ಆತ, ಆಗ ಅಕ್ಬರ್ ನೋಡನೆ, ಭಾರತಕ್ಕೆ ಹಿಂದಿರುಗೂವಾಗ ಅವರನ್ನು ಕರೆತಂದ. ಹೀಗೆ ಭಾರತಕ್ಕೆ ಬಂದ ಸಮದ್ ಹಾಗೂಸಯೀದ್ ಅಲಿಗಳಿಂದ ಹೊಸ ಶೈಲಿಗೆ ನಾಂದಿಯಾಯಿತು. ಅಕ್ಬರ್ ಉದಾರಿ. ಭಾರತದ ವಿವಿಧ ಭಾಗಗಳಿಂದ ನೂರಕ್ಕೂ ಹೆಚ್ಚು ಹಿಂದು ಶಾಲೆಗಳನ್ನು ಸ್ಥಾಪಿಸಿ ಕೆಲಸ ಮಾಡಿದ. ಅಕ್ಬರ್ ಆಸ್ಥಾನದ ಪ್ರಸಿದ್ಧ ದಸವಂತ್, ಬಾಗ್ವಾನ್ ಹಿಂದು ಕಲಾವಿದರು. ಅಕ್ಬರ್ ಹಮೀರ್ ಹಮ್ಜಾದಂತೆ, ರಾಮಾಯಣ, ಮಹಾಭಾರತ ಕಥಾಚಿತ್ರಗಳನ್ನು ಬರೆದರು. ರಜಮ್ ನಾಮಾದಲ್ಲಿ (ಮಹಾಭಾರತ, ೧೬೯ ಕಿರು ಚಿತ್ರಗಳಿವೆ) ರಜಪೂತ ರಾಣಿಯ ಮಗ ಜಹಾಂಗೀರನ ಕಾಲಕ್ಕೆ

೨. ಎಸ್.ಕೆ.ಅರುಣಿ : ದಖನಿ ಚಿತ್ರಕಲೆ, ಪು.ಸಂ-೫

ಅದೇ. ಪು.ಸಂ-೬

ವಾಸ್ತವಿನ ಸೌಂದರ್ಯದಿಂದ ಕೂಡಿದ ಮೊಘಲ್ ಶೈಲಿಯ ಸ್ಪಷ್ಟರೂಪ ತಳೆದಿತ್ತು. ಇವನ ಕಾಲದಲ್ಲಿ ಮೊದಲ ಬಾರಿಗೆ ವ್ಯಕ್ತಿಚಿತ್ರ (ತಸ್ವೀರ್)ಗಳಲ್ಲಿ ತಲೆಯ ಹಿಂದೆ ಪ್ರಭಾಮಂಡಲ ಸೇರಿಕೆಯನ್ನು ಕಾಣಬಹುದು. ಅವನ ಕಾಲದಲ್ಲಿ ಚಿತ್ರಗಳಲ್ಲಿಯೇ ವರ್ಣಲತಾ ವಿನ್ಯಾಸದ ವಿಶಿಷ್ಟ ಚಿತ್ರದ ಅಂಚು ಅಥವಾ ಚೌಕಟ್ಟು ರೂಢಿಗೆ ಬಂದಿತ್ತು. ಕೆಲವೊಮ್ಮೆ ಪಕ್ಷಿಗಳೂ, ಪ್ರಾಣಿಗಳೂ, ನಿಸರ್ಗ ದೃಶ್ಯಗಳೂ ಅಂಚಿನಲ್ಲಿ ಕಾಣಿಸಿಕೊಂಡವು.

ಗ್ರಂಥಕ್ಕೆ ಬದಲಾಗಿ ಚಿತ್ರಸಂಪುಟ–ಆಲ್ಬಮ್–ಪದ್ಧತಿಯೂ ಮೊದಲಾಯಿತು. ಮೊಘಲ್ ಕಲೆಗೆ ಷಾಹಾಜಾನನ ಕೊಡುಗೆಯೆಂದರೆ ನವಿರು ನಾಜೂಕಿನ ಚಿತ್ರಣ ವಿಧಾನ, ಶೃಂಗಾರ ಭಾವಣೆಗಳ ಸೇರ್ಪಡೆ. ಸಿಕಾರಿ, ವ್ಯಕ್ತಿ ಚಿತ್ರಗಳಷ್ಟೆ ಬಾಹುಳ್ಯವನ್ನು ಪ್ರೇಮ ಕಥಾ ಚಿತ್ರದಲ್ಲಿಯೂ ಕಾಣಬಹುದು. ಲೈಲಾ–ಮಜ್ನು, ಖುಸ್ರೂ–ಶೀರೀನ್, ಕಾಮರೂಪ–ಕಾಮಲತಾ, ರೂಪವತೀ–ಬಾಜ್–ಬಹದ್ದೂರ್ ಮುಂತಾದವು.

ಹದಿನೇಳನೆ ಶತಮಾನದ ಮಧ್ಯಕಾಲದಕ್ಕೆ ಔರಂಗಜೇಬನ ತೀವ್ರ ಧರ್ಮಾಭಿಮಾನ ಸಂಪ್ರದಾಯ ಭದ್ದತೆ, ಕಲಾವಿರೋಧಿ ಗುಣಗಳಿಂದ ಮೊಘಲ್ ಕಲೆ ಅವಸಾನ ಕಂಡಿತು. ಆಸ್ಥಾನದ ಆಡಳಿತ ಪ್ರಮುಖರ ಬಳಿ ಇದ್ದ ಕಲಾವಿದರು ರಾಜಸ್ಥಾನ, ಪಂಜಾಬ್, ಜಮ್ಮು ಹಿಮಾಲಯ ತಪ್ಪಲ ಸಂಸ್ಥಾನಗಳಿಗೆ ಚದುರಿದರು. ಇದರಿಂದ ರಾಜಸ್ಥಾನ ಹಾಗೂ ಪಹಾರಿ ಶೈಲಿಯ ಚಿತ್ರಗಳು ವರ್ಧಿಸಲು ಸಾಧ್ಯವಾಯಿತು.

ಭಾರತೀಯ ಮತ್ತು ಪರ್ಷಿಯಾ ಕಲೆಯ ಸಂಯೋಗದಿಂದ ರೂಪುಗೊಂಡ ಮೊಘಲ ಕಲೆಯ ಲಕ್ಷಣಗಳು ಪರ್ಸಿಬ್ರೌನ್ ಹೀಗೆ ಗುರುತಿಸಿದ್ದಾರೆ. ಕುಂಚದ ಗೆರೆಯೆಳೆತದಲ್ಲಿ, ಬಾಹ್ಯಾರೇಖಾ ವಿನ್ಯಾಸದಲ್ಲಿ ಲೀಪಿಲೇಖನದಿಂದ ರೂಢಿಯಾದ ಕೈಗುಣ ಕಂಡು ಬರುತ್ತದೆ. ಅತ್ಯಂತ ಸೂಕ್ಷ್ಮ ವರ್ಣಛಾಯೆಗಳಿಂದ ರೂಪಣ ಅಥವಾ ಮಾಡೆಲಿಂಗ್ ಪರಿಣಾಮ ತರುವುದು. ಪರ್ಷಿಯಾದ ಇರಾನಿ ಕಲಂ ನಿಂದ ಭಿನ್ನವಾದ, ಶಬಲ ಖಚಿತಾಲಂಕಾರ ರೀತಿಯ ಚಪ್ಪಟೆ ನಿರ್ವಹಣೆಯಿಂದ ಬೇರಿಯಾದ ಬಣ್ಣದ ಲೇಪನ ವಿಧಾನ. ಹಿನ್ನಲೆಯನ್ನು ಅಲಂಕಾರ ವಿನ್ಯಾಸಕ್ಕಿಂತ ಬದಲಾಗಿ ವಾಸ್ತವವಾಗಿ ದೂರ ಹಾಗೂ ಸಮಿಪದ ದೃಷ್ಟಿಯಿಂದ ಚಿತ್ರಿಸುವುದು. ವಿಶಿಷ್ಟವಾದ ಕಣ್ಣೆಲೆ ವಿಧಾನ. ನಿಸರ್ಗ ದೃಶ್ಯಗಳಲ್ಲಿ ಎಚ್ಚರಿಕೆಯಿಂದ ಪ್ರಕೃತಿಯ ವಿವಿಧ ತಲಗಳ ಸಂಯೋಜನೆ. ಚಿತ್ರದ ಅಂಚುಗಳ ವಿನ್ಯಾಸ ವಿಶಿಷ್ಟ ಕಲೆಯಾಗಿಯೇ ರೂಪಗೊಂಡಿತು. ಅದಕ್ಕೆ ಪ್ರತ್ಯೇಕ ಪರಿಣತ ಕಲಾವಿದರಿದ್ದರು. ಆದರಿಂದ ಅಗಲವಾದ ಅಂಚು, ಚೌಕಟ್ಟುಗಳು ಚಿತ್ರಕ್ಕೆ ರೂಢಿಯಾದವು. ಚಿಟ್ಟೆ, ಹಕ್ಕಿ, ಲತೆ, ಬಗೆ ಬಗೆಯ ಬೆಟ್ಟ ಬಯಲಿನ ಪುಷ್ಪಗಳು ಇತ್ಯಾದಿ. ವ್ಯಕ್ತಿ ಚಿತ್ರಗಳ (ತಸ್ವಿರು) ಪ್ರಾಚುರ್ಯ. ಮೊಘಲ್ ಕಲೆಯಲ್ಲೂ ದೆಹಲಿ ಕಲಂ, ಲಕ್ನೋ ಕಲಂ, ದಖನಿ ಕಲಂ ಮುತ್ತಾದ ಶೈಲಿ ವೈವಿಧ್ಯವಿದ್ದವು[೩].

೩. ಎಂ.ಎಚ್.ಕೃಷ್ಣಯ್ಯ : ಕಲಾ ಸಂಸ್ಕೃತಿ, ಪು.ಸಂ–೨
ಅದೇ. ಪು.ಸಂ–೮

ರಾಜಸ್ಥಾನಿ ಮತ್ತು ಪಹಾಡಿ ಶೈಲಿಗಳು :

'ಹದಿನೈದನೆಯ ಶತಮಾನದ ಮಧ್ಯಭಾಗದಿಂದ ಹತ್ತೊಂಬತ್ತನೆಯ ಶತಮಾನದ ಅಂತ್ಯದವರಿಗೆ ಭಾರತೀಯ ಚಿತ್ರಕಲೆಯ ಇತಿಹಾಸ ಉಜ್ಜಲವಾದದ್ದು. ಬಡತನದಲ್ಲೆ ಮುಳುಗಿದ್ದ ಅದರೆ ಅನೂಚಾನ ಪರಂಪರೆಯಿಂದ ಕಲಾಪ್ರಜ್ಞೆ, ಸೌಂದರ್ಯ ಪ್ರಜ್ಞೆಗಳನ್ನು ರೂಢಿಸಿಕೊಂಡಿದ್ದ ಸಾಮಾನ್ಯ ಕಲಾವಿದರು ತಾವು ಕೇಳಿದ್ದ ಕಥೆಗಳನ್ನು, ಪುರಾಣಗಳನ್ನು ಸಾಮಾನ್ಯ ಜನರಿಗಾಗಿ ದೃಶ್ಯ ರೂಪದಲ್ಲಿ ಸುಲಭಗ್ರಾಹ್ಯವಾಗಿ ಚಿತ್ರಕಲಾ ಕೃತಿಗಳನ್ನು ಕೊಟ್ಟರು. ಮೊಘಲ ಆಸ್ಥಾನದ ವೈಭವಪೂರ್ಣ ಕಲೆಯೊಂದಿಗೆ ಪಾಮರರ ಹೃದಯ ಶ್ರೀಮಂತಿಕೆಯ ಕಲೆಯೂ ಬೆಳೆದಿತ್ತು'[೪].

ಈ ಕಲೆ ವಿಕಾಸ ಹೊಂದಿದ್ದು ಮೂರು ಪ್ರಭಾವಗಳಿಂದ, ಅಜಂತಾ, ಎಲ್ಲೋರಾ, ಜೈನ ಗ್ರಂಥಕಲೆಗಳ ಪ್ರಭಾವ ಹಿಮಾಲಯದ ತಪ್ಪಲಿನವರೆಗೂ ಹರಡಿತ್ತು. ಈ ಭಾರತೀಯ ಅಭಿಜಾತ ಕಾಲ ಪದ್ಧತಿ ಬದಲಾದ ಕಾಲ, ಧರ್ಮ ಸಮಾಜ, ಅಭಿರುಚಿಗಳಿಗೆ ತಕ್ಕಂತೆ ಅಲ್ಪಸ್ವಲ್ಪ ಮಾರ್ಪಾಟನೋಡನೆ ಉಳಿದು ಬಂದಿತ್ತು. ಇನ್ನೊಂದು ಆಯಾ ಪ್ರದೇಶಗಳಲ್ಲಿ ರೂಢಿಯಲ್ಲಿದ್ದ ಜಾನಪದ ಕಲಾಶೈಲಿ, ಕಲಾ ತಂತ್ರ, ಮೂಘಲ್ ಪೂರ್ವ ಕಾಲದಲ್ಲಿಯೇ ಇವು ಪರಸ್ಪರ ಬೆರೆದು-ಬೆಸೆದು, ಹೊಸತನ್ನು ಮೈಗೂಡಿಸಿ, ವಿಶಿಷ್ಟ ಶೈಲಿಯಾಗಿ ಭಾರತೀಯ ವಸ್ತು ಪ್ರತಿಪಾದನೆಗೆ ತಕ್ಕಂತೆ ರೂಪಗೊಂಡಿತ್ತು. ಮೂರನೆಯದಾಗಿ ಸ್ವಲ್ಪ ಸ್ವಲ್ಪವೇ ಆದರೂ ಮೂಘಲ್ ಆಸ್ಥಾನ ಕಲಾವಿದರ ಸಂಪರ್ಕದಿಂದ ಈ ಕಲಾವಿದರು ಪ್ರಭಾವಿತರಾದರು. ಕಾಲಕ್ರಮೇಣ ಔರಂಗಜೇಬನ ಕಲಾವಿರೊಧಿ ಮನೋಭಾವದಿಂದ ಆಶ್ರಯ ತಪ್ಪಿದ ಕಲಾವಿದರ ಬಂದು ನೆಲೆಸಿ ಪೌರಾಣಿಕ ವಸ್ತು ನಿರೂಪಣೆ ಸ್ಥಳೀಯ ಪದ್ಧತಿಯೊಮದಿಗೆ ತಮ್ಮ ಕುಶಲ ಅಂಶಗಳನ್ನೂ ಸೇರಿಸೀದರು. ಹಿಮಾಲಯ ತಪ್ಪಲಿನಂತಹ ದೂರ ವಿರಳ ಜನ ಪ್ರವೇಶಕ್ಕೂ, ರಾಜಸ್ಥಾನ ಸಂಸ್ಥಾನಗಳ ಪ್ರದೇಶಕ್ಕೂ ವಸ್ತು, ವಿಷಯ ನೀರೂಪಣೆ, ಶರಿರ ಹಾಗೂ ಮುಖ ಲಕ್ಷಣ ಶೈಲಿ ತಂತ್ರಗಳಲ್ಲಿ ಭೇದವಿದ್ದರೂ ರಾಜ ಮನೆತನಗಳ ವಿವಾಹ ಸಂಬಂಧ ಸಂಪರ್ಕ ಕಾರಣವಾಗಿ ಮದುವೆಯ ಬಳುವಳಿಯಾಗಿ ವಧುವಿನೋಡನೆ ಒಡವೆ ವಸ್ತ್ರಗಳಂತೆ ಆಶ್ರಿತ ಕಲಾವಿದರನ್ನೂ ಕಳುಹಿಸುತ್ತಿದರಿಂದ ಪರಸ್ಪರ ಪ್ರಭಾವದಿಂದ ಒಟ್ಟು ಏಕರೂಪತೆಯ ವಿಕಾಸಕ್ಕೂ ಕಾರಣವಾಯಿತು.

ರಜಪೂತ ಕಲೆಯೆಂದರೆ ಧಾರ್ಮಿಕ, ವಿಶೇಷತಃ ವೈಷ್ಣವ ವಸ್ತು ಉಳ್ಳದ್ದು ಎಂದಾಗಲೀ ಮೊಘಲಕಲೆ ವಾಸ್ತವಿಕ, ಲೌಕಿಕವೆಂದಾಗಲಿ ಹೇಳುವುದು ತಪ್ಪಾಗುತ್ತದೆ. ಅಕ್ಬರನ ಅಸ್ಥಾನದಲ್ಲಿ ಹಿಂದೂ ಕಲಾವಿದರಿದ್ದಂತೆ, ರಜಪುತ ಸಂಸ್ಥಾನಗಳಲ್ಲಿ ಮೊದಲು ಮುಸ್ಲಿಂ ಕಲಾವಿದರೂ ಇದ್ದರು. ಪ್ರಧಾನ ವಸ್ತು, ಪ್ರಧಾನ ಲಕ್ಷಣಗಳನ್ನು ಮಾತ್ರ ಸ್ಥೂಲ ವಿವರಣೆಯಾಗಿ ಹೀಗೆ ಹೇಳಬಹುದಷ್ಟೆ.

ರಾಜಸ್ಥಾನಿ ಹಾಗೂ ಪಹಾಡಿ ಶೈಲಿಯ ವಿಶೇಷ ಲಕ್ಷಣಗಳು ಕೆಲವು ಗಮನಾರ್ಹವಾದುವು. ಜ್ಯಾಮಿತೀಯ ಕಣ್ಣೆಲೆಗಿಂತ ಚಿತ್ರದ ಬೇರೆ ಬೇರೆ ಚಪ್ಪಟೆ ತಲಗಳನ್ನು ಅಳವಡಿಸುವ ರೀತಿಯಲ್ಲೇ, ಬಣ್ಣಗಳು ವ್ಯತ್ಯಾಸ ಸೂಚನೆಯಿಂದಲೇ ದೂರ ಸರಿಯುವ ನೋಟಗಳ ಪರಿಣಾಮ ತಂದರು. ಚಿನ್ನದ

೪. ವ್ಹಿ.ಬಿಹಿರೇಗೌಡರ(ಸಂ) : ನಿಜದ ನೆಲೆ, ಪು.ಸಂ-೨೬೪

ಕುಸುರಿ ಕೆಲಸಗಾರನಂತೆ ವಿವರ ಬಿಡಸಿದರೂ ದೂರದ ದೃಶ್ಯಗಳು ತೇಲುತ್ತಿರುವ ಅನುಭವ ಕೊಡುವಂತೆ ಇರುತ್ತಿತ್ತು. ನೆರಳು-ಬೆಳಕಿನ ಪರಿಣಾಮ ವಾಸ್ತವ ರೂಪದ್ದಲ್ಲ. ಬದಲು ಗಾಢ ತೆಳು ವರ್ಣಗಳಿಂದ ಒತ್ತು ನೀಡಿ ಭ್ರಮೆ ಮೂಡಿಸುವಂತಹದ್ದು. ರಾತ್ರಿ ದೃಶ್ಯಗಳು ನೆರಳು ಬೀಳುವುದನ್ನು ಪರಿಹರಿಸುತ್ತಿದ್ದರು. ಆಕೃತಿಗಳು ಎದು ಕಾಣುವಂತೆ ಇರುತ್ತವೆ. ಹಿನ್ನಲೆಯ ರೂಪ ವಿನ್ಯಾಸದಲ್ಲಿ ಆಕೃತಿಗಳು ಜೀವ ತುಂಬಿ, ನಾಟಕ ದೃಶ್ಯದಂತೆ ಕಾಣುತ್ತವೆ. ಚಿತ್ರದತಲವನ್ನು ನಾಟಕ ವೇದಿಕೆಯಿಂತೆ ಕಲ್ಪಿಸಿ ವ್ಯಕ್ತಿಗಳು, ವಸ್ತುಗಳು, ಹಿನ್ನೆಲೆ ವಾತವರನವನ್ನು ರೂಪಿಕೆ, ಸೂಚನೆಗಳಿಂದ ಜಾನಪದದಂತೆ ತೋರುವುದು. ಕಥಾ ನಿರೂಪಣೆಯೇ ಪದ್ಧತಿಯಾದ ಕಾರಣ ಒಂದು ಕಿರು ಚಿತ್ರ ಕಲಾವಿದನ ನಿರ್ವಹಹಣಾ ಕೌಶಲದಿಂದ ಕಥೆ ಮತ್ತು ಕಾಮ್ಯಗಳೆರಡರ ಅನುಭವವನ್ನೂ ವಾಸ್ತವತೆಯಿಂದ ಪುರಾಣ ಯುಗಕ್ಕೆ, ಕನಸಿನಿಂದ ನನಸಿಗೆ ಸಾಗಿವ ಪರಿಣಾಮವನ್ನೂ ಮೂಡಿಸುತ್ತದೆ. ಇದ್ದಕ್ಕೆ ತನ್ನ ಸಮಕಾಲೀನ ಸ್ಥಳಿಯ ಉಡುಪು, ಆಭರಣ, ಮೈ ಮುಖ ಲಕ್ಷಣವನ್ನು ಸ್ಪಷ್ಟವಾಗಿಯೇ ಉಳಿಸಿಕೊಂಡು, ವಾಸ್ತವ ವರ್ಣ ಛಾಯೆಗಳನ್ನೂ ಬದಲಾಯಿಸುತ್ತಿದ್ದರು. ಈ ಸಮತೋಲನ ಈ ಕೀರು ಚಿತ್ರಗಳು ಸತ್ವವಾಗಿವೆ. ಸುತ್ತಲ ಜಗತ್ತಿನ, ವಾತಾವರ್ಣದ ಕಲ್ಪನೆ ಹಾಗೂ ಬಣ್ಣಗಳ ನಿರ್ವಹಣೆಯಲ್ಲಿ ಕಾಣಬರುವ ಬಹುಮುಖ್ಯ ಅಂಶಃ ಅವು ಪ್ರೇಕ್ಷಕ ನೋಡುತ್ತಿರುವಂತೆ ಕಲ್ಪಿತವಾದುವಲ್ಲ, ಚಿತ್ರಿತ ವ್ಯಕ್ತಿಗಳ ಭಾವೂದ್ವೆಗಗಳ ದೃಷ್ಟಿಯಿಂದ ಅವರ ಕಣ್ಣಿಗೆ ಸೂತ್ತಲ ವಾತಾವರಣ ಕಾಣುವಂತೆ, ಭಾವನಾತ್ಮಕವಾಗಿ ಬಣ್ಣಗಳ ಏರಿಳಿತ ತಂದರು. ಗಾಢ-ತೆಳುಛಾಯೆ ಲೇಪನದ ಕೌಶಲ್ಯ ಕಾಣುತ್ತದೆ. ಬಾಸೋಲಿ ಚಿತ್ರಗಳು, ನಾಯಿಕಾಭೇದ ಚಿತ್ರಗಳು, ರಾಗಮಾಲಾ ಚಿತ್ರಗಳು ಇವಕ್ಕೆ ದೃಷ್ಟಾಂತ. ಹಾಗೆಯೇ ತೆರಪು ಬಿಡಿಸುವ-ಸೂಚಿಸುವ ರೀತಿ ವಾಸ್ತವವಾಗಿದ್ದರೆ ಹಲವು ದೃಶ್ಯ, ದೃಶ್ಯಭಾಗಗಳ ಕಥಾನಿರೂಪಣೆಯ ದೃಷ್ಟಿಯಿಂದ ತೆರವನ್ನು ಬಣ್ಣಗಳ ಮೂಲಕ ಸಂಬಂಧ ಕಲ್ಪಿಸಿ ಸೂಚಿಸುವುದು. ಎಷ್ಟಾದರೂ ಚಿತ್ರ ಚಿತ್ರವೇ. ನೋಡುವ ಅನುಭವದ ಮುಂದೆ ಮಾತು ಸೋಲುತ್ತದೆ.

ಒಟ್ಟು ದೃಷ್ಟಿಯಿಂದ ಈ ಕಲೆ ಸರಳ, ನೇರವಾದರೂ ಜೀವ ತುಂಬಿ ಕಳಕಳಿಸುತ್ತದೆ. ಸಾಮಾನ್ಯರ ಹೃದಯ ಮಿಡಿಸುತ್ತದೆ. ಮತೀಯ, ನಿಗೂಢ, ಅಧ್ಯಾತ್ಮಿಕ, ಸುತ್ತಲ ಸಮಾಜ, ನಿಸರ್ಗ, ಮಾನವ ಭಾವಗಳು, ಪ್ರಾಣಿ ಪಕ್ಷಿಗಳ ಪ್ರೇಮ, ಚೈತನ್ಯ ತುಂಬಿದ ಮರ ಗಿಡಗಳಿಂದ, ಮೋಡ ಮಿಂಚುಗಳಿಂದ, ಮಳೆ ಹನಿಯಿಂದ ಜೀವಂತ ಅನುಭವ ನೀಡುತ್ತದೆ.

ಈ ಅದ್ಭುತ ನಾಟಕ ತೆರೆದುಕೋಳ್ಳುವ ಕ್ಷೇತ್ರ ರಾಜಸ್ಥಾನದ ಗಾಢ ಬಣ್ಣಗಳ ವೈದೃಶ್ಯಪೂರ್ಣ ಮರಳು ಭೂಮಿ ಪ್ರದೇಶ. ಕೆಲಕಾಲ ಹಸಿರು ಹೊದೆಯುವ ಪ್ರದೇಶ, ಬೆಟ್ಟಗುಡ್ಡಗಳನಾಡು, ಅತ್ತ ಪಂಜಾಬಿನ ಉತ್ತರಕ್ಕೆ ಹಿಮಾಲಯದ ತಪ್ಪಲು, ಕಣಿವೆಗಳ ಏರಿಳಿತಗಳ, ಶ್ರೀಮಂತ ವೈವಿದ್ಯ ಪೂರ್ಣ ನಿಸರ್ಗದ ಸಂಸ್ಥಾನಗಳು. ಇವು ಸ್ಥಳಿಯವಾದ ವೈಶಿಷ್ಯಗಳನ್ನು ರೂಢಿಸಿಕೊಂಡು ತಮ್ಮದೇ ಶೈಲಿಯಿಂದ ಪ್ರಸಿದ್ದಿವಾದವು'[೫]. ಹೀಗಾಗಿ ಸ್ಥಳನಾಮದಿಂದ ಬೇರೆ ಬೇರೆ ಕಲಂಗಳು, ಶೈಲಿಗಳು ಎಂದು ಗುರುತಿಸುವಂತಾಯಿತು.

೫. ಎಂ.ಎಚ್.ಕೃಷ್ಣಯ್ಯ : ಕಲಾ ಸಂಸ್ಕೃತಿ, ಪು.ಸಂ-೯
ಅದೇ. ಪು.ಸಂ-೧೦

ಮೇವಾರ್ ಶೈಲಿ :

'ಉದಯಪುರ ಸಂಸ್ಥಾನ ಅಥವಾ ಮೇವಾಡ ಭಾಗಶಃ ಬೆಟ್ಟಗುಡ್ಡಗಳಿಂದ ಗಾಢ ಕಾಡುಗಳಿಂದ, ಕೆರೆ, ಸರೋವರಗಳಿಂದ ಕೂಡಿದೆ. ಚಿತ್ತೂರು, ಉದಯ ಪುರಗಳ ಮಹಾರಾಣ ಮುಸ್ಲಿಮರನ್ನು ವಿರೋಧಿಸಿ ಖ್ಯಾತರಾದ ವೀರರು, ಚಿತ್ತೂರು ರಾಣಿ ಪದ್ಮಿನಿ ಸಹಗಮನ ಮಾಡಿದ ಕಥೆ ಅನೇಕ ಚಿತ್ರಗಳ ವಸ್ತು. ಗಿಣಿ ಹಿಡಿದ ಸುಂದರ ಚಿತ್ರಿತವಾಗಿದ್ದರೆ ಆಕೆ ಪದ್ಮಿನಿ ಎನ್ನುವಷ್ಟು ಜನಪ್ರಿಯ ವಸು. ಭಾಗವತ ಪುರಾಣ, ಬಾಣನ ಕಾದಂಬರಿ ಚಿತ್ರಗಳು, ಪಂಚತಂತ್ರ ಕಥೆಗಳ, ಪೃಥ್ವೀರಾಜನ ಜನಜನಿತ ಲಾವಣಿ ಕಥೆಗಳು ಚಿತ್ರ ಕಥಾಗಳು ಚಿತ್ರ ಕಥಾವಸ್ತು. ಬಹುವಾಗಿ ೧೭ನೇ ಶತಮಾನದ ರಾಜಸಿಂಗನ ಕಾಲಕ್ಕೆ ಸೇರಿದುವು. ಸಂಗ್ರಾಮಸಿಂಗನ ಕಾಲದವು ಗೀತ ಗೋವಿಂದ, ಸುಂದರ ದಾಸರ ಸುಂದರ ಶೃಂಗಾರ ಚಿತ್ರಗಳು. ಮೂಲ ಬಣ್ಣಗಳಾದ ಕೆಂಪು, ನೀಲಿ, ಹಳದಿ ಬಳಕೆ. ಆದಿವಾಸಿ ಜಾನಪದ ಸತ್ವ ಈ ಚಿತ್ರ ಶೈಲಿಯ ವೈಶಿಷ್ಟ್ಯ. ಮೊಘಲ ಕಲೆಯ ಪ್ರಭಾವದ ಪೂರ್ವಕಾಲದ ಸ್ವರೋಪ ಈ ಚಿತ್ರಗಳಿಂದ ತಿಳಿಯುತ್ತದೆ'[೬].

ಬುಂದಿ :

'ಹರೋಟಿಯು ಹರರಜಪೂತರ ದೇಶವಾಗಿದ್ದು ಬುಂದಿ ಮತ್ತು ಕೋಟಾ ಎರಡು ರಾಜ್ಯಗಳನ್ನು ಒಳಗೊಂಡಿತ್ತು. ರಾವ್ ಚತ್ತಾಲ್‌ಸಾಲ್‌ನು (೧೬೩೨-೫೮) ಬುಂದಿಯ ಅತ್ಯಂತ ಪ್ರಾಭಾವಶಾಲಿ ಆಡಳಿತಗಾರ. ಶಹಜಹಾನನು ಅವನನ್ನು ದೆಹಲಿಯ ಗೌರ್ನರನ್ನಾಗಿ ಮಾಡಿದನು ಹಾಗೂ ನಂತರ ಅವನು ಡೆಕ್ಕನ್ ವಿಚಾರಣೆಯಲ್ಲಿ ಪ್ರಮುಖ ಪಾತ್ರವಹಿಸಿದನು. ಅವನ ಉತ್ತರಾಧಿಕಾರಿ ಭಾವೋಸಿಂಗ್‌ನ (೧೬೫೮-೮೨) ಕಾಲದಲ್ಲಿ ಬುಂದಿ ಚಿತ್ರಕಲೆಯು ಅತಿ ಶೀಘ್ರವಾಗಿ ಅಭಿವೃದ್ಧಿ ಹೊಂದಿತು'[೭]. ಬುಂದಿ ಚಿತ್ರಕಲೆಯ ಉತ್ತಮ ಕೇಂದ್ರವಾಗಿತ್ತು. ಬುಂದಿ ಶೈಲಿಯ ವೈಶಿಷ್ಟ್ಯ ಸ್ತ್ರೀರೂಪ ಸೌಂದರ್ಯ : ಹಿಂಜರಿಯುವ ಹಣೆ, ಗಲ್ಲ, ಪ್ರಸ್ಫುಟ ನಾಸಿಕ, ತುಂಬುಗೆನ್ನೆ, ತಿದ್ದಿದ ಹುಬ್ಬು, ಕೆರೆ, ಬಾಳೆ, ಖರ್ಜೂರ ಗಿಡಗಳ ನಿಸರ್ಗ ಚಿತ್ರಣ. ಶುದ್ಧ ನೀಲಿ, ಕೆಂಪು, ಹಳದಿ, ಹಸಿರು ಬಲಕೆಯ. ಖಚಿತ ಸಂಯೋಜನೆ. ರಾಗಮಾಲಾ ಚತ್ರಗಳು, ಮಾಧವನಲ ಕಾಮಕಂದಾಲ ಪ್ರೇಮಕಥೆ, ಸೋಹ್ನಿ ಮಹಿವಾಲ ಪ್ರೇಮಕಥೆ ಮುಂತಾದವು ಬುಂದಿಯ ಚಿತ್ರ ವಸ್ತು. ನೀರು ಹಕ್ಕಿಗಳ ಬುಂದಿಯ ವೈಶಿಷ್ಟ್ಯ. ಒಂದು ವಸಂತಾಗಮನ ಚಿತ್ರದಲ್ಲಿ ಶೈಲಿಕೃತ ಹೂ ಬಿಟ್ಟ ಗಿಡ ಮರಗಳನ್ನು ಕಾಣಬಹುದು. ಸ್ತ್ರೀಯರ ಗುಂಪುಗಳ ರಚನೆಯಲ್ಲಿ ಉಯ್ಯಾಲೆಯ ಲಯಬದ್ಧ ಚಲನೆಯಿದೆ. ಉಪ್ಪರಗೆಯ ಮಾಡದಲ್ಲಿ ರಾಜರಾಣಿಯರ ಮುನ್ನೆಲೆಯಲ್ಲಿ ಕಮಲದ ಕೋಳ, ನೀರು ಹಕ್ಕಿಗಳ, ಮಿನುಗಳ ಹಿನ್ನೆಲೆಯ ನಡುವೆ ಅಡ್ಡಕ್ಕೆ ಹರಿಯುತ್ತಿರುವ ನದಿ, ಕ್ಕೋಕ್ಕರೆಗಳು ಇಡಿ ನಿಸರ್ಗ, ಅಂತೆಯೆ ಜೀವರಾಶಿ ನವಚೈತನ್ಯದಿಂದ ವುಲ್ಲಾಸದಿಂದ ನಲಿವಾಗದಂತೆ ವಸಂತಾಗಮನವಾಗಿದೆ.

ವಾಸ್ತವವಾಗಿ ಕೋಟಾ ಶಿಕಾರಿ ಚಿತ್ರಗಳಿಗೆ ಪ್ರಸಿದ್ಧ. ಬುಂದಿಯ ಕೊಂಚ ಬದಲು ಶೈಲಿ ಕೋಟಾವಿನದು. ನಾಯಕ-ನಾಯಿಕಾಭೇದ ಚಿತ್ರಗಳು, ರಾಗ ಮಾಲಾ ಚಿತ್ರಗಳು, ಬಾರಾ ಮಾಸಾ

೬ ಎಂ.ಎಚ್.ಕೃಷ್ಣಯ್ಯ : ಕಲಾ ಸಂಸ್ಕೃತಿ, ಪು.ಸಂ-೧೦
ಅದೇ. ಪು.ಸಂ-೧೧

೭ ಪಿ.ಆರ್.ತಿಪ್ಪೇಸ್ವಾಮಿ : ಕಲಾ ಕೋಶ, ಪು.ಸಂ-೨೩೨

ಚಿತ್ರಗಳು ಇವೆ. ಕೋಟಾದ ಶಿಕಾರಿ ಚಿತ್ರಗಳಲ್ಲಿ ಉತ್ಸಾಹ ಮತ್ತು ಲಯ ಮಿಡಿಯುವ ಅನುಭವವಾಗಿದೆ. ನವಿರಾದ ವರ್ಣಛಾಯೆಯ ಬಳಕೆ. ಅದರಲ್ಲೂ ಬಣ್ಣ ಹಾಕಿದ ನಂತರ ಸೂಕ್ಷ್ಮ ವಿವರಗಳನ್ನು ಉದ್ದೇಶ ಪೂರ್ವಕ ಬೀಡಿಸುವುದು ತಂತ್ರ ಕೌಶಲ್ಯವನ್ನು ತೋರುತ್ತದೆ.

'ರಾಜಸ್ಥಾನದ ಮರಭೂಮಿಯ ಸಂಸ್ಥಾನಗಳಾದ ಜೋಧಪುರ, ಬಿಕಾನೇರ್‌ಗಳಲ್ಲೂ ವಿಶಿಷ್ಟ ಕಲಂ ರೂಢಿಗೆ ಬಂದಿತು. ರಜಪೂತ್ ವಂಶದ ರಾಠೋಡ್ ರಾಜರ ಆಶ್ರಯದಲ್ಲಿ ಕಲೆ ಬೆಳೆಯಿತು. ರಾಜಾ ಮಾನಸಿಂಗನ ಕಾಲದಲ್ಲಿ ಜೋಧಪುರ ಶೈಲಿ. ಆತನೇ ಸ್ವತಃ ಕೃಷ್ಣ ವಿಲಾಸ ಕಾವ್ಯ ಬರೆದ. ರಾಗಮಾಲಾ , ಕಾಮಸೂತ್ರ, ಪಂಚತಂತ್ರ ಚಿತ್ರಗಳು, ಹೆಂಗಸರ ವಸ್ತ್ರಗಳು ಸ್ತನಮಾತ್ರ ಮುಚ್ಚುವ ಚೋಲಿ, ಘಂಟಾಲಕಾರದ ಲಂಗಗಳು, ನೀಳ ದೇಹ, ಆಕರ್ಷಕ ಮೈ ಬಣ್ಣ, ಬಿಕಾನೆರ್‌ನಲ್ಲಿ ಜೈನಧರ್ಮಮ ಗ್ರಂಥಗಳ ಚಿತ್ರ, ರಾಗಮಾಲಾ, ಅಂತಃಪುರ ದೃಶ್ಯಗಳು, ರಸಿಕಪ್ರೀಯ ಗ್ರಂಥ ನಿರುಪಣಾ ಚಿತ್ರಗಳು ರಚಿತವಾಗಿವೆ.'[೮] ಬಿಕಾನೆರ್ ಕಿರು ಚಿತ್ರಗಳು ಚಿಕ್ಕವೇ, ನರಕ್ಷೋಭೆಯಿಂದ ಕೂಡಿದಂತಹವೆಂದು ಗೋಯೆಜ್ ಹೇಳುತ್ತಾರೆ.

ಕಿಶನ್‌ಗಡ :

'ಸುಮಾರು ೧೮ನೆಯ ಶತಮಾದ ಮಧ್ಯದಲ್ಲಿ ಕಿಶನ್‌ಗಡ ಎಂಬ ಚಿಕ್ಕ ರಾಜ್ಯದಲ್ಲಿ ಮೂಡಿದ ಪ್ರಣಯ ಹಾಗೂ ನವೋಲ್ಲಾಸದಿಂದ ಕೂಡಿದ ಚಿತ್ರಕಲೆಯ ಶೈಲಿಯ, ರಾಜಸ್ಥಾನ ಚಿತ್ರಕಲೆಯಲ್ಲಿ ಅಪ್ರತಿಮ ಸ್ಥಾನವನ್ನು ಗಳಿಸಿಕೊಂಡಿತು. ರಾಧಾ-ಕೃಷ್ಣರ ಕಥಾವಸ್ತುವಿನಲ್ಲಿರುವ ಮೃದುತ್ವ ಹಾಗೂ ಅದರ ಭಾವನೆಯನ್ನು ಕಾಂಗ್ರ ಚಿತ್ರಕಲೆಗೆ ಮಾತ್ರ ಹೋಲಿಸಬಹುದು. ಮಾನ್‌ಸಿಂಗನ (೧೬೫೮-೧೭೦೬) ಆಳ್ವಿಕೆಯ ಕಾಲಕ್ಕೂ ಮುಂಚಿನಿಂದಲೂ ಅನೇಕ ಕಲಾವಿದರು ಕಿಶನ್‌ಗಡದಲ್ಲಿ ಕೆಲಸ ಮಾಡಿತ್ತಿದ್ದರು. ಚಿತ್ರಗಳನ್ನು ಮೊನಚಾಗಿಸುವ ಪ್ರವೃತ್ತಿ, ಹಸಿರು ಬಣ್ಣವನ್ನು ಹೇರಳವಾಗಿ ಉಪಯೋಗಿಸುವುದು ಮತ್ತು ಸುತ್ತಮುತ್ತಲಿನ ಭೂದೃಶ್ಯಗಳು, ಕಿಶನ್‌ಗಡದ ಶಾಲೆಯ ಪ್ರಧಾನಗುಣಗಳಾಗಿದ್ದವು ಕಿಶನ್‌ಗಡದ ರಾಜರು ಹಾಗೂ ಶ್ರೀಮಂತ ವರ್ಗದವರಿಗೆ ಚೈತನ್ಯತುಂಬಿದ ಕುದುರೆಗಳ ಬಗ್ಗೆ ತುಂಬಾ ಒಲವು ಇದ್ದಿತ್ತು. ಶಕ್ತಿಶಾಲಿಯಾದ ಬಿಳಿ ಕುದುರೆಯನ್ನು ಓಡಿಸುತ್ತಿರುವುದು ಹಾಗೂ ಅದರ ಕಾಲುಗಳಿಗೆ ಕೆಂಪು ಬಣ್ಣವನ್ನು ಬಳಿದಿರುವುದನ್ನು, ಹಿನ್ನೆಲೆಯಲ್ಲಿ ಚಿತ್ರಿಸಿದ ಸರೋವರ ಹಾಗೂ ಹಸಿರು ಬೆಟ್ಟವನ್ನು ಕಿಶನ್‌ಗಡದ ಚಿತ್ರಗಳಲ್ಲಿ ನೋಡಬಹುದು. ರಾಧಾ-ಕೃಷ್ಣರನ್ನು ಅನೇಕ ರೀತಿಯಲ್ಲಿ ಹಾಗೂ ವಿವಿಧ ಸನ್ನಿವೇಶಗಳಲ್ಲಿ ಚಿತ್ರಿಸಿರುವುದನ್ನು ಕಿಶನ್‌ಗಡದ ಚಿತ್ರಕಲೆಯ ಹಿರಿಮೆ. ರಾಧೆಯು ಈ ಭಾವಚಿತ್ರಗಳಲ್ಲಿ ಕೋಲುಮುಖ ಬಾಗಿರುವ ಹುಬ್ಬುಗಳು, ಕಮಲದಂತಹ ಕಣ್ಣುಗಳು, ಮೊನಚಾದ ಮೂಗು ತೆಳು ಹಾಗೂ ಸೂಕ್ಷ್ಮವಾದ ತುಟಿಗಳು ಹಾಗೂ ಮೊನಚಾದ ಗಲ್ಲವನ್ನು ಹೊಂದಿದ್ದಾಳೆ. ಇನ್ನೊಂದು ಚಿತ್ರದಲ್ಲಿ ಕೃಷ್ಣನನ್ನು ರಾಲನನ್ನಾಗಿ ನಿರೂಪಿಸಲಾಗಿದೆ ಹಾಗೂ ರಾಧೆಯ ಎದುರು ನಿಲ್ಲಿಸಲಾಗಿದೆ. ಅವನ ಸುತ್ತಲೂ ಅನೇಕ ಅಲಂಕಾರಗೊಂಡ ಸಖಿಯರು ಇರುತ್ತಾರೆ. ಅವರ ತಲೆಗಳು ಭಕ್ತಿಭಾವವನ್ನು ಸೂಚಿಸುತ್ತಿರುವಂತೆ ಮೂಡಿಸಲಾಗಿದೆ. ಹಿಂಭಾಗದ

೮. ಎಂ.ಎಚ್.ಕೃಷ್ಣಯ್ಯ : ಕಲಾ ಸಂಸ್ಕೃತಿ, ಪು.ಸಂ-೧೧
ಅದೇ. ಪು.ಸಂ-೧೨

ದೃಶ್ಯದಲ್ಲಿ ಸರೋವರವಿದ್ದು, ಅದರಲ್ಲಿ ನೀರು, ಹಕ್ಕಿಗಳು ಕುಳಿತಿರುತ್ತವೆ. ಇದರಲ್ಲಿ ಬರುವ ಕೆಂಪು ದೋಣಿಯು ಕೂಡ ಕಿಶನ್‌ಗಡದ ಚಿತ್ರಕಲೆಯ ವಿಶೇಷ ಗುಣವಾಗಿದೆ.

ಕಿಶನ್‌ಗಡದ ಆಡಳಿತಗಾರರ ಕೃಷ್ಣನ ಪರಮ ಭಕ್ತರಾಗಿದ್ದರು. ಪುಷ್ಟಿಮಾರ್ಗ.(ಇಂದ್ರಿಯ ಭೋಗದ ಮಾರ್ಗ) ಪಂಥಕ್ಕೆ ಸೇರಿದ ಪುರೋಹಿತರು ಕೃಷ್ಣನ ವಿಗರಹಕ್ಕೆ ಸುಂದರವಾದ ಪದ್ಧತಿಯಲ್ಲಿ ವಿವಿಧ ರೀತಿಯಲ್ಲಿ ಪೂಜೆ ಮಾಡುತ್ತದ್ದರು. ಆ ಪೂಜೆಯಲ್ಲಿ ಹೂಗಳು ಮತ್ತು ಸುವಾಸನಾ ದ್ರವ್ಯವು ಪಾತ್ರವಹಿಸಿತ್ತು. ಪುಷ್ಟಿಮಾರ್ಗದ ಉನ್ನತ ಪೂಜಾರಿಗಳು ರಾಜರು ಶ್ರೀಮಂತವರ್ಗದವರು ಮತ್ತು ಶ್ರೀಮಂತ ವ್ಯಾಪಾರಿಗಳಾಗಿದ್ದರು. ರಾಧಾ-ಕೃಷ್ಣರ ಆಧ್ಯಾತ್ಮಿಕ ಪ್ರೀತಿಯನ್ನು ನಾಟಕ ರೂಪದಲ್ಲಿ ರಜಪೂತರ ಅನೇಕ ರಾಜ್ಯಗಳ ಅರಮನೆಗಳು ಮತ್ತು ಶ್ರೀಮಂತ ಮಹಲುಗಳಲ್ಲಿ ಅಭಿನಯಿಸಲಾಯಿತ್ತು. ಕಿಶನ್‌ಗಡದಲ್ಲಿ ಈ ಪಂಥದ ಜನಪ್ರಿಯತೆಯು ೧೯ನೇ ಶತಮಾನದ ಅಂತ್ಯದವರೆಗೂ ಮುಂದುವರೆಯಿತು[೯]. ಈ ಭಾವನೆಗಳೆ ಚಿತ್ರಕಲೆಯಲ್ಲಿಯೂ ಮೂಡಿತು.

ಜೈಪುರ :

'ಜೈಪುರವು ಮೊಘಲರ ಸಾಮ್ರಾಜ್ಯ ಕಟ್ಟುವ ರಾಜ್ಯನೀತಿಯ ಕೆಳಗೆ ಬಂದ ಮೊದಲ ರಾಜಸ್ಥಾನಿ ರಾಜ್ಯವಾಗಿತ್ತು, ಅದರ ರಾಜರು ಮೊಘಲ್ ಮಹಾರಾಜರ ಪ್ರಾಮಾಣಿಕ ಸೇನಾಧಿ ಪತಿಗಳಾಗಿದ್ದರು. ದೆಹಲಿ ಹಾಗೂ ಅಕ್ಬರ್‌ಗಳ ನಡುವೆ ದೃಢವಾದ ಪರಸ್ಪರ ಸಂಪರ್ಕಗಳಿದ್ದವು. ಅಕ್ಬರ್ ಅರಮನೆಯಲ್ಲಿ ಮಾಡಲಾದ ಸ್ಥಳಿಕ ಮಾಸ್ತುಶಿಲ್ಪ, ಮನೋಹರವಾದ ಕೆತ್ತನೆ ಕೆಲಸ ಮಾಡಲಾದ ಬಾಗಿಲುಗಳು ಹಾಗೂ ಕಿಟಕಿಗಳು, ಕನ್ನಡಿಗಳಿಂದ ಅಲಂಕೃತವಾದ ಗೋಡೆಗಳು ಹಾಗೂ ತಮ್ಮ ಪ್ರಭಾವವನ್ನು ಮೊಘಲರ ವಾಸ್ತುಶಿಲ್ಪ ಸ್ಥಳವಾದ ಫಥೇಪುರ ಹಾಗೂ ಸಿಕ್ರಿಗಳ ಮೇಲೆ ಬೀರಿದವು. ಆದರೆ ಮೊಗಲರ ಪ್ರಭಾವ ಚಿತ್ರಕಲೆಯ ಮೇಲೆ ಹೆಚ್ಚು. ಜೈಪುರದಲ್ಲಿ ರಾಜಕಲಾವಿದರ ಗುಂಪೋಂದು ರಾಜಾಶ್ರಯದಲ್ಲಿ ಬೇಳೆಯಿತು. ರಾಜರ ಚಿತ್ರಗಳು, ಅವರ ವೈಭವವನ್ನು ಚಿತ್ರಿಸುವಂತೆ ಆದೇಶಿಸಲಾಗಿತ್ತು. ಹದಿನೆಂಟನೆ ಶತಮಾನದ ಕೊನೆಯಲ್ಲಿ ಮೊಘಲರ ಪ್ರಭಾವವನ್ನು ಕಳೆದುಕೊಂಡಾಗ ನಿಜವಾದ ಜೈಪುರ ಶೈಲಿ ಮೂಡಿಬಂತು. ರಾಜ ಪ್ರತಾಪ ಸಿಂಗನ ವೈಯಕ್ತಿಕ ಪ್ರೇರಣೆಯ ಕೆಳಗೆ ಕೃಷ್ಣನನ್ನು ವಿಷಯವಾಗಿಸಿಕೊಂಡು ಹಲವಾರು ಚಿತ್ರಗಳನ್ನು ರಚಿಸಲಾಯಿತು.

'ವೃತ್ತಾಕಾರದ ನೃತ್ಯ' ಚಿತ್ರದಲ್ಲಿ ಕೃಷ್ಣ ಜಾನಪದ ನೃತ್ಯವನ್ನು ಮಾಡುತ್ತಿದ್ದಾನೆ. ಇದನ್ನು ;ಪ್ರೇಮ ಸಾಗರ' ಎಂದು ಕರೆಯಲಾಗಿದೆ. ಶರದೃತುವಿನ ನಿಚ್ಚಳ ಆಕಾಶದ ತುಂಬ ಚಂದ್ರ ತಂಪಾದ ಬೆಳಕು ಗೋಪಿಕೆಯನ್ನು ತನ್ನ ಮೋಹಕ ಸಂಗೀತದಿಂದ ಕರೆದು, ಅವರೊಡನೆ ನೃತ್ಯ ಮಾಡಿಸಿದ್ದಾನೆ, ವೃತ್ತಾಕಾರದಲ್ಲಿ ನಿಂತ ಗೋಪಿಕೆಯರ ನಡುವೆ ನಿಂತ ಕೃಷ್ಣನ ಪ್ರಕಾಶಮಾನ ಆಕೃತಿ ಸುತ್ತಮುತ್ತಲಿನ ಚಂದ್ರ ಹಾಗೂ ಮರಳಿನ ಮೇಲೆ ಹರಡಿದ ಚಂದ್ರಕಾಂತಿಗೆ ವಿರುದ್ಧವಾಗಿದೆ. ಈ ದೃಶ್ಯದ ಸೌಂದರ್ಯವನ್ನು ಸವಿಯಲು ಹೊರಬಂದ ದೇವತೆಗಳು ಹೂಮಳೆ ಸುರಿಸುತ್ತಿದ್ದಾರೆ.

೯. ಪಿ.ಆರ್.ತಿಪ್ಪೇಸ್ವಾಮಿ : ಕಲಾ ಕೋಶ, ಪು.ಸಂ-೯೯
ಅದೇ. ಪು.ಸಂ-೧೦೦

ಒಳ ವೃತ್ತದಲ್ಲಿರುವ ಗೋಪಿಕೆಯ ಕೆಂಪು ಹಾಗೂ ಕೇಸರಿ ಬಣ್ಣದ ಬಟ್ಟೆ ತೊಟ್ಟಿದ್ದರೆ, ಮಧ್ಯ ವೃತ್ತದವರು ಹಸಿರು ಹಾಗೂ ಹೊರ ವೃತ್ತದವರು ಕಪ್ಪು ಬಟ್ಟೆಯನ್ನು ತೊಟ್ಟಿದ್ದಾರೆ’[೧೦].

ಬಾಸೋಲಿ :

‘ರಾವಿ ನದಿಯ ದಂಡೆಯ ಮೇಲೆ ಬಾಸೋಲಿ ಇದೆ. ಫಲವತ್ತಾದ ಎತ್ತರದ ಪ್ರದೇಶ ಹದಿನೇಳನೇ ಶತಮಾನದಲ್ಲಿ ಅನನ್ಯವಾದ ಮಣ್ಣಿನ ವಾಸನೆಯ ಜಾನಪದವೆನ್ನಬಹುದಾದ ವಿಶಿಷ್ಟ ಶೈಲಿ ಕಾಣಿಸಿಕೊಂಡಿತು. ಈ ಶೈಲಿಯ ಮೂಲ ತಿಳಿಯದು. ಮೊಘಲ ಪೂರ್ವ ಕಾಲದ್ದಿರಬಹುದು. ಪಂಜಾಬಿನ ಬೆಟ್ಟಗಳ ನಾಡಿನಲ್ಲಿ ರೂಪುಗೊಂಡಿರಬಹುದು. ಉಡುಪು ಬಿಟ್ಟರೆ ಮೊಘಲ ಶೈಲಿಯ ಹೋಲಿಕೆಯಾಗಲೀ ರಾಜವೈಭವವಾಗಲೀ ಇಲ್ಲ. ಮೂಲ ವರ್ಣಗಳಾದ ಕೆಂಪು, ಹಳದಿ, ನೀಲಿಗಳನ್ನು ಚಪ್ಪಟೆಯಾಗಿ ಬಳಸಿವಿಕೆ, ಹಿಂದಕ್ಕೆ ಸರಿಯುವ ಹಣೆಯುಳ್ಳ ಮುಖಗಳು, ಅರಳಿದ ಕಮಲ ಪುಷ್ಪದಂತಹ ದೊಡ್ಡ ಭಾವಪೂರ್ವ ಕಣ್ಣುಗಳು, ತಮಗೆ ಪ್ರಿಯವಾದ ಕೆಲವೇ ಗಿಡ ಮರಗಳನ್ನೂ ಹೂಗಳನ್ನೂ ಆರಿಸಿ ಶೈಲೀಕೃತಗೊಳಿಸಿ ಉಕ್ಕುವ ನಲಿವಿನ ಸಂಕೇತವಾಗಿ ಆಲಂಕಾರಿಕವಾಗಿ ಬಳಸಿರುವ ರೀತಿ, ಮೋಡ ಹಕ್ಕಿಗಳು ಮುದ್ದು ಪ್ರಾಣಿಗಳು, ಪ್ರೇಮಿಗಳನ್ನು ಹಳದಿ ಬಣ್ಣದ ಹಿನ್ನೆಲೆಯಲ್ಲಿ ಉಲ್ಲಾಸ ಹೊಮ್ಮುವಂತೆ ಚಿತ್ರಣ, ಕೇಂದ್ರ ವ್ಯಕ್ತಿಯ ಸುತ್ತ ಆಕೃತಿಗಳನ್ನಿರಿಸದೆ ಒಂದು ಮುಖ್ಯ ವ್ಯಕ್ತಿಯನ್ನು ಸೇರಿಸುವಿಕೆ-ಇವು ಬಾಸೋಲಿಯ ಸರಳ ಆದರೆ ಅರ್ಥ ಪೂರ್ಣ ಶೈಲಿಯ ವೈಶಿಷ್ಟ್ಯ. ರತಿ ಸ್ಥಾಯಿಯ ಶೃಂಗಾರದ ಕೊನೆಯ ಘಟ್ಟ ನಲ್ಲ ನಲ್ಲೆಯರ ಮಿಲನ, ಸಮಾಗಮ ಚಿತ್ರದಲ್ಲಿ ರಾಜಕುಮಾರನೊಬ್ಬ ನಲ್ಲೆಯೊಡನೆ ಪ್ರಣಯ ಚೇಷ್ಟೆಯಲ್ಲಿ ಮಗ್ನನಾಗಿದ್ದಾನೆ. ಹಿಂದಿನ ಗೋಡೆಯ ಅಲಂಕಾರದ ಗೂಡುಗಳಲಗಲ್ಲಿ ಒಂದರಲ್ಲಿ ಮೈನಾ ಹಕ್ಕಿಗಳು ಸರಸವಾಡುತ್ತಿವೆ. ಒಬ್ಬ ಸೇವಕಿ ಕೈಚೌಕ, ತಟ್ಟೆಯಲ್ಲಿ ದ್ರಾಕ್ಷಾರಸ ಹೂಜಿ ಬಟ್ಟಲುಗಳನ್ನು ತರುತ್ತಿದ್ದಾಳೆ. ಅವಳ ಹಿಂದೆ ಇನ್ನೊಬ್ಬ ಸೇವಕಿ ಬೆಳಕಿಗೆ ಪಂಜು ಹಿಡಿದಿದ್ದಾಳೆ. ಕೊಠಡಿಗಳ ವಿಭಾಗ ಕ್ರಮ, ಒಳ-ಹೊರ ದೃಶ್ಯಗಳ ಜೋಡಣೆ ಮಧ್ಯೆ ಅರ್ಧ ತೆರೆದ ಬಾಗಿಲು, ನೆಲ ಹಾಗೂ ಹಾಸಿಗೆ ದಿಂಬುಗಳ ವಿನ್ಯಾಸ-ಎಲ್ಲವೂ ಭಾವೋದ್ವೇಗಕ್ಕೆ ಶೃಂಗಾರಕ್ಕೆ ಪೋಷಕವಾಗಿವೆ.

ಭಾನುದತ್ತನ ರಸಮಂಜರಿ, ಮಾಧವ-ಮಾಲತಿ ಕಥೆ, ಭಾಗವತ ಪುರಾಣ, ರಾಗಮಾಲಾ ಬಾಸೋಲಿ ಚಿತ್ರಗಳ ವಸ್ತು.

ಬಾಸೋಲಿಯಷ್ಟೇ ಹಳೆಯ ಹಾಗೂ ಜಾನಪದ ಶೈಲಿಯ ಹೋಲಿಕೆಯುಳ್ಳ ಚಿತ್ರಗಳು ಚಂಬಾ, ಕುಲು ಕಣಿವೆ, ಮಂಡಿಗಳಲ್ಲೂ ರಚಿತವಾದವು. ಕುಲುವಿನಲ್ಲಿ ವಿವಿಧ ಕಲಾವಿದರ ೨೭೦ ಚಿತ್ರಗಳ ರಾಮಾಯಣ ಚಿತ್ರಮಾಲೆ ದೊರೆತಿದೆ. ಚಂಬಾದಲ್ಲಿ ಬಸೋಲಿ ಶೈಲಿಯ ಘಟ್ಟ ಗುಲೇರ್‌ಚಂಬಾ ಘಟ್ಟಗಳಿವೆ. ಜಾನಪದ ಹಾಗೂ ಗುಲೇರ್-ಚಂಬಾ ಶೈಲಿಯ ರಸಿಕಪ್ರಿಯ, ಬಾರಾ ಮಾಸಾ, ಬಿಹಾರಿ ಸತಸಯೀ, ಅನಿರುದ್ಧ ಉಷಾ ಪ್ರೇಮ ಕಥೆಯ ಚಿತ್ರಗಳಿವೆ.

೧೦. ಎನ್. ಮರಿಶಾಮಾಚಾರ್ : ಭಾರತೀಯ ಕಲೆ, ಪು.ಸಂ-೩೪
ಅದೇ. ಪು.ಸಂ-೩೫

ಕಾಂಗ್ರಾ :

ಉತ್ತರದಲ್ಲಿ ಧವಲಧರ್ ಶ್ರೇಣಿ, ದಕ್ಷಿಣಕ್ಕೆ ಸಮಾನಾಂತರ ಪರ್ವತ ಸಾಲುಗಳ ಕಾಂಗ್ರಾ ಕಣಿವೆ ಪ್ರದೇಶ ಭಾರತದ ಉಳಿದ ಬಯಲು ಪ್ರದೇಶದಿಂದ ಬೇರೆಯಾದದ್ದು. ಓಕ್, ಪೈನ್ ಮರಗಳ ಕಾಡೂ, ಮಾವು ಬಾಳೆಗಳಿಂದಲೂ, ಕಾಡುಪುಷ್ಪಗಳಿಂದಲೂ ಕೂಡಿದ ಒಂದು ಬಗೆಯ ಪ್ರಶಾಂತ ಕಳಿವೆಯ ಪ್ರದೇಶ ಕಾಂಗ್ರಾ. ಈ ಶೈಲಿಯ ಚಿತ್ರಗಳು ಗುಲೇರ್, ಗರ್‌ವಾಲ್, ನೂರುಪುರಗಳಲ್ಲೂ ರಚಿತವಾದುವು. ಕಾಂಗ್ರಾ ಚಿತ್ರಕಲೆಯು ಉಗಮವಾದದ್ದು ಗುಲೇರ್‌ನಲ್ಲಿ. ಅಲ್ಲಿಂದ ಪಂಜಾಬಿನ ಪರ್ವತ ಪ್ರದೇಶಕ್ಕೆಲ್ಲಾ ಹರಡಿತು. ಗುಲೇರ್ ಬಯಲು ಸೆರಗಿನ ಅಂಚಿನಿಂದ ಕಣಿವೆಯ ಪ್ರದೇಶ ದ್ವಾರದಂತಿದೆ.

ಕಾಂಗ್ರಾದೊಡನೆ ಕಲಾವಿದರಿಗೆ ಆಶ್ರಯವಿತ್ತ ಸಂಸಾರಚಂದ್‌ನ ಹೆಸರೂ ಸೇರಿದೆ. ನಿಸರ್ಗದ ಸೌಂದರ್ಯದಂತೆಯೇ ಆಕರ್ಷಕ ಈ ಶೈಲಿ ಸಹ. ಸೂಕ್ಷ್ಮ ನವಿರು ರೇಖಾ ವಿನ್ಯಾಸಕ್ಕೆ, ವಿವರಪೂರ್ಣ ಚಿತ್ರಣಕ್ಕೆ, ಆಹ್ಲಾದಮಯ ತಂಪಾದ ನೀಲಿ ಹಸಿರು ಬಣ್ಣಗಳ ಬಳಕೆಗೆ ಪ್ರಸಿದ್ಧ. ಗುಲೇರ್ ಚಿತ್ರಗಳು ಲಾವಣ್ಯವಿಲಾಸ ಸುಕುಮಾರತೆ ಮಾದರ್ವತೆಗಳಿಂದ ಕೂಡಿರುತ್ತವೆ. ರಜಪೂತ ಹಾಗೂ ಪಂಜಾಬಿನ ಬೆಟ್ಟ ಪ್ರದೇಶದ ಸ್ತ್ರೀಯರು ತೆಳ್ಳನೆಯ ನೀಳದೇಹದ, ರಸಪೂರ್ಣ ಕಾಂತಿಯುತ ಕಪ್ಪು ಕಣ್ಣುಗಳ, ಖಚಿತ ಮುಖಲಕ್ಷಣದ ಸುಂದರಿಯರು. ಚಿತ್ರಗಳಲ್ಲಿ ಇವರ ಬಿಂಬ ಕಾಣುತ್ತೇವೆ. ಬಹುವಾಗಿ ಶೃಂಗಾರ ರಸಪೂರ್ಣ ಚಿತ್ರಗಳು ರಚಿತವಾಗಿವೆ. ಭಾಗವತ ಪುರಾಣ, ಗೀತ ಗೋಂವಿದ, ಸತ್‌ಸಯೀ, ನಲದಮಯಂತಿ, ರಾಗಮಾಲಾ, ಬಾರಾಮಾಸ ಚಿತ್ರಗಳು ವಸ್ತು. ಹಿಮಾಲಯದ ದೂರ ಸಂಸ್ಥಾನ ತೆಹರಿ ಗರ್‌ವಾಲ್‌ಗೂ ಈ ಶೈಲಿ ಹಬ್ಬಿತು. ಅಲ್ಲೂ ಪ್ರೇಮವೇ ಚಿತ್ರಗಳ ವಿಷಯ. ಬಿಲ್ಹಣನ ಚೌರಪಂಚಾಶಿಕದ ಚಿತ್ರ ಮಾಲೆಯೂ ದೊರೆತಿದೆ.

ಗರ್‌ವಾಲ್‌ನಲ್ಲಿ ರಚಿತವಾದ ವಿಹರ ತಪ್ತೆಯ ಒಂದು ಚಿತ್ರ ಕಾಂಗ್ರಾದ ನವಿರು ಶೈಲಿಯದೇ ಆಗಿದೆ. ಉಪ್ಪರಿಗೆಯ ಮಾಳಿಗೆಯಲ್ಲಿ ಎತ್ತರದಿಂದ ಬೀಸಿಬರುವ ತಂಗಾಳಿಗೊಡ್ಡಿದ ಮಂಟಪ. ಅದರಡಿ ಅಲಂಕಾರಮಯ ಮಂಚದ ಮೃದುತಲ್ಪ. ಮೇಲುಹಾಸಿನ ಚಿತ್ತಹಾರಿ ವಿನ್ಯಾಸ, ಹಾಸಿಗೆಯಲ್ಲಿ ಒರಗಿರುವ ಪ್ರೇಮಜ್ವರ ಪೀಡಿತ ಸುಂದರಿಗೆ ಯಾವ ಶೈತ್ಯೋಪಚಾರದಿಂದ ತಣಿವಾಗಲು ಸಾಧ್ಯ. ಸಖಿಯರ ಬಗೆಬಗೆಯ ಉಪಚಾರಗಳೂ ವ್ಯರ್ಥ. ಗಂಧಲೇಪ, ಚಂದ್ರಕಾಂತ ಶಿಲಾ ಮಂಜೂಷ ಔಷಧೋಪಚಾರ ಯಾವುದೂ ಒಳಗಿನ ದಾಹವನ್ನು ತಣಿಸದು. ಭರತ ಹೇಳುವ ವಿರಹದ ಒಂದು ತೀವ್ರ ಅವಸ್ಥೆಯಿದು.

ಪಂಜಾಬು ಹಿಮಾಲಯ ತಪ್ಪಲಿನ ಪಹರಿ ಕಲಂನ ಇನ್ನೊಂದು ಚಿತ್ರ ಪ್ರೇಮಿಗಳ ಮಿಲನ, ಪ್ರೇಮಾಲಿಂಗನ. ಇಡೀ ಚಿತ್ರ ಗೀತಮಯ ಶೈಲಿಯಲ್ಲಿದೆ. ಚಿತ್ರದ ಮೇಲರ್ಧದ ಕುಂಕುಮ ವರ್ಣ, ಬೆಳ್ಳನೆಯ ಮಾಳಿಗೆ, ನೀಲ ಒರಗುದಿಂಬು, ತೇಳುನೀಲಿ, ತೆಳು ನೇರಳೆಯ ಉಡುಪು, ಸುಕುಮಾರತೆ ಸೂಸುವ ಮೈ, ಹಿನ್ನೆಲೆಯಲ್ಲಿ ಬಳುಕುತ್ತ ತಲೆಯೆತ್ತಿರುವ ಪುಷ್ಪಿತ ಲತಾ ಕಾಂಡಗಳು, ಮುನ್ನೆಲೆಯ

ಕಾರಂಜಿ, ಅಪ್ಪುಗೆಯ ಸುಖದಿಂದ ಮತ್ತೇರಿದ ನಲ್ಲ-ನಲ್ಲೆಯರ ಸಂಧ್ಯಾ ವರ್ಣಮಯ ಕನಸಿನಂತೆ ಚಿತ್ರ ಭಾಸವಾಗುತ್ತದೆ[೧೧].

ಹೀಗೆ ಭಾರತೀಯ ಪ್ರಾದೇಶಿಕವಾರ ವಿವಿಧ ರೀತಿಯ ಸಾಂಪ್ರದಾಯಿಕ ಕಿರುರೂಪ ಚಿತ್ರಕಲೆಯ ಶೈಲಿಗಳನ್ನು ಕಾಣುತ್ತೇವೆ, ಅವುಗಳಲ್ಲಿ ಮೈಸೂರು ಮತ್ತು ಸುರಪುರ ಸಾಂಪ್ರದಾಯಿಕ ಕಲಾಕೃತಿಗಳು ಹೆಸರುವಾಸಿಯಾಗಿವೆ, ಈ ಎರಡು ಶೈಲಿಗಳು ಕರ್ನಾಟಕದಲ್ಲಿ ಪ್ರಸಿದ್ದವಾಗಿವೆ, ಹೀಗಾಗಿ ಈ ಎರಡು ಕಲಾಕೃತಿಯ ಶೈಲಿಗಳ ಕುರಿತು ನಾನು ತೌಲನಿಕ ಅಧ್ಯಯನ ಮಾಡಲು ಆಯ್ಕೆ ಮಾಡಿಕೊಂಡಿದ್ದೇನೆ.

ಸಾಂಪ್ರದಾಯಿಕ ಕಲಾಕೃತಿಗಳ ಗುಣಲಕ್ಷಣಗಳು ಮತ್ತು ವೈಶಿಷ್ಯತೆಗಳು :

- ಮೊಘಲರ ಶೈಲಿಯ ಚಿತ್ರಗಳು ಮುಖ್ಯವಾಗಿ ಮೊಘಲ ಸಾಮ್ರಾಜ್ಯದ ಸರದಾರರ ಭಾವಚಿತ್ರ ಮತ್ತು ಅವರ ವಿಜಯೋತ್ಸವನ್ನು ಬಿಂಬಿಸುವ ಚಿತ್ರಗಳಿಂದ ಕೂಡಿವೆ.
- ಮೊಘಲ ಚಿತ್ರಕಲೆ ನೈಜತೆಗೆ ಹೆಸರುವಾಸಿ, ಆದರೆ ದಖನಿ ಚಿತ್ರಕಲೆ ಭಾವನಾತ್ಮಕ ವಿಷಯಗಳಿಗೆ ಹೆಸರುವಾಸಿ. ಕಲಾವಿದರಿಂದ ರಚಿಸಲ್ಪಟ್ಟ ದಖನಿ-ಮೊಘಲ ಶೈಲಿಯ ಚಿತ್ರಗಳು ಈ ಎರಡು ವಿಷಯಗಳನ್ನು ಒಳಗೊಂಡ ಚಿತ್ರಗಳು ಕಂಡು ಬರುತ್ತವೆ. ಯುದ್ಧದ ಅಥವಾ ಸರದಾರರು ಸಂಭಾಷಣೆಯಲ್ಲಿರುವ ದೃಶ್ಯಗಳ ಕಲಾವಿದರು ಸನ್ನಿವೇಶಗಳನ್ನೂ ಯಥಾವತ್ತಾಗಿ ಚಿತ್ರಿಸಿ ನೈಜತೆಯನ್ನು ಪ್ರದರ್ಶಿಸುವುದರ ಜೊತೆಗೆ ದಖನಿ ಚಿತ್ರಗಳಲ್ಲಿ ಕಂಡುಬರುವ ಬಹುವರ್ಣಗಳ ಮುಸ್ಸಂಜೆ, ದಖನದ ಗುಡ್ಡ-ಗಾಡಿನ ಪ್ರದೇಶ ಇತ್ಯಾದಿಗಳನ್ನು ಗಮನಿಸಬಹುದು.
- ಕಪ್ಪು ಮಿಶ್ರಿತ ಹಸಿರು, ಗುಲಾಬಿ, ಶ್ವೇತ, ಪಾಟಲ, ನೇರಳೆ, ನೀಲಿ, ತಿಳಿ-ಹಸಿರು, ಹಳದಿ, ಕೆಂಪು ಚಿತ್ರಕಲೆಯಲ್ಲಿ ಹೆಚ್ಚಾಗಿ ಬಳಸಲಾದ ವರ್ಣಗಳು. ಚಿನ್ನದ ಲೇಪನವನ್ನು ಆಭರಣಗಳಿಗಾಗಿ ಬಳಸಲಾಗಿದೆ. ಆಭರಣಗಳ ಮೇಲೆ ಚಿನ್ನದ ಲೇಪನ ಮಿತವಾಗಿದ್ದು ; ತಂಜಾವೂರು ಅಥವಾ ಮೈಸೂರು ಶೈಲಿಯ ಚಿತ್ರಗಳಲ್ಲಿ ಕಂಡು ಬರುವಂತೆ ದಪ್ಪವಾದ ಬಳಕೆ ಕಂಡುಬರುವುದಿಲ್ಲ.
- ಕುದುರೆ ಸವಾರಿ ಮಾಡುವ ದೃಶ್ಯದ ಚಿತ್ರಗಳು ಮೊಘಲ ಕಾಲದಲ್ಲಿ ಹೆಚ್ಚು ರಚನೆಯಾಗಿವೆ.
- ದಖನಿ ಮತ್ತು ಮೊಘಲ ಚಿತ್ರಗಳಲ್ಲಿ ಕಂಡುಬರುವ ಪಾರದರ್ಶಕ ವರ್ಣಗಳಾದ ತಿಳಿಹಸಿರು, ತಿಳಿಹಳದಿ, ತಿಳಿನೀಲಿ, ಶ್ವೇತ ಮತ್ತು ಗುಲಾಬಿ ವರ್ಣಗಳನ್ನು ಬಳಸಲಾಗಿದೆ.
- ಕಾಂಗ್ರಾ ಶೈಲಿಯಲ್ಲಿ ಆಹ್ಲಾದಮಯ ತಂಪಾದ ನೀಲಿ ಹಸಿರು ಬಣ್ಣಗಳ ಬಳಕೆಗೆ ಪ್ರಸಿದ್ಧ.
- ಕಾಂಗ್ರಾ ಶೈಲಿಯಲಿ ಪ್ರೇಮಿಗಳ ಮಿಲನ ಮತ್ತು ಪ್ರೇಮಾಲಿಂಗನ ಹೆಚ್ಚು ದೃಶ್ಯದ ಚಿತ್ರಗಳು ಕಂಡುಬರುತ್ತವೆ, ಈ ಚಿತ್ರಗಳಲ್ಲಿ ಕುಂಕುಮ ವರ್ಣ, ಬೆಳ್ಳನೆಯ ಮಾಳಿಗೆ, ನೀಲ

೧೧. ಎಂ.ಎಚ್.ಕೃಷ್ಣಯ್ಯ : ಕಲಾ ಸಂಸ್ಕೃತಿ, ಪು.ಸಂ-೧೩
ಅದೇ. ಪು.ಸಂ-೧೪
ಅದೇ ಪು.ಸಂ-೧೫

ಒರಗುದಿಂಬು, ತೆಳು ನೇರಳೆಯ ಉಡುಪು, ಸುಕುಮಾರತೆ, ಸೂಸುವ ಮೈ, ಹಿನ್ನೆಲೆಯಲ್ಲಿ ಬಳಕುತ್ತ ತಲೆಯೆತ್ತಿರುವ ಪುಷ್ಪಿತ ಲತಾ ಕಾಂಡಗಳು, ಮುನ್ನೆಲೆಯ ಕಾರಂಜಿ, ಅಪ್ಪುಗೆಯ ಸುಖದಿಂದ ಮತ್ತೇರಿದ ನಲ್ಲ-ನಲ್ಲೆಯರ ಸಂಧ್ಯಾ ವರ್ಣಮಯ ಕನಸಿನಂತೆ ಚಿತ್ರಗಳು ಈ ಶೈಲಿಯ ಗುಣಲಕ್ಷಣ ಮತ್ತು ವೈಶಿಷ್ಟತೆಗಳು ಕಂಡುಬರುತ್ತವೆ.

- ಸ್ತ್ರೀಯರ ಉಡುಗೆಗಳು ಎರಡು ವಿಧಗಳಲ್ಲಿ ಕಂಡು ಬರುತ್ತವೆ. ರಜಪೂತ ಶೈಲಿಯ ಪ್ರಭಾವದ ಚಿತ್ರಗಳಲ್ಲಿ ಸ್ತ್ರೀಯರು ಉದ್ದನೆಯ ಗಗ್ಗರಾ, ಓಡಣಿ(ದುಪ್ಪಟ) ಮತ್ತು ಕುಪ್ಪಸ ಧರಿಸಿರುವರು. ಈ ಸ್ತ್ರೀಯರುಧರಿಸಿದ ಆಭರಣಗಳು ಉದ್ದನೆಯ ಕಿವಿಯೋಲೆ, . ಬೈತಾಲುವಾಟಿ, ಕೊರಳಲ್ಲಿ ಮುತ್ತಿನ ಹಾರ, ಕಂಠಿಸರ ಇತ್ಯಾದಿಗಳು ಮೊಘಲ ಶೈಲಿಯ ಚಿತ್ರದಲ್ಲಿ ಬಿಗಿಯಾದ ಪೈಜಾಮ, ಮೇಲೆ ಕುಪ್ಪಸ, ಪಾರದರ್ಶಕ ಗಗ್ಗರಾ ಮತ್ತು ದುಪ್ಪಟ ಧರಿಸಿರುವರು
- ಜೈಪುರ ಶೈಲಿಯಲ್ಲಿ ಕೃಷ್ಣನಲೀಲಾ ದೃಶ್ಯದ ಮತ್ತು ಸ್ತ್ರೀಯರ ಆಕರ್ಷಕ ಮೈಬಣ್ಣ, ಮಾಟವಾದ ತುಂಬು ಸ್ತನಗಳು, ನಿತಂಬದವರೆಗೂ ಹರಿಬಿದ್ದ ಕೂದಲರಾಶಿ, ತುಂಬು ಕೆನ್ನೆ ಗಲ್ಲ, ಕೊಂಚವೇ ತೆರೆದ ರಸಾಕೀರ್ಣ ಕೆಂಪು ತುಟಿ, ಕೊಂಕು ಹುಬ್ಬಿನ ಕೆಳಗೆ ಅರಳಿದ ಕಣ್ಣು, ಹಣೆಯ ತಿಲಕ, ಬೆರಳುಗಳಿಗೆ ಹಚ್ಚಿರುವ ಅಲತಿಗೆ ಇನ್ನು ಹಲವಾರು ರಿತೀಯ ವೈಶಿಷ್ಯತೆಗಳು ಚಿತ್ರಗಳಲ್ಲಿ ಹೇಚ್ಚು ಕಂಡುಬರುತ್ತವೆ.
- ಸಾಂಪ್ರದಾಯಿಕ ಚಿತ್ರಗಳಲ್ಲಿ ಅತೀ ಸೂಕ್ಷ್ಮವಾದ ಚಿತ್ರಗಳು ಚಿಕಣಿ ಚಿತ್ರಗಳಲ್ಲಿ ಕಂಡುಬರುತ್ತವೆ.
- ಮೈಸೂರು ಮತ್ತು ತಂಜಾವೂರ ಕಲಾಕೃತಿಗಳಲ್ಲಿ ಚಿನ್ನದ ಲೇಪನ ಬಳಕೆ ಹೆಚ್ಚಾಗಿ ಕಂಡುಬರುತ್ತದೆ
- ಮೊಘಲ ಚಿತ್ರಗಳು ವಾಸ್ತವಿಕ ಘಟನೆಗಳನ್ನು ಯಥಾವತ್ತಾಗಿ ಚಿತ್ರಿಸುವ ಸಂಪ್ರದಾಯಕ್ಕೆ ಹೆಸರುವಾಸಿಯಾಗಿದೆ.

ಸಾಂಪ್ರದಾಯಿಕ ಕಲಾಕೃತಿಗಳ ಇವು ಪ್ರಮುಖ ಗುಣಲಕ್ಷಣಗಳನ್ನು ನೋಡಬಹುದು.

ಅಧ್ಯಾಯ–ಮೂರು

ಮೈಸೂರು ಸಾಂಪ್ರದಾಯಿಕ ಕಲಾಕೃತಿಗಳ ಹುಟ್ಟು ಮತ್ತು ಬೆಳವಣಿಗೆ

ಅಧ್ಯಾಯ ಮೂರು

ಮೈಸೂರು ಸಾಂಪ್ರದಾಯಿಕ ಕಲಾಕೃತಿಗಳ ಹುಟ್ಟು ಮತ್ತು ಬೆಳವಣಿಗೆ

ಮೈಸೂರು ಹುಟ್ಟು :

'ಕರ್ನಾಟಕ ಪ್ರಮುಖವಾದ ಐತಿಹಾಸಿಕ ಸ್ಥಳಗಳಲ್ಲಿ ಮೈಸೂರ ಕೂಡ ಒಂದಾಗಿದೆ. ಜನ ಸಾಮಾನ್ಯರನ್ನ, ಕಲಾ ಪ್ರೇಮಿಗಳನ್ನು, ಕಲಾವಿದರನ್ನು, ಇತಿಹಾಸಗಾರರನ್ನು ಒಟ್ಟು ಕಲಾ ಅಭಿಮಾನಿಗಳನ್ನು ಆಕರ್ಷಿಸುವ ಸುಂದರವಾದ ನಗರ. 'ಮೈಸೂರು ಎಂಬ ಹೆಸರು ಆಂಗ್ಲ ಭಾಷೆಯಿಂದ ರೂಪಾಂತರಗೊಂಡಿದೆ. ಇದರ ಮೂಲ ಹೆಸರು 'ಮಹಿಷಪುರಿ', 'ಮಹಿಷೂರು'. ಇದರ ಅರ್ಥ 'ಮಹಿಷನ' ವಾಸಸ್ಥಾನ ಎಂದು ಕನ್ನಡದಲ್ಲಿ ಹೇಳಬಹುದು. 'ಮಹಿಷ' ಎಂದರೆ ಮಹಿಷಾಸುರ ಎಂಬ ಪುರಾಣದಲ್ಲಿ ಬರುವ ಒಬ್ಬ ರಾಕ್ಷಸ. ಈತ ಮಾನವ ಮತ್ತು ಎಮ್ಮೆ ಎರಡೂ ರೂಪದಲ್ಲಿ ಇರುವ ವ್ಯಕ್ತಿ. ಹಿಂದೂ ಪುರಾಣದ ಪ್ರಕಾರ ಈ ಪ್ರದೇಶವನ್ನು ರಾಕ್ಷಸ ಮಹಿಷಾಸುರನು ಆಳುತ್ತಿದ್ದ, ಆ ರಾಕ್ಷಸ ತಾಯಿ ಚಾಮುಂಡೇಶ್ವರಿಯಿಂದ ಸಂಹಾರವಾಗುತ್ತಾನೆ. ಬಳಿಕ ಚಾಮುಂಡೇಶ್ವರಿಯು ಅದೇ ಬೆಟ್ಟದ ಮೇಲೆ ನೆಲೆಗೊಳ್ಳುತ್ತಾಳೆ. ನಂತರ ಮಹಿಷೂರು>ಮಹಿಸೂರು>ಮಸೂರು'[೧] ಆಗಿ ತದನಂತರ ಕೊನೆಯದಾಗಿ ಮೈಸೂರು ಎಂದು ಬದಲಾವಣೆಯಾಗಿದೆ.

ಸಂಸ್ಥಾನದ ಇತಿಹಾಸ :

'ಮೈಸೂರು ನಗರದ ಸ್ಥಾಪನೆ ಸುಮಾರು ೧೧ನೇ ಶತಮಾನದಲ್ಲಿ ನಡೆಯಿತೆಂದು ನಂಬಲಾಗಿದೆ. ೧೪ನೆಯ ಶತಮಾನದ ಕೊನೆಯ ಹೊತ್ತಿಗೆ ಒಡೆಯರ್ ವಂಶದ ಅರಸರು ಮೈಸೂರನ್ನು ಆಳಲಾರಂಭಿಸಿದರು. ಈ ವಂಶದ ಮೊದಲ ಅರಸು "ಯದುರಾಯ". ಹಾಗಾಗಿ ವಂಶದ ಹೆಸರು 'ಯದುವಂಶ' ಎಂದಾಯಿತು. ಮೊದಲಿಗೆ ವಿಜಯನಗರ ಸಾಮ್ರಾಜ್ಯದ

೧. https://kn.wikipedia.org/s/b6 (ಅಂತರಜಾಲ)

ಮೈಸೂರು ಸಂಸ್ಥಾನ ೧೫೬೫ ರಲ್ಲಿ ವಿಜಯನಗರದ ಪತನದ ನಂತರ ಸ್ವತಂತ್ರ ರಾಜ್ಯವಾಯಿತು. ರಣಧೀರ ಕಂಠೀರವ ನರಸರಾಜ ಒಡೆಯರ್ ಈ ಸಂಸ್ಥಾನವನ್ನು ವಿಸ್ತರಿಸಿದವರಲ್ಲಿ ಮಾಡಿರುವರಲ್ಲಿ ಮುಖ್ಯರು. ೧೮ನೆಯ ಶತಮಾನದಲ್ಲಿ ಒಡೆಯರ್ ಅರಸರ ಪ್ರಭಾವ ಕಡಿಮೆಯಾಗಿ ಹೈದರ್ ಅಲಿ ಮತ್ತು ಟೀಪ್ಪು ಸುಲ್ತಾನ ಆಡಳಿತ ನಡೆಯಿತು.

ಈ ಸಮಯದಲ್ಲಿ ಸಾಮ್ರಾಜ್ಯದ ರಾಜಧಾನಿ ಶ್ರೀರಂಗಪಟ್ಟಣ ಮತ್ತು ಮೈಸೂರು ನಗರಗಳ ನಡುವೆ ಬದಲಾಗುತ್ತಿತ್ತು. ಮೈಸೂರು ಸಂಸ್ಥಾನ ಆಧುನಿಕ ಕರ್ನಾಟಕದ ದಕ್ಷಿಣ ಭಾಗದ ಬಹುಭಾಗವನ್ನು ಒಳಗೊಂಡಿತ್ತು. ೧೭೯೯ ರಲ್ಲಿ ಟೀಪ್ಪು ಸುಲ್ತಾನನ ಸೋಲಿನ ನಂತರ, ಬ್ರಿಟಿಷರು ಒಡೆಯರ ಮನೆತನವನ್ನು ಸಿಂಹಾಸನದ ಮೇಲೆ ಪುನಃ ಆಡಳಿತ ಸ್ಥಾಪಿಸಿದರು. ಮೈಸೂರು ಬ್ರಿಟಿಷ್ ಸಾಮ್ರಾಜ್ಯದ ಕೆಳಗೆ ಉಳಿಯಿತು ಮತ್ತು ೧೮೩೧ ರಲ್ಲಿ ರಾಜಧಾನಿಯನ್ನು ಬೆಂಗಳೂರಿಗೆ ವರ್ಗಾಯಿಸಲಾಯಿತು.

ಮೈಸೂರು ಸಂಸ್ಥಾನ ೧೯೪೭ರಲ್ಲಿ ಭಾರತದ ಸ್ವಾತಂತ್ರ್ಯಾನಂತರ ಭಾರತ ಗಣರಾಜ್ಯವನ್ನು ಸೇರಿ ೧೯೫೦ ರಲ್ಲಿ ಮೈಸೂರು ರಾಜ್ಯ ಎಂಬ ಹೆಸರು ಪಡೆಯಿತು. ನಂತರ ಈ ರಾಜ್ಯ ೧೯೫೬ರ ಏಕೀಕರಣ ನಂತರ "ವಿಶಾಲ ಮೈಸೂರು ರಾಜ್ಯ" ಎಂಬ ಹೆಸರು ಪಡೆಯಿತು. ಆ ಬಳಿಕ ೧೯೭೩ರಲ್ಲಿ "ಕರ್ನಾಟಕ ರಾಜ್ಯ"[೨] ಎಂಬ ಹೆಸರು ಸ್ಥಿರವಾಯಿತು.

ಒಡೆಯರ ಕಾಲದ ಚಿತ್ರಕಲೆ :

'ಒಡೆಯರ ವಂಶದ ಸಂಸ್ಥಾಪಕನಾದ ಯದುರಾಯ ಮತ್ತು ಆತನ ಸೋದರ ಕೃಷ್ಣರಾಯ ದ್ವಾರಕೆಯಿಂದ ಇಲ್ಲಿಗೆ ಬಂದರೆಂದು ಇತಿಹಾಸವಿದೆ. ಇವರು ಹದಿನಾರು ಗ್ರಾಮದಲ್ಲಿ ಆಧಿಪತ್ಯಕ್ಕೆ ಭೂನಾದಿ ಹಾಕಿದರು. ಇದಕ್ಕೆ ಜಂಗಮನೊಬ್ಬ ಸಹಾಯ ಮಾಡಿದ್ದರಿಂದ ಆತನಿಗೆ ಗೌರವಪೂರ್ವಕವಾಗಿ ಒಡೆಯರು ಎಂಬ ಹೆಸರನ್ನು ಸೇರಿಸಿಕೊಂಡರು'[೩]. ಮುಂದೆ ಅದೇ ಅವರ ಕುಲನಾಮವಾಯಿತೆಂದು ಹೇಳಲಾಗಿದೆ.

'ರಾಜ ಒಡೆಯರ್ (೧೫೭೮-೧೬೧೭) ಮೈಸೂರಿನ ಮೊದಲ ಸ್ವತಂತ್ರ ಅಸರು. ರಾಜ ಒಡೆಯರ ಕಾಲದಲ್ಲಿ ವಿಜಯನಗರಕ್ಕೆ ಕೊಡುತ್ತಿದ್ದ ಕಾಣಿಕೆಯನ್ನು ನಿಲ್ಲಿಸಲಾಯಿತ್ತು. ೩೩ ಗ್ರಾಮಗಳಿಗಿದ್ದ ರಾಜ್ಯವನ್ನು ವಿಸ್ತರಣೆ ಮಾಡಿದರು. ಶ್ರೀರಂಗಪಟ್ಟಣದಲ್ಲಿ ವಿಜಯನಗರದ ರಾಜಪ್ರತಿನಿಧಿಯಾಗಿದ್ದ ತಿರುಮಲರಾಮ ದುರ್ಬಲನಾಗಿದ್ದ. ಹಾಗಾಗಿ ಶ್ರೀರಂಗಪಟ್ಟಣ ರಾಜ ಒಡೆಯರ ತರುವಾಯ ಅವರ ಮೊಮ್ಮಗ ೧೪ ವರ್ಷದ ಆರನೇ ಚಾಮರಾಜ ಒಡೆಯರ್ (ಕ್ರಿ.ಶ ೧೬೧೭-೩೭) ಅಧಿಕಾರಕ್ಕೆ ಬಂದರು. ಆನಂತರ ರಾಜ ಒಡೆಯರ ಮಗ ಇಮ್ಮಡಿ ರಾಜ ಒಡೆಯರ್ (ಕ್ರಿ.ಶ ೧೬೩೭-೩೮) ಒಂದು ವರ್ಷ ಅರಸರಾಗಿದ್ದರು. ಇವರನ್ನು ದಳವಾಯಿ ವಿಕ್ರಮರಾಯ ಕೊಲೆ ಮಾಡಿದನೆಂದು ಹೇಳಲಾಗಿದೆ.

೨. https://kn.wikipedia.org/s/b6 (ಅಂತರಜಾಲ)

೩.ಆರ್.ನಂ: ೩೦೫೩೧೬೪೧೨೮೪೮ : ಮೈಸೂರಿನ ಚಿತ್ರಕಲೆ ಪರಂಪರೆ, (ಅ.ಪ್ರ ಕಿ.ಪ್ರ). ಪು.ಸಂ-೩೬

ಆಗ ಒಂದನೆಯ ರಾಜ ಒಡೆಯರ ಸೋದರಾದ ಬಟ್ಟದ ಚಾಮರಾಜ ಒಡೆಯರ ಮಗ ರಣದೀರ ಕಂಠೀರವ ನರಸರಾಜ ಒಡೆಯರ್ (ಕ್ರಿ.ಶ ೧೬೩೮-೫೯) ಸಿಂಹಾಸನ ಏರಿದರು. ಇವರು ಪರಾಕ್ರಮಿ ಹಾಗೂ ಯುದ್ಧ ನಿಪುಣರಾಗಿದ್ದರು. 'ರಣದೀರ' ಎಂಬ ಬಿರುದಿಗೆ ಪಾತ್ರರಾಗಿದ್ದರು. ಇವರಿಗೆ ಮಕ್ಕಳಿಲ್ಲದ ಚಾಮುಂಡಿ ಬೆಟ್ಟಕ್ಕೆ ಮೆಟ್ಟಿಲು ಹಾಕಿಸಿ, ನಂದಿ ವಿಗ್ರಹ ಕೆತ್ತಿಸಲಾಯಿತು. ಇದರ ನಂತರ ಖ್ಯಾತ ಅರಸರಾದ ಚಿಕ್ಕದೇವರಾಜ ಒಡೆಯರ್ (ಕ್ರಿ.ಶ ೧೬೭೩-೧೭೦೪) ೩೧ ವರ್ಷಗಳ ಕಾಲ ರಾಜ್ಯಬಾರ ಮಾಡಿದರು. ರಾಜ್ಯದ ಖಜಾನೆಯನ್ನು ಶ್ರೀಮಂತಗೊಳಿಸಿ 'ನವಕೋಟಿ ನಾರಾಯಣ' ಎಂಬ ಬಿರುದು ಪಡೆದರು.

ಚಿಕ್ಕದೇವರಾಜ ಒಡೆಯರ ತರುವಾಯ ಅವರ ಮಗ ಎರಡನೆಯ ಕಂಠೀರವ ನರಸರಾಜ ಒಡೆಯರ (ಕ್ರಿ.ಶ ೧೭೦೪-೧೪) ಅರಸರಾದರು ಇವರಿಗೆ ಮಾತು ಬರುತಿರಲಿಲ್ಲ. ಕೈ ಸನ್ನೆಯಿಂದ ೧೦ ವರ್ಷಗಳ ಕಲಾ ರಾಜ್ಯಬಾರ ಮಾಡಿದರು. ಇವರ ಮಗ ದೊಡ್ಡ ಕೃಷ್ಣರಾಜ ಒಡೆಯರ (ಕ್ರಿ.ಶ ೧೭೧೪-೩೨) ಕಾಲದಲ್ಲಿ ಮರಾಠರು, ನಿಜಾಮ, ಅರ್ಕಾಟಿನ ನವಾಬರು ಮೈಸೂರಿನ ಮೇಲೆ ದಾಳಿ ಮಾಡಿ ಕಪ್ಪ ವಸೂಲಿ ಮಾಡಿದರು. ಇದರಿಂದ ಬೊಕ್ಕಸ ಬರಿದಾಯಿತು. ದಳವಾಯಿಗಳು ಪ್ರಬಲರಾದರು ಮಕ್ಕಳಿಲ್ಲದ ಇವರು ಏಳನೆಯ ಚಾಮರಾಜ ಒಡೆಯರನ್ನು (ಕ್ರಿ.ಶ ೧೭೩೨-೩೪) ದತ್ತು ಪಡೆದು ಪಟ್ಟ ಕಟ್ಟಿದರು. ದಳವಾಯಿಗಳ ಕುತಂತ್ರದಿಂದ ಚಾಮರಾಜರು ಸೆರೆಯಲ್ಲಿ ಇರಬೇಕಾಯಿತ್ತು. ಇವರ ತರುವಾಯ ಎರಡನೆಯ ಕೃಷ್ಣರಾಜ ಒಡೆಯರ (ಕ್ರಿ.ಶ ೧೭೩೪-೬೬) ಸಿಂಹಾಸನವೇರಿದರು. ಅಧಿಕಾರ ದಳವಾಯಿಗಳ ವಶದಲ್ಲಿತ್ತು. ಈ ಸ್ಥಿತಿಯಲ್ಲಿ ಸೈನ್ಯದಲ್ಲಿದ ಹೈದರ ಪ್ರಬಲನಾದ ಸರ್ವಾಧಿಕಾರಿಯಾದ. ಆದರೆ ರಾಜರನ್ನು ಗೌರವಿಸುತ್ತಿದ್ದ. ಹೈದರ ೨೦ ವರ್ಷಗಳು (ಕ್ರಿ.ಶ ೧೭೬೧-೮೨) ಮತ್ತು ಹೈದರ ಮಗ ಟಿಪ್ಪು ೧೭ ವರ್ಷಗಳು (ಕ್ರಿ.ಸ ೧೭೬೬-೭೦) ಎಂಟನೆ ಬೆಟ್ಟದ ಚಾಮರಜ ಒಡೆಯರ (ಕ್ರಿ.ಶ ೧೭೭೦-೭೬) ಮತ್ತು ಒಂಬತ್ತನೆಯ ಖಾಸಾ ಚಾಮರಾಜ ಒಡೆಯರ್ (ಕ್ರಿ.ಶ ೧೭೭೬-೯೬೦) ರಾಜರಾಗಿದ್ದರೂ ಅಧಿಕರವಿಲ್ಲದೇ ನೆಪಮಾತ್ರರಾಗಿದ್ದರು.

೧೭೯೯ ರಲ್ಲಿ ಯುದ್ಧದಲ್ಲಿ ಮಡಿದ ಅನಂತರ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡ ಬ್ರಿಟಿಷರು ಮೈಸೂರು ರಾಜವಂಶಕ್ಕೆ ಪುನಃಶ್ಚೇತನ ನೀಡಿದರು. ಆಗ ಐದು ವರ್ಷದ ಬಾಲಕ ಮುಮ್ಮಡಿ ಕೃಷ್ಣರಾಜ ಒಡೆಯರ್ (ಕ್ರಿ.ಶ ೧೭೯೯-೧೮೬೮) ಸಿಂಹಾಸನವೇರಿದ. ಆದರೆ ಬ್ರಿಟಿಷ್ ರೆಸಿಡೆಂಟರ ಮೇಲ್ವಿಚಾರಣೆಯಲ್ಲಿ ಆಡಳಿತ ನಡೆಯತೊಡಗಿತು. ಮುಮ್ಮಡಿ ಕೃಷ್ಣರಾಜ ಆಡಳಿತದಲ್ಲಿ ವೈಫಲ್ಯತೆ ಇದೆಯೆಂಬ ಕಾರಣ ನೀಡಿ ೧೮೩೧ ರಲ್ಲಿ ಬ್ರಿಟಿಷರು ನೇರ ಆಡಳಿತ ಮಾಡಿದರು. ೧೮೮೧ ರವರೆಗೆ ೫೦ ವರ್ಷಗಳ ಕಾಲ ಬ್ರಿಟಿಷ ಕಮಿಷನರಗಳ ಆಡಳಿತ ನಡೆಯಿತು. ೧೮೬೮ ರಲ್ಲಿ ಹತ್ತನೆಯ ಚಾಮರಾಜ ಒಡೆಯರ್ (ಕ್ರಿ.ಶ ೧೮೬೮-೯೪) ರಾಜರಾದರೂ ಅಧಿಕಾರ ಬ್ರಿಟಿಷ್ ವಶದಲ್ಲೆ ಇತ್ತು. ೧೮೮೧ ರಲ್ಲಿ ರಾಜಮನೆತನಕ್ಕೆ ಅಧಿಕಾರ ಹಸ್ತಾಂತರ ಆಯಿತು.

೧೮೯೪ ರಲ್ಲಿ ಹತ್ತನೆಯ ಚಾಮರಾಜ ಒಡೆಯರ್ ನಿಧನರಾದ್ದರು. ೧೮೯೫ ರಲ್ಲಿ ಇವರ ಹಿರಿಯ ಮಗ ನಾಲ್ವಡಿ ಕೃಷ್ಣರಾಜ ಒಡೆಯರ್ (ಕ್ರಿ.ಶ ೧೮೯೫-೧೯೪೦) ರಾಜರಾದರು. ಇವರ

ಅವಧಿಯಲ್ಲಿ ಹಲವಾರು ಅಭಿವೃದ್ಧಿ ಕಾರ್ಯಗಳು ನಡೆದವು. ಗಾಂಧೀಜಿ ಅವರಿಂದ ಮೈಸೂರು ಸಂಸ್ಥಾನ 'ರಾಮರಾಜ್ಯ' ವೆಂಬ ಹೊಗಳಿಕೆಗೆ ಪಾತ್ರವಾಯಿತು. ಇವರ ಸೋದರ ಪುತ್ರ ಜಯ ಚಾಮರಾಜ ಒಡೆಯರ್ ೧೯೪೦ ರಲ್ಲಿ ರಾಜರಾದರು. ಇವರೆ ಮೈಸೂರು ರಾಜಮನೆತನದ ೨೫ ನೇ ಮತ್ತು ಮಹಾರಾಜರು. ೧೯೪೭ ರಲ್ಲಿ ಭಾರತಕ್ಕೆ ಸ್ವಾತಂತ್ರ ಬಂದಾಗ ಮೈಸೂರು ಸಂಸ್ಥಾವನ್ನು ಭಾರತ ಒಕ್ಕೂಟದಲ್ಲಿ ವಿಲೀನಗೊಳಿಸಲು ಸ್ವಯಂ ಪೇರಣೆಯಿಂದ ಮುಂದೆ ಬಂದರು. ರಾಜ್ಯಪ್ರಭುತ್ವ ಬಿಟ್ಟು ಕೊಟ್ಟರು. ಪ್ರಜಾ ಪ್ರಭುತ್ವಕ್ಕೆ ಅವಕಾಶ ಕಲ್ಪಿಸಿ ಗೌರವಕ್ಕೆ ಪಾತ್ರರಾದರು. ೧೯೫೦ ರಲ್ಲಿ ಭಾರತ ಗಣರಾಜ್ಯವಾದಾಗ ಮೈಸೂರು ಸಂಸ್ಥಾನದ ರಾಜಪ್ರಭುತ್ವ ಅಂತ್ಯವಾಯಿತು.

ಸ್ವತಂತ್ರ ಪೂರ್ವದಲ್ಲಿ ಮೈಸೂರು ಸಂಸ್ಥಾನವನ್ನು ಒಂದು ದೇಶವೆಂದು ಕರೆಯಲಾಗುತಿತ್ತು. ಸಂಸ್ಥಾನವು ಒಟ್ಟು ಒಂಬತ್ತು ಜಿಲ್ಲೆಗಳನ್ನು ಒಳಗೊಂಡಿತ್ತು. ಅವುಗಳೆಂದರೆ, ಮೈಸೂರು, ಶಿವಮೊಗ್ಗ ಮತ್ತು ಮಂಡ್ಯ ಮೈಸೂರು ಜಿಲ್ಲೆಯ ಆಡಳಿತ ಇತಿಹಾಸವನ್ನು ಗಮನಿಸಿದರೆ ಈ ಪ್ರದೇಶ ಅಸ್ಪಗ್ರಾಮ ಪೌಜುದಾರಿಗೆ ಸೇರಿತು. ೧೮೬೨ ರಲ್ಲಿ ಅಸ್ಪಗ್ರಾಮ ವಿಭಾಗಗಳಿಗೆ ಸೇರಿತು. ಇದರಲ್ಲಿ ಮೈಸೂರು, ಮಂಡ್ಯ ಹಾಗೂ ಹಾಸನ ಜಿಲ್ಲೆಯ ಭಾಗಗಳು ಸೇರಿದ್ದವು. ೧೮೮೨ ರಲ್ಲಿ ೧೪ ತಾಲೂಕುಗಳು, ೩ ಉಪ ತಾಲೂಕುಗಳು, ಯಳಂದೂರು ಜಹಗೀರು ಸೇರಿದ್ದವು. ೧೮೮೬ ರಲ್ಲಿ ಹಾಸನ ಜಿಲ್ಲೆಯ ಪುನರಚನೆಯಾದಾಗ ಮಂಡ್ಯ ಮತ್ತು ಮೈಸೂರು ಜಿಲ್ಲೆಯ ಭಾಗಗಳಿದ್ದವು. ೧೯೩೦ ರಲ್ಲಿ ಮಂಡ್ಯ ಜಿಲ್ಲೆ ರಚನೆಯಾದಾಗ ಏಳು ತಾಲೂಕುಗಳು ಕೈಬಿಟ್ಟವು. ೧೯೫೬ ರಲ್ಲಿ ರಾಜ್ಯ ಪುನರ್ವಿಂಗಡನೆಯಾದಾಗ ಮದರಾಸು ರಾಜ್ಯಕ್ಕೆ ಸೇರಿದ ಕೊಳ್ಳೆಗಾಲ ತಾಲೂಕು ಮೈಸೂರಿಗೆ ಸೇರಿತು. ೧೯೯೭ ರಲ್ಲಿ[೪] ಜಿಲ್ಲೆಗಳ ಪುನರರ್ವಿಂಗಡನೆಯಾದಾಗ ಚಾಮರಾಜ ನಗರ ಜಿಲ್ಲೆ ಅಸ್ತಿತ್ವಕ್ಕೆ ಬಂದು ಕೊಳ್ಳೆಗಾಲ, ಗುಂಡ್ಲು ಪೇಟೆ, ಯಳಂದೂರು, ಚಾಮರಾಜನಗರ ತಾಲೂಕುಗಳು ಮೈಸೂರು ಜಿಲ್ಲೆಯಿಂದ ಕೈಬಿಟ್ಟವು.

'ಮೈಸೂರು ಸಾಂಸ್ಕೃತಿಕ ರಾಜಧಾನಿಯಾಗಿರುವಂತೆ ಈ ಹಿಂದೆ ಕನಾಟಕದ ರಾಜಧಾನಿಯೂ ಆಗಿದ್ದಿತು. ಬಹಳ ಹಿಂದಿನಿಂದಲೇ ಆದಿಮಾನವನ ಪ್ರಾರಂಭದ ಆ ದಿನಗಳಲ್ಲಿದ್ದ ನೆಲೆಗಳು ಈ ಜಿಲ್ಲೆಯ ಹೊಂದಿದ್ದು ಅತಿ ಪ್ರಾಚೀನತೆಯ ಹಿನ್ನೆಲೆಯನ್ನು ತನ್ನ ಒಡಲಿನಲ್ಲಿ ಬಚ್ಚಿಟ್ಟುಕೊಂಡಿದೆ. ಒಂದು ಚೈತನ್ಯಪ್ರಾಯದ ಸಂಸ್ಕೃತಿಯಲ್ಲಿ ಬೆಳೆದ ಶ್ರೀಮಂತ ಸಾಂಸ್ಕೃತಿಕ ಪರಿಸರ ಇದು ಈ ಪ್ರದೇಶದ ಇತಿಹಾಸದಲ್ಲಿ ಹೊತ್ತ ಈ ನಾಡು ತನ್ನ ಒಡಲಿನಲ್ಲಿ ವಿವಿಧ ಕಲಾಪ್ರಕಾರಗಳನ್ನು ಹೊಂದ ಇಂದು ಕಲೆಗಳ ಪರಂಪರಾಗತ ಬೀಡಾಗಿದೆ. ದಕ್ಷಿಣ ಭಾರತದ ಹೃದಯ ಭಾಗದಲ್ಲಿರುವ ಮೈಸೂರು ಜಿಲ್ಲೆ, ಕನ್ನಡ ನಾಡಿನ ತೆಂಕಣ ದಿಕ್ಕು ಪೂರ್ವ ಭಾಗದಲ್ಲಿರುವ ಒಂದು ಪ್ರದೇಶದ. ಈ ಭಾಗವು ಹಿಂದೆ ಮೈಸೂರು ರಾಜ್ಯವಾಗಿತ್ತು. ಇಂದು ಭಾರತದೊಳಗಿನ ಕರುನಾಡಿನ ಪ್ರಾಚೀನ ನಗರಗಳಲ್ಲಿ ಒಂದೆನಿಸಿದೆ. ನೈಸರ್ಗಿಕವಾಗಿಯೂ ಸುಂದರ ತಾಣಗಳನ್ನು ಒಳಗೊಂಡ ಸಂಪತ ಭರಿತ ನೆಲೆಯಾಗಿ, ಸಾಂಸ್ಕೃತಿಕ ರಂಗಕ್ಕೆ ಅತ್ಯಂತ ಮಹತ್ವ ಪೂರ್ಣವಾದ ತನ್ನದೇ ಆದ ದೇಶಿಯ ಕೊಡುಗೆಗಳನ್ನು ನೀಡಿದ್ದು.

೪. ಆರ್.ನಂ: ೩೦೫೩೧೬೪೧೭೮೪೮ ಮೈಸೂರಿನ ಚಿತ್ರಕಲೆ ಪರಂಪರೆ, (ಅ.ಪ್ರ ಕಿ.ಪ್ರ). ಪು.ಸಂ-೩೭.

ಆಧುನಿಕ ಕಾಲದ ಪ್ರವಾಹಕ್ಕೆ ಕೊಚ್ಚಿ ಹೋಗದೆ ಅದರ ಅನುಭವದಿಂದ ಪರಿಪುಷ್ಟಗೊಳ್ಳುತ್ತಾ ಇನ್ನೂ ಬೆಳೆಯುತ್ತಲೇ ಇದೆ.

ಯಾವುದೇ ಪ್ರಾಂತ್ಯ ಅಥವಾ ದೇಶದ ಸಂಸ್ಕೃತಿ ನೋಡಬೇಕಾದರೆ ಕಲೆಯೇ ಮುಖ್ಯ ಕಲೆಯ ಪರಿಸರವೇ ಸಂಸ್ಕೃತಿಯಾ ಜೀವಾಳ, ಭಾರತೀಯ ಸಂಸ್ಕೃತಿಯ ಮೊಟ್ಟ ಮೊದಲು ರೂಪಗೊಂಡಿರುವುದೇ ದಖನ್ ಅಥವಾ ಒಂದು ಜನಾಂಗದ ಮಾನಸಿಕವಾದ ಸಾಧನೆ, ಅಷ್ಟೇ ಅಲ್ಲದೆ ಪಕ್ವತೆ, ಬುದ್ಧಿವಾದ, ನಾಗರಿಕತೆ ಅಲ್ಲದೆ ವ್ಯವಸಾಯ, ಕೃಷಿ, ಸಭ್ಯತೆ, ಸಭನಗರ, ಸಂರಕ್ಷಿಸುದಷ್ಟೇ ಅಲ್ಲದೇ ಗೌರವಿಸು, ಆರಾಧಿಸು, ಸೇವೆಮಾಡು ಎಂಬ ಇತ್ಯಾದಿ ಅರ್ಥಗಳು ಇರುತ್ತದೆ'[೫].

ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾಲಘಟ್ಟದಲ್ಲಿ ಮೈಸೂರು ಸಂಸ್ಥಾನವನ್ನು ವಸಾಹತು ಕಾಲಘಟ್ಟವಾಗಿ, ಅದರಲ್ಲಿ ಲಲಿತಕಲೆ ಪ್ರೋತ್ಸಾಹ ನೀಡಿರುವುದು ವಿಶೇಷವಾಗಿಯೂ ಗುರುತಿಸಬಹುದು. ಅದನ್ನು ಆಧುನಿಕ ಮೈಸೂರಿನ ಇತಿಹಾಸವೆಂದು ಕರೆಯುತ್ತಾರೆ.

ಕ್ರಿ.ಶ. ಹದಿನೆಂಟನೆಯ ಶತಮಾನದ ಪ್ರಾರಂಭದಿಂದ ಇಪ್ಪತ್ತನೆಯ ಶತಮಾನ ಅರ್ಧಭಾಗದವರೆಗೆ, ಸುಮಾರು ನೂರೈವತ್ತು ವರ್ಷಗಳ ಕಾಲ ಮೈಸೂರು ಸಂಸ್ಥಾನದಲ್ಲಿ ಬ್ರಿಟಿಷರು ಚಕ್ರಾಧಿಪತ್ಯದೊಂದಿಗೆ ಸಾಗಿದೆ. ಆ ಕಾಲದಲ್ಲಿಯೂ ಲಲಿತಕಲೆಯಲ್ಲಿ ಚಿತ್ರಕಲೆಗೆ ಹೆಚ್ಚು ಬೆಳವಣಿಗೆ ಕಂಡಿದ್ದರ ಜೊತೆ ಅದರ ಕಲಾ ಪ್ರಕಾರಗಳು ಸಹ ಬೆಳವಣಿಗೆ ಕಂಡಿತು. 1799ರಿಂದ ದಿವಾನರುಗಳ ಆಡಳಿತವು ಪ್ರಾರಂಭವಾಗುತ್ತದೆ. '1831 ರಿಂದ 1881 ರ ವರೆಗೆ 50 ವರ್ಷಗಳಷ್ಟು ಬ್ರಿಟಿಷ್ ಕಮೀಷನರ್ ಆಳ್ವಿಕೆ ನಡೆಯುತ್ತದೆ. ಅದರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು, ಚಾಮರಾಜ ಒಡೆಯರು, ನಾಲ್ವಡಿ ಕೃಷ್ಣರಾಜ ಒಡೆಯರು, ಜಯ ಚಾಮರಾಜ ಒಡೆಯರು ಆಳ್ವಿಕೆ ಮಾಡುತ್ತಾರೆ.

ಟಿಪ್ಪುಸುಲ್ತಾನ ಮರಣ ನಂತರ ಮೈಸೂರು ರಾಜ್ಯವನ್ನು ನಾಲ್ಕು ಭಾಗವಾಗಿ ವಿಂಗಡಿಸಿ. ಒಂದು ಭಾಗವನ್ನು ಮೈಸೂರು ಸಂಸ್ಥಾನಕ್ಕೆ ಬಿಟ್ಟು ಕೊಟ್ಟರು ಶ್ರೀರಂಗಪಟ್ಟಣ, ಗುಬ್ಬಿ, ಚಾಮರಾಜನಗರ, ತಲಕಾಡು, ಬೊಪ್ಪಗಡನವರ ಮುಂತಾದ ಸ್ಥಳಗಳಲ್ಲಿ ಇವರು ಭಿತ್ತಿಚಿತ್ರಕಲೆ ರಚಿಸಲು ಪ್ರೋತ್ಸಾಹಿಸಿದ್ದಾರೆ. ಇವರ ಕಾಲದಲ್ಲಿ ಲಲಿತಕಲೆ ಅಪಾರ ಪ್ರೋತ್ಸಾಹದಿಂದ ದೇವಾಲಯಗಳು ಭಿತ್ತಿಚಿತ್ರಗಳು ರಚನೆ ಗೊಂಡಿವೆ. ದಿವಾನ್ ಪ್ರರ್ಣಯ್ಯನವರ ಆಡಳಿತ ಕಾರ್ಯದಿಂದ ಅನೇಕ ವೈಷ್ಣವ ಮಹಾದೇವಾಲಯಗಳ ಸ್ಥಾಪನೆ ಮಾಡಿಸಿದ್ದರು. ಅಲ್ಲಿ ಶಿಲ್ಪಮೂರ್ತಿ, ವಾಸ್ತುಮೂರ್ತಿಗಳನ್ನು ಏತ್ತೆಚ್ಚಾವಾಗಿ ಸೃಷ್ಟಿಯಾದವು ಅರಮನೆಯ ಅವರಣದಲ್ಲಿ ಶ್ವೇತವರಾಹ ದೇವಾಲಯ, ಪ್ರಸನ್ನ ಕೃಷ್ಣಸ್ವಾಮಿ ದೇವಾಲಯಗಳ ಸ್ಥಾಪನೆ ಅಲ್ಲಿ ಭಿತ್ತಿಚಿತ್ರಕಲೆಯ ರಚನೆಗೂ ಇವರದೆ ಸಹಾಯ ಅಸ್ತ, ಕಲೆ, ಸಾಹಿತ್ಯ, ಸಂಸ್ಕೃತಿ, ದೃಷ್ಟಿಯಿಂದ ಸಂಕ್ರಮಣಕಾಲ. ಸ್ವತಃ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು 60 ಕೃತಿಗಳನ್ನು ರಚಿಸಿದ್ದಾರೆ. ಶಿವ ತತ್ವನಿಧಿ, ಸೌಗಂಧಿಕ ಪರಿಯ, ಕೃಷ್ಣ ಕಥಾಸಾರ ಸಂಗ್ರಹಣ, ಹಾಗೇ ಸಂಗೀತಕ್ಕೆ ಪ್ರೋತ್ಸಹದಿಂದ ಮೂಗುರು ಸುಬ್ಬಣ ಸದಾಶಿವರಾಯ, ವೀಣೆ ಶೇಷಣ್ಣ ಮುಂತಾದ ಕವಿಗಳಿಗೆ ಆಳಿಯ ಲಿಂಗರಾಜ, ದೇವಾಲಪುರದ

೫. ಹೇಮಂತಕುಮಾರ ಎಂ : ಮೈಸೂರು ಜಿಲ್ಲೆಯ ಚಿತ್ರಕಲೆ, (ಅ.ಪ್ರ, ಸಂ.ಪ್ರ) ಪು.ಸಂ-೩೬

ನಂಜುಂಡ, ಕೆಂಪುನಾರಾಯಣ ಗೋಪುರ ಮುಂತಾದ ಕವಿಗಳಿಗೆ ಆಶ್ರಯ ಚಾಮುಂಡೇಶ್ವರಿ ದೇವಾಲಯ, ನಂಜನಗೂಡಿನ ದೇವಾಲಯಕ್ಕೆ ಗೋಪುರ, ಕೊಡುಗೂ ದೊರೆಗಳಾದ್ದ ಇವರಿಗೆ 'ಕೃಷ್ಣರಾಜಭೂಪ' ಎಂಬ ಪಡೆನುಡಿ ಹುಟ್ಟಿಕೊಂಡಿತ್ತು.

ಮುಮ್ಮಡಿಯವರ ಕಾಲದಲ್ಲಿ ಮರದ ಅರಮನೆ ನಿರ್ಮಾಣ, ಅದು ಕೆಳದಿ ಶಿವಪ್ಪನಾಯಕನ ಅರಮನೆಯಂತೆ ಮಾದರಿಯಲ್ಲಿ ಸರಳ ಸುಂದರವಾಗಿ ನಿರ್ಮಾಣವಾಗಿತ್ತು. ಐದು ಅಂತಸ್ತು, ಹೊರಭಾಗ ಸುಂದರ ಕೆತ್ತನೆಗಳಿಂದ ಕೊಡಿದ್ದು, ದರ್ಬಾರ್ ಸಂಭಾಗಣ ಬಣ್ಣ ಬಣ್ಣದ ಚಿತ್ರಗಳಿಂದಲೂ ಚಿನ್ನದ ಲೇಪನದಿಂದಲೂ ಅಲಂಕೃತವಾಗಿತ್ತು. ಸರಸ್ವತಿ ಭಂಡಾರ ಅಂತಪುರ ಅದರಲ್ಲಿ ಕೆಲವು ಯುರೋಪಿಯನ್ ಕಲಾವಿದರ ಚಿತ್ರಗಳಿದ್ದವು. ಬಾಗಿಲಗಳಲ್ಲಿ ಹಸ್ತಿದಂತಹ ಕೆತ್ತನೆಗಳಿದ್ದವು ಪರಕಾಲ ಮಠಕ್ಕೆ ಅನೇಕ ಕಲಾಕೃತಿಗಳನ್ನು ಉಡುಗೊರೆ ನೀಡಿದ್ದಾರೆ, ಕಾರಂಜಿ ಅರಮನೆ, ಚೆಲುವಾಂಬ ಅರಮನೆಗಳ ಸ್ಥಾಪನೆಗೆ ಮುಮ್ಮಡಿ ಕೃಷ್ಣರಾಜ ಒಡೆಯರ್ ಹಾಗೂ ಚಾಮರಾಜ ಒಡೆಯರ್ ಕಾರಣಕರ್ತರಾಗಿದ್ದಾರೆ.

ಅಲೋಕ ಅರಮನೆ ಮುಮ್ಮಡಿಯವರ ನಂತರ ಬಂದ ಚಾಮರಾಜೇಂದ್ರರು ದಿವಾನ ರಂಗಚಾರ್ಯರು ಮತ್ತು ಶ್ರೇಷಾದ್ರಿ ಅಯ್ಯರ್, ಅವರ ಆಡಳಿತದ ನೆರವಿನಿಂದ ಪ್ರಜಾಪ್ರತಿನಿಧಿ ಸಭೆ ಅನೇಕ ಶಾಲೆಗಳು ತೆರೆದರು, ಅವುಗಳಲ್ಲಿ ಸಂಸ್ಕ್ರತ ಶಾಲೆ, ಫಸ್ಟ್ ಗ್ರೇಡ ಕಾಲೇಜ್, ಮಹಾರಾಣಿ ಕಾಲೇಜ, ಇಂಗ್ಲೀಷ ಪಾಠ ಶಾಲೆ ಪುರಾತತ್ವ ಇಲಾಖೆ ಮುಂತಾದವುಗಳನ್ನು ತೆರೆದಿದ್ದಾರೆ. ನಾಟಕ ಪ್ರದರ್ಶನಗಳಿಗೆ ಪ್ರೋತ್ಸಾಹ ಜೊತೆಗೆ ಅನೇಕ ವಿದ್ವಾಂಸರನ್ನು ಪೋಷಿಸಿದ್ದರು. ನಾಲ್ವಡಿ ಕೃಷ್ಣರಾಜ ಒಡೆಯರ್ ಧಿರ್ಘಕಾಲ ಆಳಿದ ಯದುವಂಶೀಯ ರಾಜ್ಯರಲ್ಲಿ ನಾಲ್ವಡಿ ಅವರು ಕನ್ನಡ ಸಾಹಿತ್ಯ ಪರಿಷತ್ತು. ಮೈಸೂರು ವಿಶ್ವವಿದ್ಯಾಲಯ, ಕೃಷ್ಣರಾಜ ಸಾಗರ, ದಸರಾ ವಸ್ತು ಪ್ರದರ್ಶನ ಅಂಬಾ ವಿಲಾಸ ಅರಮನೆ ಅದರಲ್ಲಿ ಕಲಾ ಸೌಂದರ್ಯ. ಸುಂದರ ಮೂರ್ತಿರೂಪದ ವಾಸ್ತುಶಿಲ್ಪ, ನಕ್ಷ ಅಲಂಕಾರ ಮತ್ತು ಕಲ್ಯಾಣ ಮಂಟಪ ಇತ್ಯಾದಿಗಳನ್ನು ಹಾಗೂ ಕರಿಕಲ್ಲು ತೊಟ್ಟಿ, ನವಿಲು ತೊಟ್ಟಿ ಮತ್ತು ವಸ್ತುಪ್ರದರ್ಶನಗಳು, ಭಿತ್ತಿಚಿತ್ರಗಳು, ಮರದ ಕೆತ್ತನೆ, ಗಾಜಿನ ಚಿತ್ರಕಲೆ ಮುಂತಾದ ಪ್ರಕಾರದ ಚಿತ್ರಕಲೆಗಳು ಇಲ್ಲಿ ಕಂಡುಬರುತ್ತದೆ. ನಾಲ್ವಡಿಯರ ಕಾಲದಲ್ಲಿಯೇ ಸಾಮ್ಯಾನರಿಗೇ ವಿದ್ಯಾಭ್ಯಾಸ, ಲಲಿತಕಲೆಗೆ ತುಂಬ ಪ್ರೋತ್ಸಾಹ ನೀಡಿ, ಕಲಾವಿದರಿಗೆ ಅಶ್ರಯದಾತರಾಗಿದ್ದರು.

ಆಧುನಿಕ ಮೈಸೂರು ಕಟ್ಟಿದ ಕಿರ್ತಿ ನಾಲ್ವಡಿ ಕೃಷ್ಣರಾಜ ಒಡೆಯರಿಗೆ ಸೇರುತ್ತದೆ. ಗಾಂಧೀಜಿ ಇವರಿಗೆ 'ರಾಜರ್ಷಿ' ಎಂದು ಕರೆದರು. ರಾಮರಾಜ್ಯದ ಪ್ರತಿಫಲಕ ಕಂಡ ಬಿ.ಎಂ. ಶ್ರೀಯವರು ಪುಣ್ಯದಾರಸು, ಧರ್ಮ ದಾಳು, ಕನ್ನಡಿಗರ ಮಯರಮುಡಿ ಎಂದು ಕರೆದಿದ್ದಾರೆ. ಮೈಸೂರು ವಿ.ವಿ.ಗೇ ಮೊದಲನೆಯ ಕುಲಾಧಿಪತಿಯಾಗಿ ಡಾಕ್ಟರ್ ಆಫ್ ಲಾ ಪ್ರಶಸ್ತಿಯನ್ನು ತಮ್ಮ ಮುಡಿಗೇರಿಸಿಕೊಂಡರು. ಇವರ ಆಸ್ಥಾನದಲ್ಲಿ ಸಂಗೀತ ಕಲಾವಿದರಾದ ಭಕ್ಷಿ ಸುಬ್ಬಣ, ಮೈಸೂರು ವಾಸುದೇವಾಚಾರ್ ಹಾಗೂ ನಾಟ್ಯ ಕಲಾವಿದರಾದ ಜಟ್ಟತಾಯಮ್ಮ, ಸುಂದರಮ್ಮ ಹೀಗೆ ಮುಂತಾದ ಕಲಾವಿದರಿಗೆ ಆಶ್ರಯನೀಡಿ ಪ್ರೋತ್ಸಾಹ ನೀಡಿದ್ದರು.

ಜಯಚಾಮರಾಜೇಂದ್ರ ಒಡೆಯರ್ ಅವರ ಕಾಲವು ಸಂಕ್ರಮಣ ಕಾಲವಾಗಿದೆ. ಮೈಸೂರು ಮತ್ತು ಮದರಾಸಿನ ರಾಜ್ಯಪಾಲರಾಗಿದ್ದು ಇವರು ಬಹುಕಾಲ ವನ್ಯಜೀವಗಳ ಭಾರತೀಯ ಮಂಡಳಿಯ ಅಧ್ಯಕ್ಷರಾಗಿದ್ದರು. ಲಲಿತಮಹಲ್, ರಾಜೇಂದ್ರ ವಿಲಾಸ ಅರಮನೆ, ಚಾಮುಂಡಿ ವಿಹಾರ, ಚಿತ್ತರಂಜನ್ ಮಹಲ್ ಸ್ಥಾಪ್ಪನೆ ಮತ್ತು ಭಾರತದ ಸ್ವಾತಂತ್ರಕ್ಕೆ ಮೊದಲ ಒಪ್ಪಿಗೆ ಕೊಟ್ಟಿದು ಅಲ್ಲದೆ ಸಾಹಿತ್ಯ, ಸಂಗೀತ, ಕಲೆಗಳಲ್ಲಿ ವೇದ, ಪುರಾಣ ಹಾಗೂ ಗ್ರಂಥ ಭಾಂಡಾರವನ್ನು ರೂಪಿಸಿದ್ದರು. ತತ್ವ ಶಾಸ್ತ್ರ, ಸೌಂದರ್ಯಶಾಸ್ತ್ರ, ರಸಶಾಸ್ತ್ರ, ತರ್ಕಶಾಸ್ತ್ರ ಮುಂತಾದವುಗಳ ಕುರಿತಾಗಿದೆ. ಕರ್ನಾಟಕ ಸಂಗೀತದೆಡೆ ಇಲವು, ಪಾಶ್ಚಾತ್ಯ ಸಂಗೀತ ಕೀರ್ತಿಸಂಗ್ರಹಾಲಯ, ಕ್ವೀನ್ಸ್ ಲ್ಯಾಂಡ್ ವಿ.ವಿ.ಯಿಂದ ಡಿ.ಲಿಟ್ ಬನರಾಸ್ ವಿ.ವಿ ಗೌರವ ಡಾಕ್ಟರ್ ಆಫ್ ಲಾ, ವಿದೇಶಿ ಬಿರುದುಗಳು ಸಹ ಬಂದಿರುತ್ತದೆ. ಇವರು ಕೋಟೆಯೊಳಗಿನ ಗಾಯತ್ರಿ ದೇವಾಲಯ, ತ್ರಿಣಯನೇಶ್ವರನಿಗೆ, ಚಾಮುಂಡೇಶ್ವರಿ ದೇವಾಲಯದ ಮಹಾದ್ವಾರಕ್ಕೆ ನಕಾಶೆ ಕೆಲಸ ಬೆಳ್ಳಿ ಹೊದಿಕೆ, ಚಾಮರಾಜೇಂದ್ರ ಮೃಗಾಲಯ ಮತ್ತು ಅನೇಕ ವಿದ್ಯಾಸಂಸ್ಥೆಗಳನ್ನು ನಿರ್ಮಿಸಿದ್ದಾರೆ.

'ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರು ಶ್ರೀ ಜಯಚಾಮರಾಜೇಂದ್ರ ಆರ್ಟ ಗ್ಯಾಲರಿ ಟ್ರಸ್ಟ್, ಮಹಾರಾಣಿ ಲಕ್ಷ್ಮಣಿಯವರ ಎಜುಕೇಷನ ಟ್ರಸ್ಟ್, ಜಯಚಾಮರಾಜೇಂದ್ರ ಕಲ್ಚರಲ್ ಅಕಾಡೆಮಿ, ಮೈಸೂರು ಅಸೋಸಿಯೇಷನೆ, ಜಯಚಾಮರಾಜೇಂದ್ರ ಎಜುಕೇಷನ ಟ್ರಸ್ಟ್ ಇವರು ಕಲಾಕೃತಿ ಸಂಗ್ರಹಾಲಯದ ಜೊತೆಗೆ ಇವರು ಪ್ರಜಾಸೇವೆ ಮಾಡುತ್ತಿದ್ದಾರೆ. ವಿವಿಧ ಕಲಾಕೃತಿಗಳು, ವೇಷಭೂಷಣಗಳು ಯುದ್ಧಗಳಲ್ಲಿ ಉಪಯೋಗಿಸುತ್ತಿದ್ದ ಆಯುಧಗಳು, ಛಾಯಾಚಿತ್ರಗಳು ತಮ್ಮ ಖಾಸಗಿ ಸಂಗ್ರಹಾಲಯವೊಂದನ್ನು ಅರಮನೆಯ ಹಿಂಭಾಗದ ಕರಿಕಲ್ಲು ತೊಟ್ಟಿಯಲ್ಲಿ ಶ್ರೀಕಂಠದತ್ತರು ಸಂಗ್ರಹಿಸಿ, ಅರಮನೆಯ ಪರಂಪರೆಯನ್ನು ಇಂದಿನ ಪೀಳಿಗೆಗೆ ಪರಿಚಯಿಸುವ ಕಾರ್ಯ ಮಾಡುತ್ತಿದ್ದಾರೆ. ಸಂಸ್ಕೃತಿ ಪರಂಪರೆಗಳನ್ನು ಉಳಿಸಿ ಬೆಳೆಸುವುದರಲ್ಲಿ ಅವರಿಗೆ ವಿಶೇಷ ಕಾಳಜೀ ಇಂದಿನ ಸಂವಿಧಾನಕ್ಕೆ ಅನುಗುಣವಾಗಿ ಅವರು ಮಹಾರಾಜರಲ್ಲಿ ಆದರೆ ಇಂದಿನ ಖಾಸಗಿ ದರ್ಬಾರ್ ಹಿಂದಿನ ನವರಾತ್ರಿಯ ವಿಧಿವಿಧಾನಗಳ ಪ್ರಕಾರಗಳನ್ನು ಇದು ಸಹ ನಡೆಸುತ್ತಿದ್ದಾರೆ.

ಮೈಸೂರು ಸಾಂಸ್ಕೃತಿಕ ಪರಿಸರವು ಪ್ರಾಚೀನತೆಯಿಂದ ಪುರಾಣ ಹಾಗೂ ಐತಿಹಾಸಿಕ ಕಾಲದಲ್ಲಿ ವಿಜ್ರಭಿಸಿದೆ. ಅದಕ್ಕೆ ಇಲ್ಲಿನ ಅರಸರುಗಳು ಲಲಿತ ಕಲೆಗೆ ಮರೆಯಲಾಗದಂತಹ ಪೋಷಿಸಿ, ಕಲಾಕೃತಿಗಳನ್ನು ಸಂರಕ್ಷಿಸಿ ದೇಶದ ಆಸ್ತಿಗೆ ಮೌಲ್ಯ ತಂದು ಕೊಟ್ಟಿದ್ದಾರೆ. ಹಾಗೆ ಅನೇಕ ಚಿತ್ರಕಲಾ ಪ್ರಕಾರಗಳನ್ನು ಪ್ರೋತ್ಸಾಹಿಸಿದರಿಂದ ಇಲ್ಲಿ ಕಲೆಗಳು ಬೆಳೆಯಲು ಕಾರಣವಾಗಿದ್ದಾರೆ.

ಲಲಿತಕಲೆಯಲ್ಲಿ, ಚಿತ್ರಕಲೆ ಮತ್ತು ಅದರ ಪ್ರಮುಖ ಪ್ರಕಾರವಾದ ಭಿತ್ತಿಚಿತ್ರಕಲೆಯು ದೇವಾಲಯ, ಅರಮನೆ, ಮಂಟಪ, ಮಂದಿರ, ಚರ್ಚ್‌ಗಳಲ್ಲಿ ಭಿತ್ತಿಚಿತ್ರ ರೂಪದಲ್ಲಿ ರಾರಜಿಸುತ್ತದೆ. ಅದರಲ್ಲಿ ಭಾಗವತ, ರಾಮಾಯಣ, ಮಹಾಭಾರತ, ಅಲಂಕಾರಿಕ ಸ್ತ್ರೀಯರ ಚಿತ್ರಗಳು, ವಿವಿಧ ನಕ್ಷೆಗಳು, ಒಣ ಭಿತ್ತಿಯ ರಚನೆಯಲ್ಲಿ ಚಿತ್ರಿಸಿದ್ದಾರೆ. ಅವು ದೇಶಿಯ ಪ್ರತೇಕದಂತೆ ಪ್ರತಿಫಲಿಸುತ್ತದೆ. ನೈಸರ್ಗಿಕ ವರ್ಣಗಳ ಬಳಕೆ. ಪ್ರಾಂತ್ಯದ ಶೈಲಿಯ ಸೂಬಗು ತಮ್ಮ ದೀರ್ಘಕಾಲದ ಆಳ್ವಿಕೆಯಲ್ಲಿ ಚಿತ್ರಕಲೆಗೆ ಹೆಚ್ಚಿನ ಪ್ರೋತ್ಸಾಹ ನೀಡಿದ್ದಾರೆ. ಆಗಿನ ಮೈಸೂರು ಸಂಸ್ಥಾನದಲ್ಲಿದ್ದ ಪ್ರಾಂತ್ಯಗಳು

ಮೈಸೂರು, ಮಂಡ್ಯ, ಬೆಂಗಳೂರು, ಕೋಲಾರ, ತುಮಕೂರು, ಚಿಕ್ಕಮಂಗಳೂರು, ಶಿವಮೊಗ್ಗ, ಗಾಸನ, ಚಿತ್ರದುರ್ಗ ಈ ಸ್ಥಳಗಳಲ್ಲಿ ಭಿತ್ತಿಚಿತ್ರಕಲೆ ಕಾರ್ಯ ನಡೆದಿರುತ್ತದೆ. ಆದರೆ ಈಗಿನ ಪರಿಸ್ಥಿತಿಯ ರಾಜಕೀಯಾ ಹಾಗೂ ಆಧುನಿಕ ಕರ್ನಾಟಕದಲ್ಲಿ ಮೈಸೂರು ಜಿಲ್ಲೆಯಲ್ಲಿ ನಗರ ಹಾಗೂ ತಾಲೂಕುಗಳಲ್ಲಿ ಭಿತ್ತಿಚಿತ್ರಕಲೆಯ ನೆಲೆಗಳನ್ನು ಮಾತ್ರ ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ. ಅವು ಸುತ್ತೊರು, ಮುಡುಕುತೊರೆ, ಬೈಲುಕುಪ್ಪೆ, ಟಿ.ನರಸಿಂಹಪುರ ಸ್ಥಳಗಳಲ್ಲಿ ಭಿತ್ತಿಚಿತ್ರಗಳು ಕಂಡುಬರುತ್ತವೆ. ಅಧುನಿಕ ಕಾಲದಲ್ಲಿ ಟಿಪ್ಪು ಮತ್ತು ಎಲ್ಲಾ ಒಡೆಯರ ವಂಶಸ್ಥರ ಅರಸರುಗಳು ಅರಮನೆ ದೇವಾಲಯಗಳಲ್ಲಿ ಚಿತ್ರಕಲೆಯು ವಿಜಯನಗರದ ನಂತರ ಮೈಸೂರಿನಲ್ಲಿ ಸುತ್ತ ಮುತ್ತ ಭಿತ್ತಿಚಿತ್ರಗಳು ಹೆಚ್ಚು ಕಂಡುಬರುತ್ತವೆ.

ಇಲ್ಲಿನ ಐತಿಹಾಸಿಕ ನೆಲೆಗಟ್ಟಿನ ಮೇಲೆ ಮುಸ್ಲಿಂ, ಇಂಗ್ಲಿಷರ್, ಮತ ಧರ್ಮಗಳು, ಧಾರ್ಮಿಕ, ಆಧುನಿಕತೆ ಒಳಗೊಂಡ ಚಿತ್ರಕಲೆಯು ಈ ಪ್ರಾಂತ್ಯದಲ್ಲಿ ಅರಮನೆ, ಸಂಗ್ರಹಾಲಯ, ದೇವಾಲಯ ಹಾಗೂ ಗ್ಯಾಲರಿ, ಕಲಾಶಾಲೆ, ಚರ್ಚ್, ಕಛೇರಿ ಮುಂತಾದ ಸ್ಥಳಗಳಲ್ಲಿ ದಾಖಲಾಗಿದೆ. ಕಲಾಕೃತಿಗಳಲ್ಲಿ ಮೌಲ್ಯಗಳನ್ನು ಒಳಗೊಂಡ ಕಲಾ ಪ್ರಕಾರಗಳ ಪರಂಪರೆಯೇ ಆಗಿದ್ದು ಪ್ರದೇಶದ ಸೊಬಗಿನ ಪ್ರತಿಫಲವಾಗಿ ಈ ನಾಡಿನ ಸಂಪತ್ತು ಆಗಿರುತ್ತದೆ. ಆದರೆ ಐತಿಹಾಸಿಕ ಘಟನೆಗಳಿಂದ ಕೆಲವು ನಾಶವಾಗಿದೆ.

ತೌಲನಿಕವಾಗಿ ನೊಡಿದಾಗ ಹೊರರಾಜ್ಯದ ಸಾಂಸ್ಕೃತಿಕ ಪರಿಸರವನ್ನು ಹೋಲಿಕೆ ಮಾಡಿ ನೋಡಿದಾಗಲೂ ಮೈಸೂರು ಅರಸರು ಕಲೆ ಉಳಿಸಿ ಬೆಳೆಸುವ ಶ್ರಮವೇ ಹೆಚ್ಚಾಗಿದೆ. ಇಲ್ಲಿನ ಅರಸರು ಸಾಂಸ್ಕೃತಿಕ ಪರಿಸರವನ್ನು ವಿಶ್ವ ಪ್ರಸಿದ್ಧಿಯಾಗಿರುವಂತೆ ನಿರ್ಮಾಣ ಮಾಡಿದ್ದಾರೆ. ಇಗಲು ಆ ಸಮಯದ ವೈಭವವನ್ನು ಜನರು ತುದಿಗಾಲಿನಲ್ಲಿ ನಿಂತು ನೋಡಿ, ಆಶ್ಚರ್ಯಚಕಿತರಾಗಿ ಈ ಕಲೆಯನ್ನು ಕಣ್ಣು ಅರುಳಿಸಿ ನೊಡಿ, ಮನಸೋಲುವುದರ ಜೊತೆಗೆ ಮೈಮರೆತು ನೋಡುತ್ತಾ ನಿಲ್ಲುತ್ತಾರೆ. ಕರ್ನಾಟಕ ಐತಿಹಾಸಿಕ ದಾರಿಯಲ್ಲಿ ಲಲಿತಕಲೆಯ ಜೊತೆಗೆ ಚಿತ್ರಕಲೆಯನ್ನು ಉಳಿಸಿ ಬೆಳೆಸಿದೆ ಕೀರ್ತಿಗೆ ಪಾತ್ರರಾಗಿದ್ದಾರೆ"[೬].

ಈ ಜಿಲ್ಲೆಯ ಲಲಿತಕಲೆಯಂತೆ ಸುರಪುರ, ಕೆಳದಿ ಅರಸರ ಲಲಿತಕಲೆಯು ಅಲ್ಲಿಯೂ ಬೆಳೆದರು ಸಹ ಹೆಚ್ಚು ಪ್ರಬುದ್ಧತೆ ಶಕ್ತಿಶಾಲಿಯಾಗಿ ಬೆಳೆದಿದ್ದು ಮೈಸೂರ ಅರಸರಲ್ಲಿ ಮಾತ್ರ, ಏಕೆಂದರೆ ಕರ್ನಾಟಕ ಆಡಳಿತ ಚುಕ್ಕಾಣಿಯರ ಕೈಯಲ್ಲಿತ್ತು, ಆದರೂ ಇಲ್ಲಿನ ಅರಸರು ತುಂಬಾ ಜಾಣ್ಮೆಯಿಂದ ಭಿತ್ತಿಚಿತ್ರಕಲೆ, ಸಾಂಪ್ರದಾಯಿಕ ಚಿತ್ರಕಲೆ, ಲಲಿತಕಲೆ ಮತ್ತು ಕಲಾಶಾಲೆಗಳು ಅದರಿಂದ ಅನೇಕ ಕಲಾ ಪ್ರಕಾರಗಳನ್ನು ಅವರು ಇಲ್ಲಿ ಉಳಿದವು ಕಾಣಬಹುದು, ಈ ಭಾಗದಲ್ಲಿ ಆಧುನಿಕ ಕಾಲದಲ್ಲಿಯೂ ಮೈಸೂರು ಒಡೆಯರು ಶ್ರಮಿಸಿದ್ದರು ನಾವು ನೊಡಬಹುದು.

೬. ಪಿ.ಆರ್. ತಿಪ್ಪೇಸ್ವಾಮಿ : ಚಿತ್ರಕಲಾ ಪ್ರಪಂಚ, ಪು.ಸಂ-೨೪೬

ಮೈಸೂರು ಸಾಂಪ್ರದಾಯಿಕ ಚಿತ್ರಕಲೆ :

'ಭಾರತೀಯ ಚಿತ್ರಕಲೆಯ ಇತಿಹಾಸದಲ್ಲಿ ಮೈಸೂರು ಶೈಲಿಯ ಚಿತ್ರಗಳಿಗೆ ವಿಶಿಷ್ಟ ಪಾಮುಖ್ಯತೆ ಇದೆ. ಅನೇಕ ಶತಮಾನಗಳ ಕಾಲ ರೂಢಿಯಲ್ಲಿದ್ದ ಈ ಶೈಲಿ ೧೯ನೇ ಶತಮಾನದಲ್ಲಿ ಬಹಳ ಉಚ್ಛ್ರಾಯ ಸ್ಥಿತಿಯನ್ನು ಪಡೆದಿತ್ತು. ಇಪ್ಪತ್ತನೆಯ ಶತಮಾನದ ಆದಿಯಲ್ಲಿ ಕೆಲವು ರಾಜಕೀಯ ಹಾಗೂ ಸಾಮಾಜಿಕ ಪರಿಸ್ಥಿತಿಯಿಂದ ಮೈಸೂರು ಚಿತ್ರಗಾರರ ಕಲಾಕೃತಿಗಳ ರಚನಾ ಕಾರ್ಯ ಕುಂಠಿತವಾಯಿತು. ಇದರಿಂದ ಈ ಶೈಲಿಯ ಕೃತಿ ರಚನೆ ಮರೆಯಾಗುವ ಪರಿಸ್ಥಿತಿ ಉಂಟಾಯಿತು'[೭] ಇದಲ್ಲದೆ ರಾಷ್ಟ್ರದ ಕಲಾಶಾಲೆಗಳಲ್ಲಿ ಪಾಶ್ಚಾತ್ಯ ರೀತಿಯ ಕಲಾ ಶಿಕ್ಷಣ ಕೋಡುತ್ತಿದ್ದುದರಿಂದ ದೇಶಿಯ ಶೈಲಿಗಳಿಗೆ ಉತ್ತೇಜನ ದೊರಕುವುದು ದುರ್ಬಲವಾಗಿತು. ಬಹುತೇಕ ಕಲಾ ಪ್ರದರ್ಶನಗಳಲ್ಲಿ ಪಾಶ್ಚಾತ್ಯ ರೀತಿಯ ಚಿತ್ರಗಳು ಮಾರಟವಾಗುತ್ತಿರುವದರಿಂದ ಇದಕು ಸಹ ಕಾರಣವಾಗಿದ್ದಿತು. 'ಕಲ್ಕತ್ತದ ಕಲಾಶಾಲೆಯ ಪ್ರಭಾವದಿಂದ ಬಂಗಾಳಿ ಪುನರಜ್ಜೀವನ ಕಲೆಯ ಚಳುವಳಿ ಪ್ರಾರಂಭವಾಯಿತು. ಭಾರತೀಯ ಬಹಳಷ್ಟು ಚಿತ್ರಗಾರರು ಬಂಗಾಳಿ ಪುನರಜ್ಜೀವನ ಕಲೆಯ ಶೈಲಿಯಲ್ಲಿ ತಮ್ಮನ್ನು ಅರ್ಪಿಸಿಕೊಂಡರು. 'ಲೇಡಿ ಹೆರಿಂಗ್ ಹ್ಯಾಮ್', 'ಪರ್ಸಿಬ್ರೌನ್' 'ಆನಂದಕುಮಾರ ಸ್ವಾಮಿ' ಹಾಗೂ 'ಇ.ಬಿ ಹ್ಯಾವೇರ'ರವರ ಉತ್ತೇಜನದಿಂದ ಭಾರತೀಯ ಕಂಡುಕೊಳ್ಳುವಲ್ಲಿ ನಮ್ಮ ಚಿತ್ರಗಾರರು ನಿರಂತರ ಪ್ರಯತ್ನ ಪಡುತ್ತಿದ್ದರು. ಈ ಮಧ್ಯೆ ಅಜಂತಾ ಗುಹಾಂತರ ದೇವಾಲಯಗಳಲ್ಲಿ ೯ನೇ ಶತಮಾನಕ್ಕೆ ಹಿಂದೆ ರಚಿಸಲ್ಪಟ್ಟ ಭಿತಿಚಿತ್ರಗಳ ಅಧ್ಯಯನದಿಂದ ಪ್ರಭಾವಿತರಾದ ಅನೇಕ ಪಾಶ್ಚಾತ್ಯ ಹಾಗೂ ದೇಶಿಯ ಕಲಾ ವಿಮರ್ಶಕರು ಕಲೆಯ ಅಂತರಾರ್ಥದ ಬಗ್ಗೆ ತಮ್ಮ ವ್ಯಾಖ್ಯಾನವನ್ನು ವ್ಯಕ್ತಪಡಿಸುತ್ತಾ ಭಾರತೀಯ ಶೈಲಿಯ ವಿಶೇಷ ಗುಣಗಳನ್ನು ವಿಶ್ಲೇಷಿಸುವುದಕ್ಕೆ ಮೊದಲಾದವರು. ಐರೋಪ್ಯ ರಾಷ್ಟ್ರಗಳಲ್ಲಿ ಶತಮಾನಗಳ ಕಾಲ ತನ್ನ ಪ್ರಭಾವವನ್ನು ಮೆರದ ನೈಜಶೈಲಿಯ ಕೃತಿಗಳ ಸ್ಥಾನದಲ್ಲಿ ಹೊಸ ಆಯಾಮವನ್ನು ಗುರುತಿಸುವ ಸಲುವಾಗಿ ೧೮ನೇ ಶತಮಾನದಿಂದ ೨೦ನೇ ಶತಮಾನದವರೆಗೂ ಕಲಾ ಪ್ರಾವೀಣ್ಯತೆಯಲ್ಲಿ ಕಲಾವಿದರು ಅನೇಕ ಪ್ರಯೋಗಗಳನ್ನು ಮಾಡುತ್ತಿದ್ದರು.

ಕಲಾಕೃತಿಗಳಲ್ಲಿ ಯಥಾವತ್ತಾದ ದೃಗ್ಗೋಚರ (Prespective) ಅರ್ಥಕ್ಕೆ ಭಾರತೀಯ ಕಲಾಕೃತಿಗಳಲ್ಲಿರುವ ಮನೋ ದೃಗ್ಗೋಚರ ಲಕ್ಷಣಗಳು ಕಲಾಪ್ರಪಂಚದಲ್ಲಿ ಅತ್ಯುನ್ನತ ಮಟ್ಟ ಮುಟ್ಟಿದೆಯೆಂದು ಅನೇಕ ವಿಮರ್ಶಕರು ಸಾರಿದರು. ಇದರ ಜೊತೆಗೆ ಕಲೆಯ ಅಲಂಕರಣ ಶೈಲಿಗಳು ಸಹ ಮಹತ್ವಪೂರ್ಣ ಕೊಡುಗೆಯೆಂದು ಕೆಲವರು ಅಭಿಪ್ರಾಯ ವ್ಯಕ್ತಪಡಿಸಿದರು. ಚಿತ್ರಕೃತಿ ರಚನೆ ಮೂರು ಆಯಾಮಗಳಿಗಿಂತ (Three Dimension) ಕೃತಿಗಳು ಅತಿ ಶ್ರೇಷ್ಠವೆಂದು ಮತ್ತೆ ಕೆಲವರು ಈ ಮೇಲ್ಕಂಡ ಹಿನ್ನೆಲೆಯಲ್ಲಿ ಭಾರತೀಯತ್ವದ ಅಂಃಸತ್ವವನ್ನು ಉಳಿಸಿಕೊಂಡು ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರ ರಾಜರು ತಮ್ಮ ಕಾಲದಲ್ಲಿ ಪೋಷಿಸಿಕೊಂಡು ಬಂದ ಶೈಲಿಯ ಆಧಾರದ ಮೇಲೆ ೧೬ನೇ ಶತಮಾನದಿಂದ ೨೦ನೇ ಶತಮಾನದವರೆಗೆ ಮೈಸೂರು ಅರಸರ ವಿಶೇಷ ಆಸಕ್ತಿಯಿಂದ ಅನೇಕ ಕಲಾಕೃತಿಗಳ ರಚನೆಗೆ ನಾಂದಿಯಾಯಿತು. ವಿಜಯನಗರದ

೭ ಪಿ.ಆರ್. ತಿಪ್ಪೇಸ್ವಾಮಿ : ಚಿತ್ರಕಲಾ ಪ್ರಪಂಚ, ಪು.ಸಂ-೨೪೭
ಅದೇ. ಪು.ಸಂ-೨೫೩

ಪತನವಾದ ಮೇಲೆ ಹದಿನಾರನೇ ಶತಮಾನದ ದ್ವಿತೀಯಾರ್ಧದಲ್ಲಿ ಚಿತ್ರಗಾರರು ತಮ್ಮ ಜೀವನೋಪಾಯಕ್ಕಾಗಿ ಮತ್ತು ಕಲಾ ಸಾಂಪ್ರದಾಯಗಳ ಉಳಿವಿಗಾಗಿ ದಕ್ಷಿಣ ರಾಜ್ಯಗಳ ಪಾಳೆಗಾರರು ಹಾಗೂ ರಾಜರುಗಳನ್ನು ಆಶ್ರಯಿಸಬೇಕಾಯಿತು. ಒಂದನೆಯದು ವಿಜಯನಗರದ ಭಾಗವಾಗಿದ್ದು ಮೈಸೂರು ರಾಜ್ಯದ ಅರಸು ಮನೆತನದ ಪೋಷಣೆಯಲ್ಲಿ ಸಹಸ್ರಾರು ಕಲಾಕಾರರಿಗೆ ಉತ್ತೇಜನ ದೊರಕಿ ಅನೇಕ ಕೃತಿಗಳ ರಚನೆಗೆ ಅವಕಾಶವಾಯಿತು. ಎರಡನೆಯದು ತಂಜಾವೂರು ಹಾಗೂ ಅಕ್ಕಪಕ್ಕದ ಸಣ್ಣ ಪಾಳೆಗಾರರ ಆಶ್ರಯಕ್ಕೆ ಸೇರಿದ ಚಿತ್ರಗಾರರು ಕ್ರಮೇಣ ತಂಜಾವೂರಿನ ಶರಭೋಜ ವಂಶಸ್ಥರ ಹೆಚ್ಚಿನ ಉತ್ಸುಕತೆಯಿಂದ ತಂಜಾವೂರು ಶೈಲಿಯ ಬೆಳವಣಿಗೆಗೆ ನಾಂದಿ ಹಾಡಿದರು.

ಚಿತ್ರಗಾರರ ವಂಶ :

'ಸೋಮ ವಂಶ ಕ್ಷತ್ರಿಯರೆಂದು ಪ್ರಸಿದ್ಧಿಗೆ ಬಂದಿರುವ ಚಿತ್ರಗಾರರ ಮನೆತನದವರು ಹಿಂದಿನ ಶತಮಾನಗಳಲ್ಲಿ ಗ್ವಾಲಿಯರ್ ಕಡೆಯಿಂದ ಬಂದವರೆಂದು ಹೇಳಲಾಗಿದೆ. ಇವರು ನಿಮಿಷಾಂಬ ದೇವಿಯ ಭಕ್ತರು. ಈಗ ಮಹಾರಾಷ್ಟ್ರದ ಕೆಲವು ನಗರಗಳಲ್ಲಿ, ಕರ್ನಾಟಕದ ಒಂದೆರಡು ನಗರಗಳಲ್ಲಿ ಮುಖ್ಯವಾಗಿ ಶ್ರೀರಂಗಪಟ್ಟಣದಲ್ಲಿ ನಿಮಿಷಾಂಬ ದೇವಿಯ ದೇವಸ್ಥಾನಗಳು ಸ್ಥಾಪಿತವಾಗಿವೆ. ಸೋಮ ವಂಶ ಕ್ಷತ್ರಿಯ ಕಲಾವಿದರು ರಾಜಾಶ್ರಯದಲ್ಲಿ ಉನ್ನತ ಸ್ಥಾನ ಪಡೆದಿದ್ದುದರಿಂದ ಸಮಾಜದಲ್ಲಿ ಗೌರವವನ್ನು ಪಡೆದಿದ್ದರು ಸಂಶೋಧನೆಯಿಂದ ತಿಳಿಯಬಹುದು.

೧೭-೧೮ನೇ ಶತಮಾನಗಳ ಅವಧಿಯ ಭಾರತದ ಎಲ್ಲಾ ರಾಜ್ಯಗಳಲ್ಲಿ ರಾಜಕೀಯ ಅಸ್ಥಿರತೆ ಮೂಡಿದ ಕಾಲ. ಆದರು ಮೈಸೂರು ಅರಸರು ಮತ್ತು ಅವರ ಕಕ್ಷೆಯಲ್ಲಿದ್ದ ಅನೇಕ ಪಾಳೆಗಾರರು ತಮ್ಮ ಆಸ್ಥಾನಗಳಲ್ಲಿ ಚಿತ್ರಗಾರರು ನಿರಂತರ ಸೌಲಭ್ಯಗಳನ್ನು ಕಲ್ಪಿಸಿಕೊಡುತ್ತಿದ್ದರು. ಇದಕ್ಕನುಗುಣವಾಗಿ ಚಿತ್ರದುರ್ಗದ ಪಾಳೆಗಾರರು ಕಲಾಪೋಷಣೆಗೆ ಹೆಚ್ಚು ಪ್ರೋತ್ಸಾಹ ಕೋಡುತ್ತಿದ್ದರು. ಈ ಶೈಲಿಯ ಅನೇಕ ಚಿತ್ರಗಾರ ಮನೆತನದವರು ಚಿತ್ರದುರ್ಗದ ಮೂಲದವರೆನಿಸಿಕೊಂಡಿದ್ದಾರೆ. ಇದಲ್ಲದೆ ಶಿವಮೊಗ್ಗ ಜಿಲ್ಲೆಯ ನಗರ ಪಾಳೆಗಾರರು ಸಹ ಕಲೆಗೆ ಹೆಚ್ಚು ಪ್ರೋತ್ಸಾಹನೀಡಿದ್ದರು. ಕಲಾಕೃತಿಗಳ ರಚನೆಗೆ ಅವಕಾಶ ಕಲ್ಲಿಸಿದರು. ಚನ್ನಪಟ್ಟಣ, ಆನೆಗೊಂದಿ, ಪೆನುಗೊಂಡ, ಮಧುಗಿರಿ, ಹಾಸನ ಪಾಳೆಗಾರರು ಸಹ ಈ ಕಾರ್ಯದಲ್ಲಿ ಹಿಂದೆ ಬಿಳಲಿಲ್ಲ.

ಕಲಾಕೃತಿಗಳ ರಚನಾ ವಿಧಾನ ಮತ್ತು ಸ್ಫೂರ್ತಿಯ ನೆಲೆ :

ದಕ್ಷಿಣ ಭಾರತದ ಅನೇಕ ದೇವಾಲಯಗಳಲ್ಲಿ ಅರಮನೆಯಲ್ಲಿ ಭಿತ್ತಿಚಿತ್ರ ಪರಂಪರೆ ತನ್ನ ಇತಿಹಾಸವನ್ನು ಸಾರುತ್ತಿವೆ. ಇದರಲ್ಲಿ ಮುಖ್ಯವಾಗಿ ಬಾದಾಮಿಯ ಚಾಲುಕ್ಯರು ಕಾಲದ ಭಿತ್ತಿಚಿತ್ರಗಳು ಅನೇಕ ಕಲಾವಿದರಿಗೆ ಸ್ಪೂರ್ತಿಯನ್ನು ನೀಡಿವೆ. ನಂತರ ಹೋಯ್ಸಳರ ಕಲಾದಲ್ಲಿ ಶಿಲ್ಪಕಲೆಗೆ ಹೆಚ್ಚು ಪ್ರೋತ್ಸಾಹ ದೊರಕಿದ್ದರಿಂದ ಮೂಡಬಿದರೆ, ಹಳೇಬಿಡು ಮತ್ತಿತರ ಸ್ಥಳಗಳಲ್ಲಿ ಮಾತ್ರ ಭಿತ್ತಿಚಿತ್ರಗಳು ಕಾಣಸಿಗುತ್ತವೆ. ಅನಂತರ ತಲೆಯೆತ್ತಿದ ವಿಜಯನಗರ ಸಾಮ್ರಾಜ್ಯದ ಅಡಿಯಲ್ಲಿ ವಿಪುಉತ್ತೇಜನವನ್ನು ಪಡೆದ ಚಿತ್ತಗಾರರು ಅನೇಕ ಕಡೆ ಭಿತ್ತಿಚಿತ್ರಗಳನ್ನು ರಚಿಸಿ ಇತಿಹಾಸವನ್ನು ಸೃಷ್ಟಿಸಿದ್ದಾರೆ.

ಹಂಪಿಯ ವಿರೂಪಾಕ್ಷ ದೇವಸ್ಥಾನ, ಲೇಪಾಕ್ಷೀಯ ವೀರಭದ್ರ ದೇವಾಲಯ, ತಾಡಪತ್ರಿಯ ಅನೇಕ ದೇವಸ್ಥಾನಗಳು, ಹಿರಿಯೂರು, ಸಿರಾ, ಯಡಿಯೂರುಗಳಲ್ಲಿ ಕಾಣಿಸಿಸುವ ಭಿತ್ತಿಚಿತ್ರಗಳು ಉಲ್ಲೇಖಾರ್ಹವಾಗಿವೆ. ಇದಲ್ಲದೆ ವಿಜಯನಗರದ ನಂತರ ಭಿತಿಚಿತ್ರಗಳ ನಿರ್ಮಾಣದಲ್ಲಿ ಉತ್ತರ ಕರ್ನಾಟಕ, ನರಗುಂದ, ನಿಪ್ಪಾಣಿ, ರಾಯಚೂರು, ಸೀಬಿ, ಹರದನಹಳ್ಳೀ, ಮೈಸೂರು, ಶ್ರವಣಬೆಳಗೊಳ ಇಂದಿಗೂ ಕಾಣಸಿಗುತ್ತವೆ. ಈ ಪರಂಪರೆಯ ಹಾದಿಯಲ್ಲಿ ತಂಜಾವೂರು, ಮಧುರೆ, ಪದ್ಮನಾಭಪುರಂ, ಗುರುವಾಯೂರು, ತಿರುವನಂತಪುರ ಭಿತ್ತಿಚಿತ್ರಗಳು ಉತ್ತಮ ಉದಾಹರಣೆಗೆ ಯೋಗ್ಯವಾಗಿದೆ.

ನಾಗರಿಕತೆ ಬೆಳೆದಂತೆ ಅನೇಕ ಅರಮನೆ ಗುರುಮನೆಗಳಲ್ಲದೆ ಸಮಾಜದ ಪ್ರತಿಷ್ಠಿತ ವ್ಯಕ್ತಿಗಳೂ ತಮ್ಮ ಗೋಡೆಗಳ ಮೇಲೆ ದೇವಮಂದಿರಗಳಲ್ಲಿ ಚಿತ್ರಗಳನ್ನು ಇಟ್ಟು ಅಲಂಕರಿಸುವುದು ಪ್ರಾರಂಭವಾಯಿತು. ಕೇವಲ ಮರದ ಹಲಗೆಗಳ ಮೇಲೆ ಚಿತ್ರಗಳನ್ನು ರಚಿಸುತ್ತಿದ್ದ ಕಲಾಕಾರರು ಕ್ರಮೇಣ ಬಟ್ಟೆಯ ಮೇಲೆ ಅನಂತರ ಹಸ್ತನಿರ್ಮಿತ ಕಾಗದದ ಮೇಲೆ ರಚಿಸಲು ಪ್ರಾರಂಭಿಸಿದರು. ಈ ಚಿತ್ರಗಳ ಉತ್ಪಾದನೆಯ ಹಾದಿಯಲ್ಲಿ ೧೯ನೇ ಸತಮಾನದಲ್ಲಿ ದಕ್ಷಿಣ ಭಾರತದಲ್ಲಿ ಬಳಕೆಗೆ ಬಂದ ಗಾಜುಗಳ ಉಪಯೋಗ, ಕಲಾಕೃತಿಗಳನ್ನು ರಚಿಸುವಲ್ಲಿ ಹೆಚ್ಚಿನ ಪ್ರಭಾವ ಬೀರಿತು. ಕೇವಲ ಹಲಗೆ, ಬಟ್ಟೆ ಮತ್ತು ಕಾಗದದ ಮೇಲಿನ ಕಲಾಕೃತಿಗಳನ್ನು ಗಾಜಿನಿಂದ ಸಂರಕ್ಷಿಸುವುದರ ಜೊತೆಗೆ ಗಾಜಿನ ಮೇಲೆ ಹಿಂಭಾಗದ ಮೇಲ್ಮೈಯನ್ನು ಉಪಯೋಗ ಮಾಡಿಕೊಂಡು ಕಲಾಕೃತಿಗಳನ್ನು ರಚಿಸುವ ಕಾರ್ಯವನ್ನು ಪ್ರಾರಂಭಿಸಿದರು. ಬಹುಶ: ಇದೇ ಕಾಲದಲ್ಲಿ ಯೂರೋಪ್ ಮತ್ತು ದೂರಪ್ರಾಚ್ಯ ರಾಷ್ಟ್ರಗಳಲ್ಲಿ ಸಹ ಈ ಪ್ರಯೋಗ ನಡೆಯುತ್ತಿತ್ತು. ದಕ್ಷಿಣ ಭಾರತದಲ್ಲಿ ಈ ಶೈಲಿಯ ಆಗಿನ ಚಿತ್ರಗಳು ಮದ್ರಾಸ್ ಪಟಣಗಳೆಂದು ಹೆಸರುವಾಸಿಯಾಗಿದೆ.

ಕಲಾಕೃತಿಗಳ ವಸ್ತು :

ಸಾಮಾನ್ಯವಾಗಿ ಚಿತ್ರಕಾರರು ತಮ್ಮ ಕೃತಿಗಳಿಗೆ ವಸ್ತುಗಳನ್ನು ಆರಿಸಿಕೊಳ್ಳುವಾಗ ಸಮಾಜದ ಭಾವನೆಗಳು ಹಾಗೂ ಬೇಡಿಕೆಗಳನ್ನು ಗಮನಿಸಬೇಕಾಗುತ್ತದೆ. ಇದು ಎಲ್ಲಾ ರಾಷ್ಟ್ರಗಳ, ಎಲ್ಲಾ ಕಾಲದ ಪರಿಸ್ಥಿತಿ. ಮೈಸೂರು ಶೈಲಿಯ ಚಿತ್ರಕಾರರು ಅರಮನೆ ಗುರುಮನೆಗಳ ಆಶ್ರಯದಲ್ಲಿ ಬೆಳೆದುಬಂದವರು. ಇವರು ತಮ್ಮ ಪ್ರಭುಗಳಿಗೆ ಬೇಕಾದ ವಿಷಯಗಳನ್ನು ಕುರಿತಾದ ಕೃತಿಗಳನ್ನು ರಚಿಸಿ ಅವರಿಂದ ಒಪ್ಪಿಗೆ ಪಡೆಯುವುದರಿಂದ ಕೃತ್ಯರಾಗುತ್ತಿದ್ದರು. ಅದರಂತೆ ನಮ್ಮ ಚಿತ್ರಕಾರರು ಪುರಾಣ, ಪುಣ್ಯ ಕಥೆಗಳ ಆಧಾರದ ಮೇಲೆ ತಮ್ಮ ಕೃತಿಗಳನ್ನು ರಚಿಸುತ್ತಿದ್ದರು. ಇದರಲ್ಲಿ ರಾಮಾಯಣ, ಮಹಾಭಾರತ, ದೇವಿ–ದೇವತಾ, ಪುರಾಣಗಳಲ್ಲಿ ಇರುವಂತಹ ಕಥಾ ವಿವರಗಳಿಗನುಣವಾಗಿ ಕಲಾಕೃತಿಗಳನ್ನು ರಚಿಸುತ್ತಿದ್ದರು.

೧೯ನೇ ಶತಮಾನದಿಂದೀಚೆಗೆ ಇದೇ ಸಾಂಪ್ರದಾಯದಲ್ಲಿ ಚಾರಿತ್ರಿಕ ವಿಷಯಗಳನ್ನು ಸಹ ಚಿತ್ರಕೃತಿ ರಚನೆಯಲ್ಲಿ ಬಳಸಿಕೊಂಡರು. ಇದೇ ಶತಮಾನದಲ್ಲಿ ಬ್ರಿಟಿಷರ ಆಡಳಿತ ಶುರುವಾದ

ನಂತರ ವ್ಯಕ್ತಿ ಭಾವಚಿತ್ರ ಪರಂಪರೆ ಆರಂಭವಾಯಿತೆನ್ನಬಹುದು. ಈ ಪಾಶ್ಚಿಮಾತ್ಯ ಪದ್ಧತಿಯ ಕೃತಿಗಳಲ್ಲಿ ಸಹ ನಮ್ಮ ಕಲಾವಿದರು ಅತ್ಯುತ್ತಮ ತಾಂತ್ರಿಕ ಸಿದ್ಧಿಯನ್ನು ಮೆರೆದಿದ್ದಾರೆ.

ಗ್ರಂಥಗಳ ಸ್ಫೂರ್ತಿ ಮತ್ತು ಆಧಾರಗಳು :

ಪ್ರಾಗೈತಿಹಾಸಿಕ ಕಾಲದಿಂದ ಚಿತ್ರಕಲೆಗೆ ಮಾನ್ಯತೆಯನ್ನು ಕೊಟ್ಟಿದ್ದಾರೆ. ಇತಿಹಾಸದಲ್ಲಿ ಲಭ್ಯವಿರುವ ಏಳನೇ ಶತಮಾನದ ವಿಷ್ಣುಧರ್ಮೋತ್ತರ ಪುರಾಣ, ೧೨ನೇ ಶತಮಾನದ ಸೋಮೇಶ್ವರನ 'ಅಭಿಲಾಷಿತಾರ್ಥ ಚಿಂತಾಮಣಿ', ಜೈನಧರ್ಮದ 'ಧವಳ', 'ಮಹಾಧವಳ' ಹಾಗೂ 'ಜಯಧವಳ' ಗ್ರಂಥಗಳು ಮತ್ತು 'ಮಾನ್ಸೋಲ್ಲಾಸ' ಕೃತಿಗಳು ಇಂದೂ ಚಿತ್ರಕಲೆಯ ಲಕ್ಷಣಗಳಿಗೆ ಆಧಾರವಾಗಿದೆ. ಇವಲ್ಲದೆ ೧೭ನೇ ಶತಮಾನದ ಇಮ್ಮಡಿ ಬಸಪ್ಪ ನಾಯಕನಿಂದ ರಚಿತವಾದ 'ಶಿವತತ್ವ ರತ್ನಾಕರ' ಎರಡು ಕೃತಿಯ ಆರನೆಯ ಕಲ್ಲೋಲದ ಎರಡನೇ ತರಂಗದಲ್ಲಿ 'ಚಿತ್ರಕ' (ಚಿತ್ರಕಾರ) ಕುರಿತಾದ ವಿವರಣೆ ಇದೆ. ೧೯ನೇ ಶತಮಾನದಲ್ಲಿ ಮೈಸೂರು ಅರಸರಾದ ಶ್ರೀ ಮುಮ್ಮಡಿ ಕೃಷ್ಣರಾಜರು ಎರಡು ಉನ್ನತ ಕೃತಿಗಳನ್ನು ಸಂಪಾದಿಸಿದರು. ಅದರಲ್ಲಿ 'ಸಾರಸಂಗ್ರಹ ಭರತ' ಮತ್ತು 'ಶ್ರೀತತ್ವನಿಧಿ' ಗ್ರಂಥಗಳು ಚಿತ್ರಕಲಾ ಕ್ಷೇತ್ರದಲ್ಲಿ ವಿಶೇಷ ಅರ್ಹತೆಯನ್ನು ಪಡೆದಿದೆ.

ಹಿಂದಿನ ತಲೆಮಾರಿನ ಕೆಲವು ಚಿತ್ರಕಾರರು :

ಅಜಂತಾ ಭಿತ್ತಿಚಿತ್ರಗಳ ಕಾಲದಿಂದಲೂ ೧೯ನೇ ಶತಮಾನದವರೆಗೆ ಬಹುತೇಕ ಚಿತ್ರಕಾರರು ಕಲಾಕೃತಿಗಳ ಕೃತಿಕಾರನಾಗಿ ತಮ್ಮ ಹೆಸರನ್ನು ಬರೆಯುತ್ತಿರಲಿಲ್ಲಾ. ತನ್ನ ಕೃತಿಯನ್ನು ಭಕ್ತಿ ಪರಂಪರೆಯ ಹಾದಿಯಲ್ಲಿ ರಚಿಸಿ ದೇವರಿಗೆ ಅರ್ಪಿಸಿ ತನ್ನ ಪ್ರಭುಗಳಿಗೆ ನಿವೇದಿಸುತ್ತಿದ್ದದ್ದು ಚಿತ್ರಕಾರನ ಅಭ್ಯಾಸವಾಗಿದ್ದಿತು. ಇದರಿಂದ ಅನೇಕ ಭಿತ್ತಿಚಿತ ಮತ್ತು ಕಲಾಕೃತಿಗಳಲ್ಲಿ ಚಿತ್ರಗಾರರ ಹೆಸರು ಸಿಗುವುದು ದುರ್ಲಭ, ಆದರೆ ೧೯ನೇ ಶತಮಾನದಲ್ಲಿ ಮೈಸೂರು ಅರಸರ ಆಶ್ರಯದಲ್ಲಿ ಬೆಳೆದ ಕೆಲವು ಚಿತ್ರಗಾರರು ತಮ್ಮ ಹೆಸರುಗಳನ್ನು ನಮೂದಿಸಿದ್ದಾರೆ. ಅವರಲ್ಲಿ ಅವಧೂತ ಪಾಪಣ್ಣ, ಕವಕೃಷ್ಣ, ಗೋಪಾಲಯ್ಯ, ಚೆನ್ನಕೃಷ್ಣ, ತಿಮ್ಮರಾಯಪ್ಪ, ಮೇಸ್ತ್ರಿ ಲಕ್ಷ್ಮಯ್ಯ, ರಂಗಯ್ಯ ಮೋಕ್ತೇಸರ ತಿಪ್ಪಣ್ಣ, ಯಲ್ಲೈಯ್ಯ, ರಂಗಯ್ಯ, ರಾಮಾಂಜಿ, ವೀರಣ್ಣ, ವೆಂಕಟಸುಬ್ಬ, ಸೀತಾರಾಮಯ್ಯ, ಸುರಪುರದ ಶಂಕರ ಉಲ್ಲೇಖಾರ್ಹರು. ಅತ್ಯಂತ ಉತ್ತಮ ಕೃತಿಗಳನ್ನು ರಚಿಸಿದ ಜಾವಗಲ್ ನರಸಿಂಹಯ್ಯ ಮತ್ತು ಶಿಕಾರಿಪುರದ ತಿಪ್ಪಾಜಿ ಚಿತ್ರಗಾರ್‌ರವರು ಕಲಾ ಪ್ರಪಂಚಕ್ಕೆ ಅದ್ವಿತೀಯ ಕೊಡುಗೆ ನೀಡಿದ್ದಾರೆ. ವಿಶ್ವವಿಖ್ಯಾತ ಕಲಾವಿದ ಕೆ. ವೆಂಕಟಪ್ಪನವರ ತಂದೆ ದುರ್ಗದ ಕೃಷ್ಣಪ್ಪನವರು ಹಾಗೂ ಮಧುಗಿರಿ ಲಿಂಗಪ್ಪನವರು ಅನೇಕ ಉತ್ತಮ ಕಲಾ ಕೃತಿಗಳನ್ನು ರಚಿಸಿದ್ದಾರೆ.

ಸಮಕಾಲಿನ ಕಲಾವಿದರು :

ಸೋಮವಂಶದ ಕ್ಷತ್ರಿಯ ವಂಶದಲ್ಲಿ ಚಿತ್ರಗಾರ ಮನೆತನದವರು ಈ ಶತಮಾನದಲ್ಲಿ ತಮ್ಮ ಕಾರ್ಯವನ್ನು ಮುಂದುವರೆಸಿದ್ದಾರೆ. ಅದರಲ್ಲಿ ಶ್ರೀ ವೈ. ಸುಬ್ರಹ್ಮಣ್ಯರಾಜು ಮತ್ತು ಅವರ ಮಕ್ಕಳಾದ ಶ್ರೀ ವಿಶ್ವೇಶ್ವರರಾಜು, ಶ್ರೀ ಕೃಷ್ಣಾನಂದರಾಜು ಹಾಗೂ ಮೊಮ್ಮಕ್ಕಳಾದ ರಾಜವೀರ್ ಹಾಗೂ

ರಾಣಿರೇಖ ಹೂಸ ಪೀಳಿಗೆಗೆ ನಾಂದಿಯಾಗಿದ್ದಾರೆ. ಓ. ನರಸೀಪುರದ ಶ್ರೀ ಕೆ. ವೆಂಕಟರಾಮು ಮತ್ತು ಅವರ ಮಕ್ಕಳು ಪರಂಪರೆಯನ್ನು ಮುಂದುವರೆಸುತ್ತಿದ್ದಾರೆ.

ಇದಲ್ಲದೆ ಮೈಸೂರು ಸಾಂಪ್ರದಾಯ ಶೈಲಿಯನ್ನು ತಮ್ಮದಾಗಿಸಿಕೊಂಡ ಮೈಸೂರಿನ ಶ್ರೀ ರಾಮನರಸಯ್ಯ ಬೆಂಗಳೂರಿನ ಯುವ ಪರಂಪರೆಗೆ ಸೇರಿದ ಶ್ರೀಮತಿ ನೀಲಾಪಂಚ್, ವಿನೋದ, ಪದ್ಮಾಹಬ್ಲಿಕರ್, ಸುಶೀಲಾದೇವಿ, ಹೇಮಲತಾ, ಪ್ರಭಾಮಲ್ಲೇಶ್, ಉಷಾರಾಜ, ರೇಣುಕಾ ಮತ್ತು ಶ್ರೀಯುತರಾದ ಅಪ್ಪಾಜಯ್ಯ, ಶ್ರೀನಿವಾಸಚಾರ್ಯ, ಕುಲಕರ್ಣಿ, ಟಿ.ಡಿ ಸುರೇಶ್ ಈ ಶೈಲಿಯ ಹೊಸ ರೂವಾರಿಗಳಾಗಿದ್ದಾರೆ. ಚಿತ್ರಕಲಾ ಪರಿಷತ್ತಿನಲ್ಲಿ ಶಿಕ್ಷಣ ಪಡೆದ ಶ್ರೀಮತಿ ಸರಸ್ವತಿ ಬಸವರಾಜ್‌ರವರು ಈಗ ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿ ಈ ಶೈಲಿಯ ಕೃತಿಕರರಾಗಿ ನೆಲೆಸಿದ್ದಾರೆ.

ಪ್ರಸ್ತುತ ಮೈಸೂರು ಶೈಲಿಯ ಚಿತ್ರಕಲೆಯು ವಿಶ್ವವಿಖ್ಯಾತಿ ಪಡೆದವು ಹೀಗಾಗಿ ರಾಜ್ಯ ಮತ್ತು ಹೊರರಾಜ್ಯದಲ್ಲಿ ಈ ಸಾಂಪ್ರದಾಯಿಕ ಶೈಲಿಯನ್ನು ಮುಂದುವರಿಸಿಕೊಂಡು ಬರುವ ಕಲಾವಿದರ ಸಂಖ್ಯೆ ಹೆಚ್ಚಾಗಿದೆ, ಅದಲ್ಲದೆ ಹವ್ಯಾಸಿ ಕಲಾವಿದರ ಸಂಖ್ಯೆಯು ಹೇರಳವಾಗಿದ್ದು. ಇದು ಅನೇಕ ಜನ ಕಲಾವಿದರಿಗೆ ಜೀವನೊಪಾಯಗಿಕೊಂಡು ಬಂದರೆ ಇದ್ದು ಕಲಾವಿದರಿಗೆ ಹವ್ಯಾಸದ ಹಿನ್ನೆಲೆಯಲ್ಲಿ ಬೆಳೆಯುತ್ತಿರುವುದನ್ನು ಕಾಣುತ್ತವೆ.

ಕಲಾಕೃತಿಗಳ ರಚನಾ ವಿಧಾನ :

'ಸಾಂಪ್ರದಾಯಿಕ ಚಿತ್ರಗಳ ರಚನಾ ವಿಧಾನದಲ್ಲಿ ಕೆಲವು ಸ್ಥಳೀಯ ತಾಂತ್ರಿಕತೆಯ ಕೃತಿಗಳ ಪ್ರಾವೀಣ್ಯತೆಗೆ ಇಂಬು ಕೊಟ್ಟವೆ. ಮೈಸೂರು ಹಾಗೂ ತಂಜಾವೂರು ಶೈಲಿಗಳ ಮುಖ್ಯ ವ್ಯತ್ಯಾಸಗಳನ್ನು ಈ ಮೂಲಕ ಗುರುತಿಸಬಹುದಾಗಿದೆ. ಚಿತ್ರಗಳನ್ನು ಹಿಂದೆ ಮರದ ಹಲಗೆ ಮೇಲೆ ರಚಿಸುತ್ತಿದ್ದರು. ನಂತರ ಕೈಕಾಗದ ಮೇಲೆ ರಚಿಸಲು ಪ್ರಾರಂಭಿಸಿದರು, ಇನ್ನು ವಿವಿಧ ಮಾಧ್ಯಮಗಳಲ್ಲಿ ರಚಿಸಿರುವುದನ್ನು ಕಾಣಬಹುದು.

ಮೊದಲು ಮರದ ಫಲಕವಾಲಿ, ಕಾಗದವಾಗಲಿ ನಂತರ ಸೀಸದ ಕಡ್ಡಿ ಅಥವಾ ಕುಂಚದಿಂದ ರೇಖೆಗಳನ್ನು ರಚಿಸುತ್ತಿದ್ದರು. ಹಿನ್ನೆಲೆಯ ವರ್ಣಗಳನ್ನು ತುಂಬಿದ ಮೇಲೆ ವಿಷಯದ ತಳಹದಿಯ ಮೇಲೆ ವರ್ಣಗಳ ವಿಂಗಡಣೆಯನ್ನು ಊಹಿಸಿಕೋಳ್ಳುತ್ತಿದ್ದರು. ಮುಖ್ಯ ವಸ್ತುವಿಗೆ ಅಲಂಕರಣ ವಿಧಾನವನ್ನು ಕಲಾವಿದರ ಸ್ಫೂರ್ತಿಗನುಗುಣವಾಗಿ ಪರಿಭಾವಿಸಿಕೋಳ್ಳುತ್ತಿದ್ದರು.

ಉಬ್ಬೆತ್ತಿನ (ಜೆಸೊ) ಕೆಲಸವನ್ನು ಕುಂಚದ ಸಹಾಯದಿಂದ ನಿರ್ಮಿಸಿಕೊಳ್ಳುತ್ತಿದ್ದರು. ಉಬ್ಬಿನ ಕೆಲಸಕ್ಕೆ ರೇವಣಚಿನ್ನಿ ಹಾಲು, ಸಫೇದ ಹಾಗೂ ಮರವಜ್ರದ ಮಿಶ್ರಣವನ್ನು ಚೆನ್ನಾಗಿ ಅರೆದು ಮುಲಾಮನ್ನು ತಯಾರಿಸಿಕೊಳ್ಳುತ್ತಾರೆ. ಈ ಭಾಗ ಒಣಗಿಸಿದ ನಂತರ ಬಂಗಾರದ ಲೀಫ್‌ಯನ್ನು ಅಂಟಿಸುವ ಭಾಗಕ್ಕೆ ಬೆಲ್ಲದ ನೀರನ್ನು ಸವರುತ್ತಾರೆ. ಬೆಳಗಿನ ಜಾವದಲ್ಲಿ ಚಿತ್ರದ ಫಲಕವನ್ನು ಮಾಳಿಗೆ ಮೇಲೆ ಹಿಮ ಬೀಳುವಂತೆ ಸುಮಾರು ಒಂದು ಗಂಟೆಯ ಕಾಲ ಇರಿಸುತ್ತಾರೆ. ಬಿಸಿಲು ಜಾಸ್ತಿಯಾಗುವ ಮೊದಲು ಬಂಗಾರದ ಲೀಫ್‌ಯನ್ನು ಚಿತ್ರದಲ್ಲಿನ ಬೇಕಾದ ಭಾಗಕ್ಕೆ ಅಂಟಿಸುತ್ತಾರೆ.

ಈ ಕ್ರಿಯೆಗೆ ಗಾಳಿ ಕಡಿಮೆ ಇರುವ ಬೆಳಗಿನ ಸಮಯ ಸೂಕ್ತ. ಬಂಗಾರದ ಲೀಫ್‌ಯನ್ನು ಶುದ್ಧ ಅಪರಂಜಿಯಿಂದ ತಯಾರಿಸಿದ ಅತ್ಯಂತ ತೆಳುವಾದ ಹಾಳೆಯೆನ್ನಬಹುದು. ಬಂಗಾರದ ಲೀಫ್ ಅಂಟಿಸಿದ ಮೇಲೆ ಇತರ ವರ್ಣಳಿಂದ ಅದರ ಮೇಲೆ ಗೆರೆಗಳನ್ನು ಎಳೆಯುವುದಕ್ಕೆ ಮೊದಲು ಅಂಟವಾಳದ ಕಾಯಿಯ ನೀರನ್ನು ಸವರಬೇಕಾಗುವುದು.

ಇದೇ ರೀತಿಯ ಉಬ್ಬೆತ್ತಿನ ತಂಜಾವೂರು ಚಿತ್ರಕಾರರು ಹುಣಸಿನ ಬೀಜದ ಸರಿ ಮತ್ತು ಹಸಿ ಸುಣ್ಣದ ಪುಡಿಯ ಮಿಶ್ರಣದಿಂದ ಮುಲಾಮನ್ನು ನಿರ್ಮಿಸಿಕೊಳ್ಳುತ್ತಾರೆ. ನಂತರ ಬಂಗಾರದ ಹೋಳಪು ಮಾಡಿದ ಬೆಳ್ಳಿ ಲೀಫ್‌ಗಳನ್ನು ಅಂಟಿಸಿ ಗಜ್ಜುಗದಿಂದ ಆ ಭಾಗಗಳನ್ನು ಉಜಿ ಹೋಳಪು ಬರುವಂತೆ ಮಾಡುತ್ತಾರೆ.

ಚಿತ್ರಗಳ ವಿಷಯ ಬಳಕೆಯಲ್ಲಿ ಮೈಸೂರು ಶೈಲಿಯ ಕೃತಿಗಳಲ್ಲಿ ಪುರಾಣ ಇತಿಹಾಸಗಳಿಗೆ ಸೇರಿದ ಅಸಂಖ್ಯಾತ ವಿಷಯಗಳನ್ನು ಬಳಸಿದ್ದಾರೆ. ಈ ಶೈಲಿಯಲ್ಲಿ ರೇಖೆಗಳು ಹಾಗೂ ಅಲಂಕರಣ ಭಾಗಗಳು ಚುಕ್ಕಾಣಿ ಚಿತ್ರಗಳ ಸಾಲಿನಲ್ಲಿ ಅದ್ವಿತೀಯವಾಗಿದೆ. ಆದರೆ ತಂಜಾವೂರು ಚಿತ್ರಗಳ ಬಾಲಕೃಷ್ಣಾ, ರಾಮಪಟ್ಟಾಭಿಷೇಕ, ವಿಠೋಬಾ, ಕೋದಂಡರಾಮ, ಸಂತ ರಾಮದಾಸ್, ಲಕ್ಷ್ಮಿ ವೆಂಕಟರಮಣಸ್ವಾಮಿ, ರಂಗನಾಥಸ್ವಾಮಿ ಮತ್ತಿತರ ಕೆಲವೇ ವಿಷಯಗಳಿಗೆ ಸೀಮಿತವಾಗಿದೆ"[೮].

ಚಿತ್ರಗಳ ಮಹತ್ವ :

'೧೯೩೦ಕ್ಕಿಂತ ಹಿಂದೆ ಮೈಸೂರು ಸಾಂಪ್ರದಾಯಿಕ ಚಿತ್ರಗಳ ತಯಾರಿಕೆಯಲ್ಲಿ ಚಿತ್ರಕಾರನ್ನು ತಾನೇ ಸ್ವತಹ ವರ್ಣಗಳನ್ನು ತಯಾರಿಸುವ ಪರಿಪಾಠವಿದ್ದಿತು. ಖನಿಜಗಳಿಂದ ಮತ್ತು ಧಾತುಗಳಿಂದ ವರ್ಣಗಳನ್ನು ತಯಾರಿಸುವ ತಾಂತ್ರಿಕ ಕೌಶಲ್ಯ ನಮ್ಮ ಹಿಂದಿನ ತಲೆಮಾರಿನ ಕಲಾಕಾರರಿಗೆ ಕರಗತವಾಗಿದ್ದಿತು.

ಸಾಂಪ್ರದಾಯಿಕ ಚಿತ್ರಗಳಲ್ಲಿ ರೇಖೆಯ ಅತ್ಯಂತ ಮಹತ್ವಾಗಿದೆ. ಕೆಲವೇ ವರ್ಣಗಳ ಬಳಕೆಯಿಂದ ಕಲಾವಿದರು ಉತ್ತಮ ವರ್ಣ ಸಂಯೋಜನೆಯನ್ನು ಮಾಡಿದ್ದಾರೆ. ಭಾಗಗಳನ್ನು ಆಯಾ ಪಾತ್ರಗಳಿಗನುಗುಣವಾಗಿ ತುಂಬಿದ್ದಾರೆ. ಸಂಯೋಜನ ಚಿತ್ರಗಳಲ್ಲಿ ಪ್ರತಿಪಾದಿಸುವ ಸ್ಥಳದ ಉಪಯೋಗವನ್ನು ಉನ್ನತ ಮಟ್ಟದಲ್ಲಿ ವಿಂಗಡಿಸಿಕೊಂಡಿದ್ದಾರೆ. ಆಯಾ ಪಾತ್ರಗಳಿಗನುಗುಣವಾಗಿ ಪ್ರಾಮುಖ್ಯತೆ ಕೊಡುವ ಸಲುವಾಗಿ ಅಳತೆಯನ್ನು ಮಾರ್ಪಾಟು ಮಾಡಿಕೊಂಡಿದ್ದಾರೆ. ಇವೆಲ್ಲಕ್ಕಿಂತ ಮಿಗಿಲಾಗಿ ಚಿತ್ರವು ತಯಾರಾದ ನಂತರ ಪ್ರೇಕ್ಷಕನಿಗೆ ಆನಂದವನ್ನು ಉಂಟುಮಾಡುವ ಯಶಸ್ಸನ್ನು ಪಡೆದಿದ್ದಾರೆ'[೮]. ಜೊತೆಗೆ ದೇವಾನುದೇವತೆಗಳಿಗೆ ಇರಬೇಕಾದ ಅತಿಮಾನದ ಭಾವಗಳನ್ನು ಬಿಂಬಿಸುವುದರಲ್ಲಿ ಯಶಸ್ವಿಯಾಗಿದ್ದಾರೆ ಎಂದು ಕಲಾಕೃತಿಗಳಲ್ಲಿ ಸಂಶೋಧನೆಯ ಮೂಲಕ ಕಾಣಬಹುದು.

೮. ಪಿ.ಆರ್. ತಿಪ್ಪೇಸ್ವಾಮಿ : ಚಿತ್ರಕಲಾ ಪ್ರಪಂಚ, ಪು.ಸಂ-೨೫೪

ಕುಂಚಗಳ ತಯಾರಿಕೆ :

'ಸಾಂಪ್ರದಾಯಕ ಚಿತ್ರಕಾರರು ಪ್ರಾಚೀನ ಕಾಲದಿಂದ ತಮ್ಮ ಕುಂಚಗಳನ್ನು ಅತ್ಯಂತ ಉಪಯುಕ್ತ ರೀತಿಯಲ್ಲಿ ತಯಾರಿಸಿಕೊಳ್ಳುತ್ತಿದ್ದರು. ಈ ಕುಂಚಗಳಿಗೆ ಅಳಿಲು ಕೂದಲನ್ನು ಉಪಯೋಗಿಸುತ್ತಿದ್ದರು. ಬಿದಿರು ಅಥವಾ ಸೂಕ್ತವಾದ ಮರದ ಕಡ್ಡಿಗಳನ್ನು ಕುಂಚಗಳಿಗೆ ತಕ್ಕಗಾಗಿ ತಯಾರಿಸಿಕೊಳ್ಳುತ್ತಿದ್ದರು. ನಂತರ ಮೇಣ ಸವರಿದ ದಾರದಿಂದ ಅಳಿಲು ರೋಮಗಳನ್ನು ಕಡ್ಡಿಯ ಕೊನೆಗೆ ಅಳವಡಿಸಿಕೊಂಡು ಅದರ ಮೇಲೆ ದಾರವನ್ನು ಸುತ್ತಿ ರೋಮಗಳನ್ನು ಚಿತ್ರರಚನೆಗೆ ಹೊಂದುವಂತೆ ಮಾಡಿಕೊಳ್ಳುತ್ತಿದ್ದರು. ಈ ಕುಂಚಗಳ ವಿಶೇಷವೆಂದರೆ ತನ್ನ ಒಡಲಿನಲ್ಲಿ ವರ್ಣದ ಮಿಶ್ರಣವನ್ನು ಹೆಚ್ಚಿನ ಪ್ರಮಾಣದಲ್ಲೂ ಕೂಡಿಟ್ಟುಕೊಳ್ಳಬಹುದು. ಕಲಾವಿದನು ರೇಖೆಗಳನ್ನಾಗಲಿ ಅಥವಾ ಮೇಲ್ಮೈ ಜಾಗದಲ್ಲಿ ವರ್ಣವನ್ನು ಹಚ್ಚುವುದಕ್ಕೆ ಉಪಯುಕ್ತವಾಗಿರುತ್ತದೆ'[೯]. ಕುಂಚದ ಕೊನೆಯಲ್ಲಿ ಅತಿ ಸೂಕ್ಷ್ಮ ಅಂಚನ್ನು ತನ್ನಷ್ಟಕೆ ತಾನೇ ಹೊಂದಿರುವುದು ಅತಿ ಅವಶ್ಯಕವಾದ ವಿಚಾರವಾಗಿದೆ ಎಂದು ಕಲಾವಿದರು ಹೇಳುತ್ತಾರೆ.

ಪ್ರಮುಖ ಲಕ್ಷಣಗಳು :

- ಧಾರ್ಮಿಕ ಕಥೆಗಳನ್ನಾಧರಿಸಿದ ಚಿತ್ರಗಳು ಈ ಚಿತ್ರಕಲೆಯಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಕೃಷ್ಣನ ಲೀಲೆಗಳು ಅತಿ ಹೆಚ್ಚು ಜನಪ್ರಿಯವಾಗಿದ್ದವು. ರಾಮನ ಪಟ್ಟಾಭಿಷೇಕ, ಶ್ರೀರಾಮದರ್ಶನ, ವೆಂಕಟೇಶ್ವರ, ಸರಸ್ವತಿ, ಚಾಮುಂಡೇಶ್ವರಿ, ಗಣೇಶ ಮುಂತಾದ ಚಿತ್ರಗಳು ಈ ಕಲೆಯಲ್ಲಿ ಹೆಚ್ಚು ಚಿತ್ರಿಸಿದಾರೆ.
- ಮೈಸೂರು ಸಾಂಪ್ರದಾಯಿಕ ಕಲಾಕೃತಿಯಲ್ಲಿ ಮುದ್ದ ಮುದ್ದಾಗಿ ದುಂಡಾಕಾರ ಆಕೃತಿಗಳನ್ನು ನೋಡಬಹುದು.
- ದೇವ-ದೇವತೆಯರನ್ನು ಚಿತ್ರಿಸುವಲ್ಲಿ ದಕ್ಷಿಣ ಭಾರತದ ಅನೇಕ ದೇವಾಲಯಗಳಲ್ಲಿ ಅರಮನೆಯಲ್ಲಿ ಭಿತ್ತಿಚಿತ್ರಗಳ ಮತ್ತು ಗ್ರಂಥಗಳ ಸ್ಫೂರ್ತಿ ಮಾದರಿಯನ್ನಾಗಿ ಬಳಸಿರಬಹುದಾದ ಸಾದ್ಯತೆಗಳಿವೆ. ಭಿತ್ತಿಚಿತ್ರಗಳಲ್ಲಿ ದೇವತೆಗಳು ಹಿಡಿದಿರುವ ಆಯುಧಗಳು, ಆಭರಣಗಳು ಈ ಚಿತ್ರಗಳಲ್ಲಿ ಯಥಾವತ್ತಾಗಿ ಕಂಡುಬರುತ್ತವೆ.
- ಆಕೃತಿಗಳ ಬಾಹ್ಯ ರೇಖೆಗಳು ಅತಿ ದಪ್ಪದಾ ರೇಖೆಗಳಿಂದ ಕೂಡಿವೆ, ಸಂಯೋಜನೆಗೆ ಹೆಚ್ಚು ಮಹತ್ವ ನೀಡಲಾಗಿದೆ.
- ಈ ಕಲೆಯಲ್ಲಿ ಭಾರತದಲ್ಲಿ ಪ್ರಚಲಿತವಿದ್ದ ಸೌಮ್ಯ ವರ್ಣಗಳಾದ ಹಸಿರು, ಕೇಸರಿ, ಹಳದಿ, ತಿಳಿ ನೀಲಿ, ಜಾಂಬಳಿ, ಮತ್ತು ಬಿಳಿ ವರ್ಣಗಳನ್ನು ಹೆಚ್ಚಾಗಿ ಬಳಸುತ್ತಾರೆ.
- ಧೋತಿ, ಅಂಗವಸ್ತ್ರಗಳು ಪುರುಷರು ಧರಿಸಿರುವ ಉಡುಪುಗಳಾದರೆ, ಸ್ತ್ರೀಯರು ಒಡೆಯರ ಸ್ತ್ರೀಯರು ಧರಿಸುವ ಶೈಲಿಯಲ್ಲಿ ಸೀರೆ ಧರಿಸಿರುವರು.

೯. ಆರ್.ನಂ: ೩೦೫೩೧೬೪೧೨೮೪೪ : ಮೈಸೂರಿನ ಚಿತ್ರಕಲೆ ಪರಂಪರೆ, (ಅ.ಪ್ರ, ಕಿ.ಪ್ರ) ಪು.ಸಂ-೪೨.

- ಚಿತ್ರದಲ್ಲಿಯ ಕಟ್ಟಡಗಳು ವಿಜಯನಗರ ಮತ್ತು ಮೈಸೂರು ಒಡೆಯರ್ ವಾಸ್ತುಶೈಲಿಯಲ್ಲಿ ಕಂಡುಬರುತ್ತದೆ. ಈ ಮಿಶ್ರ ಶೈಲಿಯ ಕಟ್ಟಡಗಳು ವಿಜಯನಗರರೋತ್ತರ ಕಾಲದಲ್ಲಿ ಪ್ರಚಲಿತವಿದ್ದವು. ಕಲಾವಿದರು ತಮ್ಮ ಚಿತ್ರಗಳಲ್ಲಿ ಈ ಕಟ್ಟಡಗಳನ್ನು ಮಾದರಿಗಳನ್ನಾಗಿ ಬಳಸಿದ್ದಾರೆ.
- ಮೈಸೂರು ಚಿತ್ರಗಳಲ್ಲಿ ಮುತ್ತು, ರತ್ನ, ಬೆಳಿ ಮತ್ತು ಚಿನ್ನದ ಲೇಪನ ಪ್ರಸಿದ್ಧವಾಗಿದೆ. ಇದು ಆಭರಣ, ಮುಕುಟ, ವಿನ್ಯಾಸ ಮತ್ತು ಕಮಾನು ಇತ್ಯಾದಿಗಳಿಲ್ಲಿ ಕಂಡುಬರುತ್ತದೆ. ಚಿನ್ನದ ಲೇಪನ ಈ ಚಿತ್ರಗಳಲ್ಲಿ ದಪ್ಪವಾಗಿ ಬಳಸಲಾಗಿದೆ. ವರ್ಣಗಳ ಜೊತೆಗೆ ಸರಿಸಮಾನವಾಗಿ ಕಂಡುಬರುವುದಿಲ್ಲಾ.
- ಪ್ರಮುಖವಾಗಿ ಕಲಾಕೃತಿಯಲ್ಲಿ ಮುಖದಲ್ಲಿ ಗದ ಭಾಗ, ಕಣ್ಣು ಅಗಲವಾಗಿ, ಮುಗುಳ ನಗೆ ಮೂಗುತ್ತಿ ಕಂಡುಬರುತ್ತದೆ.
- ಮೈಸೂರು ಸಾಂಪ್ರದಾಯಿಕ ಚಿತ್ರಗಳಲ್ಲಿ ನಿರ್ಸಗದ ಹೂ, ಎಲೆ, ಗಿಡ, ಪ್ರಾಣಿ, ಪಕ್ಷಿಗಳ, ಗಡೀಯಾರ, ತಟ್ಟೆಗಳು, ದೀಪಗಳು ಮತ್ತು ಸಿಂಹಾಸನಗಳನ್ನು ವಿಶೇಷವಾಗಿ ನೋಡಬಹುದು.

ಅರಸರ ಕಾಲದ ಚಿತ್ರಕಲೆ ಕುರಿತು :

ಮುಮ್ಮಡಿಯವರು ಕಲಾರಸಿಕರು ಸಂಗೀತ, ನೃತ್ಯಗಳಂತೆ ಚಿತ್ರ ಶಿಲ್ಪಕಲೆಗಳಲ್ಲೂ ಅವರದ್ದು ನೈತವಾದ ಆಸಕ್ತಿ. ಚಿತ್ರಕಲೆಗಂತೂ ಅವರು ನೀಡಿದ ಪ್ರೋತ್ಸಾಹ ಹೆಚ್ಚಿನದು. ಅವರ ಹತ್ತಿರದ ಆಶ್ರಿತರಲ್ಲಿ ಜಾವಗಲ್ಲು ನರಸಿಂಹಯ್ಯ, ನಗೂನಳ್ಳಿ ನಾರಣಪ್ಪ, ಯಲ್ಲಯ್ಯ, ವೀರಣ್ಣ, ಅಳಸಿಂಗ್ರಯ್ಯ, ಸುಂದರಯ್ಯ, ನೆಲಮೋಗಲದ ರಂಗಪ್ಪ, ದುರ್ಗದ ಕೃಷ್ಣಪ್ಪ, ಗುರಿಕಾರ ತಿಪ್ಪಣ್ಣ, ತಂಜಾವೂರು ಕೊಣಡಯ್ಯ, ವೆಂಕಟಸುಬ್ಬು ಮೊದಲಾದ ಚಿತ್ರಕಾರರಿದ್ದರು. ತಾವು ಬರೆದ ಪುಸ್ತಕಗಳಿಗೆ ಅವರಿಂದ ಚಿತ್ರ ಬರೆಸುವುದಲ್ಲದೆ ಸ್ವತಂತ್ರವಾದ ವ್ಯಕ್ತಿಚಿತ್ರಗಳನ್ನೂ ಬಿಡಿಸುವಂತೆ ಪ್ರೋತ್ಸಾಹಿಸುತ್ತಿದ್ದರು. ಇಂತಹ ಬಿಡಿಚಿತ್ರಗಳೇ ಮುಮ್ಮಡಿಯವರ ಕಾಲದಲ್ಲಿ ಸಿದ್ಧವಾದವು ಅವು ಸಾವಿರದಷ್ಟು ಇವೆ ಎಂದು ಹೇಳುತ್ತಾರೆ. ಅರಮನೆಯಲ್ಲಿ ಪುರಾಣಕತೆಗಳಿಂದ ಪ್ರಸಂಗಗಳನ್ನಾಯ್ದು ಚಿತ್ರಗಳನ್ನೂ, ಮನೆಯಲ್ಲಿರಿಸಿಕೊಳ್ಳಲು ಮತ್ತು ಭಜನೆಮಂದಿರಗಳಿಗಾಗಿ ದಶಾವತಾರ, ವಿಶ್ವರೂಪದರ್ಶನ, ಚಾಮುಂಡೇಶ್ವರಿ, ರಾಜರಾಜೇಶ್ವರಿ ಮುಂತಾದ ದೇವತಾಚಿತ್ರಗಳನ್ನೂ ತಮ್ಮ ಚಿತ್ರಗಾರರಿಂದ ರಚಿಸಿಕೊಳ್ಳುತ್ತಿದ್ದರು. ತಾವು ಕಟ್ಟಿಸಿದ ಅಥವಾ ಜೀರ್ಣೋದ್ಧಾರಮಾಡಿದ ಹಲವು ಗುಡಿಗಳಲ್ಲೂ ಇವರ ಕಾಲದಲ್ಲಿ ಭಿತ್ತಿಚಿತ್ರಗಳು ತೋರಿಕೊಂಡವು.

ಮೈಸೂರು ಅರಸೊತ್ತಿಗೆಯಲ್ಲಿ ರಾಜ ಒಡೆಯರ ಕಾಲದಿಂದಲೂ ಚಿತ್ರಕಲೆಗೆ ಪ್ರೋತ್ಸಾಹವಿದ್ದಿತು. ವಿಜಯನಗರ ಸಾಮ್ರಾಜ್ಯದಲ್ಲಿದ್ದ ಕಲಾಶಕ್ತಿ ಇವರ ಕಾಲದಲ್ಲಿ ಮೈಸೂರಿಗೆ ಬಂದಿಳಿಯಿತು. ಆ ಸಾಮ್ರಾಜ್ಯ ಮುರಿದುಬಿದ್ದ ಮೇಲೆ ಅಲ್ಲಿದ್ದ ಕಲಾವಿದರಲ್ಲಿ ಬಹುಮಂದಿ

ಮೈಸೂರು ಕಡೆ ಬಂದರು. ವಿಜಯನಗರದ ದೊರೆಗಳಲ್ಲಿ ಕಡೆಯವನಾದ ತಿಮಲರಾಯನು ಶ್ರೀರಂಗಪಟ್ಟಣದಲ್ಲಿದ್ದಲ್ಲಿ ಇರುತ್ತಿದ್ದು. ಆ ಮನೆತನ ಅಳಿದ ಮೇಲೆ ರಾಜ ಒಡೆಯರು ಶ್ರೀರಂಗಪಟ್ಟಣವನ್ನೆ ರಾಜಧಾನಿಯನ್ನಾಗಿ ಮಾಡಿಕೊಂಡರು. ವಿಜಯನಗರ ಸಾಮ್ರಾಜ್ಯವೇ ಮುಂದುವರಿದಂತೆ ಆಯಿತು. ಚಿತ್ರಗಾರರನ್ನೆಲ್ಲ ತಮ್ಮಲ್ಲಿಗೆ ಕರೆಯಿಸಿಕೊಂಡು ಅವರಿಗೆ ನೆಲೆಗಾಣಿಸಿದರು. ಬಂದವರು ಬಹುಮಟ್ಟಿಗೆ ಕ್ಷತ್ರಿಯ ರಾಜ ಮನೆತನದ ಚಿತ್ರಗಾರರು. ಅವರ ಕುಲದೇವತೆ ನಮಿಷಾಂಭೆ. ರಾಜ ಒಡೆಯರ ಕಾಲದಲ್ಲಿ ಶ್ರೀರಂಗಪಟ್ಟಣದಲ್ಲಿ ಚಿತ್ರಗಾರರದ್ದೇ ಪ್ರತ್ಯೇಕವಾಗಿ ವಸತಿಯಿದ್ದು ಅದರ ನಡುವೆ ನಿಮಿಷಾಂಬಾದೇವಿಯ ಗುಡಿಯನ್ನು ಅರಸರೇ ಕಟ್ಟಿಸಿಕೊಟ್ಟರಂತೆ. ಕಂಠೀರವ ನರಸರಾಜ ಒಡೆಯರ ಆಸ್ಥಾನದಲ್ಲಿದ್ದ ಗೋವಿಂದ ವೈದ್ಯನೆಂಬ ಕವಿ ತಾನು ಬರೆದ ಕಂಠೀರವ ನರಸರಾಜವಿಜಯ ಎಂಬ ಸಾಂಗತ್ಯ ಕೃತಿಯಲ್ಲಿ ಶ್ರೀರಂಗಪಟ್ಟಣವನ್ನು ಬಣ್ಣಿಸುತ್ತ ಊರಲ್ಲಿ ಚಿತ್ರಗಾರರದ್ದೇ ಕೇರಿಯೊಂದು ಇದ್ದುದನ್ನು ಉಲ್ಲೇಖಿಸುತ್ತಾರೆ.

ಆದರೆ ಮುಮ್ಮಡಿಯವರ ಕಲಾಪ್ರೇಮ ಹಿಂದಿನ ಅರಸರೂ ಇರಲಿಲ್ಲ, ಮುಂದೆ ಬಂದವರಿಗೂ ಇರಲಿಲ್ಲ. ಇವರ ಆಸಕ್ತಿಯ ಕುರುಹಾಗಿರುವುದು ಮೈಸೂರಿನಲ್ಲಿರುವ ಜಗನ್ಮೋಹನ ಮಹಲು. ಮುಮ್ಮಡಿಯವರೇ ಕಲಾಕೃತಿಗಳ ಸಂಗ್ರಹಕ್ಕಾಗಿ ೧೮೫೦ರಲ್ಲಿ ಈ ಕಲಾದೇಗುಲವನ್ನು ಕಟ್ಟಿಸಿದರು. ಇದಲ್ಲದೆ ಕಾರಂಜಿಕೆರೆಯ ಹತ್ತಿರ, ಕೋಟೆಯ ಹೊರಗೆ ಲೋಕರಂಜನಮಹಲೆಂಬ ಇನ್ನೊಂದು ಮಂದಿರವನ್ನೂ ಕಟ್ಟಿಸಿದರು. ಇಲ್ಲಿ ಅರ್ಧನಾರೀಶ್ವರ, ಹರಿಹರ, ಗಣಪತಿ, ಕೃಷ್ಣ, ಶಿವ ಮೊದಲಾದ ದೇವತಾಮೂರ್ತಿಗಳನ್ನು ಶಿಲ್ಪದಲ್ಲಿ ಮಾಡಿಸಿಟ್ಟರು. ಜಗನ್ಮೋಹನಮಹಾಲಿನಲ್ಲಿ ಮುಮ್ಮಡಿಯವರ ಕಾಲದ ವರ್ಣಚಿತ್ರಗಳಲ್ಲಿ ಅತ್ಯುತ್ತಮವಾದುದನ್ನು ಕಾಣಬಹುದು. ಅರಸರು ಸಮ್ಮುಖದ ಚಿತ್ರಗಾರರಿಂದ ತಮ್ಮ ಪ್ರಕೃತಿಗಳನ್ನೇ ಅಲ್ಲದೆ, ತಮ್ಮ ಬಳಗದವರು, ಆಸ್ಥಾನದ ಅಧಿಕಾರಿಗಳು, ವಿದ್ವಾಂಸರು, ಸಂಗೀತಗಾರರು, ಆ ಕಾಲದ ಪ್ರಸಿದ್ಧರಾದ ಸಾಧುಸಂತರು, ಸ್ವಾಮಿಗಳು ಮುಂತಾದ ಸಮಸ್ತರ ಭಾವಚಿತ್ರಗಳನ್ನು ಸಿದ್ಧಪಡಿಸಿದರು. ಚಿತ್ರಗಾರರ ವ್ಯಕ್ತಿಚಿತ್ರಣಳನ್ನೂ ಈ ಸಂಗ್ರಹದಲ್ಲಿ ಕಾಣಬಹುದು.

ಆ ಕಾಲದ ಚಿತ್ರಕಲಾಶೈಲಿಯನ್ನು ಕುರಿತು ಒಂದೆರೆಡು ಮಾತುಗಳನ್ನು ಹೇಳಬೇಕೆಂದರೆ ಹಿನ್ನೆಲೆಯಾಗಿ ವಿಜಯನಗರ ಸಾಮ್ರಾಜ್ಯವು ಉಚ್ಛ್ರಾಯಸ್ಥಿತಿಯಲ್ಲಿದಗ್ದಾಗ ಅಲ್ಲಿ ಬೆಳೆದು ಬಂದ ಕಲಾಧೋರಣೆಯನ್ನೂ ಗಮನಿಸಬೇಕು. ವಿಜಯನಗರ ಸಾಮ್ರಾಜ್ಯ ಪತನ ಆದ ಮೇಲೆ ಈ ಧೋರಣೆ ಕೆಲವು ಮಾರ್ಪಾಡುಗಳನ್ನು ತಳೆದು ದಕ್ಖಣಿಶೈಲಿ, ಮೈಸೂರು ಶೈಲಿ, ತಂಜಾವೂರು ಶೈಲಿಗಳ ಮೈದಳೆದುದನ್ನೂ ಪರಿಶೀಲಿಸಬೇಕು. ವಿಜಯನಗರದ ಕಲಾಶೈಲಿಯ ಒಳಗೊಂಡ ಪರ್ಶಿಯನ್, ಮೊಘಲ್, ಅವಧ, ಬಿಜಾಪುರ ಶೈಲಿಗಳ ಪ್ರಭಾವವನ್ನಾಗಲಿ ಮರೆಯುವಂತಿಲ್ಲ.

ಮುಮ್ಮಡಿಯವರ ಆಶ್ರಯದಲ್ಲಿ ಮೈದಳೆದ ಚಿತ್ರಕಲಾ ಪ್ರಕಾರವು ಯಾವೊಂದು ನಿರ್ದಿಷ್ಟಶೈಲಿಯ ಒಂದು ಘಟ್ಟವೆಂದಾಗಲಿ, ಫಲವೆಂದಾಗಲಿ ಹೇಳುವಂತಿಲ್ಲ ಇದಕ್ಕಿದ್ದಂತೆ, ಯಾವ

ಪೂರ್ವೋತ್ತರವೂ ಇರದೆ ಕಾಣಿಸಿಕೊಂಡದ್ದೂ ಅಲ್ಲ. ಆಗ ಸಿದ್ಧವಾಗಿ ಈಗ ಉಳಿದುಬಂದಿರುವ ಕಲಾಕೃತಿಗಳನ್ನು ಪರಿಶೀಲಿಸಿದರೆ ಕೆಲವು ವಿವರಗಳು ಸ್ಪಷ್ಟವಾಗುತ್ತವೆ.

ರಾಜಸ್ಥಾನಕಲಾ ಸಾಂಪ್ರದಾಯದಲ್ಲಿದ್ದಂತೆ (ಹದಿನಾರು-ಹದಿನೇಳನೆ ಶತಮಾನಗಳಲ್ಲಿ ಮೊದಲಾಗಿ ಹದಿನೆಂಟನೆಯ ಶತಮಾನದಲ್ಲಿ ಬಸ್ಸೊಲಿ, ಗುಲೆರ, ಕಾಂಗ್ರ ಮೊದಲಾದ ಉಪಪ್ರಕಾರಗಳಾದ ಸಾಂಪ್ರದಾಯ) ಇಲ್ಲಿಯೂ ೧. ಮಹಾಭಾರತ, ರಾಮಾಯಣ, ಕೃಷ್ಣಲೀಲೆ ಮೊದಲಾದ ಗ್ರಂಥಗಳಿಗೆ ಚಿತ್ರಣವಾಗಿಯೂ, ೨. ರಾಗ-ರಾಗಿಣಿ ಚಿತ್ರಗಳಾಗಿಯೂ, ೩. ಶೃಂಗಾರ-ಪ್ರಧಾನವಾದ (ಎಂದರೆ ವಿಪ್ರಲಂಭವೇ ಮೊದಲಾದ ದಶಾವಿಶೇಷಗಳ, ನಾಯಕ-ನಾಯಕಿ ಭೇದಗಳ) ಚಿತ್ರಣವಾಗಿಯೂ ಚಿತ್ರಗಳು ಬಹುಮಟ್ಟಿಗೆ ಕಾಣಿಸಿಕೊಂಡಿವೆ. ಇವುಗಳಲ್ಲದೆ ಇಲ್ಲಿ ಸ್ವತಂತ್ರವಾದ ದೇವತಚಿತ್ರಗಳೂ (ವಿಷ್ಣುವಿನ ಅವತಾರಗಳು, ಶಿವನ ಲೀಲಾಮೂರ್ತಿಗಳು, ದೇವಿಯ ರೂಪಗಳು ಇತ್ಯಾದಿ) ಚಿತ್ರಕಲೆಗೆ ವಸ್ತುಗಳಾಗಿವೆ.

ಅಲ್ಲಿದ್ದಂತೆ ಇಲ್ಲಿಯೂ ಭಿತ್ತಿಚಿತ್ರಗಳ ಪ್ರೇರಣೆಯನ್ನೆ, ಸ್ವಭಾವವನ್ನೆ ಅಳವಡಿಸಿಕೊಂಡು ಕಿರುಚಿತ್ರಗಳು ಸಿದ್ಧವಾದವು. ಚಿತ್ರಗಳ ಸ್ವಾರಸ್ಯ ಇರುವುದು ನೈಜಣಿರೂಪಣೆಯಲ್ಲ, ಭಾವದ್ಯೋತಕವಾದ ಸ್ವರೂಪದಲ್ಲಿ. ಅವೇನು ಮೆದುಳಿಗೆಂದು ಮೈದಳೆದವಲ್ಲ, ಹೃದಯಸಂವಾದ ಅವುಗಳ ಗುರಿ. ಮುಂದೆ ಮೊಗಲಾಯಿ ಸಾಂಪ್ರದಾಯದ ಪ್ರಭಾವದಿಂದ ರಾಜಸ್ಥಾನದ ಸಂದರ್ಭ, ಮೆರವಣಿಗೆ, ಭೇಟಿ, ವ್ಯಕ್ತಿಚಿತ್ರಣ ಇವೂ ರಾಜಸ್ಥಾನ ಕಲಾಸಂಪ್ರದಾಯದಲ್ಲಿ ಕಾಣಿಸಿಕೊಂಡಂತೆ ಇಲ್ಲಿಯೂ ಸೇರಿಕೊಂಡವು. ಮುಮ್ಮಡಿಯವರು ತಮ್ಮ, ತಮ್ಮ ಪರಿವಾರದವರ, ತಮ್ಮ ಗುರುಹಿರಿಯರ ವ್ಯಕ್ತಿಚಿತ್ರಣಗಳನ್ನೆಲ್ಲ ಕಿರುಪ್ರಮಾಣದಲ್ಲಿ ಮಾಡಿಸಿಟ್ಟಿದನ್ನು ಈಗಾಗಲೆ ಅರಿತುಕೊಂಡಿದ್ದೇವೆ. ಇದು ಮೊಗಲಾಯಿ ಸಾಂಪ್ರದಾಯದ ಪರಿಚಯದ ಫಲವೇ.

ಈ ಸಾಂಪ್ರದಾಯದ ಉಳಿಕೆಗೂ ಮೈಸೂರಿನಲ್ಲಿ ತೋರಿಕೊಂಡ ಶೈಲಿಗೂ ನಡುವೆ ಇನ್ನೊಂದು ಕಲಬೆರಕೆ ಶೈಲಿ ಕಾಣಿಸಿಕೊಂಡು ಮರೆಯಲಾಯಿತು. ಅದು ಕಂಪನಿಶೈಲಿಯೆಂದು ಹೆಸರಾಗಿದೆ. ಕಂಪನಿಯೆಂದರೆ ಈಸ್ಟ್ ಇಂಡಿಯಾ ಕಂಪನಿ, ಬ್ರಿಟಿಷರು ಭಾರತದಲ್ಲಿ ತಮ್ಮ ಚಕ್ರಾಧಿಪತ್ಯವನ್ನು ಸ್ಥಾಪಿಸಿಕೊಳ್ಳಲು ದಾರಿ ಮಾಡಿಕೊಟ್ಟ ವಾಣಿಜ್ಯ ಸಂಸ್ಥೆ. ಇಂಗ್ಲೆಂಡಿನ ಎಲಿಜಬೆತ್ ರಾಣಿಯು ಲಂಡನ್ನಿನ ವರ್ತಕರ ಕಂಪನಿಯೊಂದಕ್ಕೆ ಈಸ್ಟ್ ಇಂಡಿಯದೊಂದಿಗೆ ವಾಣಿಜ್ಯ ಸಂಪರ್ಕವನ್ನು ಬೆಳೆಸಿಕೊಳ್ಳಲು ಅದೇಶ ನೀಡಿದಂದು ಈ ಈಸ್ಟ್ ಇಂಡಿಯಾ ಕಂಪನಿ ಮೈದಳೆಯಿತು. ಅಂದಿನಿಂದ ಇಂಗ್ಲೆಂಡಿನ ಜನರಿಗೂ ನಮ್ಮವರಿಗೂ ನಂಟು. ಸಂಪರ್ಕಕ್ಕೆ ಇದೇ ಮೊದಲ ಹೆಜ್ಜೆಯೆಂದೇನಲ್ಲ.

ಅಲ್ಲಿನ ಅರಸ ಮೊದಲನೆಯ ಜೇಮ್ಸ್ ೧೬೧೩ರಲ್ಲಿ ಸರ್ ಥಾಮಸ್ ರೋ ಎಂಬುವನನ್ನು ಜಹಾಂಗಿರನ ಆಸ್ಥಾನಕ್ಕೆ ರಾಯಭಾರಿಯಾಗಿ ಕಳುಹಿಸಿದ್ದುಂಟು, ಸೂರತ್‌ನಲ್ಲಿ ಕಾರ್ಖಾನೆಯೊಂದನ್ನು ತೆರೆಯಲು ಅನುಮತಿಗಾಗಿ ಔವರಂಗಜೇಬನ ಮರಣಾನಂತರ ಗೊಂದಲ ಪರಿಸ್ಥಿತಿ ಏರ್ಪಟ್ಟು ಇಂಗ್ಲಿಷ್ ಜನರೂ ತಂತಮ್ ಪ್ರಭಾವವನ್ನು ಬೇರೂರಿಸಿಕೊಳ್ಳಲು ಹೆಣಗಾಡುತ್ತಿರುವಾಗ ಐರೋಪ್ಯ

ಸಂಸ್ಕೃತಿಯ ಪರಿಚಯ ನಮ್ಮವರಿಗೆ ಆಗತೊಡಗಿತು. ಅಕ್ಬರನ ಆಸ್ಥಾನಕ್ಕೆ ಜೆಸ್ಯೂಟ್ ಪಾದರಿಗಳು ೧೫೮೦ರಷ್ಟು ಹಿಂದೆಯೆ ಬಂದಿದ್ದು ದೊರೆಗೆ ಬಹುಭಾಷೆಗಳ ಬೈಬಲ್ ಗ್ರಂಥವನ್ನು ನೀಡಿದ್ದರು. ಅದರಲ್ಲಿದ್ದ ಫ್ಲೆಮಿಷ್ ಚಿತ್ರಗಳು ದೊರೆಯ ಮನಸ್ಸನ್ನಾಕರ್ಷಿಸಿ ತನ್ನ ಆಶ್ರಿತರಾದ ಚಿತ್ರಕಾರರಿಗೆ ಅವುಗಳ ನಕಲನ್ನು ಮಾಡಲು ಅಪ್ಪಣೆ ಮಾಡಿದ್ದನು. ಮುಂದೆ ಡ್ಯುರೆರ್ ಎಂಬ ಐರೋಪ್ಯ ಕಲಾವಿದನ ಕೊರೆದ ಚಿತ್ರಗಳ ವರ್ಣಪ್ರತಿಗಳು ದಿಲ್ಲಿಯ ಚಿತ್ರಗಾರರ ಕೈ ಸೇರಿದವು.

ಇದರಿಂದಾಗಿ ಮೊಗಲಾಯಿ ಕಲಾಪ್ರಕಾರದಲ್ಲಿ ಐರೋಪ್ಯ ಚಿತ್ರಗಳಲ್ಲಿ ಕಾಣುತ್ತಿದ್ದ ನೆರಳು-ಬೆಳಕು ಇವುಗಳ ಅಂತರ, ನಿಸರ್ಗವನ್ನು ಯಥಾರ್ಥವಾಗಿ ಚಿತ್ರಿಸುವ ರೀತಿ ಕಣ್ಣೆಲೆಯ ಜಾಣತನ (ಪರೆಸ್ಪೆಕ್ಟಿವ್) ಮುಂತಾದ ವಿವರಗಳ ಬಳಕ್ಕೆ ಅಷ್ಟಿಷ್ಟು ಆಗತೊಡಗಿತು. ಉದ್ದ-ಅಗಲ ಎರಡೇ ವಿಭಾಗವನ್ನು ಅರಿತಿದ್ದ ನಮ್ಮ ಚಿತ್ರಗಾರರಿಗೆ ಆಳವೆಂಬ ಇನ್ನೊಂದು ವಿಭಾಗವೂ ಮನವರಿಕೆಯಾಯಿತು. ಪಾಶ್ಚಾತ್ಯ ಚಿತ್ರಗಾರರಿಗೆ ಪರ್ಷಿಯನ್ ಚಿತ್ರಪದ್ಧತಿಯ ಕೆಲವು ಗುಣಗಳು ಹಿಡಿಸಿದವು ಎನ್ನಬಹುವುದು. ನಿದರ್ಶನಕ್ಕೆ ಕಿರುವ್ಯಕ್ತಿಚಿತ್ರಗಳಲ್ಲಿ ಕಂಡು ಬರುವ ನೈಜಚಿತ್ರಣ, ಎದ್ದು ಕಾಣುವಂತೆ ಮೂಡಿಸಲಾದ ಬಣ್ಣಗಳು, ಪ್ರಕೃತಿಯ ಸಹಜ ನಿರೂಪಣೆ ಇವು. ಅವರಿಗೆ ಹಿಡಿಯಲಾರದ ವಿವರಗಳೆಂದರೆ ನಮ್ಮವರಿಗೆ ಕಣ್ಣೆಲೆಯ ಅಗ್ಯತ ಕಾಣದಿದ್ದುದ್ದು, ಮತ್ತು ವಸ್ತುಗಳ ಯಥಾವತ್ತಾದ ಗಾತ್ರದ ಕಡರ ಗಮನವಿಲ್ಲದಿರುವುದು.

ಪಾಶ್ಚಾತ್ಯರೆಂದರೆ ಅವಿಚಾರಿತ ಗೌರವ ನಮ್ಮ ಜನರಿಗೆ ಬಹುಕಾಲದಿಂದ ಇರುವುದೆ. ಅದಕ್ಕೆ ಕಾರಣವಿರಲಿ ಇಲ್ಲದಿರಲ್ಲಿ; ಬಿಳಿಯ ತೊಗಲು, ಅರಿಯದ ಭಾಷೆ, ವೇಷಭೂಷಣಗಳ ಹೊಸತನ ಇಷ್ಟೇ ಸಾಕು ಇನ್ನುವ ಮಂದಿಗೆ ನಮ್ಮ ದೇಶದಲ್ಲಿ ಕೊರತೆ ಯಾವಾಗಲೂ ಇರಲಿಲ. ಪಾಶ್ಚಾತ್ಯ ಸಂಸ್ಕೃತಿಯ ಅನುಕರಣೆ ನಮ್ಮಲ್ಲಿ ಹದಿನಾರು-ಹದಿನೇಳನೆಯ ಶತಮಾನದಿಂದಲೂ ಬೆಳೆದುಬಂದಿರುವ ಲಕ್ಷಣವೆ.

ಐರೋಪ್ಯ ಚಿತ್ರಗಾರರನ್ನು ಆದರ್ಶವಾಗಿ ಗ್ರಹಿಸಿದ ನಮ್ಮ ಅಲ್ಲಿನ ಅಂಶಗಳನ್ನೆಲ್ಲ ಸಾಧ್ಯವಾದಷ್ಟು ಬಳಸಿಕೊಂಡರು. ಹೊರಗಿನಿಂದ ಬಂದ ಕಾಗದದ ಮೇಲೆ ಜಲವರ್ಣಚಿತ್ರಣವನ್ನು ಮಾಡತೊಡಗಿದರು. ಕಣ್ಣೆಲೆಯ ಸ್ವಾರಸ್ಯವನ್ನು ಅರಿತುಕೊಂಡು ವ್ಯಕ್ತಿಯಾಗಲಿ ವಸ್ತುವಾಗಲಿ ಹಿಂಬದಿಯ ಭಾಗವೂ ಒಂದಿದೆಯೆಂಬ ಸೂಚನೆಯನ್ನೂ, ವಿಭಿನ್ನದೂರಗಳಲ್ಲಿ ಅಂತರಂಗಳಲ್ಲಿ ವಸ್ತುವಿನ್ಯಾಸವನ್ನೂ, ಒಂದೇ ಚಿತ್ರದಲ್ಲಿ ಬೇರೆ ಬೇರೆ ನೆಲೆಗಳನ್ನೂ ತೋರಿಸತೊಡಗಿದರು.

ಇದರಿಂದಾಗಿ ಸಾಂಪ್ರದಾಯದಿಂದ ಬಂದ ಚಿತ್ರಕಲೆಯ ಶೈಲಿಯನ್ನು ಬಹುಮಟ್ಟಿಗೆ ಕೈಬಟ್ಟಂತಾಯಿತು. ಚಿತ್ರಣಕ್ಕೆ ಪಾಶ್ಚಾತ್ಯರ ಸಂವಿಧಾನಗಳನ್ನು ಬಳಸತೊಡಗಿದರು. ಹಳೆಯಕಾಲದ ದೇವ-ದೇವತೆಯರು, ರಾಜ-ರಾಣಿಯರು, ನಾಯಕ-ನಾಯಕಿಯರು, ಶೃಂಗಾರ ರಸ, ರಾಗಮಾಲೆ ಇವೆಲ್ಲವನ್ನೂ ಬದಿಗೊತ್ತಿ ಐರೋಪ್ಯ ಅಧಿಕಾರಿಗಳು, ಕಛೇರಿಗಳು, ಮಾರುಕಟ್ಟೆ, ಹಂಜದ ಕಾಳಗ, ಭೇಟೆ ಮುಂತಾದ ಸಮಸಮಯಿಕ ವಸ್ತುಗಳನ್ನೇ ಚಿತ್ರಣಕ್ಕೆ ಆರಿಸಿಕೊಳ್ಳತೊಡಗಿದರು. ಮೊಗಲಾಯಿ

ಮತ್ತು ದಕ್ಖನಿ ಪ್ರಕಾರಗಳೂ ಹೀಗೆ ಮಾರ್ಪಟ್ಟುವು, ಐರೋಪ್ಯ ರೀತಿಯ ವ್ಯಕ್ತಿಚಿತ್ರಗಳೇ ಹೊರಬಂದುವು. ಇಂಗ್ಲೆಂಡಿನಿಂದ ಬಂದ ಅಧಿಕಾರಿಗಳೂ ವರ್ತಕರೂ, ಶ್ರೀಮಂರೂ ತಮ್ಮೊಂದಿಗೆ ಇಂಗ್ಲಿಷ ಚಿತ್ರಗಾರರನ್ನೂ ಕರೆತಂದು ಅವರಿಗೆ ಇಲ್ಲಿ ನೆಲೆಯನ್ನು ಕಲ್ಪಿಸಿಕೊಟ್ಟರು. ನಮ್ಮವರಿಗೆ ಅವರು ಗುರುಗಳೂ ಆದರು!

ಇದು ಕಂಪನಿಕಾಲದ ಚಿತ್ರಕಲೆಯ ಘಟ್ಟ. ಗೋಲ್ಕೊಂಡದಲ್ಲಿದ್ದ ದಕ್ಖನಿ ಶೈಲಿಯು ಕಂಪನಿಯ ಚಿತ್ರಗಾರರಿಂದ ಪ್ರಭಾವಿತವಾಗಿ ಮುಂದೆ ಅದು ತಂಜಾವೂರಿನಲ್ಲಿ ಬೆಳೆದುಬಂದಿತು. ತಂಜಾವೂರಿನ ಮರಾಠಾ ದೊರೆ ಶರಭೋಜಿ ಪಾಶ್ಚಾತ್ಯ ಸಂಸ್ಕೃತಿಯನ್ನು ಬಹುವಾಗಿ ಮೆಚ್ಚಿಕೊಂಡಿದ್ದವನು. ಡೇನಿಷ್ ಚಿತ್ರಗಾರನೊಬ್ಬನನ್ನು ಅರಮನೆಯಲ್ಲಿರಿಸಿಕೊಂಡು ಅವನ ಬಳಿ ಚಿತ್ರಕಲಾಭ್ಯಾಸವನ್ನೂ ಮಾಡಿದ್ದವನ್ನು ಅವನು ಕಲಿತದ್ದು ಐರೋಪ್ಯ ಕಲೆಯನ್ನೆ. ಹೀಗಾಗಿ ತಂಜಾವೂರಿನ ಚಿತ್ರಕಲಾಶೈಲಿಯಲ್ಲಿ ದಕ್ಖಣಿ ಮೂಲದ ಮೇಲೆ ಶೈಲಿಯ ಪ್ರಭಾವ ಬಲವಾದುದನ್ನು ಗುರುತಿಸಬಹುದು.

ನಮ್ಮ ಪುಣ್ಯಕ್ಕೆ ೧೮೮೦ರ ತರುವಾಯ ಈ ಕಂಪನಿಶೈಲಿ ಮರೆಯಾಗುತ್ತ ಬಂದಿತು. ಆನೆಯ ದಂತದ ಮೇಲೆ ಮಾಡುತ್ತಿದ್ದ ಚಿಕಮಿತ್ರಸಂಪ್ರದಾಯವೊಂದು ಹಾಗೂ ಉಳಿಸಿಕೊಂಡು ಬಂದಿತು. ಫೋಟಾಗ್ರಾಫಿ, ಲಿತೋಗ್ರಾಫಿ, ಎನ್‌ಗ್ರೇವಿಂಗ್ ಇಂಥವು ಜನಪ್ರಿಯವಾಗತೊಡಗಿದಮೇಲೆ ಕಂಪನಿ ಶೈಲಿಯ ಚಿತ್ರಗರರಿಗೆ ಆಸರೆ ತಪ್ಪಿತು, ಮತ್ತೆ ಒಂದು ಬಗೆಯ ಸಾಂಸ್ಕೃತಿಕ ಪುನರಜ್ಜೀವನ ನಮ್ಮ ದೇಶದಲ್ಲಿ ಮೊದಲಾಗಿ, ನಮ್ಮವರಿಗೆ ಸ್ವಾಭಿಮಾನವೂ ತಲೆದೋರತೊಡಗಿತು. ಮೈಸೂರಿನ ಅರಸೊತ್ತಿಗೆಯವರಿಗೆ ಈ ವಿಚಾರದಲ್ಲಿ ಪ್ರಶಂಸೆ ಸ್ವಲ್ಪಮಟ್ಟಿಗೆ ಸಲ್ಲುತ್ತದೆ. ಮುಮ್ಮಡಿಯವರಂತೂ ನಮ್ಮ ಸಂಸ್ಕೃತಿಯಲ್ಲಿ ಮುಳುಗಿದ್ದವರು; ಕಲೆ, ಸಾಹಿತ್ಯ, ಧರ್ಮ ಎಲ್ಲದರಲ್ಲೂ ಅವರಿಗೆ ಅಭಿಮಾನ ಮಾತ್ರವಲ್ಲ, ವಿಶೇಷವಾದ ಪರಿಚಯವೂ ಇದ್ದಿತು. ಮುಮ್ಮಡಿಯವರು ತಮ್ಮ ಅಧಿಕಾರವನ್ನು ಇಂಗ್ಲಿಷ್ ಅರಸರಿಂದ ಮತ್ತೆ ಪಡೆದುಕೊಳ್ಳಲು ಹಾತೊರೆಯುತ್ತಿದ್ದರಾಗಿ, ಬೇರೆ ದಾರಿಯಿಲ್ಲದೆ ಅವರ ಸ್ತೋತ್ರಪಾಠವನ್ನು ಸಮಯ ಸಿಕ್ಕಾಗೆಲ್ಲ ಮಾಡುತ್ತಿದ್ದರು. ಅವರ ಮನಸಮಾದಾನಕ್ಕೆಮದು ಮೈಸೂರಿನಲ್ಲಿ ಇಂಗ್ಲಿಷ್ ಶಾಲೆಯೊಂದನ್ನೂ ತೆರೆದರು. ಆದರೆ ಮನಸಾರೆ ಅವರನ್ನು ಮೆಚ್ಚಿಕೊಂಡಿದ್ದಂತೆ ಕಾಣುವುದಿಲ್ಲ.

ಅವರ ಅದರವಿದ್ದುದು ವಿಜಯನಗರ ಸಾಮ್ರಾಜ್ಯದ ಅರೋತ್ತರಗಳ ಮೇಲೆ. ಹೀಗಾಗಿ ಅವರ ಪ್ರೋತ್ಸಾಹದಿಂದ ಇಲ್ಲಿ ಬೆಳೆದ ಚಿತ್ರ, ಶಿಲ್ಪ ಎರಡೂ ವಿಜಯನಗರದ ಶೈಲಿಯನ್ನು ಅಳವಡಿಸಿಕೊಂಡವು. ತಂಜಾವೂರಿನಲ್ಲಾದಂತೆ ಗೋಲ್ಕೊಂಡ ದಕ್ಖನಿ ಶೈಲಿ, ಕಂಪನಿ ಶೈಲಿಗಳ ದಾರಿಯನ್ನು ಹಿಡಿಯಲಿಲ್ಲ. ವಿಜಯನಗರದ ಚಿತ್ರಶೈಲಿಯಲ್ಲೂ ಮುಂದೆ ಬಿಜಾಪುರ ದಕ್ಖಣಿಶೈಲಿ, ರಾಜಪುತ್ರಶೈಲಿ ಎರಡರ ಸಮಾವೇಶವಾದದುಂಟು. ಮುಮ್ಮಡಿಯವರ ಕಾಲದ ಚಿತ್ರಗಳಲ್ಲಿ ಇದನ್ನು ಗುರುತಿಸಬಹುದು. ಕಂಪನಿಶೈಲಿ ಮಾತ್ರ ಇಲ್ಲಿ ತಲೆಹಾಕಲಿಲ್ಲ ಪ್ರಾಚೀನ ಕಲಾಸಂಪ್ರದಾಯದ ಮೂಲಭೂತವಿವರಗಳು ಮರೆಯಾಗದೆ ಮೊಗಲಾಯಿ, ರಾಜಸ್ಥಾನ, ದಕ್ಖಣಿ ಶೈಲಿಗಳನ್ನೂ ಉಳಿದುಬಂದಿತೆನ್ನುವುದನ್ನು ಮೈಸೂರಿನ ಶೈಲಿಗೆ ಸಮರ್ಥಿಸುತ್ತದೆ.

ಚಿತ್ರಕಲಾ ಪರಿಷತ್ತಿನ ಕೊಡುಗೆ :

'೧೯೬೦ರಲ್ಲಿ ಸಂಸ್ಥಾಪಿತವಾದ ಕರ್ನಾಟಕದ ಚಿತ್ರಕಲಾ ಪರಿಷತ್ತು ತನ್ನ ಧ್ಯೇಯಗಳಲ್ಲಿ ಒಂದಾದ ಸಂಪ್ರದಾಯ ಚಿತ್ರಗಳ ಪುನರುಜ್ಜೀವನ ಕಾರ್ಯದಲ್ಲಿ ತನ್ನ ಪ್ರಯತ್ನವನ್ನು ನಿರಂತರವಾಗಿ ಮಾಡುತ್ತಿದೆ. ದಿವಗಂತ ಕಲಾ ವಿಮರ್ಶಕ ಜಿ. ವೆಂಕಟಾಚಲರವರ ಆಶಯದಂತೆ ಮೈಸೂರು ಸಾಂಪ್ರದಾಯಿಕ ಕಲಾಕೃತಿಗಳ ಸಂಗ್ರಹ ಹಾಗೂ ಪ್ರದರ್ಶನವನ್ನು ೧೯೭೦ರಲ್ಲಿ ಬೆಂಗಳೂರು ನಗರದ ಚಿತ್ರಕಲಾ ಪರಿಷತ್ತು ಏರ್ಪಡಿಸಿತ್ತು. ಈ ಪ್ರದರ್ಶವು ಮೈಸೂರು ಶೈಲಿಯ ಕೃತಿಗಳನ್ನು ಶಾಶ್ವತವಾಗಿ ಸಂಗ್ರಹಿಸುವ ಕಾರ್ಯವನ್ನು ಕೈಗೆತ್ತಿಕ್ಕೊಳ್ಳಲು ಸ್ಫೂರ್ತಿಯನ್ನು ನೀಡಿತು. ಅದರಂತೆ ಕರ್ನಾಟಕ ರಾಜ್ಯದಲ್ಲಿ ಕಾಣಿಸುವ ಸಾಂಪ್ರದಾಯಿಕ ಚಿತ್ರಗಳ ಸಮೀಕ್ಷೆಕಾರ್ಯ ಪ್ರಾರಂಭವಾಯಿತು. ಅನೇಕರು ತಮ್ಮಲ್ಲಿದ್ದ ಕಲಾಕೃತಿಗಳನ್ನು ಪರಿಷತ್ತಿನ ಸಂಗ್ರಹಣಕ್ಕೆ ಕೊಟ್ಟರು. ಕೆಲವನ್ನು ಖರೀದಿ ಮಾಡಿ ಪಡೆಯಲಾಯಿತ್ತು. ಇಂದು ಭಾರತದಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಮೈಸೂರು ಸಾಂಪ್ರದಾಯಿಕ ಚಿತ್ರಗಳ ಸಂಗ್ರಹ ಚಿತ್ರಕಲಾ ಪರಿಷತ್ತಿನಲ್ಲಿಯೆಂದರೆ ಹೆಮ್ಮೆಯ ಮಾತು. ಈ ಸಂಗ್ರಹದಿಂದ ಕೆಲವು ಆಯ್ದ ಕೃತಿಗಳನ್ನು ಭಾರತದ ಉತ್ಸವ, ಲಂಡನ್, ವಾಷಿಂಗಟನ್ ಹಾಗೂ ಮಾಸ್ಕೋ ನಗರಗಳಲ್ಲಿ ನಡೆದಾಗ ಭಾರತ ಸರ್ಕಾರಕ್ಕೆ ಎತಾವತ್ತಾಗಿ ಕಲಾಕೃತಿಗಳನ್ನು ನೀಡಲಾಗಿದ್ದಿತು. ಪ್ರದರ್ಶನಗಳ ನಂತರ ಆ ಕೃತಿಗಳೆಲ್ಲಾ ಸುರಕ್ಷಿತವಾಗಿ ವಾಪಸ್ಸು ಬಂದಿವೆ.

ಈ ಶೈಲಿಯನ್ನು ಪುನರಜ್ಜೀವನಗೊಳಿಸಲು ಚಿತ್ರಕಲಾ ಪರಿಷತ್ತು ಪ್ರಯತ್ನಿಸಿದಾಗ ಸಾಂಪ್ರದಾಯಿಕ ಮನೆತನಕ್ಕೆ ಸೇರಿದ ಶ್ರೀ ವೈ. ಸುಬ್ರಮಣ್ಯನವರು ಒಪ್ಪಿಕೊಡು ಈ ಕಲಾಶೈಲಿಯ ಶಿಕ್ಷಣವನ್ನು ನೀಡಲು ಪ್ರಾರಂಭಿಸಿದರು. ೧೯೭೦ರಲ್ಲಿ ಪ್ರಾರಂಭವಾದ ಸಾಂಪ್ರದಾಯಿಕ ಕಲಾಶಿಕ್ಷಣ ವಿಭಾಗವು ಅನೇಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದೆ. ಅನೇಕ ಪರಿಣಿತ ವಿದ್ಯಾರ್ಥಿಗಳು ಸಾಂಪ್ರದಾಯಿಕ ಚಿತ್ರ ರಚಿಸಿ ತಮ್ಮ ಜೀವನೋಪಾಯವನ್ನು ನಿರ್ವಹಿಸುತ್ತಿದ್ದಾರೆ. ಚಿತ್ರಕಲಾ ಪರಿಷತ್ತಿನಲ್ಲಿ ಆಗಾಗ್ಗ ಜರುಗುತ್ತಿರುವ ಕಲಾ ಪ್ರದರ್ಶನಗಳಲ್ಲಿ ಸಾಂಪ್ರದಾಯಿಕ ಕಲೆಗೆ ಉಚ್ಚಾಯ ಸ್ಥಾನವನ್ನು ನೀಡಲಾಗುತ್ತಿದೆ. ಭಾರತೀಯ ಅದಿವಾಸಿಗಳು ಬೆಂಗಳೂರು ನಗರಕ್ಕೆ ಬಂದಾಗ ಚಿತ್ರಕಲಾ ಪರಿಷತ್ತಿಗೆ ಭೇಟಿ ಇತ್ತು ಕೊನೆಯ ಪಕ್ಷ ಒಂದು ಸಾಂಪ್ರದಾಯಿಕ ಶೈಲಿಯ ಕೃತಿಯನ್ನು ಕೊಂಡುಹೋಗುತ್ತಾರೆ. ಇದು ಇಂದಿನ ತಲೆಮಾರಿನ ಕಲಾವಿದರಿಗೆ ಉತ್ತೇಜನಕಾರಿಯಾಗಿದೆ. ಇದಲ್ಲದೆ ಭಾರತದಲ್ಲಿರುವ ಕಲಾ ಪ್ರೇಮಿಗಳು ತಮ್ಮ ಮನೆಗಳಲ್ಲಿ ಮೈಸೂರು ಸಾಂಪ್ರದಾಯಿಕ ಕಲಾಕೃತಿಗಳನ್ನು ಕೊಂಡು ಅಲಂಕರಿಸಲು ತವಕಿಸುತ್ತಿದ್ದಾರೆ'[೧೦]. ಇಂತಹ ಬೇಡಿಕೆಯಿಂದ ಈ ಶೈಲಿಯ ಕಲಾಕೃತಿಗಳ ರಚನೆಗೆ ಹೆಚ್ಚು ಒತ್ತು ನೀಡುತ್ತದೆಯಲ್ಲದೆ ಕಲೆಯ ಮಹತ್ವವನ್ನು ಸಹ ಪ್ರತಿಬಿಂಬಿಸುತ್ತದೆ ಎಂದು ಹೇಳಬಹುದು.

೧೦. ಪಿ.ಆರ್. ತಿಪ್ಪೇಸ್ವಾಮಿ : ಚಿತ್ರಕಲಾ ಪ್ರಪಂಚ, ಪು.ಸಂ-೨೫೩.
ಅದೇ. ಪು.ಸಂ-೨೫೪

ಸಾಂಪ್ರದಾಯಿಕ ಚಿತ್ರಕಲೆ ಪುನರವ್ಥಾಕ್ಕಾಗಿ ಚಿತ್ರಕಲಾ ಪರಿಷತ್ತಿನ ಮುಂದಿನ ಯೋಜನೆಗಳು :

- 'ಚಿತ್ರಕಲಾ ಪರಿಷತ್ತು ತನ್ನಲಿರುವ ಸಾಂಪ್ರದಾಯಿಕ ಚಿತ್ರಗಳನ್ನು ಸಾರ್ವಜನಿಕರ ವೀಕ್ಷಣೆಗೆ ಶಾಶ್ವತವಾಗಿ ಒಂದು ಗ್ಯಾಲರಿಯಲ್ಲಿ ಸ್ಥಾಪನೆ ಮಾಡಬೇಕು.
- ಸಾಂಪ್ರದಾಯಿಕ ಚಿತ್ರಗಳ ವರ್ಣವನ್ನು ತಯಾರಿಸುವ ಕ್ರಮ ಇತರ ತಾಂತ್ರಿಕ ವಿಷಯಗಳ ಬಗ್ಗೆ ಒಂದು ವಿಶಿಷ್ಟವಾದ ಸಂಶೋಧನಾ ವಿಭಾಗವನ್ನು ತೆರೆಯುವುದು.
- ಮುಂದಿನ ತಲೆಮಾರಿನವರಿಗೆ ಈ ಕಲೆಯಲ್ಲಿ ತರಬೇತಿ ಹೊಂದಲು ಶಾಶ್ವತ ಚಿತ್ರಕಲಾ ಯೋಜನೆ.
- ಲಭ್ಯವಿರುವ ಎಲ್ಲ ಹಸ್ತಪ್ರತಿಗಳು ಹಾಗೂ ಸಾಂಪ್ರದಾಯಿಕ ಚಿತ್ರಗಳನ್ನು ಮುಂದಿನ ತಲೆಮಾರಿನ ಉಪಯೋಗಕ್ಕಾಗಿ ಪ್ರಕಟಣೆಗಳಿಗಾಗಿ ಹೊರತರುವುದು'[೧೧].

ಭಿತ್ತಿ ಚಿತ್ರಕಲೆ :

ಮಾನವನ ಭಾವನೆಯ ಅಭಿವ್ಯಕ್ತಿಯಾದ ಕಲೆಯ ವಿವಿಧ ರೂಪಗಳಿಲ್ಲಿದ್ದು. ಅದರಲ್ಲಿ ಚಿತ್ರಕಲೆಯು ಪ್ರಮುಖವಾಗಿದೆ. ಚಿತ್ರಕಲೆಯಲ್ಲಿಯೂ ಅನೇಕ ಪ್ರಕಾರಗಳಲ್ಲಿದ್ದೂ ಅದರಲ್ಲಿ ಭಿತ್ತಿಚಿತ್ರಕಲೆ ಪ್ರಾಚೀನತೇಯ ಶಿಲಾಶ್ರಯಗಳಲ್ಲಿ ರಚನೆಯಾಗಿರುವ ವರ್ಣರಹಿತ ಮತ್ತು ವರ್ಣ ಚಿತ್ರಗಳಯ ಪ್ರಾರಂಭಿಕ ಭಿತ್ತಿಚಿತ್ರಕಲೆಂದು ಗುರುತಿಸುತ್ತಾರೆ. ಭಾರತದಲ್ಲಿ ಹಲವು ನೆಲೆಗಳಲ್ಲಿ ಕ್ರಿ.ಪೂ. ಹಿಂದಿನಿಂದಲೂ ಪ್ರಾಗ್ಯೈತಿಹಾಸಿಕ ಭಿತ್ತಿ ಚಿತ್ರಕಲೆಗಳಿವೆ. ನಂತರ ಕಾಲ ವಾದಂತಹ ಐತಿಹಾಸಿಕ ಕಾಲದಲ್ಲಿ ದೊಡ್ಡ ಪ್ರಮಾಣದ ಸಾಂಪ್ರದಾಯಿಕ ಪ್ರಕಾರಗಳಲ್ಲಿ, ರಾಜ ವಂಶಸ್ಥರ ಆಶ್ರಯದಲ್ಲಿ ಬೆಳೆದಿರುವುದನ್ನು ಸಿಂಧೂ ನಾಗರಿಕತೆ ವೇದಕಾಲ ಆ ನಂತರದ ರಾಮಾಯಾಣ, ಮಹಾಭಾರತಗಳಲ್ಲಿ ಅರಮನೆಗಳನ್ನು ಭಿತ್ತಿ ಚಿತ್ರಗಳಿಂದ ಅಲಂಕರಿಸಲಾಗಿತ್ತು ಎಂಬುವುದು ಹಲವು ಸಾಹಿತ್ಯಗಳಲ್ಲಿ ಗುರುತಿಸಿದ್ದಾರೆ.

ಸಾಂಸ್ಕೃತಿಕವಾಗಿ ಹೆಚ್ಚು ಕಾಣಿಕೆ ನೀಡಿದ ಕರ್ನಾಟಕದಲ್ಲಿ ಭಿತ್ತಿ ಚಿತ್ರಕಲೆಯ ಒಂದು ಶಿಷ್ಟ ಪರಂಪರೆಯಾಗಿ ಕಾಲಕಾಲಕ್ಕೆ ಶ್ರೀಮಂತಗೊಳ್ಳುತ್ತಾ ಬಾಳೆದಿರುತ್ತದೆ. ಅದು ಕದಂಬರಿದಲೇ ಆದರೂ ಬಾದಾಮಿ ಚಾಲುಕ್ಯರಿಂದ ಪ್ರತಿಬಿಂಬಿಸುತ್ತಾ ಹೊಯ್ಸಳ ವಿಜಯನಗರ ಅರಸರ ಕಾಲದಲ್ಲಿ ವಿಸ್ತಾರವಾಗಿ ಬೆಳೆಯಿತ್ತು. ಆ ನಂತರ ದೊರೆಗಳಾದ ಮೈಸೂರು ಒಡೆಯರು ಪ್ರವರ್ಧನಮಾನಕ್ಕೆ ಬಂದಾಗ ಮೈಸೂರಿನ ಆಡಳಿತಕ್ಕೆ ಒಳಪಟ್ಟಂತಹ ಪ್ರಾಂತ್ಯಗಳಲ್ಲಿ ಭಿತ್ತಿ ಚಿತ್ರಕಲೆಗೆ ಹೆಚ್ಚಿನ ಪ್ರೋತ್ಸಾಹ ನೀಡಿದವರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು. ೧೭ನೇ ಶತಮಾನದಲ್ಲಿ ಚಾಮರಾಜ ಒಡೆಯರು ೧೮ನೇ ಶತಮಾನದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರು ಇವರ ಕಾಲದಲ್ಲಿ ಚಿತ್ರಕಲೆಯು ಸಂಮೃದ್ಧವಾಗಿ ಬೆಳೆದು ಬಂತು. ಹಾಗಾಗಿ ಇಂದಿನ ಪ್ರಜಾಪ್ರಭುತ್ವದ ಕಾಲದಲ್ಲಿ ಅಂದಿನ ಕಲೆಯ ನೆಲೆಗಳು ಕಲಾರಾಧಕರಿಗೆ, ಕಲಾ ಶಿಕ್ಷಣಕ್ಕೆ ದೇವಲಾಯಗಳಿಗಾಗಿ ಸಂಶೋಧನೆಗೆ ದೊಡ್ಡ ಆಕಾರ ಸಾಮಾಗ್ರಿಯಾಗಿದೆ'[೧೨].

೧೧. ಪಿ.ಆರ್. ತಿಪ್ಪೇಸ್ವಾಮಿ : ಚಿತ್ರಕಲಾ ಪ್ರಪಂಚ, ಪು.ಸಂ–೨೫೫.
೧೨. ಹೇಮಂತಕುಮಾರ ಎಂ : ಮೈಸೂರು ಜಿಲ್ಲೆಯ ಚಿತ್ರಕಲೆ, (ಅ.ಪ್ರ. ಸಂ.ಪ್ರ), ಪು.ಸಂ–೧೦

'ಭಿತ್ತಿಚಿತ್ರವನ್ನು ಆಂಗ್ಲಭಾಷೆಯಲ್ಲಿ ಮ್ಯೂರಲ್ ಪೇಂಟಿಂಗ್ ಎಂದು ಕರೆಯುತ್ತಾರೆ. ಅನೇಕ ಶಬ್ದಕೋಶ ಮತ್ತು ವಿಶ್ವಕೋಶಗಳಲ್ಲಿ ಭಿತ್ತಿಚಿತ್ರಕಲೆಯ ಅರ್ಥವ್ಯಾಪ್ತಿಯ ಬಗ್ಗೆ ವಿವರಣೆ ಕೊಟ್ಟಿವೆ. ಕ್ಯಾಂಬ್ರಿಜ್ ವಿಶ್ವಕೋಶವು ಗೋಡೆಯ ಮೇಲೆ ಬಣ್ಣದಿಂದ ಬರೆದ ಚಿತ್ರ ಭಿತ್ತಿಚಿತ್ರವೆನಿಸಿದರೆ, ಗೋಡೆಯ ಮೇಲೆ ಕೆತ್ತಿಕೊರೆದು[೧೩] ಅಂಟಿಸಿ ರೂಪಿಸಿದ ಕೃತಿಗಳು ಮತ್ತು ಬಣ್ಣಗಳಿಂದ ಚಿತ್ರಿಸಿದ್ದನ್ನು ಭಿತ್ತಿಚಿತ್ರ ಎಂದು ಹೆಸರಿಸಿದ್ದು ನಮ್ಮ ಪ್ರಾಚೀನರು ಭಿತ್ತಿಚಿತ್ರವನ್ನು ಕೂಡ ಚಿತ್ರವೆನ್ನುತ್ತಾರೆ. ಗೋಡೆಯ ಕಮಾನು, ಕಂಬ ತೊಲೆ ಮತ್ತು ಮೇಲ್ಛಾವಣಿ ಮುಂತಾದ ವಾಸ್ತವಿಕ ಭಾಗಗಳಲ್ಲಿ ರಚನೆಯಾಗಿರುವ ಚಿತ್ರಗಳನ್ನು ಒಟ್ಟಾರೆ ಭಿತ್ತಿಚಿತ್ರಗಳೆಂದು ಕರೆಯುತ್ತಾರೆ. ಪ್ರಾಚೀನ ಗ್ರಂಥಗಳಲ್ಲಿ ಈ ವಿಷಯ ಕುರಿತಾದ ಪ್ರಧಾನ ವಿಷಯವಾಗಿ ಸ್ವತಂತ್ರವಾಗಿ ಇರುವಂತಹ ಗ್ರಂಥಗಳು ಯಾವುದು ಇರುವುದಿಲ್ಲಾ. ಆದರೆ ಪ್ರಸಿದ್ಧ ಸಾಹಿತ್ಯ ಗ್ರಂಥಗಳಲ್ಲಿ ಭಿತ್ತಿಚಿತ್ರಗಳಲ್ಲಿ ವಿಷಯ ಕುರಿತಾದ ಕೆಲವು ಅಧ್ಯಾಯಗಳು ಪದ್ಯವಾಗಿ ಕಾಣುತ್ತವೆ. ಅದರಲ್ಲಿ ಕಶ್ಯಪ್ಪ ಶಿಲ್ಪಶಾಸ್ತ್ರ, ವಿಷ್ಣುಧರ್ಮೋತ್ತರ ಪುರಾಣ, ಮಾನಸೋಲ್ಲಾಸ, ಶಿಲ್ಪ ರತ್ನ ಶಿವತತ್ವ ರತ್ನಾಕರ, ಸಮರಾಂಗಣ ಸೂತ್ರದಾರ ಮುಂತಾದವುಗಳಲ್ಲಿ ಉಲ್ಲೇಖ ಗೊಂಡಿರುತ್ತದೆ.

ಮೈಸೂರು

ಬಹುಶಃ ಕರ್ನಾಟಕದಲ್ಲಿ ಮೈಸೂರು ನಗರದಲ್ಲಿರುವಷ್ಟು ಪ್ರಮಾಣದ ಭಿತ್ತಿಚಿತ್ರಗಳು ಬೇರೆಲ್ಲಿಯೂ ಇಲ್ಲವೆನ್ನಬಹುದು. ಜಗನ್ಮೋಹನ ಬಂಗಲೆಯಲ್ಲಿ ಉತ್ತಮ ಮಟ್ಟದ ಚಿತ್ರಗಳಿವೆ. ಅಲ್ಲದೆ ಕೋಟೆಯಲ್ಲಿರುವ ವರಾಹಸ್ವಾಮಿ, ಪ್ರಸನ್ನ ಕೃಷ್ಣಸ್ವಾಮಿ ದೇವಾಲಯಗಳಲ್ಲಿಯೂ ಚಿತ್ರಗಳಿವೆ. ಕೋಟೆಯ ಹೊರಗೆ ಪ್ರಸನ್ನ ವೆಂಕಟರಮಣಸ್ವಾಮಿಯ ದೇವಾಲಯದಲ್ಲಿ ಚಿತ್ರಗಳಿವೆ.

೧) ಭಿತ್ತಿಚಿತ್ರ ರಚನೆಯ ಕಚ್ಚಾ ಸಾಮಾಗ್ರಿಗಳು :

'ಭಿತ್ತಿಚಿತ್ರ ರಚನೆಯ ಪರಿಕರಗಳಲ್ಲಿ ಎರಡು ರೀತಿಯ ಮೊದಲನೆಯದು ಭಿತ್ತಿ ನಿರ್ಮಾಣ ಪರಿಕರಗಳು ಮತ್ತೊಂದು ಭಿತ್ತಿಚಿತ್ರ ರಚನಾಪರಿಕರಗಳಾಗಿದೆ. ಭಿತ್ತಿಚಿತ್ರ ನಿರ್ಮಾಣ ಪರಿಕರಗಳು ಅನೇಕ ವಸ್ತುಗಳು ಇದ್ದು ಅದರಲ್ಲಿ ಕಲ್ಲಿನ ಪುಡಿ, ಉಸುಕು, ಸುಣ್ಣ, ನಾರು ಪದಾರ್ಥ, ಶಂಖ ಚೂರ್ಣ ಇತ್ಯಾದಿ ಜೊತೆಗೆ ವಿವಿಧ ಗಿಡದ ರಸ, ಕಾಕಂಬಿ, ಬಾಳೆಹಣ್ಣು, ಜೇನುಮೇಣ ಅನೇಕ ವಸ್ತುಗಳನ್ನು ಸೇರಿಸಿ ಭಿತ್ತಿ ನಿರ್ಮಾಣ ಮಾಡಲಾಗುತ್ತದೆ.

೨) ಭಿತ್ತಿಸಿದ್ಧತೆ :

ಭಿತ್ತಿಸಿದ್ಧತೆಯಲ್ಲಿ ಎರಡು ವಿವಿಧ ಪ್ರಕಾರಗಳು ೧.ಒಣಭಿತ್ತಿ ೨.ಹಸಿಭಿತ್ತಿ . ಮೊದಲನೆಯದಲ್ಲಿ ಉಸುಕು, ಪ್ರದಾನವಾದ ಗಾರೆಭಿತ್ತಿ, ಎರಡನೆಯದಾದ ಹಸಿಭಿತ್ತಿಯಲ್ಲಿ ಜೇಡಿಮಣ್ಣು ಮುಂತಾದವುಗಳಿಂದ ನಿರ್ಮಾಣವಾಗುತ್ತದೆ. ಮೈಸೂರು ಜಿಲ್ಲೆಯ ಐತಿಹಾಸಿಕ ಮತ್ತು ಆಧುನಿಕ ಭಿತ್ತಿಚಿತ್ರ ನೆಲೆಗಳು ಒಣಭಿತ್ತಿ–ವಿಧಿ–ವಿಧಾನದ ರಚನೆಯಲ್ಲಿ ನಿರ್ಮಾಣವಾಗಿರುತ್ತದೆ. ಭಿತ್ತಿಸಿದ್ಧತೆಯ ನಾಲ್ಕು ಹಂತಗಳಲ್ಲಿ ನಡೆಯುತ್ತದೆ. ಮೊದಲನೆಯ ಹಂತ ವಸ್ತುಗಳಲ್ಲಿ ಸಂಸ್ಕರಿಸಿಕೊಂಡು ದಿತ್ವೀಯ

೧೩. ಡಾ. ಮಾದಪ್ಪ ಪರಮೇಶಿ(ಸಂ) : (ಕರ್ನಾಟಕದ ಭಿತ್ತಿಚಿತ್ರಕಲೆ) ನಿಜದ ನೆಲೆ, ಪು.ಸಂ.-೯೬೧

ಹಂತವು ವಸ್ತುಗಳನ್ನು ಮಿಶ್ರಣ ಮಾಡುವುದು. ನಂತರ ಅದಕ್ಕೆ ಅಂಟು ದ್ರವಕಗಳಿಂದ ತಿಕ್ಕಿ ನುಣುಪು ಗೊಳಿಸಿ ಕೊನೆಯ ಹಂತ ಸಿದ್ದ ಗೊಂಡ ಭಿತ್ತಿಗೆ ಸುಣ್ಣದ ಹಿನ್ನೆಲೆಯ ಲೇಪನ ಕೊಟ್ಟು ಚಿತ್ರ ಬರೆಯಲೂ ಅಣಿಗೊಳಿಸುವುದಾಗಿದೆ.

೩) ಬಣ್ಣಗಳು :

ಖನಿಜ, ಪ್ರಾಣಿ, ಸಸ್ಯಮೂಲಗಳಿಂದ ಬಣ್ಣಗಳನ್ನು ಪಡೆಯುತ್ತಾರೆ. ಎಲೆ, ಹೂ, ಹಣ್ಣು, ಚಿಗುರು, ಕಾಂಡ ಮತ್ತು ಬೇರುಗಳಿಂದ ಸಸ್ಯಮೂಲ ಬಣ್ಣ ತಲಾರಿಸಿಕೊಳ್ಳುತ್ತಿದ್ದರು. ರಕ್ತ, ಎಲಬು, ಕೊಬ್ಬುಗಳಂತಹ ಪ್ರಾಣಿಮೂಲದ ವರ್ಣ ಹಾಗೂ ಆದಿರು, ಮಣ್ಣು, ಬಣ್ಣದ ಕಲ್ಲುಗಳಂತಹ ಖನಿಜ ಮೂಲ ವರ್ಣಗಳ ಜೊತೆ. ಪ್ರಾಣಿ, ಸಸ್ಯಗಳಿಂದ ಪಡೆದ ಅಂಟು ದ್ರಾವಕಗಳನ್ನು ಸೇರಿಸಿ ಬಣ್ಣ ಲೇಪನ ಮಾಡುತ್ತಿದ್ದರು.

೪) ಕುಂಚಗಳು :

'ಪ್ರಾಣಿಯಿಂದ ಕುಂಚಗಳನ್ನು ತಯಾರಿಸುತ್ತಾರೆ. ಅಳಿಲು ಇತ್ಯಾದಿ ರೊಮಗಳಿಂದ ಹಾಗೂ ಸಸ್ಯದ ಕಾಂಡ, ಬೇರುಗಳಿಳದ ಕಲಾವಿದ ಹಲವು ವಿಧಗಳಲ್ಲಿ ಕುಂಚಗಳನ್ನು ತಯಾರಿಸಿಕೊಳ್ಳುತ್ತಿದ್ದರು. ಇಲ್ಲಿನ ಭಿತ್ತಿಚಿತ್ರ ರಚನೆಯಲ್ಲಿ ಪ್ರೆಸ್ಕೋಸೇಕ್ಕೋ ಎಂಬ ಒಣಭಿತ್ತಿ ವಿಧಾನದಿಂದ ಚಿತ್ರ ರಚಿಸಿದ್ದಾರೆ. ಶಾಸ್ತ್ರ ನಿಯಮನುಸಾರ ಸಾಂಪ್ರಾದಾಯ ಬದ್ಧ ಮಾನವ, ದೇವ-ದೇವತೆಯರು ಹಾಗೂ ಪ್ರಾಣಿ-ಪಕ್ಷಿಗಳ ಅಳತೆಯ ಸೂತ್ರವಾದ ತಾಳಮಾನಗಳಲ್ಲಿ ಚಿತ್ರಯಿಸಿದ್ದಾರೆ. ಷಡಂಗಳು ಅರಿವಿನಿಂದಲೇ ಅಲಂಕಾರಿಕ ನಕ್ಷೆ ಸಹ ಚಿತ್ರಿಸಿದ್ದಾರೆ. ಚಿತ್ರಕಾರರು ಈ ಆರು ಹಂತಗಳಲ್ಲಿ ಪೂರ್ತಿಗೊಳಿಸುತ್ತಿದ್ದರು. ಎಂದು ತಿಳಿದು ಬರುತ್ತದೆ. ಅದನ್ನು ಗೋಡಿ, ಕಿಟಕಿಯ ಬಾಗಿಲು, ಕಂಬ, ಮೇಲ್ಛಾವಣಿಗಳಿಗೆ ಅಳವಡಿಸಿದ ಕಲ್ಲು, ಮರ, ಗಾಜು, ಲೊಹ, ಹಾಳೇಯ ತರಹದ ಮಾಧ್ಯಮಗಳ ಮೇಲೂ ಮೇಸೂರಿನ ಭಿತ್ತಿಚಿತ್ರ ರಚನೆಗೊಂಡಿರುತ್ತದೆ. ಅದರಲ್ಲಿ ಮೂರು ರೀತಿಯ ವಿಧಿವಿಧಾನಗಳಿಂದ ಚಿತ್ರ ರಚಿಸುವುದು ಕಂಡುಬರುತ್ತದೆ. ಮೊದಲನೇದು ಗಾರೆಯ ಭಿತ್ತಿಯ ಮೇಲೆ ರಚಿಸುತ್ತಾರೆ. ಎರಡನೇಯದಾಗಿ ಗೊಡೆಯ ಮೇಲೆ ಬಟ್ಟೆ (ಕ್ಯಾನಮಾಸ್) ಅಂಟಿಸಿ ಚಿತ್ರಯಿಸುವುದು ಅಂತಿಮವಾಗಿ ಆಧುನಿಕ ಮಾಧ್ಯಮ ಪರಿಕಗಳಿಂದ ಭಿತ್ತಿಚಿತ್ರ ರಚನೆಗೊಂದಿರುತ್ತದೆ.

ಇಲ್ಲಿ ವಿಶೇಷವಾಗಿ ೧೭ನೇ ಶತಮಾನದ ನಂತರ ೨೦ನೇ ಶತಮಾನದ ಅಸುಪಾಸಿನ್ನಲ್ಲಿ ದೇಶಿಯ ಗುಣಲಕ್ಷಣಗಳಿಂದ ಕೊಡಿದ ಸಂಪ್ರದಾಯ ಬದ್ಧವಾದ ಧಾರ್ಮಿಕ ಭಿತ್ತಿಚಿತ್ರಕಲೆ ಒಂದು ಪ್ರಕಾರವಾದರೆ ಇನ್ನೊಂದು ಬ್ರೀಟಿಷರ ಪ್ರೇರಣೆಗಳೂ ಗೊಂಡ ರಿಯಾಲಿಸ್ಟಿಕ್, ಮೈಸೂರು ಜಿಲ್ಲೆಯಲ್ಲಿ ಭಿತ್ತಿಚಿತ್ರ ರಚನಾ ಕಾರ್ಯವು ಪ್ರಾಚೀನ ಐತಿಹಾಸಿಕದ ಕಾಲದಿಂದಲೂ ಇರುವುದು ಕೆಲವು ಸಾಹಿತ್ಯಧಾರಗಲ್ಲಿ ಮತ್ತು ಅರಮನೆಯಲ್ಲೂ ಕಾಣುತ್ತೆವೆ. ಆ ನಂತರ ಹದಿನಾಲ್ಕನೆಯ ಶತಮಾನದಲ್ಲಿ ಒಡೆಯರು ಹಲವು ದೇವತೆಗಳ ಸುಂದರ ಭಿತ್ತಿಚಿತ್ರಗಳಿಂದ ಅಲಂಕರಿಸಿದ ಅರಮನೆಯಲ್ಲಿ ವಾಸಿಸುತ್ತಿದ್ದರು. ಎಂದು ಭೇಟಿ ನೀಡಿದ ಪ್ರವಾಸಿಗರ ಪತ್ರ ಮತ್ತು ಅನೇಕ ಸಾಹಿತ್ಯ ಗ್ರಂಥದಲ್ಲಿ ಉಲ್ಲೇಖಗೊಂಡಿರುವುದನ್ನು ವಿದ್ವಾಂಸರು ಗುರುತಿಸಿದ್ದಾರೆ. ಮುಂದಿನ ೧೭ನೇ ಶತಮಾನದಲ್ಲಿ ಟಿಪ್ಪು

ಆಡಳಿತದಲ್ಲಿ ಆ ಅರಮನೆಯನ್ನು ಕೆಡವಿದ್ದರಿಂದ ಅಲ್ಲಿದ್ದ ಭಿತ್ತಿಚಿತ್ರಗಳು ನಾಶವಾಯಿತು ಎಂದು ತಿಳಿದುಬರುತ್ತದೆ. ೧೮ನೇ ಶತಮಾನದಲ್ಲಿ ಅದೇ ಜಾಗದಲ್ಲಿ ಎರಡನೇ ಅರಮನೆಯನ್ನು ಇನ್ನೂ ದೊಡ್ಡದಾಗಿ ಮುಮ್ಮಡಿ ಕೃಷ್ಣರಾಜ ಒಡೆಯರು ಮರದಿಂದ ಅರಮನೆಯನ್ನು ಕಟ್ಟಿಸಿದ್ದರು. ಹಿಂದೂ ಶೈಲಿಯಲ್ಲಿ ಸುಂದರ ಕೆತ್ತನೆಗಳಿಂದ ಕೂಡಿದ ಶಿಲ್ಪಗಳ ಜೊತೆಗೆ ದರ್ಬಾರ್ ಸಂಭಾಗಣವನ್ನು ಬಣ್ಣ ಬಣ್ಣದ ಭಿತ್ತಿಚಿತ್ರಗಳಿಂದಲೂ ಚಿನ್ನದ ಮುಲಾಯಿನಿಂದಲೂ ಅಲಂಕೃತವಾಗಿತ್ತು. ಅಲ್ಲಿ ಕೆಲವು ಯೂರೋಪಿಯನ್ ಕಲಾವಿದರ ಚಿತ್ರಗಳು ಇದ್ದವು ಎಂದು ತಿಳಿದು ಬರುತ್ತದೆ. ೧೮೯೨ರ ಮದುವೆಯ ಸಂದರ್ಭದಲ್ಲಿ ಆ ಮರದ ಅರಮನೆಯ ಮತ್ತೊಂದು ಅರಮನೆಯನ್ನು ಇಲ್ಲಿನ ಅರಸರು ಕಟ್ಟಿಸಿದ್ದರು. ೧೯ನೇ ಶತಮಾನದಲ್ಲಿ ಈ ದೇಶದ ಅಗ್ರಗಣ್ಯ ಕಲಾಕಟ್ಟಡವನ್ನು ಮಹಾರಾಣಿ ಅವರ ಆಸೆಯಂತೆ ಹೊಸ ಅರಮನೆ ಕಟ್ಟಿಸಲಾಯಿತ್ತು. ಅದಕ್ಕೆ ಅಂಬಾವಿಲಾಸದ ಅರಮನೆ, ಮೈಸೂರ ಅರಮನೆ ಎಂದು ಇದು ಪ್ರಪಂಚದಲ್ಲಿ ಖ್ಯಾತಿಗಳಸಿದೆ. ಇದು ಇಂಡೋಸಾರ್ಸೆನಿಕ್ ಮತ್ತು ಮುಸ್ಲಿಂ ಶೈಲಿಯ ಸಂಮಿಶ್ರಣ ಇದರಲ್ಲಿದ್ದು ಒಳ ಎಲ್ಲಾ ಭಾಗದಲ್ಲಿ ಹೊಯ್ಸಳ ಶೈಲಿ, ಮೈಸೂರ ಶೈಲಿಯ ಶಿಲ್ಪಮೂರ್ತಿಗಳು ಅಲಂಕಾರಿಕ ಉಬ್ಬು ಕೆತ್ತನೆ, ನಕ್ಷೆಗಳು ಒಳಗೊಂಡಂತಹಾ ಕಲ್ಯಾಣ ಮಂಟಪ್ಪ ಮತ್ತು ದರ್ಬಾರ್ ಹಾಲ್‌ಗಳಲ್ಲಿ ಭಿತ್ತಿಚಿತ್ರಕಲೆ'[೧೪] ಇರುವುದು ಕಂಡು ಬರುತ್ತದೆ.

ಸೆಂಟ್ ಫಿಲೋಮಿನ ಚರ್ಚ್ , ಮೈಸೂರ

'ಮೈಸೂರಿನಲ್ಲಿ ಸುಂದರವಾಗಿರುವ ಗೋಥಿಕ್ ಶೈಲಿಯ ಈ ಚರ್ಚಿನಲ್ಲಿ ನಕ್ಷ ವಿನ್ಯಾಸದ ಅಲಂಕಾರಗಳು ಮತ್ತು ಗಾಜಿನ ಮೇಲೆ ಚಿತ್ರಿಸಿದ ನಕ್ಷೆಯ ವಿನ್ಯಾಸಗಳು ಕಂಡುಬರುತ್ತವೆ. ದಕ್ಷಿಣ ಭಾರತದ ಚರ್ಚುಗಳಲ್ಲಿ ಇರುವ ಭಿತ್ತಿಚಿತ್ರಗಳನ್ನು ಸ್ಥೂಲವಾಗಿಗಮನಿಸಿದಾಗ ಪೋರ್ಚುಗೀಸರ ಕೊಡುಗೆ ಹೆಚ್ಚಾಗಿರುವುದು ಕಂಡುಬರುತ್ತದೆ. ಉಪಯುಕ್ತ ಮಾಹಿತಿಯೊಂದಿಗೆ ಇಲ್ಲಿ ಸಿಗುವ ಭಿತ್ತಿಚಿತ್ರ ಮತ್ತು ಸಂಕಿರ್ಣ ಚಿತ್ರಗಳ ಸಂರಕ್ಷಣೆಯ ಹೊಣೆ ಈ ಸಂಶೋಧನಾಧ್ಯಯನದ್ದಾಗಿರುತ್ತದೆ'[೧೫].

ಜಗನ್ಮೋಹನ ಅರಮನೆ, ಮೈಸೂರ

'ಈ ಅರಮನೆಯ ಚಿತ್ರಗಳು ೧೮೬೦ರಲ್ಲಿ ರಚನೆಗೊಂಡಿವೆ. ಮೈಸೂರು ಅರಸರು ಕಟ್ಟಿಸಿದ ಅನೇಕ ಅರಮನೆಗಳಲ್ಲಿ ಈ ಅರಮನೆ ಪ್ರಮುಖವಾಗಿದ್ದು, ಇಂದು ಇದನ್ನು ವಿಲಾಸಿ ಹೋಟೆಲ್ ಆಗಿ ಪರಿವರ್ತಿಸಲಾಗಿದೆ. ಈ ಅರಮನೆಯಲ್ಲಿ ಕಂಡುಬರುವ ಚಿತ್ರಗಳಲ್ಲಿ ಪ್ರಮುಖವಾಗಿ ಮೈಸೂರು ಅರಸರಿಗೆ ಸಂಬಂಧಿಸಿದ ಚಿತ್ರಗಳು ಹಲವು ಅವತಾರಗಳು, ಅದರಲ್ಲಿ ವಿಶೇಷವಾಗಿ ಮಹಿಷಾಸುರಮರ್ದಿನಿ, ಶುಂಭಾ ನಿಶುಂಭರನ್ನು ಸಂದರಿಸುತ್ತಿರುವ ದೇವಿ, ರಕ್ತಬೀಜಾಸುರನನ್ನು ಸಂಹರಿಸುತ್ತಿರುವ ದೇವಿ ಹೀಗೆ ಅನೇಕ ಚಿತ್ರಗಳು ಇಲ್ಲಿ ಕಂಡುಬರುತ್ತವೆ. ಅಲ್ಲದೆ ದಸರಾ ಮೆರವಣಿಗೆಯನ್ನು ಪ್ರತಿಬಿಂಬಿಸುವ ಅನೇಕ ಕಲಾಕೃತಿಗಳು ಇಲ್ಲಿ ರಚಿಸಲ್ಪಟ್ಟಿವೆ'[೧೬].

೧೪. ಹೇಮಂತಕುಮಾರ ಎಂ : ಮೈಸೂರು ಜಿಲ್ಲೆಯ ಚಿತ್ರಕಲೆ, (ಅ.ಪ್ರ ಸಂ.ಪ್ರ), ಪು.ಸಂ-೨೧
ಅದೇ ಪು-೨೨,೨೩

೧೫. ಡಿ. ಆರ್. ಸುರೇಂದ್ರನಾಥ : ದಕ್ಷಿಣ ಕರ್ನಾಟಕದ ಭಿತ್ತಿಚಿತ್ರಗಳು, ಪಿ.ಹೆಚ.ಡಿ (ಅ.ಪ್ರ ಮ.ಹಾ) ಪು.ಸಂ-೬೬

೧೬. ಅದೇ ಪು-೬೨

ಜನ್ಮ ಮಂಟಪ, ಚಾಮರಾಜನಗರ

'ಮೈಸೂರು ಅರಸರು ಚಿತ್ರಕಲೆ, ಶಲ್ಪಕಲೆ ಹಾಗೂ ಸಾಹಿತ್ಯಕ್ಕೆ ಪ್ರೋತ್ಸಾಹ ಕೊಟ್ಟಂತೆ ಕಟ್ಟಡಗಳನ್ನು ನಿರ್ಮಿಸುವ ಮೂಲಕ ವಾಸ್ತು ಕಲೆಗೂ ವಿಶೇಷ ಪ್ರೋತ್ಸಾಹ ನೀಡಿದ್ದಾರೆ. ಚಾಮರಾಜ ದೊರೆಗಳ ಸವಿ ನೆನಪಿಗಾಗಿ ಚಾಮರಾಜನಗರ ಎಂಬ ಊರನ್ನು ಸ್ಥಾಪಿಸಿದಲ್ಲದರ ಅದೇ ಊರಿನಲ್ಲಿ ಅವರು ಹುಟ್ಟಿನ ಸವಿ ನೆನಪಿಗಾಗಿ ಜನ್ನ ಮಂಟಪವನ್ನು ಕಟ್ಟಿಸಲಾಗಿದೆ. ಆಗಾಗಿ ಈ ಮಂಟಪಕ್ಕೆ ಜನ್ಮ ಮಂಟಪವೆಂದೇ ಕರೆಯಲಾಗುತ್ತಿದೆ. ಮೈಸೂರು ಅರಸರ ಕಾಲದಲ್ಲಿ ರಚನೆ ಮಾಡಿದ ಚಿತ್ರಗಳು ಸುಂರು ೧೮ನೇ ಶತಮಾನಕ್ಕೆ ಸೇರಿದ್ದಿರಬಹುದು. ಇಲ್ಲಿನ ಚಿತ್ರಗಳಲ್ಲಿ ಮೈಸೂರು ಅರಸರ ವಂಶಾವಳಿ, ಚಾಮರಾಜನಗರದ ಹಿಂದಿನ ತಲೆಮಾರಿನ ದೊರೆಗಳು, ಅವರ ರಾಜಕೀಯ ಸಾಧನೆಗಳು, ಮೈಸೂರು ದಸರಾ ಮೆರವಣಿಗೆಯ ದೃಶ್ಯಗಳು, ಬೇಟೆಯ ದೃಶ್ಯಗಳು ಮುಂತಾದವುಗಳು ಇಲ್ಲಿ ಕಂಡುಬರುತ್ತವೆ'[೧೭].

ಪ್ರಸನ್ನ ಕೃಷ್ಣಸ್ವಾಮಿ ದೇವಾಲಯ, ಮೈಸೂರ

'ಈ ದೇವಾಲಯವನ್ನು ಸಹ ಮೈಸೂರು ಒಡೆಯರ ಕಾಲದಲ್ಲಿ ನಿರ್ಮಾಣಗೊಂಡಿದ್ದು, ಇಲ್ಲಿನ ಚಿತ್ರಗಳು 19ನೆಯ ಶತಮಾನದಲ್ಲಿ ರಚನೆಯಾಗಿವೆ. ಕೋಟೆಯ ಆವರಣದಲ್ಲಿ ಇರುವ ಈ ದೇವಾಲಯದಲ್ಲಿ ವೈಷ್ಣವ ಚಿತ್ರಗಳ ಜೊತೆಗೆ ಶೈವ ಧರ್ಮಕ್ಕೆ ಸಂಬಂಧಪಟ್ಟ ಕಲಾಕೃತಿಗಳನ್ನೂ ಸಹಿತ ಇಲ್ಲಿ ರಚನೆ ಮಾಡಲಾಗಿದೆ.

ಪ್ರಸನ್ನ ವೆಂಕಟರಮಣ ದೇವಾಲಯ, ಮೈಸೂರ

ಈ ದೇವಾಲಯವು ಮೈಸೂರು ಅರಸರ ಕಾಲದಲ್ಲಿ ನಿರ್ಮಾಣಗೊಂಡಿದ್ದು, ಇಲ್ಲಿ ಚಿತ್ರಗಳನ್ನು ಕ್ರಿ.ಶ. ೧೮೨೫ರಲ್ಲಿ ರಚನೆ ಮಾಡಲಾಗಿದೆ. ಈ ದೇವಾಯದಲ್ಲಿ ಪ್ರಮುಖವಾಗಿ ವೈಷ್ಣವ ಚಿತ್ರಗಳಿದ್ದು ವಿಷ್ಣುವಿನ ವಿವಿಧ ಲೀಲೆಗಳನ್ನು, ದಶಾವತಾರದ ಚಿತ್ರಗಳನ್ನು ಮತ್ತು ಕೃಷ್ಣನ ಕಥೆಗೆ ಸಂಬಂಧಿಸಿದ ಚಿತ್ರಗಳನ್ನು ರಚಿಸಲಾಗಿದೆ. ಇವುಗಳ ಜೊತೆಗೆ ಮೈಸೂರು ಅರಸರ ದರ್ಬಾರದ ಚಿತ್ರಗಳು. ರಾಜವಂಶಸ್ಥರ ಚಿತ್ರಗಳು ಇಲ್ಲಿ ಕಂಡುಬರುತ್ತದೆ.

ವರಾಹಸ್ವಾಮಿ ದೇವಸ್ಥಾನ

ಅರಮನೆಯ ಆಗ್ನೇಯ ದಿಕ್ಕಿನಲ್ಲಿರುವ ಮರಾಹಸ್ವಾಮಿ ದೇವಾಲಯವು ಪೂರ್ಣಯ್ಯನವರಿಂದ ಕಟ್ಟಿಸಲಾದದು. ದೇವಾಲಯದ ಗೋಡೆಗಳ ಮೇಲೆ ಚಿತ್ರರಚನೆ ಮಾಡಲಾಗಿದೆ. ರಾಮಾಯಣ, ಭಾಗವತದ ಕಥೆಗಳನ್ನು ಚಿಕ್ಕ ಅಂಕಣಗಳಲ್ಲಿ ಅಡಕಮಾಡಿ ಚಿತ್ರಿಸಲಾಗಿದೆ. ಒಳ್ಳೆಯ ವರ್ಣಶೋಭೆಯಿಂದ ಕೂಡಿದ ಈ ಚಿತ್ರಗಳು ಮೈಸೂರು ಚಿತ್ರಗಾರ ಸಂಪ್ರದಾಯದ ಉತ್ತಮ ನಿದರ್ಶನಗಳಂತಿವೆ. ಮಹಾದ್ವಾರದ ಪಕ್ಕದಲ್ಲಿ ಒಳಪ್ರಾಕಾರದ ಗೋಡೆಯಲ್ಲಿ ದೊಡ್ಡ ಪ್ರಮಾಣದ ರಾಮಪಟ್ಟಾಭಿಷೇಕ ದೃಶ್ಯವಿದೆ. ಆದರೆ ಒಳಗಡೆ ಇರುವ ಚಿತ್ರಗಳಷ್ಟು ಪರಿಷ್ಕಾರವಾಗಿಲ್ಲ'[೧೮].

೧೭. ಬಿ.ವಿ.ಕೆ. ಶಾಸ್ತ್ರೀ : ಕರ್ನಾಟಕ ಭಿತ್ತಿಚಿತ್ರಗಳು, ಪು.ಸಂ-೧೪

೧೮. ಅದೇ ಪು-೧೪

ಇನ್ನು ಹಲವಾರು ಮೈಸೂರು ಪ್ರದೇಶಗಳಲ್ಲಿ ಮಠ, ಮಂದಿರ, ಮನೆ, ಚರ್ಚ, ಅರಮನೆ, ದೇವಾಲಯಗಳಲ್ಲಿ ಭಿತ್ತಿಚಿತ್ರಗಳನ್ನು ನಾವು ನೊಡಬಹುದು.

ಈ ಅಧ್ಯಯನದಲ್ಲಿ ಮೈಸೂರು ಇತಿಹಾಸ, ಪರಿಸರ, ಸಂಸ್ಥಾನದ ಆಡಳಿತ, ಒಡೆಯರ ವಿವರಣೆ, ಕಲಾವಿದರಿಗೆ ನೀಡಿದ ಪ್ರೋತ್ಸಹಾ ಮತ್ತು ಮೈಸೂರು ಸಾಂಪ್ರದಾಯಿಕ ಶೈಲಿಯ ಹುಟ್ಟು-ಬೆಳವಣಿಗೆ, ರಚನೆ ಮಾಡುವ ವಿಧಾನ, ಭಿತ್ತಿಚಿತ್ರ ಕಲೆಯ ವಿವೆರಣೆಯನ್ನು ವಿಸ್ಥಾರವಾಗಿ ಪ್ರಸುತ್ತ ಪಡಿಸುತ್ತ ಪಡಿಸಿದ್ದೆನೆ.

ಮೈಸೂರ ಭಿತ್ತಿಚಿತ್ರಗಳು







ಶ್ರೀ ಶ್ವೇತಾವರಹ ದೇವಾಲಯದ ಭಿತ್ತಿಚಿತ್ರಗಳು

ಮೈಸೂರ ಭಿತ್ತಿಚಿತ್ರಗಳು





ಶ್ರೀ ಶ್ವೇತಾವರಹ ದೇವಾಲಯದ ಭಿತ್ತಿಚಿತ್ರಗಳು

ಮೈಸೂರ ಸಾಂಪ್ರದಾಯಿಕ ಚಿತ್ರಗಳು



ಶ್ರೀ ಸರಸ್ವತಿ



ಶಿವ ಪಾರ್ವತಿ

ಮೈಸೂರ ಸಾಂಪ್ರದಾಯಿಕ ಚಿತ್ರಗಳು



ರಾಮ ಪಟ್ಟಾಭಿಷೇಕಂ



ಗಿರಿಜಾ ಕಲ್ಯಾಣ

ಮೈಸೂರ ಸಾಂಪ್ರದಾಯಿಕ ಚಿತ್ರಗಳು



ರಾಧಾ ಕೃಷ್ಣ



ಗೋಪಾಲ ಕೃಷ್ಣ

ಮೈಸೂರ ಸಾಂಪ್ರದಾಯಿಕ ಚಿತ್ರಗಳು



ಶ್ರೀ ಲಕ್ಷ್ಮಿ



ರಾಜ ರಾಜೇಶ್ವರಿ

ಮೈಸೂರ ಸಾಂಪ್ರದಾಯಿಕ ಚಿತ್ರಗಳು



ಶ್ರೀ ವೆಂಕಟೇಶ್ವರ



ಶ್ರೀ ಗಣೇಶ

ಮೈಸೂರ ಸಾಂಪ್ರದಾಯಿಕ ಚಿತ್ರಗಳು



ಶ್ರೀ ರಾಮ, ಸೀತಾ ಮತ್ತು ಲಕ್ಷ್ಮಣ



ಚಾಮುಂಡೇಶ್ವರಿ

ಮೈಸೂರ ಸಾಂಪ್ರದಾಯಿಕ ಚಿತ್ರಗಳು



ರಾಜ ರಾಜೇಶ್ವರಿ




ಶ್ರೀ ಲಕ್ಷ್ಮಿದೇವಿ

ಮೈಸೂರ ಸಾಂಪ್ರದಾಯಿಕ ಚಿತ್ರಗಳು




ರಾಮಾಯಣದ ದೃಶ್ಯ



ಯಶೋಧ ಕೃಷ್ಣ

ಮೈಸೂರ ಸಾಂಪ್ರದಾಯಿಕ ಚಿತ್ರಗಳು




ರಾಜ ರಾಜೇಶ್ವರಿ



ಶ್ರೀ ರಾಮ

ಮೈಸೂರ ಸಾಂಪ್ರದಾಯಿಕ ಚಿತ್ರಗಳು



ಕೃಷ್ಣ ಮತ್ತು ಗೋಪಿಯರು



ವೀರ ನರಸಿಂಹ

ಮೈಸೂರ ಸಾಂಪ್ರದಾಯಿಕ ಚಿತ್ರಗಳು



ಶ್ರೀ ಲಕ್ಷ್ಮಿದೇವಿ



ಹನುಮಾನ

ಮೈಸೂರ ಸಾಂಪ್ರದಾಯಿಕ ಚಿತ್ರಗಳು



ಕರ್ನಾಟಕ ಚಿತ್ರಕಲಾ ಪರಿಷತ್ತ ಮ್ಯೂಸಿಯಂ



ಅಧ್ಯಾಯ–ನಾಲ್ಕು

ಸುರಪುರ ಸಾಂಪ್ರದಾಯಿಕ ಕಲಾಕೃತಿಗಳ ಹುಟ್ಟು ಮತ್ತು ಬೆಳವಣಿಗೆ

ಅಧ್ಯಾಯ ನಾಲ್ಕು

ಸುರಪುರ ಸಾಂಪ್ರದಾಯಿಕ ಕಲಾಕೃತಿಗಳ ಹುಟ್ಟು ಮತ್ತು ಬೆಳವಣಿಗೆ

'ನೂತನವಾದ ಸ್ಥಾಪನೆಗೊಂಡ ಯಾದಗಿರಿ ಜಿಲ್ಲೆಯ ತಾಲ್ಲೂಕು ಸುರಪುರ ಹಿಂದೊಮ್ಮೆ ಇಲ್ಲಿನ ಆರಸರ ಕಾಲದಲ್ಲಿ ತನ್ನ ಘನತೆ-ಗೌರವಗಳಿಂದ ಬಹು ಖ್ಯಾತಿಯನ್ನು ಹೊಂದಿತ್ತು. ಸುರಪುರವನ್ನು ಸಂಸ್ಥಾನವನ್ನಾಗಿ ಮಾಡಿಕೊಂಡು ಆಳ್ವಿಕೆಯನ್ನು ನಡೆಸಿದ ಇಲ್ಲಿನ ನಾಯಕ ಮನೆತನದವರು ಶೂರರು ಮತ್ತು ಸುಸಂಸ್ಕೃತಿಕ ಸಿರಿವಂತಿಕೆಯನ್ನು ಹೊಂದಿದವರಾಗಿದ್ದರು. ಸುರಪುರ ಸಂಸ್ಥಾನವೆಂದರೆ ಕೇಂದ್ರಸ್ಥಾನ ಸುರಪುರಕ್ಕೆ ಮಾತ್ರ ಸೀಮಿತವಾಗಿರದೇ ಯಾದಗಿರಿ ಜಿಲ್ಲೆಯ ಶಹಾಪುರ ಮತ್ತು ಗುಲಬರ್ಗಾ ಜಿಲ್ಲೆಯ ಜೇವರ್ಗಿ ತಾಲ್ಲೂಕುಗಳನ್ನು ಒಳಗೊಂಡಿತ್ತು. ಈ ಪ್ರದೇಶವನ್ನು 'ಸಗರನಾಡು' ಎಂದು ಕರೆಯಲಾಗುತ್ತಿತು.

ಸುರಪುರ ಪರಿಸರ :

ಕಿರಿದಾದ ಬೆಟ್ಟಗುಡ್ಡಗಳ ಸಾಲುಗಳಿಂದ ತುಂಬಿದ ಹಾಸುಬಂಡೆಗಳಿಂದಲೂ, ಭೀಮಾಕಾರದ ದುಂಡುಶಿಲೆಗಳಿಂದಲೂ ತುಂಬಿದ ಬೆಟ್ಟದ ಸಾಲುಗಳು ಈ ತಾಲ್ಲೂಕಿನುದ್ದಕ್ಕೂ ವಿಸ್ತಾರವಾಗಿ ಹರಡಿಕೊಂಡಿವೆ. ಮಳೆಗಾಲ, ಚಳಿಗಾಲದ ದಿನಗಳಲ್ಲಿ ಹೊನ್ನೆ, ಸುಹೊನ್ನೆ, ಅವರೆ, ಬಿಟ್ಟಿಲು, ಸೀತಾಫಲ ಮುಂತಾದ ಗಿಡ-ಗಂಟೆ, ಪೊದೆಗಳಿಂದಲೂ, ತುಂಬೆ, ತುಳಸಿ, ಕಾಡು ಸೇವಂತಿಗೆ, ಗಣಜಲಿ, ಉತ್ತರಾಣಿಯಂತಹ ವನಸ್ಪತಿಗಳಿಂದಲೂ, ಹಾಸುಬಂಡೆಗಳಿಂದ ಜಾರಿಬರುವ ಝರಿಗಳಿಂದಲೂ ಈ ಬೆಟ್ಟಗಳೂ ತಮ್ಮ ಚೆಲುವನ್ನು ಮತ್ತಷ್ಟು ಶೃಂಗರಿಸಿಕೊಂಡಿವೆ. ಈ ರೀತಿಯ ನಿಸರ್ಗ ರಮಣೀಯತೆಯನ್ನು ಪಡೆದ ಈ ನೆಲ ತನ್ನ ಗರ್ಭದಲ್ಲಿ ಅಕ್ಷಯ ಭಂಡಾರನ್ನೇ

ಇಟ್ಟುಕೊಂಡಿದೆ.ಗುಲಬರ್ಗಾದಿಂದ ಬೆಂಗಳೂರಿಗೆ ಹೋಗುವ ಹೆದ್ದಾರಿಗೆ ಸುರಪುರ ಹೊಂದಿಕೊಂಡಿದೆ. ಈ ತಾಲ್ಲೂಕಿನ ಉತ್ತರಕ್ಕೆ ಜೇವರ್ಗಿ, ಪೂರ್ವಕ್ಕೆ ಶಹಾಪುರ ತಾಲ್ಲೂಕುಗಳಿವೆ. ದಕ್ಷಿಣದಲ್ಲಿ ಹರಿದು ಹೋಗುವ ಕೃಷ್ಣಾನದಿ ಈ ತಾಲ್ಲೂಕನ್ನು ರಾಯಚೂರು ಜಿಲ್ಲೆಯಿಂದ ಪ್ರತ್ಯೇಕಗೊಳಿಸುತ್ತದೆ. ಅಲ್ಲದೇ ಪಶ್ಚಿಮಕ್ಕೆ ವಿಜಾಪುರ ಜಿಲ್ಲೆಯ ತಾಲ್ಲೂಕುಗಳ ಸೀಮೆಯನ್ನು ಹೊಂದಿದೆ. ಇವು ಸುರಪುರ ತಾಲ್ಲೂಕಿನ ಗಡಿಗಳನ್ನು ನಿರ್ಧರಿಸುತ್ತವೆ. ಸುರಪುರ ತಾಲ್ಲೂಕು ಯಾದಗಿರಿ, ರಾಯಚೂರು ಮತ್ತು ವಿಜಾಪುರ ಜಿಲ್ಲೆಗಳಿಗೆ ಮಧ್ಯದಲ್ಲಿದೆ. ಕೋಟೆ ಕೊತ್ತಲಗಳಿಂದ, ಅರಮನೆ ಗುರುಮನೆಗಳಿಂದ ಶೋಭಿಸುವ ಐತಿಹಾಸಿಕ ನಗರ ಸುರಪುರ ಕಂಡವರ ಕಣ್ಮನಗಳನ್ನು ಸೂರೆಗೊಂಡು ತಡೆದು ನಿಲ್ಲಿಸುತ್ತದೆ. ಈ ಹಿಂದೆ ಸುರಪುರವನ್ನು ಸಂಸ್ಥಾನವನ್ನಾಗಿ ಮಾಡಿಕೊಂಡು ಆಳ್ವಿಕೆಯನ್ನು ನಡೆಸಿದ ಬೇಡನಾಯಕರು ಕೆಚ್ಚೆದೆಯ ವೀರರಾಗಿದ್ದರು. ಇವರು ಸುಮಾರು ಇನ್ನೂರು ವರ್ಷಗಳಿಗೂ ಅಧಿಕ ಕಾಲ ಸುರಪುವನ್ನಾಳಿದರು ಎಂಬುದು ಈಗಾಗಲೇ ತಿಳಿದ ವಿಷಯವಾಗಿದೆ"[೧]. 'ಕ್ರಿ.ಶ. ೧೮೪೭–೫೮ರಲ್ಲಿ ಆಳ್ವಿಕೆಯನ್ನು ಮಾಡುತ್ತಿದ್ದ ಕೊನೆಯ ದೊರೆ ನಾಲ್ವಡಿ ವೆಂಕಟಪ್ಪನಾಯಕ ಆಂಗ್ಲರೊಡನೆ ಹೋರಾಡಿ ವೀರ ಸ್ವರ್ಗವನ್ನು ಹೊಂದಿದ ಮೇಲೆ ಸುರಪುರ ಆಂಗ್ಲರಿಂದ ಹೈದರಾಬಾದಿನ ನಿಜಾಮನ ವಶಕ್ಕೆ ಸೇರಿತು'[೨]. ಅಂದಿನಿಂದ ಸುರಪುರವನ್ನು ಶೋರಾಪುರವೆಂತಲೂ ಕರೆಯಲಾಗುತ್ತಿದೆ.

ಭೌಗೋಳಿಕ ಹಿನ್ನೆಲೆ :

ಸುರಪುರ ತಾಲ್ಲೂಕಿನ ಮಂಗಳೂರು ಗ್ರಾಮದ ಬಳಿ ಹಿಂದೆ ಬಂಗಾರದ ಗಣಿಗಳಿದ್ದವೆಂಬುದು ಭೂಗರ್ಭ ಸಂಶೋಧಕರ ಅಭಿಪ್ರಾಯವಾಗಿದೆ. ಮಾವಿನಮಟ್ಟಿ, ಚನಾಪೂರವೆಂಬ ಗ್ರಾಮಗಳಿಂದ ಪ್ರಾರಂಭವಾಗಿ ನಗನೂರು ವರೆಗಿನ ಭೂಭಾಗದಲ್ಲಿ ಬಂಗಾರದ ನಿಕ್ಷೇಪಗಳಿವೆಯೆಂದು ಹೇಳಲಾಗುತ್ತದೆ. ೧೯೦೫ ರಲ್ಲಿ ಕಂಪನಿಯೊಂದು ಗಣಿ ಉದ್ಯೋಗವನ್ನು ಪ್ರಾರಂಭಿಸಿತ್ತು. ಕಾರಣಾಂತರಗಳಿಂದ ೧೯೧೪ ರಲ್ಲಿ ಈ ಕಾರ್ಯ ಸ್ಥಗಿತಗೊಂಡಿತು. ಇಂದಿನ ಲಿಂಗಸುಗೂರ ತಾಲ್ಲೂಕಿನ ಹಟ್ಟಿಯ ಚಿನ್ನದ ಗಣಿಯ ತರುವಾಯ ಸುರಪುರ ಪ್ರದೇಶದಲ್ಲಿ ತಕ್ಕ ಪ್ರಮಾಣದ ಚಿನ್ನ ಲಭ್ಯವಾಗಬಹುದುದೆಂಬುದು ತಜ್ಞರ ಅಭಿಪ್ರಾಯ.

ಸಂಸ್ಥಾನದ ಕೊನೆಯ ಅವಧಿಯಲ್ಲಿ 'ಬ್ರಿಟೀಷ್ ಸರ್ಕಾರದ ರಾಜಕೀಯ ಪ್ರತಿನಿಧಿಯಾಗಿ ಬಂದಿದ್ದ 'ಮೆಡೋಸ್ ಟೇಲರ'ನು ಭೂಗರ್ಭಶಾಸ್ತ್ರಜ್ಞ ಆಗಿದ್ದನಲ್ಲದೇ'[೩], ಈ ಪ್ರದೇಶದ ಹಲವೆಡೆ ಸಂಚರಿಸಿ ಅನೇಕ ಪ್ರಕಾರದ ನಿಕ್ಷೇಪಗಳನ್ನು ಶೋಧಿಸಿದ್ದಾನೆ. ಸುರಪುರ ಪ್ರದೇಶದಲ್ಲಿ ಅರ್ಧ ಅಂಗುಲದಿಂದ ಆರು ಅಂಗುಲ ಅಗಲವುಳ್ಳ ಸ್ಫಟಿಕದ ಹರಳುಗಳು ದೊರಕುತ್ತವೆ. ಮೂದಲಭಾವಿ, ಹಗರಟಗಿ ಹಾಗೂ ಕೊಡೆಕಲ್ಲುಗಳಲ್ಲಿ ಗಾಜಿನ ತಯಾರಿಕೆಗೆ ಬೇಕಾಗುವ ಹರಳು, ಬೆಳ್ಳನೆಯ ಮರಳು ಹೇರಳವಾಗಿ ಸಿಗುತ್ತದೆ. ರಾಜನಕೋಳೂರು ಗ್ರಾಮದಲ್ಲಿ ವಜ್ರದ ಗಣಿಗಳಿದ್ದವೆಂದು, ಇದೇ ಗ್ರಾಮದ ವ್ಯಾಪ್ತಿಯಲ್ಲಿ ಕೊಹಿನೂರು ವಜ್ರ ದೊರೆತಿರಬಹುದೆಂದು ಡಾ. ಸದಾನಂದ ಕನವಳ್ಳಿಯವರು ತಮ್ಮ

೧. ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ : ಸುರಪುರ ಚಿತ್ರಕಲೆ, ಪು.ಸಂ–೧೦.

ಅದೇ. ಪು.ಸಂ–೧೧

೨. ಡಾ. ಅಮರೇಶ ಯತಗಲ್ : ಚಾರಿತ್ರಿಕ ಸುರಪುರ, ಪು.ಸಂ-೩೧
೩. ಎಸ್.ಕೆ.ಅರುಣಿ : ದಖನಿ ಚಿತ್ರಕಲೆ, ಪು.ಸಂ-೨೦

ಗ್ರಂಥವೊಂದರಲ್ಲಿ ವಿವರಿಸಿದ್ದಾರೆ. ಸುರಪುರ ತಾಲ್ಲೂಕಿನ ತಿಂಥಣಿ ಗ್ರಾಮದಲ್ಲಿ ತಾಮ್ರದ ಅದಿರು ದೊರಕುತ್ತದೆ. ಇದೇ ತಾಲ್ಲೂಕಿನ ಹುಸಗಿಯ ಸುತ್ತಮುತ್ತಲಿನ ಗ್ರಾಮಗಳಾದ ವಜ್ಜಲ, ಚೆನ್ನರುಗಳಲ್ಲಿ ಸಿಮೆಂಟ್ ತಯಾರಿಕೆಗೆ ಬೇಕಾಗುವ ಸುಣ್ಣದ ಕಲ್ಲು ಹೇರಳವಾಗಿ ದೊರೆಯುತ್ತದೆ.

ಹೀಗೆ ಸುರಪುರ ಪ್ರದೇಶ ಅನೇಕ ರೀತಿಯ ಭೌಗೋಳಿಕ ವೈಶಿಷ್ಟ್ಯತೆಗಳನ್ನು ತನ್ನ ಒಡಲಲ್ಲಿ ಇರಿಸಿಕೊಂಡಿದೆ. ಇಂಥ ಒಂದು ವೈವಿಧ್ಯಮಯವಾದ ಪ್ರದೇಶವನ್ನು ಆಕರ್ಷಣೆಗೊಂಡ ಸುರಪುರ ಅರಸರು ಸಹಜವಾಗಿಯೇ ಇಲ್ಲಿ ಸಂಸ್ಥಾನವನ್ನು ಕಟ್ಟಿ ಆಳ್ವಿಕೆಯನ್ನು ನಡೆಸಿರುವಲ್ಲಿ ಎರಡು ಮಾತಿಲ್ಲ.

ಪೌರಾಣಿಕ ಹಿನ್ನೆಲೆ :

'ಸುರಪುರ ಪ್ರದೇಶವೆಂದರೆ, ಸಗರನಾಡೆಂದೇ ಅರ್ಥ. ಈ ನಾಡಿಗೆ 'ಸಗರನಾಡು' ಎಂಬ ಹೆಸರು ಬಂದದ್ದು ಪುರಾಣ ಕಾಲದಿಂದಲೇ. ಪುರಾಣ ಪ್ರಸಿದ್ಧನೂ, ಮಹಾ ಬಲಶಾಲಿಯೂ, ಪರಮ ಧಾರ್ಮಿಕನೂ ಆದ ಸಗರ ಚಕ್ರವರ್ತಿ 'ಸಗರ'ವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದನೆಂದು ಪ್ರತೀತಿ.

ಪೌರಾಣಿಕ ಕಥೆಯ ಪ್ರಕಾರ- ಇಕ್ಷ್ವಾಕು ವಂಶದ ಅಂಬರೀಷನೆಂಬ ರಾಜನು ಪರಮ ಜ್ಞಾನಿಯೂ ರಾಜರ್ಷಿಯೂ ಆಗಿದ್ದನು. ಒಮ್ಮೆ ಅಂಬರೀಷನು ಬ್ರಹ್ಮ ಶಾಪಕ್ಕೆ ಗುರಿಯಾಗುತ್ತಾನೆ. ಮುಂದೆ ಇದೇ ವಂಶದ ಸತ್ಯವೃತ (ತ್ರಿಶಂಕು)ನಿಗೆ ಹರಿಶ್ಚಂದ್ರನೆಂಬ ಪ್ರಖ್ಯಾತ ಮಗ ಹುಟ್ಟಿದ. ಈ ಹರಿಶ್ಚಂದ್ರನಿಗೆ ರೋಹಿತನೆಂಬ ಮಗನಿದ್ದು, ಈ ರೋಹಿತನ ಮಗನೇ ಹರಿತ. ಹರಿತನ ಮೊಮ್ಮಗನಾದ ಬಾಹುಕನು ಯುದ್ಧದಲ್ಲಿ ಪರಾಭವಗೊಂಡು ನಿರಾಶನಾಗಿ ತನ್ನ ಮಡದಿಯೊಡನೆ ಅರಣ್ಯವನ್ನು ಸೇರಿದನು. ಆ ಸಮಯದಲ್ಲೇ ವೃದಾಪ್ಯದಿಂದ ಬಾಹುಕನು ಮರಣ ಹೊಂದಿದನು. ಅನಂತರ ಅವನ ಮಡದಿಯು ಓರ್ವ ಮಹರ್ಷಿಯ ಸಂಬಂಧದಿಂದ ಗರ್ಭವತಿಯಾದಳು. ಈಕೆಯ ಸವತಿಯರು ಅಸೂಯೆಯಿಂದ ಆಕೆಗೆ ತಿಳಿಯದ ಹಾಗೆ ವಿಷ ಉಣಿಸಿ ಭ್ರೂಣವನ್ನು ನಾಶ ಮಾಡಲು ಪ್ರಯತ್ನಿಸಿದಾಗ್ಯೂ ಗರ್ಭದ ಮೇಲೆ ಆ ವಿಷವು ಯಾವ ಪ್ರಭಾವ ಬೀರದೇ ಮಗುವೊಂದು ಜನಿಸಿತು. 'ಗರ'(ವಿಷ)ವನ್ನು ಮೈತಳೆದು ಜನಿಸಿದ ಮಗುವೇ 'ಸಗರ'ನೆಂಬ ಹೆಸರನ್ನು ಪಡೆದ. ಈತನೇ ಮುಂದೆ ಯಶಸ್ವಿ ಸಾಮಾಟ್ರನಾಗಿ 'ಸಗರ ಚಕ್ರವರ್ತಿ' ಎನಿಸಿಕೊಂಡು ಸಗರನಾಡನ್ನು ಯಶಸ್ವಿಯಾಗಿ ಆಳ್ವಿಕೆ ಮಾಡಿದನೆಂಬುದು ಪೌರಾಣಿಕ ನಂಬಿಕೆ.

ಇದೇ ರೀತಿಯ ಪೌರಾಣಿಕ ಹಿನ್ನೆಲೆಯನ್ನು ಹೊಂದಿದ ಇನ್ನೊಂದು ಸ್ಥಳವೆಂದರೆ, ಛಾಯಾ ಭಗವತಿ. ಈ ಸ್ಥಳವಿಂದು ಸುರಪುರ ತಾಲ್ಲೂಕಿನ ಪವಿತ್ರ ಯಾತ್ರಾ ಸ್ಥಳವಾಗಿ ರೂಪುಗೊಂಡಿದೆ. ಸೂರ್ಯನ ಹೆಂಡತಿಯಾದ ಸಂಧ್ಯಾ ತಾಪಕ್ಕೆ ಬೇಸತ್ತು ತವರಿಗೆ ತೆರಳಲು ನಿಶ್ಚಯಿಸುತ್ತಾಳೆ. ಆದರೆ ಆಕೆಯು ತಾನು ಹೊರಡುವ ಮುನ್ನ ತನ್ನ ಪ್ರತಿರೂಪವನ್ನು ನಿರ್ಮಿಸಿ, ಅವಳಿಗೆ ಛಾಯೆ ಎಂದು ನಾಮಕರಣ ಮಾಡಿ ತನ್ನ ಸ್ಥಳದಲ್ಲಿರಿಸುತ್ತಾಳೆ. ಸೂರ್ಯನಾರಾಯಣನು ಛಾಯೆಯನ್ನು ತನ್ನ

ಪತ್ನಿಯೆಂದೇ ಭ್ರಮಿಸಿ ಅವಳೊಡನೆ ಜೀವನ ಸಾಗಿಸುತ್ತಾನೆ. ಮುಂದೆ ಗುಟ್ಟು ರಟ್ಟಾದಾಗಿ ಛಾಯೆಯನ್ನು ಅಲ್ಲಿಯೇ ಬಿಟ್ಟು ಸಂಧ್ಯ ಇದ್ದಲ್ಲಿಗೆ ಹೋಗಿ ಅವಳನ್ನು ಸೇರಿಕೊಳ್ಳುತ್ತಾನೆ. ಸೂರ್ಯನಾರಾಯಣ ಹೊರಟು ಹೋದ ಮೇಲೆ ಛಾಯೆಯು ಅಸಹಾಯಕಳಾಗಿ ಕಷ್ಟದಿಂದ ಒಂಟಿತನವನ್ನು ಅನುಭವಿಸಿದಳು. ಮುಂದೆ ಸೂರ್ಯದೇವನಿಗೆ ತನ್ನ ತಪ್ಪಿನ ಅರಿವು ಉಂಟಾಯಿತು. ಜೊತೆಗೆ ಪಶ್ಚಾತಾಪವೂ ಆಯಿತು. ಅದರ ಪ್ರಾಯಶ್ಚಿತಕ್ಕಾಗಿ ಸೂರ್ಯದೇವನು ಪ್ರತಿನಿತ್ಯವೂ ಉದಯದಲ್ಲಿ ತನ್ನ ಪ್ರಥಮ ಕಿರಣವನ್ನು ಪಸರಿಸಿ ಛಾಯೆಯ ಪಾದಕ್ಕೆರಗುವನಂತೆ. ಇದೊಂದು ಪೌರಾಣಿಕ ನಂಬಿಕೆಯಾಗಿದೆ. ನಾರಾಯಣಪುರ ಸಮೀಪ ಛಾಯಾ ಭಗವತಿಯ ದೇವಾಲಯವನ್ನು ನಾವು ಇಂದಿಗೂ ನೋಡಬಹುದು. ಇಂಥ ಇನ್ನೂ ಅನೇಕ ಪೌರಾಣಿಕ ಹಿನ್ನೆಲೆಯುಳ್ಳ ಕಥೆಗಳು, ನಂಬಿಕೆಗಳು ಸುರಪುರ ಪ್ರದೇಶದುದ್ದಕ್ಕೂ ಕಂಡುಬರುತ್ತವೆ.

ಐತಿಹಾಸಿಕ ಹಿನ್ನೆಲೆ :

ಪೌರಾಣಿಕ ಹಿನ್ನೆಲೆಗಳೊಂದಿಗೆ ಐತಿಹಾಸಿಕವಾಗಿಯೂ ಸುರಪುರ ಪ್ರದೇಶ ಮಹತ್ವದ ಸ್ಥಾನವನ್ನು ಪಡೆದಿದೆ. ಅತ್ಯಂತ ಪ್ರಾಚೀನ ಕಾಲದ ಅವಶೇಷಗಳನ್ನು ಹೊಂದಿರುವ ಸ್ಥಳಗಳ ಸಂಖ್ಯೆಯೂ ಕಡಿಮೆಯೇನಿಲ್ಲ. ದೇವಪುರ, ಕಕ್ಕೇರಿ, ರಾಜನಕೋಳೂರು, ಹಗರಟಗಿ, ಕೆಂಭಾವಿ, ಏವೂರು, ಶಹಾಪೂರ ತಾಲ್ಲೂಕಿನ ಸಗರ ಮಂದಾಕಿನಿ, ಜೇವರ್ಗಿ ತಾಲ್ಲೂಕಿನ ಕುಳಗೇರಿ ಮುಂತಾದ ಸ್ಥಳಗಳನ್ನು ಇಲ್ಲಿ ಹೆಸರಿಸಬಹುದು. ರಾಜನಕೋಳೂರು, ಹಗರಟಗಿ ಮುಂತಾದ ಸ್ಥಳಗಳಲ್ಲಿ ಉದ್ದನೆಯ ಕಾಡು ಬಂಡೆಗಳಿಂದ ಗುಡಿಗಳಾಕಾರದ ಸಮಾಧಿಗಳು ಕಂಡುಬಂದಿವೆ. ಇಂಥವುಗಳನ್ನು ಇಂಗ್ಲೆಂಡ್ ಮತ್ತು ವೇಲ್ಸ್‌ನಲ್ಲೂ ಕಾಣಬಹುದಾಗಿದೆ. ಈ ಪ್ರದೇಶದ ಇನ್ನೂ ಕೆಲವೆಡೆ ಒಂದೊಂದೆ ಕಾಡುಗಲ್ಲಿನಿಂದಲೂ, ಎರಡೆರಡು ಬಂಡೆಗಳಿಂದಲೂ ಮತ್ತು ಕಲ್ಲಿನ ಕುಂಡೆಗಳಿಂದಲೂ ಮುಚ್ಚಲಾದ ಸಮಾಧಿಗಳಿವೆ. 'Cairns' or 'Borrows'ಎಂದು ಕರೆಯಲಾಗುವ ಈ ತರಹದ ಸಮಾಧಿಗಳು ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ, ಮಧ್ಯ ಏಷಿಯಾ ಹಾಗೂ ಭಾರತದ ಕೆಲವೆಡೆ ಕಾಣಸಿಗುತ್ತವೆ. ಈ ಅವಶೇಷಗಳು ಸುಮಾರು ಮೂರು ಸಾವಿರ ವರ್ಷಗಳಾಚೆ ದ್ರಾವಿಡ ಜನಾಂಗವು ನಿರ್ಮಿಸಿದವುಗಳೆಂದು ಫ್ರಾಕ್ತನ ವಿದ್ವಾಂಸ ಫಿಲಿಫ್ ಮೆಡೋಸ್ ಟೇಲರ್ ಅಭಿಪ್ರಾಯ ಪಡುತ್ತಾನೆ. ಈ ಮಾದರಿಯ ಶವಾಗಾರಗಳು ಭೀಮಾ ನದಿ ದಂಡೆಯ ನೆಲ್ವಿಗೆ, ಜೇವರ್ಗಿ, ಆಂದೋಲಾ, ಮಾಲಗತ್ತಿ, ಕೊಡೆಕಲ್ಲು, ರಸ್ತಾಪುರ, ವಿಭೂತಿಹಳ್ಳಿ ಮತ್ತು ಯಾದಗಿರಿ ಸಮೀಪದ ಬೆಳಗೇರಿ ಮುಂತಾದ ಸ್ಥಳಗಳಲ್ಲಿ ಕಂಡುಬರುತ್ತವೆ.

ಸುರಪುರ ಪ್ರದೇಶದ ಹೆಬ್ಬಾಲ ಬುರೂಜ ಮತ್ತು ಇತರೆಡೆ ಆದಿಮಾನವರು ಕೊರೆದು ನಿರ್ಮಿಸಿದ ಚಿತ್ರಗಳು ಕಂಡುಬಂದಿದೆ. ಡಾ. ಎಸ್.ಕೆ. ಅರುಣಿಯವರು ತಮ್ಮ ಇತ್ತೀಚಿನ ಸಂಶೋಧನೆಯಲ್ಲಿ ಈ ಚಿತ್ರಗಳನ್ನು ಕಂಡುಕೊಂಡಿದ್ದಾರೆ. ಜೊತೆಗೆ ಇದೇ ಪ್ರದೇಶದ ಕೆಲವೆಡೆ ಪ್ರಾಗೈತಿಹಾಸಿಕ ಕಾಲದ ಮೃತ್ಪಾತ್ರೆಗಳು, ಬಿಳುಪುಗಲ್ಲಿನಿಂದ ಮಾಡಿದ ಅನೇಕ ಕುರುಹುಗಳನ್ನು ಸಹ ತಮ್ಮ ಸಂಶೋಧನೆಯಿಂದ ಪತ್ತೆಹಚ್ಚಿದ್ದಾರೆ. ಐತಿಹಾಸಿಕವಾಗಿ ಹೇಳುವುದಾದರೆ. ಈ ಭಾಗದಲ್ಲಿ ಶಾತವಾಹನರು, ಬಾದಾಮಿಯ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಹೈಹಯರು,

ವಿನ್ಯಾಸಗಳನ್ನು ಮಾಡಲಾಗುತ್ತಿತ್ತು. ತಾಳಮಂಡಲ ಸೀರೆಯನ್ನು ಕಪ್ಪು ಬಣ್ಣದಲ್ಲಿ ನೇಯಲಾಗಿ, ಅಲಲ್ಲಿ ಬಿಳಿ ವರ್ಣದ ವಿನ್ಯಾಸಗಳನ್ನು ಮೂಡಿಸಲಾಗುತ್ತಿತ್ತು. ಗರುಡಾದ್ರಿ ಕಮಲಯ್ಯನು ಚಿತ್ರಿಸಿರುವ ಒಂದೆರಡು ಭಾವಚಿತ್ರಗಳು ಸುರಪುರದಲ್ಲಿ ಕಂಡುಬಂದಿದ್ದು, ಈ ಚಿತ್ರಗಳ ನಾಲ್ಕೂ ಮೂಲೆಗಳಲ್ಲಿ ಎಲೆ, ಹೂ-ಬಳ್ಳಿಗಳ ವಿನ್ಯಾಸಗಳನ್ನು ಚಿತ್ರಿಸಿದೆ. ಇಂಥದೇ ವಿನ್ಯಾಸಗಳು ಸುರಪುರ ಸೀರೆಗಳಲ್ಲೂ ಮಾಡಲಾಗಿದೆ.

ಈ ರೀತಿಯ ವಿನ್ಯಾಸವನ್ನು ಹೊಂದಿದ ಒಂದು ಸೀರೆ ಎರಡನೆ ಬೆನಕಯ್ಯನವರ ಮನೆಯಲ್ಲಿ ನಾವು ಇಂದಿಗೂ ನೋಡಬಹುದಾಗಿದೆ. ಒಂದರ್ಥದಲ್ಲಿ ಸುರಪುರ ಕಲೆಯಲ್ಲಿ ಕಂಡುಬರುವ ಪ್ರಭಾವಳಿ ವಿನ್ಯಾಸ ಅಥವಾ ಸುಳುವಿನ ವಿನ್ಯಾಸ ಅಂದು ಈ ಮೇಲೆ ಹೇಳಿದ ಸೀರೆಗಳಲ್ಲೂ ಕಂಡುಬಂದಿದೆ. ಸೀರೆಗಳಲ್ಲಿ ಈ ರೀತಿಯ ವಿನ್ಯಾಸಗಳು ಕಾಣಿಸಲು ಗರುಡಾದ್ರಿ ಕಮಲಯ್ಯ ಮತ್ತು ನೇಯ್ಗೆ ಮಾಡಲಾಗುವ ಮನೆಯ ಹಿರಿಯರ ಒಡನಾದ ಎನ್ನಲಾಗುತ್ತದೆ. ಸರುಪುರದ ಸುತ್ತಮುತ್ತಲ ಹಳ್ಳಿಗಳಲ್ಲದೇ ಯಾದಗಿರಿ, ಲಿಂಗಸುಗೂರು, ರಾಯಚೂರು, ಗುಲಬರ್ಗಾ ಮತ್ತು ಬಿಜಾಪುರದವರೆಗೂ ಈ ಸೀರೆಗಳನ್ನು ನೇಯಲಾಗುತ್ತಿತ್ತು. ಮಾತ್ರವಲ್ಲದೇ ಇವು ಸುರಪುರ ಸೀರೆಗಳೆಂದೇ ಪ್ರಚಲಿತದಲ್ಲಿದ್ದವು. ನಂತರದ ದಿನಗಳಲ್ಲಿ ನೇಯ್ಗೆ ಮನೆತನದ ಕೆಲವರು ಬೇರೆ ಬೇರೆ ಉದ್ಯೋಗಗಳಲ್ಲಿ ತೊಡಗಿರುವುದರಿಂದ ಇಂದು ಈ ಸೀರೆಗಳು ಕಾಣಿಸುತ್ತಿಲ್ಲ. ಹೀಗೆ ಭೌಗೋಳಿಕ, ಪೌರಾಣಿಕ, ಐಹಿಹಾಸಿಕ ಹಿನ್ನೆಲೆಯೊಂದಿಗೆ ಕಲೆ ಮತ್ತು ಸಂಸ್ಕೃತಿಗಳ ನಾಡಾಗಿದೆ ಸುರಪುರ. ಇಂಥ ಒಂದು ಪ್ರದೇಶದಲ್ಲಿ ಸಂಸ್ಥಾನವನ್ನು ಕಟ್ಟಿ ಸುಮಾರು ಇನ್ನೂರು ವರ್ಷಗಳಿಗೂ ಅಧಿಕ ಕಾಲ ಅತ್ಯಂತ ವೈಭವಪೂರ್ಣ ಆಳ್ವಿಕೆಯನ್ನು ನಡೆಸಿದ್ದಾರೆ. ಶೂರ ನಾಯಕರಿಂದ ಸುರಪುರ ಪ್ರದೇಶವು ಅಂದಿನ ದಿನಗಳಲ್ಲಿ ವಿಶ್ವವಿಖ್ಯಾತಿಯನ್ನು ಹೊಂದಿತ್ತು.

ಚರಿತ್ರೆ :

ವಿಜಯನಗರದ ಸಾಮಾಜ್ಯ ಪತನದ ನಂತರ ದಕ್ಷಿಣ ಭಾರತದಲ್ಲಿ ಅಸ್ತಿತ್ವದಲ್ಲಿದ್ದ ಸಂಸ್ಥಾನಗಳಲ್ಲಿ ಸುರಪುರ ಸಂಸ್ಥಾನವೂ ಒಂದು. ಈ ಮೇಲೆ ಹೇಳಿರುವಂತೆ ಸುರಪುರ ಸಂಸ್ಥಾನಿಕರು ಕೃಷ್ಣಾ-ಭೀಮಾ ನದಿಗಳ ನಡುವಿನ ಸಗರನಾಡು ಪ್ರದೇಶದಲ್ಲಿ ಸುಮಾರು ಎರಡು ಶತಮಾನಗಳಿಗೂ ಅಧಿಕ ಕಾಲ (೧೬೩೬-೧೮೫೮) ಆಳ್ವಿಕೆ ನಡೆಸಿದ್ದಾರೆ. ಆಂಧ್ರದ ರತ್ನಗಿರಿ ಮೂಲದ ಈ ಸಂಸ್ಥಾನಿಕರು ಮೊದಲಿಗೆ ವಾಗಿನಗಿರಿಯಲ್ಲಿ ಸಂಸ್ಥಾನವನ್ನು ಸ್ಥಾಪಿಸುತ್ತಾರೆ. ಸುರಪುರ ನಗರ ನಿರ್ಮಾಣಗೊಂಡ ಮೇಲೆ ತಮ್ಮ ರಾಜದಾನಿಯನ್ನು ಇಲ್ಲಿಗೆ ವರ್ಗಾಯಿಸುತ್ತಾರೆ.

ವಂಶ ಪರಂಪರೆ :

ಸುರಪುರ ಅರಸರು ಗೋಸಲ ವಂಶದವರೆಂದು ಪ್ರಸಿದ್ದಿಯಿದೆ. ಕಲ್ಲಪ್ಪನಾಯಕನಿಂದಲೇ ಈ ವಂಶದ ಚರಿತ್ರೆ ಪ್ರಾರಂಭಗೊಳ್ಳುತ್ತದೆ. ಕಲ್ಲಪ್ಪನಾಯಕನಿಗೆ ಏಳುಜನ ಮಕ್ಕಳು. ಕಲ್ಲಪ್ಪನಾಯಕನಿಗಿದ್ದ 'ಬಸವಶಂಕರ' ಎಂಬ ವಿರುದು ಮತ್ತು ಇವನ ಮಗ ಚಿಕ್ಕ ಹನುಮನಾಯಕನು ಕಟ್ಟಿಸಿದ ಸೋಮನಾಥ ದೇವಾಲಯಗಳಿಂದ ಇವರು ಶೈವ ಸಂಪ್ರದಾಯದವರೆಂದು ತಿಳಿದುಬರುತ್ತದೆ. ಚಿಕ್ಕ ಹನುಮನಾಯಕನ ತರುವಾಯ ಬಲಿ ಸೋಮನಾಯಕನ ಮಗ ಹಿರಿ ಪಾಮನಾಯಕನು

ಕಕ್ಕೇರಿಯನ್ನು ತನ್ನ ವಶಕ್ಕೆ ತೆಗೆದುಕೊಳ್ಳುತ್ತಾನೆ. ಹಿರಿ ಪಾಮನಾಯಕನಿಗೆ ಜಕ್ಕಪ್ಪ ದೇಸಾಯಿ ಮತ್ತು ಹುಚ್ಚ ಸೋಮನಾಯಕರೆಂಬ ಇಬ್ಬರು ಮಕ್ಕಳು. ಇವರಲ್ಲಿ ಜಕ್ಕಪ್ಪ ದೇಸಾಯಿಯು ಕಕ್ಕೇರಿ ಮತ್ತು ಗಡ್ಡಿ ಎರಡೂ ಸ್ಥಳಗಳಲ್ಲಿರುತ್ತಿದ್ದನು'[೪]. ಇವನಿಗೆ ಗಡ್ಡಿ ಲಿಂಗನಾಯಕ ಮತ್ತು ಗಡ್ಡಿ ಪಿಡ್ಡನಾಯಕ ಎಂಬ ಇಬ್ಬರು ಮಕ್ಕಳು. ಹಿರಿಯನಾದ ಗಡ್ಡಿ ಲಿಂಗನಾಯಕನು ಗುಡಗುಂಟಿ ಸಂಸ್ಥಾನದ ಮೂಲಪುರುಷನಾದರೆ, ಗಡ್ಡಿ ಪಿಡ್ಡನಾಯಕನು ಸುರಪುರ ಸಂಸ್ಥಾನದ ಮೂಲಪುರುಷ.

ಗಡ್ಡಿ ಪಿಡ್ಡನಾಯಕ :

'ಗಡ್ಡಿ ಪಿಡ್ಡನಾಯಕನು ೧೬೩೬–೧೬೬೬ರ ವರೆಗೆ ಆಡಳಿತವನ್ನು ನಡೆಸಿದ್ದನು.'[೫] ಪಿಡ್ಡನಾಯಕನು ತನ್ನ ಅಣ್ಣನಾದ ಲಿಂಗನಾಯಕನಿಂದ ಬೇರೆಯಾಗಿ ತನ್ನ ಹೆಂಡಂದಿರರಾದ ಅವ್ವಮ್ಮನಾಗತಿ ಮತ್ತು ಹನುಮವ್ವನಾಗತಿಯರೊಡನೆ ವೀರಗೊಟ್ಟ, ಜಾಲಿಬೆಂಚಿ, ಪುಂಡನಕಲ್ಲು, ಸಿಂಗನವಲ್ಲಟ, ದೇವರಕಲ್ಲ ಮೂಲಕ ಕೊಳ್ಳನಮಡುವಿಗೆ ಬಂದು ನೆಲೆ ನಿಲ್ಲುತ್ತಾನೆ. ಜೈಚಬಾಳ ಸಮತಿನ 'ಕರ್ಸಿಹಳ್ಳಿ'ಗೆ 'ವಾಗಿನಗಿರಿ' ಎಂದು ಹೆಸರಿಟ್ಟು ಅಲ್ಲಿ ಕಿಲ್ಲೆಯನ್ನು ಕಟ್ಟಿಸುತ್ತಾನೆ. ಇದರಿಂದ '೧೬೩೬ರಲ್ಲಿ'[೫] ಸ್ಥಿರವಾದ ಸಂಸ್ಥಾನದ ಬುನಾದಿಯಾಯಿತು. ಶೂರನಾದ ಗಡ್ಡಿ ಪಿಡ್ಡನಾಯಕನು ಬಲವಂತ ಬಹಿರಿ ಬಹದ್ದೂರ ಮತ್ತು ಮದಗಜ ಮರ್ಧನ ಎಂಬ ಬಿರುದುಗಳಿಂದ ಪ್ರಖ್ಯಾತಿಯನ್ನು ಹೊಂದಿದ್ದನು. ಮುಘಲ್ ದೊರೆ ಔರಂಗಜೇಬನು ಗಡ್ಡಿ ಪಿಡ್ಡನಾಯಕನಿಗೆ ಬರೆದ ಪತ್ರವೊಂದು ಸುರಪುರದ ಹೊಸ ಅರಮನೆಯಲ್ಲಿದ್ದು, ಈ ಪತ್ರದಲ್ಲಿ ಔರಂಗಜೇಬನು ಗಡ್ಡಿ ಪಿಡ್ಡನಾಯಕನಿಗೆ ಆಶ್ವಾಸನೆ ಕೊಡುವುದಕ್ಕಾಗಿ ಚಂದನದಲ್ಲಿ ಕೈಯದ್ದಿದ ತನ್ನ ಹಸ್ತದ ಮುದ್ರೆಯನ್ನು ಪತ್ರದ ಶಿರೋಭಾಗದಲ್ಲಿ ಮೂಡಿಸಲಾಗಿದೆ. ಔರಂಗಜೇಬನಂತಹ ಸುಲ್ತಾನರು ಪಿಡ್ಡನಾಯಕನಿಗೆ ಈ ರೀತಿ ಆಶ್ವಾಸವನ್ನಿತ್ತಿರುವ ಪತ್ರವನ್ನು ಬರೆದಿರಬೇಕೆಂದರೆ ಪಿಡ್ಡನಾಯಕನ ಶೌರ್ಯ–ಸಾಹಸಗಳು ಹೇಗಿದ್ದವೆಂಬುದು ಅರಿವಾಗುತ್ತದೆ. ಮಾತ್ರವಲ್ಲದೇ ಗಡ್ಡಿ ಪಿಡ್ಡನಾಯಕನು ಭಾವಿ ಸುರಪುರ ಸಂಸ್ಥಾನದ ಬೀಜಾರೋಹಣೆ ಮಾಡಿದನು'[೬].

ಹಸರಂಗಿ ಪಾಮನಾಯಕ :

'ಗಡ್ಡಿ ಪಿಡ್ಡನಾಯಕನಿಗೆ ಗಂಡು ಸಂತಾನವಿಲ್ಲದ ಕಾರಣ ತನ್ನ ಅಣ್ಣನ ಮಗನಾದ ಪಾಮನಾಯಕನನ್ನು ದತ್ತು ತೆಗೆದುಕೊಂಡನು. ಇವನಿಗೆ ಹಸರಂಗಿ ಪಾಮನಾಯಕನೆದೇ ಕರೆಯಲಾಗುತ್ತದೆ. ಹೀಗೆ ಕರೆಯಲು ಕಾರಣವೊಂದಿದೆ. 'ಪಾಮನಾಯಕನು ಮುಘಲ್ ಮತ್ತು ಬಿಜಾಪೂರದ ಬಾದಶಾಹರಿಂದ 'ಖಿಲ್ಲತು' ಮನಸಬುಗಳನ್ನು ಪಡೆಯಲು ಹೋದಾಗ ಹಸಿರಂಬಾರಿಯುಳ್ಳ ಆನೆಯ ಮೇಲೇರಿ ಹೋದನೆಂದೂ, ಈತನು ಹಸಿರು ಪಲ್ಲಕ್ಕಿಯಲ್ಲಿ ಹೊರಡುತ್ತಿದ್ದನೆಂದೂ, ಅದಕ್ಕಾಗಿ 'ಹಸರಂಗಿ' ಎಂಬ ಪದವನ್ನು ಇವನ ಹೆಸರಿನ ಮೊದಲು ಸೇರಿಸಿ ಕರೆಯುವ ರೂಢಿಯಾಯಿತಂತೆ. ತನ್ನ ಐದು ಜನ ಹೇಡಂದಿರರಲ್ಲಿ ಹಿರೇ ಹೆಂಡತಿ ಅಮ್ಮನಾಗತಿ ಹೆಸರಿನಲ್ಲಿ ಅಮ್ಮಾಪುರ ಗ್ರಾಮವನ್ನು ನಿರ್ಮಿಸಿದನು. ಮಲ್ಲಿಬಾವಿ, ಜಾಲಿಬೆಂಚಿ ಮತ್ತು

೪. ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ : ಸುರಪುರ ಚಿತ್ರಕಲೆ, ಪು.ಸಂ–೧೨
ಅದೇ. ಪು.ಸಂ–೧೩,೧೪
೫. ಡಾ. ಅಮರೇಶ ಯತಗಲ್ : ಚಾರಿತ್ರಿಕ ಸುರಪುರ, ಪು.ಸಂ–೩೧
೬. ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ : ಸುರಪುರ ಚಿತ್ರಕಲೆ, ಪು.ಸಂ–೧೬

ವಾಗಿನಗಿರಿಯಲ್ಲಿ ಒಂದೊಂದು ಕೆರೆಯನ್ನು ಕಟ್ಟಿಸಿದನು. ಅಲ್ಲದೇ ಬೋನಾಳದ ಕೆರೆಯನ್ನು ಪುನಃ ವಿಸ್ತಾರಗೊಳಿಸಿ ಕಟ್ಟಿಸಿದನು. ವಾಗಿನಗಿರಿಯಲ್ಲಿರುವ ಗೋಪಾಲಸ್ವಾಮಿ ಗುಡಿಯ ಪೂಜೆ, ಉತ್ಸವಾದಿ ಕಾರ್ಯಗಳು ನಡೆಯುವ ವ್ಯವಸ್ಥೆ ಮಾಡಿದನು[೭].

ಪೀತಾಂಬರ ಬಹಿರಿ ಪಿಡ್ಡನಾಯಕ :

ಹಸರಂಗಿ ಪಾಮನಾಯಕನಿಗೂ ಗಂಡು ಸಂತಾನವಿಲ್ಲದುದರಿಂದ ಇವನು ಅನ್ನದಾನಿ ಸೋಮಲಿಂಗನ ಮಗನಾದ ಪಿಡ್ಡನಾಯಕನಿಗೆ ದತ್ತು ಪಡೆದುಕೊಳ್ಳುತ್ತಾನೆ. ಇವನನ್ನು ಪೀತಾಂಬರ ಬಹಿರಿ ಪಿಡ್ಡನಾಯಕನೆಂದು ಕರೆಯಲಾಗುತ್ತದೆ. '೧೬೮೭-೧೭೨೬'[೮] ಆಡಳಿತ ನಡೆಸಿ ಇವನಿಗೆ ಮಂಗಾನಾಕ್ತಿ, ಕೃಷ್ಣಾನಾಕ್ತಿ, ಬಂಗಾರುನಾಕ್ತಿ, ತಿಮ್ಮಾನಾಕ್ತಿ, ರಂಗಾನಾಕ್ತಿ ಮತ್ತು ದೇವಮ್ಮನಾಕ್ತಿಯರೆಂಬ ಆರು ಜನ ಹೆಂಡಂದಿರರಿದ್ದರೆಂದು ಲೋಕಯ್ಯನ ಗ್ರಂಥದಲ್ಲಿ ವಿವರಿಸಲಾಗಿದೆ. ಪಿಡ್ಡನಾಯಕನು ತನ್ನ ತಂದೆ ಪಾಮನಾಯಕನ ಕಾಲದಲ್ಲಿ ಮೊಘಲರು ಆಕ್ರಮಿಸಿಕೊಂಡ ರಾಜ್ಯದ ಎಲ್ಲ ಭೂ-ಭಾಗಗಳನ್ನು ಪುನಃ ಪಡೆದುಕೊಳ್ಳುವುದರೊಂದಿಗೆ ಸುರಪುರ ನಗರವನ್ನು ನಿರ್ಮಾಣಗೊಳಿಸುತ್ತಾನೆ.

ಸುರಪುರ ಸ್ಥಾಪನೆ :

'ಪೀತಾಂಬರ ಬಹಿರಿ ಪಿಡ್ಡನಾಯಕನು ಸುರಪುರ ನಗರವನ್ನು ನಿರ್ಮಿಸುವುದರ ಜೊತೆಗೆ ಶ್ರೀ ವೇಣುಗೋಪಾಲಸ್ವಾಮಿ ಗುಡಿಯನ್ನು ಕಟ್ಟಿಸುತ್ತಾನೆ. ಪಿಡ್ಡನಾಯಕನ ಕಾಲದಲ್ಲಿ ಪ್ರಾರಂಭವಾದ ಶ್ರೀ ವೇಣುಗೋಪಾಲಸ್ವಾಮಿ ದೇವಾಲಯ ಕಟ್ಟಿಸುವ ಕಾರ್ಯವು ರಾಘವ ಪಾಮನಾಯಕನ ಕಾಲದವರೆಗೆ ಮುಂದುವರೆದಂತೆ ತಿಳಿದುಬರುತ್ತದೆ. ಈ ರಾಜನು ನಾಗರ ಬಾವಿಯನ್ನು ಕಟ್ಟಿಸಿದನಲ್ಲದೇ ತನ್ನ ತಾಯಿಯ ಹೆಸರಿನಲ್ಲಿ 'ಲಕ್ಷ್ಮೀಪುರ' ಗ್ರಾಮವನ್ನು ನೆಲೆಗೊಳಿಸಿದನು. ಚಿಕ್ಕ ಹಯ್ಯಾಳದಲ್ಲಿ ಮಹಾದೇವನ ಗುಡಿಯನ್ನು ಕಟ್ಟಿಸಿದನು. ನಗರ ರಕ್ಷಣೆಗೆಂದು ಗುಡ್ಡದ ಕೆಳಭಾಗದಲ್ಲಿ ಊರಿನ ಸುತ್ತಮುತ್ತ ಆಯಕಟ್ಟಿನ ಏಳು ಸ್ಥಳಗಳಲ್ಲಿ ಚೌಕಿಗಳನ್ನು ವ್ಯವಸ್ಥೆಗೊಳಿಸಿದನರು. ಊರ ದೇವಮ್ಮ ಕೆರೆಯ ಮರಗಮ್ಮ ಮತ್ತು ಕೆಂಚಮ್ಮ ಗುಡಿಗಳನ್ನು ಕಟ್ಟಿಸಿದನು. ಯಾಬಾಜಿ ಮತ್ತು ಸಗರದ ಸೊಲಬಪ್ಪನ ಸಹಾಯದಿಂದ ಬಜಾರ ನಿರ್ಮಿಸಿದನು'[೯]. ಇಂತಹ ಅನೇಕ ಸಾಮಾಜಿಕ ಕಾರ್ಯಗಳೊಂದಿಗೆ ಪೀತಾಂಬರ ಬಹಿರಿ ಪಿಡ್ಡನಾಯಕನು ಸುರಪುರವನ್ನು ಅತ್ಯಂತ ದಕ್ಷತೆಯಿಂದ ಆಳಿದನೆಂದು ತಿಳಿದುಬರುತ್ತದೆ.

ಇಮ್ಮಡಿ ಪಾಮನಾಯಕ : (೧೭೨೬-೧೭೪೧)

ಪೀತಾಂಬರ ಬಹಿರಿ ಪಿಡ್ಡನಾಯಕನ ನಂತರ ಅವನ ಮಗ ಇಮ್ಮಡಿ ಪಾಮನಾಯಕನು ಕ್ರಿ.ಶ. ೧೭೨೬ ರಲ್ಲಿ ರಾಜ್ಯಾಧಿಕಾರವನ್ನು ವಹಿಸಿಕೊಂಡನು. ಈ ಅರಸನು ೧೪ ವರ್ಷಗಳ ಕಾಲ ಸುರಪುರವನ್ನಾಳಿದನು. ಇವನ ಕಾಲದಲ್ಲಿ ಸುರಪುರದಲ್ಲಿ ದೇವರ ಕೆರೆ ಕಟ್ಟಲ್ಪಟ್ಟಿತು. ಅಲ್ಲದೆ ಐದು ಅಗಸಿ ಬಾಗಿಲುಗಳು, ಕೋಟೆ ಮತ್ತು ಹೂಡೆ ಕಟ್ಟಲ್ಪಟ್ಟವು. ಪರಾಕ್ರಮಿಯಾದ ಪಾಮನಾಯಕನು

೭. ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ : ಸುರಪುರ ಚಿತ್ರಕಲೆ, ಪು.ಸಂ-೧೭
೮. ಡಾ. ಅಮರೇಶ ಯತಗಲ್ : ಚಾರಿತ್ರಿಕ ಸುರಪುರ, ಪು.ಸಂ-೩೧
೯. ಆರ್.ನ : ೧೪೨೧೦೧೬೦೦೦೯ : ಸುರಪುರ ಚಿತ್ರಕಲೆ, (ಅ.ಪ್ರ, ಕಿ.ಪ್ರ). ಪು.ಸಂ-೩೪

ನಿಜಾಮನಿಗೆ ಅನೇಕ ಬಾರಿ ಸಹಾಯ ಮಾಡಿದ್ದರಿಂದ ಸಂತೋಷಗೊಂಡ ನಿಜಾಮನು ಒಂದು ವೇಳೆ ಪಾಮನಾಯಕನು ಹೈದರಾಬಾದಿಗೆ ಬಂದರೆ ಹೋಗಿ ಬರುವ ಮತ್ತು ನಿತ್ಯದ ಖರ್ಚನ್ನು ತನ್ನ ಸರ್ಕಾರದಿಂದ ಕೊಡುವಂತೆ ಆಜ್ಞೆ ಹೊರಡಿಸಿದ ವಿಷಯ ಇತಿಹಾಸದ ಪುಟಗಳಲ್ಲಿ ಅಚ್ಚಾಗಿದೆ.

ಮುಮ್ಮಡಿ ಪಿಡ್ಡನಾಯಕ : (೧೭೪೨-೧೭೪೬)

ಇಮ್ಮಡಿ ಪಾಮನಾಯಕನ ತರುವಾಯ ಅವನ ಹಿರಿಯ ಮಗ ಮುಮ್ಮಡಿ ಪಿಡ್ಡನಾಯಕನು ಸುರಪುರ ಸಂಸ್ಥಾನದ ರಾಜ್ಯಭಾರವನ್ನು ವಹಿಸಿಕೊಳ್ಳುತ್ತಾನೆ. ಕೇವಲ ನಾಲ್ಕು ವರ್ಷಗಳ ಕಾಲ ಆಳ್ವಿಕೆಯನ್ನು ಮಾಡಿದ ಈ ಅರಸನ ಕಾಲದಲ್ಲಿನ ವಿಶೇಷ ಕಾರ್ಯಗಳಾವುವೂ ದಾಖಲಿಸಲಾಗಿಲ್ಲ. ಇವನಿಗೆ ಸತ್ಯಮ್ಮ ಎಂಬ ಹೆಂಡತಿಯಿದ್ದು, ಅವಳಿಂದ ಸಂತಾನವಾಗಲಿಲ್ಲವೆಂದು ತಿಳಿದುಬರುತ್ತದೆ. ಈ ಅರಸನ ಆಳ್ವಿಕೆಯ ಕಾಲದಲ್ಲಿ ಇವನ ತಾಯಿ ರುಕ್ಮಮ್ಮನನ್ನು ಘಾತುಕತನದಿಂದ ಹುಲಿಕಲ್ಲಿನಲ್ಲಿಟ್ಟರೆಂಬ ವಿಷಯವನ್ನು ಚಿಕ್ಕನಹಳ್ಳಿ ಪ್ರತಿಯಲ್ಲಿ ಉಲ್ಲೇಖಿಸಲಾಗಿದೆ.

ಮೊಂಡುಗೈ ವೆಂಕಟಪ್ಪನಾಯಕ : (೧೭೪೭-೧೭೫೨)

ಮುಮ್ಮಡಿ ಪಿಡ್ಡನಾಯಕನಿಗೆ ಸಂತಾನವಿಲ್ಲದ ಕಾರಣ ಆತನ ತಮ್ಮನಾದ ವೆಂಕಟಪ್ಪನಾಯಕನು ಸಂಸ್ಥಾನದ ಅಧಿಕಾರವನ್ನು ವಹಿಸಿಕೊಳ್ಳುತ್ತಾನೆ. ಈತನ ಎಡಮುಂಗೈ ಕತ್ತರಿಸಿ ಹೋದುದರಿಂದ ಈತನನ್ನು ಮೊಂಡುಗೈ ವೆಂಕಟಪ್ಪನಾಯಕನೆಂತಲೂ ಕರೆಯಲಾಗುತ್ತದೆ. ಇನು ತನ್ನ ಕತ್ತರಿಸಿದ ಕೈಗೆ ಸರಿ ಹೊಂದುವಂತೆ ಒಂದು ಕಬ್ಬಿಣದ ಮುಂಗೈಯನ್ನು ಬಳಸುತ್ತಿದ್ದನು. ಸುರಪುರದ ಅರಮನೆಯಲ್ಲಿ ಢಾಲು ಹಿಡಿಯಲಿಕ್ಕೆ ಅನುಕೂಲವಾಗುವ ರೀತಿಯಲ್ಲಿ ಹಸ್ತ, ಕೈಬೆರಳುಗಳ ರಚನೆ ವಿಶೇಷವಾಗಿದೆ. ಇವೆಲ್ಲವೂ ಆ ಕಾಲದ ಕಲಾವಂತಿಕೆಯನ್ನು ನೆನಪಿಸುತ್ತವೆ. ಮೊಂಡುಗೈ ವೆಂಕಟಪ್ಪನಾಯಕನ ಕಾಲದಲ್ಲಿ ನಡೆದ ಪ್ರಸಂಗಗಳಲ್ಲಿ ಫುಲಚೇರಿ ಕಾಳಗವು ಇತಿಹಾಸದ ಪುಟಗಲ್ಲಿ ಅಚ್ಚಳಿಯದೇ ನೆನಪಿಡುವಂತಹದು. ಸುರಪುರ ಇತಿಹಾಸದಲ್ಲಿ ಪಾಂಡಿಚೇರಿಯನ್ನು ಫುಲಚೇರಿ, ಪೂದುಚೇರಿ ಎಂದು ಕರೆಯಲಾಗಿದೆ. ಫುಲಚೇರಿ ಕಾಳಗ ಸಂದರ್ಭದಲ್ಲಿ ಸಂಸ್ಥಾನದ ಕಾರ್ಯಭಾರವನ್ನು ನೋಡಿಕೊಳ್ಳಲು ತನ್ನ ಕಕ್ಕ ರಮಣಪ್ಪನಾಯಕನನ್ನು ನೇಮಿಸಿದನು. ಫುಲಚೇರಿ ಕಾಳಗದಲ್ಲಿ ನಿಜಾಮನಿಗೆ ನೆರವಾದ ವೆಂಕಟಪ್ಪನಾಯಕನು ಹೈದರಾಬಾದಿನಿಂದ ಸುರಪುರಕ್ಕೆ ಹಿಂದಿರುಗಿ ಬಂದ ಮೇಲೆ ಸುರಪುರವನ್ನು ಪುನರ್ ವ್ಯವಸ್ಥೆಗೊಳಿಸಿದನೆಂದು ತಿಳಿದುಬರುತ್ತದೆ.

ಮೊಂಡುಗೈ ವೆಂಕಟಪ್ಪನಾಯಕನ ಕಾಲದಲ್ಲಿ ಪಟ್ಟಣಶೆಟ್ಟಿಯಿಂದ ೮೦ ಸಾವಿರ ರೂಪಾಯಿಯ ವೆಚ್ಚದಲ್ಲಿ ಅರಮನೆಯನ್ನು ಕಟ್ಟಿಸಲಾಯ್ತು. ಸುರಪುರ ರಾಜ್ಯದ ನಾಲ್ಕೂ ದಿಕ್ಕುಗಳಲ್ಲಿ ರಕ್ಷಣಾ ವ್ಯವಸ್ಥೆ ದಕ್ಷವಾಗಿರಬೇಕೆಂಬ ಉದ್ದೇಶದಿಂದ ಸುಬೇದಾರರನ್ನು ನೇಮಿಸಿದನು. ಕೊಡೆಕಲ್ಲಿನಲ್ಲಿ ಗೋಪಾಲಸ್ವಾಮಿ ಗುಡಿಯನ್ನು ಕಟ್ಟಿಸಿ, ಅದರ ಪೂಜೆಗಾಗಿ ೬೦ ಬಿಘೆ ಭೂಮಿಯನ್ನು ಉಂಬಳಿಯಾಗಿ ನೀಡಿದನು. ಚಿಕ್ಕ ಮುದನೂರಿನಲ್ಲೊಂದು ಗೋಪಾಲಸ್ವಾಮಿ ಗುಡಿಯನ್ನು ಕಟ್ಟಿಸಿದನಲ್ಲದೇ ಅದೇ ಗ್ರಾಮದಲ್ಲಿ ರಾಮತೀರ್ಥ ಮತ್ತು ಲಕ್ಷ್ಮಣತೀರ್ಥ ಗಳೆಂಬ ಎರಡು

ಕುಂಡಗಳನ್ನು ಕಟ್ಟಿಸಿ ರೈತರಿಗೆ ನೀರಿನ ಅನುಕೂಲವಾಗುವಂತೆ ವ್ಯವಸ್ಥೆಗೊಳಿಸಿದನು. ತನ್ನ ತಾಯಿಯ ಹೆಸರಿನಲ್ಲಿ 'ರುಕ್ಮಾಪುರ' ಮತ್ತು ತನ್ನ ಅತ್ತಿಗೆಯ ಹೆಸರಿನಲ್ಲಿ 'ಸತ್ಯಮ್ಮನ ಪೇಟೆ' ಎಂಬ ಗ್ರಾಮಗಳನ್ನು ನಿರ್ಮಿಸಿದನು. ಶಂಖವರದ ಗುರುಗಳಿಗೆ (ತಿರುಮಲೆ ವೆಂಕಟಾಚಾರ್ಯರಿಗೆ) ಹೊರಟೂರು, ಭೋಸಗಿ, ಚೌಡೇಶ್ವರಹಾಳ, ಸೂಗೂರ, ಬೊಮ್ಮನಹಳ್ಳಿ ಗ್ರಾಮಗಳನ್ನು ಜಹಗೀರಾಗಿ ನೀಡಿದನು. ಮುಡಬೂಳದಲ್ಲೊಂದು ಗೋಪಾಲಸ್ವಾಮಿ ಗುಡಿಯನ್ನು ಕಟ್ಟಿಸಿದನು.

ಮುಮ್ಮಡಿ (ರಾಘವ) ಪಾಮನಾಯಕ : (೧೭೫೨-೧೭೭೩)

ಮೊಂಡುಗೈ ವೆಂಕಟಪ್ಪನಾಯಕನಿಗೆ ಸಂತಾನವಿಲ್ಲದ ಕಾರಣ ರಾಜ್ಯಾಧಿಕಾರದ ಬಗ್ಗೆ ಸಮಸ್ಯೆಯುಂಟಾಯಿತು. ಪಟ್ಟದ ಬಾಧ್ಯಸಕ್ತರು ಪೀತಾಂಬರ ಬಹಿರಿ ಪಿಡ್ಡನಾಯಕನ ಮಕ್ಕಳಾದ ಕೃಷ್ಣಪ್ಪನಾಯಕ ಮತ್ತು ರಮಣಪ್ಪ ನಾಯಕರುಗಳಾಗಿದ್ದರು. ಈ ಸಮಯದಲ್ಲಿ ಕೃಷ್ಣಪ್ಪನಾಯಕ ಮತ್ತು ಆತನ ಕುಟುಂಬದವರು ತಾಡಿಮರಿಯಲ್ಲಿದ್ದರು. ಹಾಗಾಗಿ ರಮಣಪ್ಪನಾಯಕನೇ ಇನ್ನೊಬ್ಬ ಹಕ್ಕುದಾರನಾಗಿದ್ದ. ಆದರೆ ಇವನು ತುಂಬ ವೃದ್ಧನಾಗಿದ್ದನು. ಇವೆಲ್ಲ ಕಾರಣಗಳಿಂದ ಎಲ್ಲರೂ ಒಮ್ಮತ ಅಭಿಪ್ರಾಯದೊಂದಿಗೆ ರಮಣಪ್ಪನಾಯಕನ ಮಗನಾದ ರಾಘವ ಪಾಮನಾಯಕನಿಗೆ ಪಟ್ಟಾಭಿಷೇಕ ಮಾಡಿದರು. ರಾಘವ ಪಾಮನಾಯಕನು ಪಟ್ಟಾಭಿಷಕ್ತನಾದಾಗ ಅವನ ವಯಸ್ಸು ಕೇವಲ ೧೩ ವರ್ಷ. ಹಾಗಾಗಿ ಈ ಸಂದರ್ಭದಲ್ಲಿ ತಂದೆಯಾದ ರಮಣಪ್ಪನಾಯಕನೇ ರಾಜ್ಯದ ಆಡಳಿತವನ್ನು ನೋಡಿಕೊಳ್ಳುತ್ತಿದ್ದನು. ರಾಘವ ಪಾಮನಾಯಕನ ಆಡಳಿತ ಕಾಲವನ್ನು ಸುರಪುರ ಇತಿಹಾಸದಲ್ಲಿ ಸುವರ್ಣ ಯುಗವೆಂದು ಕರೆಯಲಾಗುತ್ತದೆ. ಇವನು 'ಭಾರ್ಗವ ಪುರಾಣ'ವೆಂಬ ಕಾವ್ಯವನ್ನು ರಚಿಸಿದ್ದಾನೆ. ಸ್ವತಃ ಪಂಡಿತ, ಕವಿಯಾಗಿದ್ದುದಲ್ಲದೇ ತನ್ನ ಸಂಸ್ಥಾನದಲ್ಲಿ ಅನೇಕ ಪಂಡಿತರಿಗೆ, ಕಲಾವಿದರಿಗೆ ಆಶ್ರಯವನ್ನು ನೀಡಿದ್ದರಿಂದ ಕೃಷ್ಣದೇವರಾಯನಂತೆಯೇ ಇವನಿದ್ದ ಎಂದು ಹೇಳಲಾಗುತ್ತದೆ.

ಪೀತಾಂಬರ ಬಹಿರಿ ಪಿಡ್ಡನಾಯಕನ ಕಾಲದಲ್ಲಿ ಪ್ರಾರಂಭಗೊಂಡ ಶ್ರೀ ವೇಣುಗೋಪಾಲಸ್ವಾಮಿ ದೇವಾಲಯ ನಿರ್ಮಾಣ ಕಾರ್ಯವು ರಮಣಪ್ಪನಾಯಕನ ಕಾಲದಲ್ಲಿ, ಮುಂದೆ ರಾಘವ ಪಾಮನಾಯಕನ ಕಾಲದಲ್ಲೂ ನಡೆದಿರುವಂತೆ ತಿಳಿದುಬರುತ್ತದೆ. ಈ ದೇವಾಲಯದ ಗರ್ಭಗುಡಿ, ಮಧ್ಯಮಂಟಪ ಅರ್ಧಕಾರ್ಯವಾಗಿತ್ತು. ಮೂರ್ತಿಯ ಪ್ರತಿಷ್ಠಾಪನೆಗಾಗಿ ಶ್ರೀರಂಗಪಟ್ಟಣದ ಶ್ರೀರಂಗನಾಥಸ್ವಾಮಿ ದೇವಾಲಯದ ನಿಯಮದಂತೆ ವ್ಯವಸ್ಥೆಯನ್ನು ಮಾಡಲಾಯಿತು. ಇವನ ಕಾಲದಲ್ಲಿ ನಿಷ್ಠಿ ಕಡ್ಲಪ್ಪ ಮತ್ತು ನಿಷ್ಠಿ ವೀರಪ್ಪ ಇವರಿಬ್ಬರೂ ದಿವಾನರಾಗಿದ್ದರು. ನಿಷ್ಠಿ ವೀರಪ್ಪನು ಚತುರ ರಾಜಕಾರ್ಯ ಧುರೀಣನಾಗಿದ್ದನು. ಇವನು ಪಾಮನಾಯಕ ಹಾಗೂ ಅವನ ಮಗ ವೆಂಕಟಪ್ಪನಾಯಕನ ಕಾಲದಲ್ಲಿಯೂ ದಿವಾನಗಿರಿಯನ್ನು ಮಾಡಿದನು. ಈತನು ರಾಜ್ಯದ ಪುನರ್ವ್ಯವಸ್ಥೆ ಮಾಡಿರುವುದಲ್ಲದೆ ಅನೇಕ ಕೆರೆ-ಕುಂಟೆ, ಬಾವಿಗಳನ್ನು, ಕೋಟೆ-ಕೊತ್ತಲಗಳನ್ನು ಕಟ್ಟಿಸಿದನು. ವೀರಪ್ಪನ ಹೆಸರು ಸಗರನಾಡಿನ ಜನಸಾಮಾನ್ಯರಲ್ಲಿ ಮನೆಮಾತಾಗಿದೆ. ಅಲ್ಲದೆ ದೊಡ್ಡ ದೊಡ್ಡ ಊರುಗಳಲ್ಲಿ 'ಬಿಥೇದ ಕಟ್ಟೆಯನ್ನು' ಕಟ್ಟಿಸಿದನು.

ಪಾಮನಾಯಕನ ಕಾಲದ ಪಂಡಿತರು :

ರಾಘವ ಪಾಮನಾಯಕನು ಸ್ವತಃ ಕಾವ್ಯ, ಅಲಂಕಾರ ಶಾಸ್ತ್ರಗಳನ್ನು ಬಲ್ಲ ಉದ್ಧಾಮ ಪಂಡಿತನೂ ಆಗಿದ್ದನು. ಇವನ ಆಸ್ಥಾನದಲ್ಲಿ ಕವಿಗಳಿಗೆ, ಕಲಾವಿದರಿಗೆ, ಪಂಡಿತರಿಗೆ ತುಂಬಾ ಗೌರವವಿತ್ತು. ಆಂಧ್ರಭಾಷಾ ಪಂಡಿತ ಹಾಗೂ ಕವಿಯಾಗಿದ್ದ ಪರವಸ್ತು ವೆಂಕಯ್ಯ, ರಾಜಾನುಜಾಚಾರ್ಯ, ಚಿತ್ರಕವಿತ್ವ ರಚಿಸುವ ನಂಬುಲಾರ್ಯ, ಕನ್ನಡದ ಕವಿ ಉದ್ದಾರ ತಿಪ್ಪಣ್ಣ, ಜಂಗಮರೋಳ್ ಶ್ರೇಷ್ಠನಾದ ಶೃಂಗಾರಶಾಸ್ತ್ರ ಬಲ್ಲ ತೋಟಯ್ಯ, ವೈಷ್ಣವೋತ್ತಮ ಚಲುವಯ್ಯ, ವಿಷ್ಣುಭಕ್ತ ಗೋಪಯ್ಯ, ರಾಜವೈದ್ಯ ಅಂಕಣ ಬಣಕಾರ, ವೈದ್ಯ ದೇವಿಕೇರಿ ತಿಮ್ಮಪ್ಪ, ಜೋತಿಷಿಗಳಾದ ತಿಮ್ಮಣ್ಣಭಟ್ಟ, ಸಂಗಾವಿ ತುಕ್ಕಣ್ಣ ಭಟ್ಟ, ಶೀನಯ್ಯ ಮುಂತಾದ ಪಂಡಿತರು ಪಾಮನಾಯಕನ ಆಸ್ಥಾನದಲ್ಲಿದ್ದರು. ಇವನ ಕಾಲದಲ್ಲಿ ಬುಕ್ಕಪಟ್ಟಣದ ಅಣ್ಣಯ್ಯಾಚಾರ್ಯರೊಂದಿಗೆ ಅವರ ಅನುಜರಾದ ಶ್ರೀನಿವಾಸಾಚಾರ್ಯ, ಅಪ್ಪಳಾಚಾರ್ಯ ಹಾಗೂ ವೆಂಕಟಾಚಾರ್ಯರು ಸುರಪುರಕ್ಕೆ ಬಂದು ನೆಲೆಸುತ್ತಾರೆ. ಈ ಎಲ್ಲ ಪಂಡಿತ ವರೇಣ್ಯರೊಂದಿಗೆ ಚಿತ್ರಕಲಾವಿದರಾದ ಗರುಡಾದ್ರಿ ಮನೆತನದವರೂ ಈ ರಾಜನ ಆಶ್ರಯ ಪಡೆದಿದ್ದರು.

ರಾಘವ ಪಾಮಾನಾಯಕನು ನಾಯಕನ ಬಾವಿ, ದರ್ಬಾರಿನ ಪಶ್ಚಿಮಕ್ಕೆ ಎರಡು ಕುದುರೆಯ ಪಾಗಾಗಳನ್ನು ಕಟ್ಟಿಸಿದನು. ಅಲ್ಲದೆ ಆನೆಯ ಪಾಗಾ, ಒಂಟೆಯ ಪಾಗಾಗಳಿಗೆ ಸಂಬಂಧಿಸಿದ ಕೋಠಿಖಾನೆಗಳೂ ಸಹ ಇವನ ಕಾಲದಲ್ಲಿ ಕಟ್ಟಲ್ಪಟ್ಟವು. ಹೀಗೆ ರಾಘವ ಪಾಮಾನಾಯಕನು ಆಡಳಿತದೊಂದಿಗೆ ಕವಿಗಳಿಗೆ, ಕಲಾವಿದರಿಗೆ, ಪಂಡಿತರಿಗೆ ತನ್ನ ಆಸ್ಥಾನದಲ್ಲಿ ಆಶ್ರಯ ನೀಡಿದ್ದರಿಂದ ಇವನ ಆಳ್ವಿಕೆಯ ಕಾಲವನ್ನು ಸುರಪುರದ ಸುವರ್ಣ ಯುಗವೆಂದು ಕರೆಯಲಾಗುತ್ತದೆ.

ಇಮ್ಮಡಿ ವೆಂಕಟಪ್ಪನಾಯಕ : (೧೭೭೩-೧೮೦೨)

ರಾಘವ ಪಾಮನಾಯಕನ ತರುವಾಯ ಅವನ ಮಗ ಇಮ್ಮಡಿ ವೆಂಕಟಪ್ಪನಾಯಕನು ಸಂಸ್ಥಾನದ ಆಡಳಿತವನ್ನು ವಹಿಸಿಕೊಂಡನು. ಇಮ್ಮಡಿ ವೆಂಕಟಪ್ಪನಾಯಕನಿಗೆ ೧೮ ಜನ ಹೆಂಡಂದಿರರಿದ್ದಂತೆ ಲೋಕಯ್ಯನ ಗ್ರಂಥದಲ್ಲಿ ವಿವರಣೆಯಿದೆ. ಈ ೧೮ ಜನ ಹೆಂಡಂದಿರರಲ್ಲಿ ಕನಕಗಿರಿಯ ನರಸಿಂಗಮ್ಮನ ಉದರರಿಂದ ಬಾಪುಸಾಹೇಬನೆಂಬ ಗಂಡು ಮಗುವಿನ ಜನನವಾಯಿತು. ನಂತರದಲ್ಲಿ ಶ್ರೀನಿವಾಸನಾಯಕನೆಂಬ ಇನ್ನೊಬ್ಬ ಮಗನೂ ಜನಿಸಿದನು. ಆದರೆ ಇವನು ಚಿಕ್ಕವನಿರುವಾಗಲೇ ರೀತಿಯಲ್ಲಿ ಸಂಭವಿಸಿದಂತೆ ಹಲಬರಿಂದ ಕೇಳಿದ್ದಾಗಿಯೂ, ಕೈಫಿಯತ್ತಿನಲ್ಲಿ ಉಲ್ಲೇಖಗೊಂಡಿರುವುದಾಗಿಯೂ ಕಪಟರಾಳ ಕೃಷ್ಣರಾವ್ ಅವರು ವ್ಯಾಖ್ಯಾನಿಸುತ್ತಾರೆ. ಇಮ್ಮಡಿ ವೆಂಕಟಪ್ಪನಾಯಕನ ಕಾಲದಲ್ಲಿ ಜನಸಾಮಾನ್ಯರಿಗೆ ಉಪಯೋಗವಾಗುವಂತಹ ಕಾರ್ಯಗಳಿಗೆ ಹೆಚ್ಚಿನ ಪ್ರಾಧಾನ್ಯತೆ ನೀಡಿದ್ದಾನೆಂಬುದು ಆತನು ಮಾಡಿದ ಕಾರ್ಯಗಳಿಂದ ತಿಳಿದುಬರುತ್ತದೆ. ಸುರಪುರದಲ್ಲಿ ಬಹಿರಿ ಬಾವಿ, ತಳವಾರಗೇರಿ ಗುಡ್ಡದಲ್ಲಿ ಎರಡು ಕೆರೆಗಳು, ಜಾಲಿಬೆಂಚಿಯ ಸೀಮೆಯಲ್ಲಿ ಅವ್ವ ಕಾಟಮ್ಮನ ಹೆಸರಿನಲ್ಲಿ ಕೆರೆ, ತಂಗಿಯ ಹೆಸರಿನಲ್ಲಿ ತೋಟವೊಂದನ್ನು ನಿರ್ಮಿಸಲಾಯಿತು. ಹೊಸಕೆರೆಯಲ್ಲಿ ಎರಡು ಕೆರೆಗಳನ್ನು ಮತ್ತು ಅರಸನು

ಬೇಟೆಗೆ ಬಂದಾಗ ಇಳಿದುಕೊಳ್ಳಲು ಅರಮನೆಯೊಂದನ್ನು ಕಟ್ಟಿಸಲಾಯ್ತು. ಹೆಬ್ಬಾಳದಲ್ಲಿ ಬಾಪೂ ಸಾಹೇಬನ ಬಾವಿ, ಬಾಚಿಮಟ್ಟಿ ಮತ್ತು ವಜ್ಜಲದಲ್ಲಿ ಒಂದೊಂದು ಕೆರೆಯನ್ನು ಕಟ್ಟಿಸಲಾಯ್ತು. ಗೋಪಾಲಪ್ಪನ ಕೆರೆ, ಗುರಿಕಾರನ ತೋಟಗಳನ್ನು ನಿರ್ಮಿಸಲಾಯ್ತು'[೧೦]. ಅಂತರಗಂಗಿಯ ಸಮೀಪ ದೇವರ ಕೆರೆ, ರುಕುಂಪೇಟೆಯಲ್ಲಿ ಒಂದು ಕೆರೆ ಮತ್ತು ತೋಟವೊಂದನ್ನು ನಿರ್ಮಿಸಲಾಯ್ತು. ಈ ರಾಜನು ಪ್ರತಿನಿತ್ಯದ ಪದ್ಧತಿಗಳನ್ನು ಅತ್ಯಂತ ಶಿಸ್ತುಬದ್ಧವಾಗಿ ಪಾಲಿಸಿದನು ಕಾಣಬಹುದು.

ತಿರುಪತಿ ಶ್ರೀ ವೆಂಕಟೇಶ್ವರನು ಪ್ರತ್ಯಕ್ಷನಾದುದು :

'ದೇವೇಂದ್ರ ವೆಂಕಟಪ್ಪನಾಯಕನು ಶೂರ, ಮಹಾ ಭಗವದ್ಭಕ್ತ ಹಾಗೂ ಉದ್ದಾಮ ಪಂಡಿತನೂ ಆಗಿದ್ದನು. ಈತನ ರಾಣೀ ರಂಗಮ್ಮಳೂ ಕೂಡ ಒಳ್ಳೆಯ ಕವಿಯಿತ್ರಿಯಾಗಿದ್ದಳು. ಈ ದಂಪತಿಗಳು ತಮ್ಮ ಶ್ರೇಷ್ಠ ಭಕ್ತಿಯಿಂದ ತಿರುಪತಿಯ ಶ್ರೀ ವೆಂಕಟೇಶ್ವರ ಸ್ವಾಮಿಯನ್ನು ಒಲಿಸಿಕೊಂಡು ಪ್ರತ್ಯಕ್ಷ ದರ್ಶನವನ್ನು ಪಡೆದದ್ದು ಇತಿಹಾಸ. ವೆಂಕಟೇಶ್ವರಸ್ವಾಮಿಯು ಸುರಪುರ ರಾಜವಂಶಜರಿಗೆ ಅವರಿರುವ ಸ್ಥಳದಲ್ಲಿಯೇ ದರ್ಶನವನೀಯುವ ವಚನವನ್ನಿತ್ತುದರಿಂದ ಇಂದಿಗೂ ಸುರಪುರ ಅರಸರಾರೂ ತಿರುಪತಿಗೆ ಹೋಗುವುದಿಲ್ಲ. ಬದಲಾಗಿ ತಮ್ಮ ಭಕ್ತಿ ಕಾಣಿಕೆಯನ್ನು ಪ್ರತಿನಿಧಿಗಳ ಮೂಲಕ ಕಳುಹಿಸಿಕೊಡುತ್ತಾರೆ. ಉತ್ಸವ ಕಾಲದಲ್ಲಿ ತಿರುಪತಿಯಲ್ಲಿ ಸುರಪುರ ಸಂಸ್ಥಾನಕ್ಕೆಂದು ಪ್ರಥಮ ಮರ್ಯಾದೆಯುಂಟು. ಸುರಪುರದಲ್ಲಿ ವಿದ್ವಜ್ಜನ ಸ್ಪರ್ಧೆ : ದೇವೇಂದ್ರ ವೆಂಕಟಪ್ಪನಾಯಕನ ಕಾಲದಲ್ಲಿ ಹರಪನಳ್ಳಿ ಸಂಸ್ಥನದವರಿಗೂ ಸುರಪುರ ಸಂಸ್ಥಾನದ ವಿದ್ವಜ್ಜನರಿಗೂ ನಡೆದ ಸ್ಪರ್ಧೆ ಸುವರ್ಣ ಅಕ್ಷರದಲ್ಲಿ ಬರೆದುಡುವಂಥದ್ದು. ಸುಮಾರು ಮೂರು ತಿಂಗಳವರೆಗೆ ನಡೆದ ಈ ಸ್ಪರ್ಧೆಯಲ್ಲಿ ಹರಪನಳ್ಳಿಯ ರಾಜನೊಂದಿಗೆ ಗಾಯಕರು, ವಾದ್ಯಗಾರರು, ಕವಿಗಳು, ಚಿತ್ರಕಾರರು, ಶಿಲ್ಪಿಗಳು, ವೈದ್ಯರು, ಜ್ಯೋತಿಷಿಗಳು, ನ್ಯಾಯ–ವೇದಾಂತ ಷಟಶಾಸ್ತ್ರ ಸಂಪನ್ನರಾದ ಪಂಡಿತರು, ಮಲ್ಲಯುದ್ಧದಲ್ಲಿ ನಿಪುಣರಾದ ಜಟ್ಟಿಗಳು, ಯುದ್ದ ಕಲೆಗಳ ನಿಪುಣರು, ಪಾತ್ರದವರು, ನಟರು, ಹಾಸ್ಯಗಾರರು, ಬೇಟೆಯಾಡುವವರು, ದೊಂಬರು ಮುಂತಾದ ಹತ್ತು ಹಲವು ರೀತಿಯ ಪಾಂಡಿತ್ಯವನ್ನುಳ್ಳವರು ಈ ಸ್ಪರ್ಧೆಯಲ್ಲಿ ಭಾಗವಹಿಸಲು ಬಂದಿದ್ದರು. ಸುರಪುರ ಮತ್ತು ಹರಪನಳ್ಳಿ ಈ ಎರಡೂ ಕಡೆಯ ಹೆಸರಾಂತ ವಿದ್ವಾಂಸರುಗಳಿಂದ ಸ್ಪರ್ಧೆಗಳು ಪ್ರಾರಂಭವಾದವು. ಈ ಪಾಂಡಿತ್ಯ ಪ್ರದರ್ಶನದಲ್ಲಿ ಸುರಪುರ ಪಂಡಿತರು ಪಾರಮ್ಯವನ್ನು ಮೆರೆದರು. ಈ ಸ್ಪರ್ಧೆಯ ನಂತರ ಉಭಯ ಪಕ್ಷದವರ ಪಂಡಿತರಿಗೆ ಅವರವರ ಯೋಗ್ಯತೆಗೆ ಅನುಸಾರವಾಗಿ ಗೌರವಿಸಲಾಯ್ತು. ಎಲ್ಲರೂ ಪರಸ್ಪರ ಗೌರವಗಳನ್ನು ವಿನಿಮಯ ಮಾಡಿಕೊಂಡ ಮೇಲೆ ಹರಪನಳ್ಳಿಯವರು ಹಿಂದಿರುಗಿದರು. ಈ ಒಂದು ಮಹತ್ಕಾರ್ಯಕ್ಕಾಗಿ ವೆಂಕಟಪ್ಪನಾಯಕನು ಮೂರು ಲಕ್ಷ ಹಣವನ್ನು ವೆಚ್ಚ ಮಾಡಿದನೆಂಬುದು ಕೈಫಿಯತ್ತಿನಲ್ಲಿ ಉಲ್ಲೇಖಗೊಂಡಿದೆ. ಸುಮಾರು ಒಂಬತ್ತು ವರ್ಷಗಳ ಕಾಲ ಸುರಪುರ ಸಂಸ್ಥಾನವನ್ನಾಳಿದ ದೇವೇಂದ್ರ ವೆಂಕಟ್ಟಪನಾಯಕನು ೧೮೨೨ ರಲ್ಲಿ ರಂಗಮ್ಮನ ಹೆಸರಿನಲ್ಲಿ 'ರಂಗಮ್ಮನ ಪೇಟೆ' ಗ್ರಾಮವನ್ನು ನಿರ್ಮಿಸಿದನು'[೧೧]. ಇಲ್ಲಿನ ರಾಮಾಚಾರಿ ಬಾವಿಯ ಈ ಅರಸನ

೧೦. ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ : ಸುರಪುರ ಚಿತ್ರಕಲೆ, ಪು.ಸಂ–೧೮

ಅದೇ. ಪು.ಸಂ–೨೦

೧೧. ಆರ್.ನಂ : ೧೪೨೧೦೧೬೦೦೦೯: ಸುರಪುರ ಚಿತ್ರಕಲೆ. (ಅ.ಪ್ರ ಕಿ.ಪ್ರ) ಪು.ಸಂ–೫೯

ಅದೇ. ಪು.ಸಂ–೪೦

ಕಾಲದಲ್ಲೇ ಕಟ್ಟಲ್ಪಟ್ಟಿತು. ೧೮೨೬ ರಲ್ಲಿ ಬಹಿರಿ ಮೋರಡಿಯಲ್ಲಿ ವಸತಿ ನಿರ್ಮಾಣವೂ ಸಹ ಇವನ ಕಾಲದಲ್ಲಿ ನಡೆಯಿತು.

ಕೃಷ್ಣಪ್ಪನಾಯಕ :

'ದೇವೇಂದ್ರ ವೆಂಕಟಪ್ಪನಾಯಕನ ತರುವಾಯ ಅವನ ಹಿರಿಯ ಮಗ ಕೃಷ್ಣಪ್ಪನಾಯಕನು ಸುರಪುರ ಸಂಸ್ಥಾನದ ೧೮೨೭-೧೮೪೩'[೧೨]ರಲ್ಲಿ ಸಿಂಹಾಸನವನ್ನೇರಿದನು. ಈ ಸಂದರ್ಭದಲ್ಲಿ ಇವನ ಮಲತಮ್ಮನಾದ ಹನುಮಪ್ಪನಾಯಕನು ರಾಜ್ಯಾಧಿಕಾರವು ತನಗೆ ಸಲ್ಲಬೇಕೆಂದುಕೊಂಡು ತಕರಾರೆಬ್ಬಿಸಿದನು. ಅಣ್ಣ-ತಮ್ಮಂದಿರ ಕಲಹದ ಲಾಭ ಪಡೆಯಲುದ್ದೇಶಿಸಿದ ನಿಜಾಮನು ಕೃಷ್ಣಪ್ಪನಾಯಕನ ಪಟ್ಟಾಭಿಷೇಕ ಕಾಲಕ್ಕೆ ೧೫ ಲಕ್ಷಗಳ ನಜರಾಣಿ ಕೊಡಬೇಕೆಂಬ ಬೇಡಿಕೆಯನ್ನಿತ್ತನು. ಈ ಮೊದಲೇ ಸಂಸ್ಥಾನವು ಆರ್ಥಿಕ ಬಿಕ್ಕಟ್ಟುಗಳಿಂದ ಜರ್ಝರಿತವಾಗಿತ್ತು. ಇದಕ್ಕೆ ಪ್ರತಿಯಾಗಿ ಆಂಗ್ಲರೂ ಕೂಡ ನಿಜಾಮನಿಗೆ ಸಹಾಯಕರಾಗಿ ವರ್ತಿಸುತ್ತಿದ್ದರು. ಮುಖ್ಯವಾಗಿ ಇಲ್ಲಿ ಗಮನಿಸಬಹುದಾದ ಅಂಶವೇನೆಂದರೆ ಆಂಗ್ಲರು ಮತ್ತು ನಿಜಾಮರೀರ್ವರ ಮೂಲ ಉದ್ದೇಶವು ಶಕ್ತಿ ಸಂಪನ್ನ ಸುರಪುರ ಸಂಸ್ಥಾನವನ್ನು ಹೇಗಾದರೂ ಮಾಡಿ ದುರ್ಬಲಗೊಳಿಸಿ ನಿರ್ನಾಮಗೊಳಿಸುವುದಾಗಿತ್ತು. ಹಿಂದೆ ಮಾಡಿಕೊಂಡ ಒಪ್ಪಂದದನ್ವಯ ಸಾಲ ವಸೂಲಿಗೆ ಬ್ರಿಟೀಷ್ ಸೈನ್ಯವನ್ನು ಕಳುಹಿಸಿ ಒತ್ತಾಯಿಸಲಾಯಿತು. ಈ ರೀತಿಯ ಕುಟೀಲ ವ್ಯವಸ್ಥೆಯನ್ನು ರಾಣಿ ಈಶ್ವರಮ್ಮ ಉಗ್ರವಾಗಿ ಪ್ರತಿಭಟಿಸಿದಳು. ಇದರಿಂದ ಆಂಗ್ಲರು ಮತ್ತು ನಿಜಾಮರು ರಾಣಿಯ ಚಾರಿತ್ರ್ಯವಧೆ ಮಾಡಲು ಯತನಿಸಿದರು. ಇವೆಲ್ಲದರ ನಡುವೆಯೂ ಕೃಷ್ಣಪ್ಪನಾಯಕನ ಉದಾರತೆಗೆ ಮಿತಿಯೇ ಇರಲಿಲ್ಲವೆಂಬುದು ಆತನು ಕೊಟ್ಟ ದಾನ, ಧರ್ಮಕಾರ್ಯಗಳಿಂದ ತಿಳಿದುಬರುತ್ತದೆ.

ದಾನ ಮತ್ತು ಧರ್ಮಕಾರ್ಯಗಳು :

ಬುಕ್ಕಪಟ್ಟಣದ ಗುರುಗಳಾದ ವೆಂಕಟಾಚಾರ್ಯರಿಗೆ ಈಚಲೂರು ಜಾಗೀರಿ, ವಡಿಗೇರಿ ಕೆರೆ ಹಾಗೂ ಮಇರೇಖಾನ ತೋಟ ಕೊಡಲ್ಪಟ್ಟವು. ಶಂಖವರದರವರಿಗೆ ದಾಸರಾಚಾರಗಳನ್ನು ಕೊಡಲಾಯಿತು. ಭಾಷ್ಯದ ದೇಶಿಕಾಚಾರ್ಯರಿಗೆ ಇಟ್ಟಗಿಯಲ್ಲಿ ಭೂಮಿಯನ್ನು ನೀಡಲ್ಪಟ್ಟಿತು. ಕೊದ್ದಡ್ಡಿ ರಂಗಪ್ಪ ಮತ್ತು ಬಸಲಿಂಗಪ್ಪ ಇವರಿಗೆ ಕೆಂಭಾವಿ ಸಂತಿನಲ್ಲಿ ಭೂಮಿಯನ್ನು ನೀಡಲ್ಪಟ್ಟಿತು. ಕೊದ್ದಡ್ಡಿ ರಂಗಪ್ಪ ಮತ್ತು ಬಸಲಿಂಗಪ್ಪ ಇವರಿಗೆ ಕೆಂಭಾವಿ ಸಂತಿನಲ್ಲಿ ಭೂಮಿಯನ್ನು ನೀಡಲ್ಪಟ್ಟಿತು. ಲಿಂಗಬಸಪ್ಪನಿಗೆ ಮಾಡಗಿಯಲ್ಲಿ ಭೂಮಿ ನೀಡಿದ್ದು, ಶಾಸ್ತ್ರಿ ತಿಮ್ಮಪ್ಪನಿಗೂ ಕೂಡ ಭೂಮಿಯನ್ನು ಕಟ್ಟಿರುವಂತೆ ಲೋಕಯ್ಯನ ಗ್ರಂಥದ ೬ಳನೇ ಪುಟದಲ್ಲಿ ಉಲ್ಲೇಖಗೊಂಡಿದೆ. ಸುರಪುರದ ಸಿದ್ದನ ತೋಟದಲ್ಲಿ 'ಅನಂತಶಯನ ಯಾಗ'ವನ್ನು ಮಾಡಿಸಿದ. ಇದಕ್ಕಾಗಿ ನಾಡಿನ ದೂರದ ಸ್ಥಳಗಳಿಂದ ವಿದ್ವಾಂಸರನ್ನು ಬರಮಾಡಿಕೊಂಡನು. ಈ ಯಜ್ಞದ ನಂತರ ಅಗ್ರಹಾರವೊಂದನ್ನು ನಿರ್ಮಿಸಿ, ಈ ಅಗ್ರಹಾರದಲ್ಲಿ ೪೦ ಬ್ರಾಹ್ಮಣ ಕುಟುಂಬಗಳು ನೆಲೆ ನಿಲ್ಲುವಂತೆಯೂ, ಪ್ರತಿಯೊಬ್ಬರಿಗೆ ಒಂದು ಮನೆ ಹಾಗೂ ೪೦ ಬಿಘೆ ಇನಾಮು ಕೊಡಲ್ಪಟ್ಟಿತು.

೧೨. ಡಾ. ಅಮರೇಶ ಯತಗಲ್ : ಚಾರಿತ್ರಿಕ ಸುರಪುರ, ಪು.ಸಂ-೩೧

ಕೃಷ್ಣಪ್ಪನಾಯಕನ ಕಾಲದ ಪಂಡಿತರು :

ಕೊಂಡಾಪುರದ ವರದಚಾರ್ಯ ಮತ್ತು ಹಯಗ್ರೀವಾಚಾರ್ಯರು, ಜ್ಯೋತಿಷ್ಯ ಶಾಸ್ತ್ರದಲ್ಲಿ ಏಕಮೇವಾದ್ವಿತಿಯರಾದ ಹೆಬ್ಬಾಳ ರಾಮಶಾಸ್ತ್ರಿಗಳು, ಕನ್ನಡ ಪಂಡಿತರುಗಳಾದ ವಿಜಾಪುರದ ರಂಗಯ್ಯ ಮತ್ತು ಸರಹವಾಲ್ದಾರ ಮನೆತನದವರು, ಪ್ರಸಿದ್ಧ ಕೀರ್ತನಕಾರರಾದ ಆನಂದದಾಸರು, ದಕ್ಷಿಣಾದಿ ಸಂಗೀತ ಕಲೆಯಲ್ಲಿ ನಿಪುಣರಾದ 'ಕಂಠವೀಣೆ' ಮನೆತನದವರು, ಚಿತ್ರಕಲಾವಿದ ಮನೆತನದವರಾದ ಗರುಡಾದ್ರಿಯವರು ಕೃಷ್ಣಪ್ಪನಾಯಕನ ಕಾಲದ ಪ್ರಸಿದ್ಧ ಪಂಡಿತವರೇಣ್ಯರು.

ನಾಲ್ವಡಿ ವೆಂಕಟಪ್ಪನಾಯಕ :

ಕ್ರಿ.ಶ. ೧೮೩೪ರಲ್ಲಿ ಜನಿಸಿದ ವೆಂಕಟಪ್ಪನಾಯಕನು ಏಳು ವರ್ಷದವನಿದ್ದಾಗಲೇ ತಂದೆಯಾದ ಕೃಷ್ಣಪ್ಪನಾಯಕನು ತೀರಿಕೊಂಡನು. ಆಗ ರಾಣಿ ಈಶ್ವರಮ್ಮ ಸಂಸ್ಥಾನದ ಆಡಳಿತನ್ನು ವಹಿಸಿಕೊಂಡಳೂ. ಇದನ್ನು ಸಹಿಸದ ಕೃಷ್ಣಪ್ಪನಾಯಕನ ಬಂಧುಗಳು ಮತ್ತು ಇತರರು ಕೂಡಿಕೊಂಡು ಕೃಷ್ಣಪ್ಪ ನಾಯಕನ ತಮ್ಮನಾದ ಪಿಡ್ಡನಾಯಕನನ್ನು ಬಾಲ ವೆಂಕಟಪ್ಪನಾಯಕನ ಪಾಲಕನೆಂದು ತಿಳಿದು ರಾಜ್ಯಭಾರ ವಹಿಸಬೇಕೆಂದು ಹಠ ಹಿಡಿದರು. ಇದಕ್ಕೆ ಆಂಗ್ಲ ಸರ್ಕಾರದ ಒಪ್ಪಿಗೆಯೂ ಇತ್ತು. ಇದರಿಂದಾಗಿ ರಾಣಿ ಈಶ್ವರಮ್ಮ ತನ್ನ ಮೈದುನಾದ ಪಿಡ್ಡನಾಯಕ ಮತ್ತು ಆಂಗ್ಲ ಸರ್ಕಾರ ಇಬ್ಬರನ್ನೂ ವಿರೋಧಿಸತೊಡಗಿದಳು. ನಂತರದಲ್ಲಿ ಬಿರಟೀಷ್ ಸರ್ಕಾರದ ರಾಜಕೀಯ ಪ್ರತಿನಿಧಿಯಾಗಿ ಬಂದ ಟೇಲರನ ಮಧ್ಯಸ್ಥಿಕೆಯಿಂದ ಎಲ್ಲರೂ ಒಂದು ಒಪ್ಪಂದಕ್ಕೆ ಬಂದರು.

ವೆಂಕಟಪ್ಪನಾಯಕನ ರಾಜ್ಯಾರೋಹಣ :

ಜನರಲ್ಲ ಮೇಜರ್‌ನು ದಿನಾಂಕ: ೧೮.೦೫.೧೮೪೭ ರ ಗವರ್ನರ್ ಜನರಲ್ನ ಪತ್ರದ ಪ್ರತಿಯೊಂದನ್ನು ಟೇಲರನಿಗೆ ಕಳಿಸಿಕೊಟ್ಟನು. ಈ ಪತ್ರದಲ್ಲಿ ಪಿಡ್ಡನಾಯಕನ ಅನುಮತಿಯಂತೆ ಚಿಕ್ಕವನಾದ ಅರಸನನ್ನು ಗದಿಗೆ ಕೂಡಿಸಿ, ರಾಜಕುಮಾರನ ಮರ್ಯಾದೆಗೆ ಚ್ಯುತಿ ಬಾರದಂತೆ ನಡೆದುಕೊಳ್ಳಬೇಕೆಂದೂ, ರಾಜನು ಪ್ರೌಢವಯಸ್ಸಿಗೆ ಬಂದನಂತರ ಸುಸ್ಥಿತಿ, ಸುವ್ಯವಸ್ಥಿತ ರಾಜ್ಯವನ್ನು ಆತನಿಗೊಪ್ಪಿಸಬೇಕೆಂದೂ ಮತ್ತು ಆತನಿಗೆ ಒಳ್ಳೆಯ ಶಿಕ್ಷಣ ಕೊಡಿಸಿ ಆಡಳಿತದ ಯೋಗ್ಯ ತರಬೇತಿಯನ್ನು ಕೊಡಿಸುವಂತೆ ಅಭಿಪ್ರಾಯಪಟ್ಟಿದ್ದನು. ಇದರಂತೆ ಟೇಲರನು ಎಲ್ಲರನ್ನೂ ಸಂತೋಷಗೊಳಿಸುವುದಕ್ಕಾಗಿ ಬಾಲ ವೆಂಕಟಪ್ಪನಾಯಕನ ರಾಜ್ಯಾರೋಹಣ ಸಮಾರಂಭವನ್ನು ವಯಸ್ಥೆಗೊಳಿಸಿ, ರಾಜಮನೆತನದ ಪದ್ಧತಿಗಳಂತೆ ಸಿಂಹಾಸನದ ಮೇಲೆ ಕೂಡಿಸಲಾಯಿತು. ಮಾತ್ರವಲ್ಲದೇ ಟೇಲರನು ಬಾಲ ವೆಂಕಟಪ್ಪನಾಯಕನಿಗೆ ಒಳ್ಳೆಯ ಶಿಕ್ಷಣ ಕೊಡಿಸಲು ಡಾ. ಮರ್‍ರೆಯವರನ್ನು ನೇಮಿಸಿದನು. ಇದರಿಂದ ವೆಂಕಟಪ್ಪನಾಯಕನು ಇಂಗ್ಲೀಷ್ ಭಾಷೆಯ ಜೊತೆಗೆ ತೆಲುಗು, ಮರಾಠಿ, ಫಾರಸಿ ಭಾಷೆಗಳನ್ನು ಕಲಿತನು.

೧೮೫೭ರ ಸ್ವಾತಂತ್ರ್ಯ ಸಂಗ್ರಾಮ:

ಸುರಪುರ ಇತಿಹಾಸದಲ್ಲಿ ಇದೊಂದು ಮಹತ್ವದ ವರ್ಷ. ಈ ವೇಳೆ ಭಾರತದ ಉತ್ತರ ಮತ್ತು ದಕ್ಷಿಣ ಭಾಗಗಳಲ್ಲಿ ಸ್ವಾತಂತ್ರ್ಯ ಚಳುವಳಿಯ ಕಿಡಿಯು ಹೊತ್ತಿಕೊಂಡು ಉರಿಯತೊಡಗಿತ್ತು.

ಒಂದೆಡೆ ಸ್ವಾತಂತ್ರ್ಯವೀರರು ಆತ್ಮ ಸಮರ್ಪಣೆಗೈಯುತ್ತಿದ್ದ ಸಮಾಚಾರಗಳಿಂದಲೂ ಮತ್ತೊಂದು ಕಡೆ ವೈರಿಗಳಾದ ಬ್ರಿಟೀಷ್ ಮತ್ತು ನಿಜಾಮರ ಅಪವಿತ್ರ ಕುತಂತ್ರಗಳಿಂದಲೂ ಬೇಸತ್ತನು. ನೆರೆಹೊರೆಯ ಸಂಸ್ಥಾನಿಕರಲ್ಲಿ ಅಕ್ಕಲಕೋಟೆ, ಕೊಲ್ಹಾಪೂರ, ಮೀರಜ್, ಜತ್, ಜಮಖಂಡಿ, ಆನೆಗೊಂದಿ, ಮುಧೋಳ, ಹುನಗುಂದ, ಶಿರಹಟ್ಟಿ ಮುಂತಾದ ಸಂಸ್ಥಾನಿಕರು ವೆಂಕಟಪ್ಪನಾಯಕನಿಗೆ ಸಹಾಯ ನೀಡಲು ಕಾತುರರಾಗಿದ್ದರು. ಇದರಿಂದಾಗಿ ಸುರಪುರವು ಅಂದು ಸ್ವಾತಂತ್ರ್ಯ ಸಂಗ್ರಾಮದ ಕೇಂದ್ರವಾಗಿ ಪರಿಣಮಿಸಿತು ಎಂದು ಹೇಳಬಹುದು.

ಸುರಪುರ ಅರಸನು ಆಂಗ್ಲರ ವಿರುದ್ದ ಹೋರಾಡಲು ಯತ್ನಿಸುತ್ತಿರುವನು ಎಂಬ ವಿಷಯ ಹೈದರಾಬಾದ ರೆಸಿಡೆಂಡನ ಮೂಲಕ ಗವರ್ನರ್ ಜನರಲ್‌ನಿಗೆ ತಲುಪಿದವು. ರಾಜಕೀಯ ವಿಷಯವೂ ವಿಕೋಪಕ್ಕೆ ಹೋಯಿತು. ರೊಚ್ಚಿಗೆದ್ದ ಸುರಪುರ ಸೈನಿಕರು ಆಂಗ್ಲರ ವಿರುದ್ಧ ದಂಗೆಯೆಬ್ಬಿಸಿದರಲ್ಲದೆ ಹಲವರನ್ನು ಕೊಂದರು. ಇದರಿಂದಾಗಿ ನಾಲ್ಕು ಕಡೆಯಿಂದ ಆಂಗ್ಲರ ಸೈನ್ಯವು ನಿಜಾಮನ ಸೈನ್ಯದೊಂದಿಗೆ ಸುರಪುರ ಸಮೀಪ ಬಂದಿತು. ಒಳಸಂಚು ದ್ರೋಹಿಗಳಿಂದ ಅವರು ಕೋಟೆಯನ್ನು ಪ್ರವೇಶಿಸಿದರು. ಹೆಚ್ಚು ಸೈನ್ಯವನ್ನು ತರಲು ಅರಸನು ಗುಪ್ತವಾಗಿ ಹೈದರಾಬಾದಿಗೆ ಹೋದನು. 'ಆಗ ಸುರುಪುರದ ಮಹಾದ್ವೇಶಿಯಾಗಿದ್ದ ಅಫಜಲ್‌ದೌಲ್‌ನಿಂದ ವೆಂಕಟಪ್ಪನಾಯಕನು ಬಂಧಿತನಾದನು. ಇದರೊಂದಿಗೆ ೨೨೨ ವರ್ಷಗಳ ಕಾಲ ರಾಜ್ಯವನ್ನಾಳಿದ ಗೋಸಲ ವಂಶಕ್ಕೆ ರಾಜಲಕ್ಷ್ಮೀಯ ಅನುಗ್ರಹ ತಪ್ಪಿತು. ಹಳೆಯ ವೈಭವಗಳೆಲ್ಲ ಮರೆಯಾದವು. ಕೊನೆಗೂ ಒಳಸಂಚು ದ್ರೋಹಿಗಳಿಂದಾಗಿ ಸುರಪುರವು ಕ್ರಿ.ಶ. ೦೮.೦೨.೧೮೫೮'[೧೩] ರಲ್ಲಿ ಧ್ವಂಸಗೊಂಡಿರುವುದನ್ನು ನೊಡಬಹುದು.

ಸುರಪುರ ಚಿತ್ರಕಲೆ

ಸುರಪುರ ಚಿತ್ರಕಲೆ ಕುರಿತಂತೆ ಗ್ರಂಥಗಳಲ್ಲಿನ ಉಲ್ಲೇಖನೀಯ ಬರಹಗಳು ಮತ್ತು ಪತ್ರಿಕೆಗಳಲ್ಲಿ ಪ್ರಕಟಗೊಂಡ ಲೇಖನಗಳನ್ನು ಹೊರತುಪಡಿಸಿದರೆ ಪ್ರತ್ಯೇಕವಾದ ಮತ್ತು ಸಮಗ್ರವಾದ ಅಧ್ಯಯನಗಳು ನಡೆದಿಲ್ಲವೆಂದೇ ಹೇಳಬಹುದು. ಈ ಹಿನ್ನಲೆಯಲ್ಲಿ ಪ್ರಸ್ತುತ ಪ್ರಬಂಧ ಅತ್ಯಂತ ಮಹತ್ವದ್ದೆನಿಸುತ್ತದೆ. ಸುರಪುರ ಕಲಾಶೈಲಿಯನ್ನು ಪ್ರಪ್ರಥಮವಾಗಿ ಗುರುತಿಸಿದವರು ಖ್ಯಾತ ಇತಿಹಾಸಕಾರರಾದ 'ಸ್ಟೆಲ್ಲಾ ಕ್ರಾಮರಿಷ್' ಇವರು ತಮ್ಮ 'A Survey of Painting in Deccan' ಕೃತಿಯಲ್ಲಿ ಸುರಪುರ ಚಿತ್ರಕಲೆ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. 'ನಂತರದಲ್ಲಿ ಇತಿಹಾಸಕಾರ ಜಗದೀಶ್ ಮಿತ್ತಲ್ ರವರು ಭಾರತೀಯ ಚಿತ್ರಕಲೆಯ ಕುರಿತು ವಿಶೇಷ ಅಧ್ಯಯನ ನಡೆಸಿ ದಖನಿ ಚಿತ್ರಕಲೆಯಲ್ಲಿ 'ಸುರಪುರ ಚಿತ್ರಕಲೆ' ಒಂದು ಸ್ವತಂತ್ರ ಶೈಲಿ ಎಂದು ಗುರುತಿಸಿದರು'[೧೪]. ಮಾರ್ಕ್ ಝೆಬ್ರವಸ್ಕಿ ಅವರ 'Deccani Painting' ಗ್ರಂಥದಲ್ಲಿಯೂ ಸುರಪುರ ಚಿತ್ರಕಲೆ ಕುರಿತಾದ ಸಾಂದರ್ಭಿಕ ವಿವರಗಳಿವೆ ಎಂದು ಕಾಣಬಹುದು. ಕಲಾ ಇತಿಹಾಸಕಾರರಾದ ಜಯಾ ಅಪ್ಪಾಸ್ವಾಮಿಯವರೂ ಈ ಕಲೆಯನ್ನು ಕುರಿತು ವಿಶೇಷ ಅಧ್ಯಯನ ಕೈಗೊಂಡಿದ್ದಾರೆ. ಇವರು

೧೩. ಎಸ್.ಕೆ.ಅರುಣಿ : ದಖನಿ ಚಿತ್ರಕಲೆ, ಪು.ಸಂ-೧೦೪

೧೪. ಅದೇ. ಪು.ಸಂ-೧೦೪

೧೯೭೦ ರ ದಶಕದಲ್ಲಿ ಲಂಡನ್ನಿನ ಬ್ರಿಟೀಷ್ ಮ್ಯೂಸಿಯಂಗೆ ಭೇಟಿ ಮಾಡಿದ್ದರು. ಈ ವಸ್ತು ಸಂಗ್ರಹಾಲಯದಲ್ಲಿ ಭಾರತೀಯ ಕಲೆಗೆ ಸಂಬಂಧಿಸಿದ ಸಾಕಷ್ಟು ಚಿತ್ರಗಳಿದ್ದು, ಅದರಲ್ಲಿ ಸುರಪುರ ಸಾಂಪ್ರದಾಯಿಕ ಚಿತ್ರಗಳಲ್ಲಿಯ ಸೂಕ್ಷ್ಮತೆಗೆ ಮನಸೋತರೆಂಬುದಾಗಿ ಒಂದು ಕಡೆ ಹೇಳಿಕೊಂಡಿದ್ದಾರೆ. ಅಪ್ಪಾಸ್ವಾಮಿಯವರು ಲಂಡನ್ನಿನಿಂದ ಭಾರತಕ್ಕೆ ಬಂದವರೇ ಸುರಪುರಕ್ಕೆ ಭೇಟಿಕೊಟ್ಟರು. ಸುಮಾರು ಒಂದು ವಾರಗಳ ಕಾಲ ಇವರು ಸುರಪುರ ಪ್ರದೇಶದುದ್ದಕ್ಕೂ ಕ್ಷೇತ್ರಕಾರ್ಯ ಕೈಗೊಂಡು ಈ ಭಾಗದ ಮನೆ–ಮಠಗಳಲ್ಲಿನ ಚಿತ್ರಗಳ ವೈವಿಧ್ಯತೆಯನ್ನು ಕುರಿತು ಒಂದೆರಡು ಲೇಖನಗಳನ್ನು ಬರೆದಿದ್ದಾರೆ.

೧೯೮೦ರ ದಶಕದಲ್ಲಿ ಪ್ರಕಟಗೊಂಡ 'ಸಗರನಾಡ ದರ್ಶನ' ಗ್ರಂಥದಲ್ಲಿ ಸುರಪುರ ಚಿತ್ರಕಲೆ ಕುರಿತ ವಿವರಣೆಯಿದೆ. ಲೋಕಯ್ಯ ಮಠಪತಿ ಅವರ 'ಗರುಡಾದ್ರಿ ಚಿಕಣಿ ಚಿತ್ರಕಲೆ' ಲಘುಶೋಧ ಪ್ರಬಂಧದಲ್ಲಿ ಸುರಪುರ ಚಿತ್ರಕಲೆ ಮತ್ತು ಆಸ್ಥಾನ ಕಲಾವಿದರಿಗೆ ಸಂಬಂಧಿಸಿದ ವಿವರಗಳಿವೆ. ಬಸವರಾಜ ಉಪ್ಪಿನ್ ಅವರ 'ಬಾನಯ್ಯ ಗರುಡಾದ್ರಿ'[೧೫] ಕಿರುಹೊತ್ತಿಗೆಯಲ್ಲಿ ಆಸ್ಥಾನ ಕಲಾವಿದರ ವಿವರಣೆಯೊಂದಿಗೆ ಒಂದೆರಡು ಕಲಾಕೃತಿಗಳನ್ನು ವಿಶ್ಲೇಷಣೆಗೊಳಪಡಿಸಿದೆ. ಡಾ. ರಂಗರಾಜ ವನದುರ್ಗ ಅವರ 'ಸುರಪುರ ಸಂಸ್ಥಾನ ಒಂದು ಅಧ್ಯಯನ' ಪಿ.ಎಚ್.ಡಿ ಪ್ರಬಂಧದಲ್ಲಿ ಸುರಪುರ ಆಡಳಿತ ಹಾಗೂ ಆರ್ಥಿಕ ಸ್ಥಿತಿ–ಗತಿಗಳೊಂದಿಗೆ ಸಂಗೀತ ಮತ್ತು ಚಿತ್ರಕಲೆಗಳು ಪ್ರಸ್ತಾಪಗೊಂಡಿವೆ. 'ಡಾ. ಎಸ್.ಕೆ. ಅರುಣಿ ಅವರು ತಮ್ಮ 'ದಖನಿ ಚಿತ್ರಕಲೆ'[೧೬] ಕೃತಿಯಲ್ಲಿ ಸುರಪುರ ಚಿತ್ರಕಲೆಯನ್ನು ಪ್ರತ್ಯೇಕ ಅಧ್ಯಾಯವನ್ನಾಗಿ ವಿಂಗಡಿಸಿಕೊಂಡು ಅನ್ಯ ಕಲಾಶೈಲಿಗಳೊಂದಿಗೆ ಚರ್ಚಿಸಿದ್ದಾರೆ. ಅಲ್ಲದೆ ಇವರು ತಮ್ಮ ಪಿ.ಎಚ್.ಡಿ. ಪ್ರಬಂಧದಲ್ಲಿ ಸುರಪುರ ಸಂಸ್ಥಾನದ ಐತಿಹಾಸಿಕ ವಿವರಗಳೊಂದಿಗೆ ಚಿತ್ರಕಲೆಯನ್ನು ಚರ್ಚಿಸಿದ್ದಾರೆ. ಭಾಸ್ಕರರಾವ ಮೂಡಬೂಳ ಅವರು 'ಮರೆತುಹೋದ ಸುರಪುರ ಇತಿಹಾಸ' ಗ್ರಂಥದಲ್ಲಿ ಸಾಂದರ್ಭಿಕವಾಗಿ ಚಿತ್ರಕಲೆಯನ್ನು ಪ್ರಸ್ತಾಪಿಸಿದ್ದಾರೆ. ಬಿ. ಕೃಷ್ಣಮಾಚಾರ್ ಅವರ 'ಮರೆಯಲಾಗದ ಸುರಪುರ ರಾಜರ ಚರಿತ್ರೆ' ಗ್ರಂಥದಲ್ಲಿ ಆಸ್ಥಾನ ಕಲಾವಿದರ ವಿವರಣೆಯೊಂದಿಗೆ ಸುರಪುರ ಭಿತ್ತಿ ಚಿತ್ರಗಳ ಸಂಕ್ಷಿಪ್ತ ವಿವರಣೆಯಿದೆ.

ಈ ಮೇಲಿನ ಸಾಹಿತ್ಯ, ಸಂಶೋಧನ ಕೃತಿಗಳಲ್ಲದೇ ಅನೇಕ ಲೇಖನಗಳು ಸುರಪುರ ಚಿತ್ರಕಲೆಯನ್ನು ಕುರಿತು ಹೆಚ್ಚಿನ ಬೆಳಕು ಚೆಲ್ಲುತ್ತವೆ. ನಶಿಸುತ್ತಿರುವ ಗರುಡಾದ್ರಿ ಪರಂಪರೆಯ ಚಿತ್ರಕಲೆ ವಿನಾಶದ ಅಂಚಿನಲ್ಲಿರುವ ವಿಶ್ವವಿಖ್ಯಾತ ಗರುಡಾದ್ರಿ ಕಲೆ, ವಿಜಯ ಹಾಗರಗುಂಡಿಗಿಯವರ ಚಿಕಣಿ ಚಿತ್ರಗಳ ಅಧ್ಬುತ ಪ್ರಪಂಚ, ಅಂತರಾಷ್ಟ್ರೀಯ ಖ್ಯಾತಿಯ ಸುರಪುರದ ಗರುಡಾದ್ರಿ ಕಲೆ, ಕಲಾ ಪ್ರಪಂಚಕ್ಕೆ ಹತ್ತಿರವಾದ ಸುರಪುರ ಚಿತ್ರಕಲೆ, 'ಗರುಡಾದ್ರಿ' ಸುರಪುರ ಆಸ್ಥಾನ ಚಿತ್ರಕಲಾವಿದರು, ಸುರಪುರ ಚಿತ್ರಕಲಾ ಶೈಲಿ ಮುಂತಾದ ಬರೆಹಗಳು ಸುರಪುರ ಚಿತ್ರಕಲೆ, ಕಲಾವಿದರ ಕುರಿತಾದ ಮಾಹಿತಿಯನ್ನು ನೀಡುತ್ತವೆ. ಸುರಪುರ ಚಿತ್ರಕಲೆಯಲ್ಲಿ ಮೊಘಲ್, ಬಿಜಾಪುರ, ಹೈದರಾಬಾದ, ಕಂಪನಿ ಕಲಾ ಶೈಲಿಗಳ ಪ್ರಭಾವ ಆಗಿರುವುದನ್ನು ಗಮನಿಸಹಹುದು.

೧೫. ಬಸವರಾಜ ಉಪ್ಪಿನ : ಬಾನಯ್ಯ ಗರುಡಾದ್ರಿ,
೧೬. ಎಸ್.ಕೆ.ಅರುಣಿ : ದಖನಿ ಚಿತ್ರಕಲೆ,

ಸುರಪುರ ಸಂಸ್ಥಾನದ ವ್ಯಾಪ್ತಿಗೊಳಪಟ್ಟ ಪ್ರದೇಶಗಳ ಮನೆ-ಮಠಗಳಲ್ಲಿ, ಮಂದಿರಗಳಲ್ಲಿ ಸಾಕಷ್ಟು ಚಿತ್ರಗಳಿವೆ. ಕರ್ನಾಟಕ ಹಾಗೂ ಆಂಧ್ರಪ್ರದೇಶ ರಾಜ್ಯಗಳನ್ನು ಕೇಂದ್ರವಾಗಿಟ್ಟುಕೊಂಡು ಹೇಳುವುದಾದರೆ, ನೆರೆಯ ರಾಜ್ಯ ಆಂಧ್ರದಲ್ಲಿಯೇ ಹೆಚ್ಚಿನ ಚಿತ್ರಗಳು ಸಂಗ್ರಹಗೊಂಡಿವೆ. ಸುರಪುರ ಆಸ್ಥಾನ ಕಲಾವಿದರು ಆಂಧ್ರ ಮೂಲದವರಾಗಿರುವುದರಿಂದ ಮತ್ತು ಸಂಸ್ಥಾನ ಪತನದ ನಂತರ ಆಂಧ್ರಪ್ರದೇಶದ ಬೇರೆ ಬೇರೆ ಕಡೆಗಳಲ್ಲಿ ನೆಲೆಸಿರುವುದರಿಂದ ಸಹಜವಾಗಿಯೇ ಆ ಪ್ರದೇಶದಲ್ಲಿ ಹೆಚ್ಚಿನ ಚಿತ್ರಗಳು ಕಂಡುಬರುತ್ತವೆ. ಒಂದೊಮ್ಮೆ ಆಸ್ಥಾನ ಕಲಾವಿದರು ಆಂಧ್ರದ ತಮ್ಮ ಸಂಬಂಧಿಕರ ಊರುಗಳಿಗೆ ಹೋಗಿ-ಬಂದು ಮಾಡುವ ಸಂದರ್ಭದಲ್ಲಿ ತಮ್ಮೊಂದಿಗೆ ಕುಂಚ ಹಾಗೂ ವರ್ಣಗಳನ್ನು ತೆಗೆದುಕೊಂಡು ಹೋಗುತ್ತಿದ್ದರೆಂದೂ, ಆ ಸಂದರ್ಭದಲ್ಲಿ ಅವರು ಚಿತ್ರಗಳನ್ನು ಬಿಡಿಸುತ್ತಿದ್ದರೆಂದೂ ಹೇಳಲಾಗುತ್ತದೆ.

ಗರುಡಾದ್ರಿ ಮನೆತನದವರು ಓಡಾಡಿದ ಪ್ರಮುಖ ಸ್ಥಳಗಳಲ್ಲಿ ಕಡಪ್ಪ, ಕರ್ನೂಲ್, ಮಹಬೂಬ ನಗರ, ಹೈದರಾಬಾದ, ವಿಶಾಖಪಟ್ಟಣ ಮುಂತಾದ ಜಿಲ್ಲೆ, ತಾಲ್ಲೂಕು ಮತ್ತು ಹಳ್ಳಿಗಳಲ್ಲಿ ಸುರಪುರ ಚಿತ್ರಗಳಿವೆ. ಕರ್ನಾಟಕ, ಆಂಧ್ರಪ್ರದೇಶ ರಾಜ್ಯಗಳನ್ನು ಹೊರತುಪಡಿಸಿ ಭಾರತದಲ್ಲಿನ ಪ್ರಮುಖ ವಸ್ತುಸಂಗ್ರಹಾಲಯಗಳಲ್ಲಿ, ಖಾಸಗಿ ನೆಲೆಗಳಲ್ಲಿ ಸುರಪುರ ಚಿತ್ರಗಳಿವೆ. ಮಾತ್ರವಲ್ಲದೇ ಹೊರರಾಷ್ಟ್ರ ಲಂಡನ್ನಿನ ಬ್ರಿಟಿಷ್ ಮ್ಯೂಸಿಯಂನಲ್ಲಿಯೂ ಸುರಪುರ ಚಿತ್ರಗಳಿವೆ.

ಚಿತ್ರರಚನಾ ವಿಧಾನ :

'ಆಸ್ಥಾನ ಕಲಾವಿದರಾದ ಗರುಡಾದ್ರಿ ಮನೆತನದವರಿಂದ ಚಿತ್ರಸಲ್ಪಟ್ಟ ಚಿತ್ರಗಳು ಹಲವು ಮಾಧ್ಯಮಗಳಲ್ಲಿವೆ. ಇವುಗಳಲ್ಲಿ ಹಾಳೆಯ ಮೇಲೆ ಬರೆದ ಚಿತ್ರಗಳು ಅತ್ಯಂತ ಉನ್ನತ ಮಟ್ಟದ್ದಾಗಿದ್ದು, ಕಿರೂರೂಪ ಮಾದರಿಯಲ್ಲಿವೆ. ಕೆಲವು ದೊಡ್ಡಗಾತ್ರದ ಚಿತ್ರಗಳೂ ಈ ಕಲೆಯಲ್ಲಿ ಕಂಡುರಿತ್ತವೆ. ಈ ಎಲ್ಲಾ ಚಿತ್ರಗಳಲ್ಲಿ ಕೆಲವೇ ವರ್ಣಗಳನ್ನು ಪುನರಾವರ್ತಿಸಿದೆಯಾದರೂ ವಿನ್ಯಾಸ, ಅಲಂಕಾರಿಕೆಯಲ್ಲಿ ಕಲಾವಿದರು ಹೆಚ್ಚಿನ ಜಾಣ್ಣೆಯನ್ನು ತೋರಿಸಿದ್ದಾರೆ. ಚಿತ್ರಗಳಲ್ಲಿ ಬರುವ ಮನುಷ್ಯಾಕೃತಿಗಳ ಮೈಮೇಲಿನ ಆಭರಣಗಳು, ಸೀರೆ, ಕುಪ್ಪಸ, ತಲೆಗೆ ಸುತ್ತಿಕೊಂಡು ಪೇಡ, ಹೊದ್ದುಕೊಂಡ ಶಾಲು ಮುಂತಾದ ವಸ್ತ್ರಗಳ ಅಂಚುಗಳು ಮತ್ತು ನಕ್ಷೆಗಳು ಬಹು ಸುಂದರವಾಗಿ ಮೂಡಿಬಂದಿವೆ. ದೇವಾನು-ದೇವತೆಗಳ ಚಿತ್ರಗಳಲ್ಲಿ ಹಿನ್ನೆಲೆಯ ಪ್ರಭಾವಳಿ, ಕೀರಿಟ ಮತ್ತು ಸುಳುವಿನ ಆಕೃತಿಗಳು : ಸಂಯೋಜನೆಯ ಅನುಕೂಲಕ್ಕಾಗಿ ಮಾಡಿಕೊಂಡಿರುವ ಪಟ್ಟಿಕೆಗಳಲ್ಲಿ ಬಳಸಿರುವ ಬಂಗಾರದ ವರ್ಣ ಲೇಪನವು ಚಿತ್ರಗಳ ಸೌಂದರ್ಯವನ್ನು ಮತ್ತಷ್ಟು ಹೆಚ್ಚಿಸುತ್ತದೆ. ಚಿತ್ರಗಳಲ್ಲಿನ ಆಕೃತಿಗಳಿಗೆ ಅತ್ಯಂತ ತೆಳುವಾದ ಮತ್ತು ಸೂಕ್ಷ್ಮವಾದ ಬಾಹ್ಯ ರೇಖೆಗಳಿಂದ ಪೂರ್ಣಗೊಳಿಸಿರುವುದು ನೋಡುಗರಿಗೆ ಅತೀಂದ್ರಿಯ ಅನುಭವ ಕೊಡುತ್ತಾದೆ. ಚಿತ್ರಗಳಲ್ಲಿನ ಮನುಷ್ಯಾಕೃತಿಗಳನ್ನು ಗಮನಿಸಲು ಅವು ಸ್ವಲ್ಪಮಟ್ಟಿಗೆ ಲೇಪಾಕ್ಷಿಯ ಚಿತ್ರಗಳಲ್ಲಿನ ಮನುಷ್ಯಾಕೃತಿಗಳನ್ನು ಹೋಲುತ್ತವೆ. ದೇಹದ ಭಾರವು ಕಾಲುಗಳ ಮೇಲೆ ಬೀಳದೆಯೇ ಇದ್ದಂತೆ ಕಂಡರೂ ಭಾವನೆಗಳಿಗೆ ಭಂಗ ಬರುವುದಿಲ್ಲ.

ಆಸ್ಥಾನ ಕಲಾವಿದರುಗಳಲ್ಲಿ ಬೆನಕಯ್ಯ ಮತ್ತು ಬಾನಯ್ಯನವರು 'ಚಿತ್ರ ಮತ್ತು ಶಿಲ್ಪಶಾಸ್ತ್ರ' ಬಲ್ಲವರಾಗಿದ್ದರಿಂದ ದೇವಾನು ದೇವತೆಗಳ, ಋಷಿ-ಮುನಿಗಳ ಮತ್ತು ಮಾನವರ ಚಿತ್ರಗಳನ್ನು

ಶಾಸ್ತ್ರಗಳ ಪದ್ಧತಿಯಂತೆ ರಚಿಸಿದ್ದಾರೆ. ಈ ಚಿತ್ರಗಳಲ್ಲಿನ ರೇಖೆಗಳ ವಿನ್ಯಾಸ, ಆಕೃತಿಗಳ ಸಂಯೋಜನೆ, ಬಂಗಾರ ಲೇಪನ ವರ್ಣಗಳ ಬಳಕೆಯನ್ನು ಗಮನಿಸಿದಾಗ ಗರುಡಾದ್ರಿ ಮನೆತನದವರು ಚಿತ್ರಿಸಿದ ಚಿತ್ರಗಳನ್ನು ಸುಲಭವಾಗಿ ಬೇರ್ಪಡಿಸಬಹುದು. ಕೇಸರಿ, ಹಳದಿ, ಕಡುನೀಲಿ, ಕೆಂಪು ವರ್ಣಗಳು ಮತ್ತು ಬಂಗಾರ ವರ್ಣದ ಜೆಸ್ಸೊ ಮಾದರಿಯಲ್ಲಿ ನಿರ್ಮಿಸಿರುವ ಪ್ರಭಾವಳಿಯ ಕಮಾನುಗಳು, ಮನುಷ್ಯಾಕೃತಿಗಳು, ಹಿನ್ನೆಲೆಯ ದಟ್ಟವಾದ ನೀಲಿ ವರ್ಣವುಚಿತ್ರಗಳಲ್ಲಿ ಏರಿಳಿತವನ್ನು ಉಂಟುಮಾಡುತ್ತವೆ. ಗಾಜಿನ ತೂಗುದಿಪಗಳು ಮತ್ತು ಮುನ್ನಲೆಯಲ್ಲಿ ಬಂಗಾರದ ತಟ್ಟೆಗಳು, ಹೂಜಿಗಳು, ಇತರ ಐಹಿಕ ವಸ್ತುಗಳನ್ನು ಬಳಸಿರುವುರು ಸುರಪುರ ಚಿತುಗಳಲ್ಲಿ ಕಂಡುಬರುವ ಪ್ರಮುಖ ಆಕರ್ಷಣೆ.

ಚಿತ್ರರಚನಾ ಹಂತ :

'ಸುರಪುರ ಚಿತ್ರ ರಚನೆಯಲ್ಲಿ ಮೂರು ಹಂತಗಳನ್ನು ಗುರುತಿಸಬಹುದಾಗಿದೆ. ಪ್ರಾರಂಭಿಕ ಹಂತದ ಚಿತ್ರಗಳ ಕುರಿತಾಗಿ ಹೇಳುವುದಾದರೆ, ಇದೊಂದು ವಿಜಯನಗರ ಕಲಾಶೈಲಿಯ ಮುಂದುವರೆದ ರೂಪವಾಗಿ ತೋರುತ್ತದೆ. ಅನೇಕ ಜನ ವಿದ್ವಾಂಸರೂ ಸಹ ಈ ಮಾತನ್ನು ಒಪ್ಪುತ್ತಾರೆ. ಕ್ರಿ.ಶ. ೧೮೫೨ರಿಂದ ೧೮೫೮ರ ಅವಧಿಯಲ್ಲಿ ರಚನೆಗೊಂಡ ಚಿತ್ರಗಳಲ್ಲಿ ಸಾಕಷ್ಟು ಬದಲಾವಣೆಗಳು ಕಂಡುಬಂದವು. ಈ ಅವಧಿಯಲ್ಲಿನ ಚಿತ್ರಗಳು ಪ್ರತ್ಯೇಕ ಶೈಲಿಯನ್ನು ಕಂಡುಕೊಂದವು. ವಿಶೇಷವಾಗಿ ಚಿತ್ರದ ವಿಷಯಗಳೊಂದಿಗೆ ಹಿನ್ನೆಲೆ ಹಾಗೂ ಮೇಲ್ಭಾಗದ ಪ್ರಾಭಾವಳಿಯಲ್ಲಿ ಸುಂದರ ವಿನ್ಯಾಸಗಳನ್ನು ಚಿತ್ರಿಸಿದೆ. ಜೊತೆಗೆ ಗಾಜಿನ ತೂಗುದೀಪಗಳನ್ನೂ ಚಿತ್ರಗಳಲ್ಲಿ ಸಂದರ್ಭೋಚಿತವಾಗಿ ಬಳಸಿದೆ. ಇವೆಲ್ಲವುಗಳೊಂದಿಗೆ ರೇಖಾವಿನ್ಯಾಸ, ಸ್ಥಳಾವಕಾಶಗಳಿಂದಾಗಿ ಈ ಚಿತ್ರಗಳು ವಿಶಿಷ್ಟವೆನಿಸುತ್ತವೆ. ಈ ಅವಧಿಯಲ್ಲಿನ ಚಿತ್ತಗಳಲ್ಲಿ ಬಹುಪಾಲು ಆಸ್ಥಾಮ ಕಲಾವಿದರಲ್ಲೇ ಮೊದಲ ಬಾನಯ್ಯನಿಂದ ಚಿತ್ರಿಸಲ್ಪಟ್ಟಿವೆ ಎಂದು ಹೇಳಬಹುದು.

ಕೊನೆಯ ಅವಧಿಯಲ್ಲಿನ ಚಿತ್ರಗಳು ಈ ಮೇಲೆ ಹೇಳಿದ ಲಕ್ಷಣಗಳೊಂದಿಗೆ ಮೊಘಲ್, ಬಿಜಾಪೂರ, ಹೈದರಬಾದ, ಕಂಪನಿಶೈಲಿ ಹಾಗೂ ಸ್ಥಳಿಯ ಕಲಾಶೈಲಿಯ ಪ್ರಭಾವದಿಂದ ರೂಪಗೊಂದಿವೆ. ಸುರಪುರ ಅರಸರಾದ ಹಸರಂಗಿ ಪಾಮನಾಯಕ, ಪೀತಾಂಬರ ಬಹಿರಿ ಪಿಡ್ಡನಾಯಕ, ಮೊಂಡುಗೈ ವೆಂಕಟಪ್ಪನಯಕ, ನಾಲ್ವಡಿ ವೆಂಕಟಪ್ಪನಾಯಕನ ಚಿತ್ರಗಳನ್ನು ಸುರಪುರ ಕೊನೆಯ ಹಂತಕ್ಕೆ ಸೇರಿಸಬಹುದಾಗಿದೆ. ಹಸರಂಗಿ ಪಾಮನಾಯಕನ ಚಿತ್ರದಲ್ಲಿ ಬಿಜಾಪೂರ (ದಖ್ಖನಿ) ಶೈಲಿಯ ಪ್ರಭಾವವು ಕಂಡುಬರುತ್ತದೆ. ಮೊಂಡುಗೈ ವೆಂಕಡಪ್ಪನಾಯಕನ ಭಾವಚಿತ್ರದ ಹಿನ್ನೆಲೆಯಲ್ಲಿ ಪಾಶ್ಚಿಮಾತ್ಯ ಮಾದರಿಯ ಪರದೆ ಹಾಗೂ ಇನ್ನಿತರ ಉಪಕರಣಗಳನ್ನು ಬಳಸಲಾಗಿದ್ದು, ಕಂಪನಿ ಶೈಲಿಯನ್ನು ಹೋಲುತ್ತದೆ. ಕುದುರೆ ಸವಾರಿ ನಿರತ ನಾಲ್ವಡಿ ವೆಂಕಟಪ್ಪನಾಯಕನ ಚಿತ್ರದಲ್ಲಿ ಕುದುರೆಯ ಆಕೃತಿ ದಖನಿ-ಮೊಘಲ್ ಶೈಲಿಯಲ್ಲಿ ಕಂಡುಬರುವ ಕುದುರೆ ಆಕೃತಿಗಳನ್ನು ಹೋಲುತ್ತದೆ. ಮತ್ತು ಚಿತ್ರದಲ್ಲಿ ತೋರಿಸಲಾದ ನಿಸರ್ಗ ದೃಶ್ಯವಲ್ಲದೆ ಅರಸ ಹಾಗೂ ಸೇವಕರು

ಧರಿಸಿರುವ ಉಡುಪುಗಳು ಮೊಘಲ್ ಶೈಲಿಯಲ್ಲಿವೆ. ಅರಸರ ಚಿತ್ರಗಳಲ್ಲದೇ ಸಂಸ್ಥಾನ ಕಾಲದಲ್ಲಿನ ಪ್ರಮುಖ ಗಣ್ಯರ ಚಿತ್ರಗಳು ಇದೇ ಶೈಲಿಯಲ್ಲಿಯೇ ಚಿತ್ರಣಗೊಂಡಿವೆ"[೧೯].

'ಗರುಡಾದ್ರಿ ಮನೆತನದವರಿಂದ ಚಿತ್ರಿಸಲ್ಪಟ್ಟ ಚಿತ್ರಗಳಿಂದು 'ಸುರಪುರ ಶೈಲಿ'ಯ ಚಿತ್ರಗಳೆಂದೇ ಪ್ರಸಿದ್ಧಿಯನ್ನು ಪಡೆದಿವೆ. ಸುರಪುರ ಚಿತ್ರಕಲೆಯಲ್ಲಿ ಅರಸರ ಭಾವಚಿತ್ರಗಳಾದ ಒಂದನೆಯ ಪಾಮನಾಯಕ ಮತ್ತು ಒಂದನೆಯ ಪಿಡ್ಡನಾಯಕ ಅವರ ಭಾವಚಿತ್ರಗಳನ್ನು ಶೋಧಿಸಲಾಗಿದೆ. ಇವುಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಅನಂತರ ಕಾಲದಲ್ಲಿ ಇವುಗಳನ್ನು ರಚಿಸಿರಬಹುದೆಂದು ಚಿತ್ರಗಳಲ್ಲಿಯ ಕೆಲವು ಲಕ್ಷಣಗಳಿಂದ ಹೇಳಬಹುದು. ಅರಸರು ವೈಷ್ಣವ ಧರ್ಮಾವಲಂಬಿಗಳಾಗಿದ್ದರಿಂದ ಅವರ ಹಣೆಯ ಮೇಲೆ ವೈಷ್ಣವ ನಾಮ ಕಂಡುಬರುತ್ತದೆ. ಒಂದನೆಯ ಪಾಮನಾಯಕನ ಚಿತ್ರವು ಬಿಜಾಪುರ ಶೈಲಿಯಲ್ಲಿದೆ. ಪಾಮನಾಯಕನ ಶಿರದ ಸುತ್ತಲೂ ಪ್ರಭಾವಳಿ ಇದೆ. ಒಂದನೆಯ ವೆಂಕಟಪ್ಪನಾಯಕನ ಚಿತ್ರವು ಕಂಪನಿ ಶೈಲಿಯಲ್ಲಿದೆ. ಈ ಚಿತ್ರದಲ್ಲಿ ಕಂಪನಿ ಶೈಲಿಯಂತೆ ಪರದೆ ಹಾಗೂ ಇತರ ಐರೋಪ್ಯ ಮಾದರಿಯ ಉಪಕರಣಗಳನ್ನು ಚಿತ್ರದಲ್ಲಿ ಕಾಣಬಹುದು. ನಾಲ್ವಡಿ ವೆಂಕಟಪ್ಪ ನಾಯಕನ ಮೂರು ಚಿತ್ರಗಳು ಲಭ್ಯವಿದ್ದು, ಬಹುಶಃ ಇವು ಅವನ ಆಳ್ವಿಕೆಯ ಕಾಲದಲ್ಲಿಯೇ ರಚಿಸಲ್ಪಟ್ಟಿವೆ. ಗುಲ್ಬರ್ಗದ ವಿಜಯ ಹಾರಗುಂಡಗಿಯವರ ಸಂಗ್ರಹದಲ್ಲಿರುವ ನಾಲ್ವಡಿ ವೆಂಕಟಪ್ಪನ ಚಿತ್ರದಲ್ಲಿ ನಾಯಕ ಕುದುರೆ ಸವಾರಿ ಮಾಡುತ್ತಿರುವ ಚಿತ್ರ ಇರುವುದು. ಇದರಲ್ಲಿ ಕುದುರೆಯ ಆಕೃತಿ ದಖನಿ-ಮೊಘಲ ಶೈಲಿಯ ಚಿತ್ರಗಳಲ್ಲಿ ಕಂಡುಬರುವ ಕುದುರೆಯ ಆಕೃತಿಗಳನ್ನು ಹೋಲುತ್ತದೆ. ಅಲ್ಲಡೆ ಚಿತ್ರದಲ್ಲಿಯ ನಿಸರ್ಗ ಹಾಗೂ ಅರಸರ ಸೇವಕರು ಧರಿಸಿದ ಉಡುಪು ಮೊಘಲ ಶೈಲಿಯ ಅನುಕರಣೆಯಾಗಿದೆ.

ಬೇರೆ ಶೈಲಿಗಳ ಪ್ರಾಭಾವ :

ಸುರಪುರ ಸಂಸ್ಥಾನವು ರಾಜಕೀಯ ಉನ್ನತಿಯೊಂದಿಗೆ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಗಳ ಸಂಗಮವಾಗಿತ್ತು. ಮಾತ್ರವಲ್ಲದೇ ಚಿತ್ರಕಲಾವಿದರು ಆಶ್ರಯ ನೀಡುವುದರೊಂದಿಗೆ ಕಲೆಯ ಕೇಂದ್ರವಾಗಯೂ ಪರಿಣಮಿಸಿತು. ಅಂತೆಯೇ ಇವರ ರಾಜಾಶ್ರಯದಲ್ಲಿ ಅಸಂಖ್ಯಾತ ಕಲಾಕೃತಿಗಳು ಮೂಡಿಬಂದಿವೆ. ಸುರಪುರ ಚಿತ್ರಕಲೆಯಲ್ಲಿ ವಿಜಯನಗರ, ಬಿಜಾಪೂರ, ಹೈದರಾಬಾದ (ನಿಜಾಮ) ಮತ್ತು ಕಂಪನಿ ಕಲಾಶೈಲಿಯ ಪ್ರಭಾವ ಆಗಿರುವುದನ್ನು ನಾವು ಒಪ್ಪಲೇಬೇಕಾಗುತ್ತದೆ. ಖ್ಯಾತ ಇತಿಹಾಸಕಾರ ಜಗದೀಶ ಮಿತ್ತಲ್‌ರವರು ಭಾರತೀಯ ಚಿತ್ರಕಲೆಯನ್ನು ಕುರಿತು ವಿಶೇಷ ಅಧ್ಯಯನ ಕೈಗೊಂಡಿದ್ದು, ದಖನಿ ಚಿತ್ರಕಲೆಯಲ್ಲಿ 'ಸುರಪುರ ಚಿತ್ರಕಲೆ' ಒಂದು ಸ್ವತಂತ್ರ ಶೈಲಿಯೆಂದು ಗುರುತಿಸಿದರು. ಅಲ್ಲದೇ ಸುರಪುರ ಅರಸರು ಹೈದರಾಬಾದ ನಿಜಾಮರ ಸಾಮಂತರಾಗಿದ್ದು, ಅವರೊಂದಿಗೆ ಇದ್ದ ರಾಜಕೀಯ ಸಂಬಂಧದಿಂದಾಗಿ ಸಂಸ್ಥಾನದಲ್ಲಿ ಚಿತ್ರಕಲೆಯು ಹೊಸ ರೂಪ ತಳೆಯಲು ಕಾರಣವಾಯಿತೆಂದೂ ಮಿತ್ತಲ್‌ರವರು ಅಭಿಪ್ರಾಯ ಪಡುತ್ತಾರೆ.

೧೭. ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ : ಸುರಪುರ ಚಿತ್ರಕಲೆ, ಪು.ಸಂ-೪೪,
ಅದೇ. ಪು.ಸಂ-೪೫

ಕ್ರಿಶ ೧೮೫೭-೫೮ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸುರಪುರದ ಕೊನೆಯ ದೊರೆ ರಾಜಾ ನಾಲ್ವಡಿ ವೆಂಕಟಪ್ಪನಾಯಕನ ವೀರ ಮರಣದ ನಂತರ ಸುರಪುರ ಸಂಸ್ಥಾನವು ಬ್ರಿಟೀಷ ಸರಕಾರದ ಮಧ್ಯಸ್ಥಿಕೆಯಲ್ಲಿ ೧೮೫೮ರಲ್ಲಿ ಹೈದರಾಬಾದ ನಿಜಾಮನ ಸಂಸ್ಥಾನಕ್ಕೆ ಒಳಪಟ್ಟಿತ್ತು. ಸಂಸ್ಥಾನದ ಪತನಾ ನಂತರ ಸುರಪುರ ಆಸ್ಥಾನದ ಕಲಾವಿದರಲ್ಲಿ ಕೆಲವರು ನಾಡಿನ ಶ್ರೀಮಂತ ವರ್ಗದವರ ಹಾಗೂ ಮಠಾಧೀಶರ ಆಶ್ರಯವನ್ನು ಪಡೆದರೆ, ಇನ್ನೂ ಕೆಲವರು ಹೈದರಾಬಾದ, ಕರ್ನೂಲು, ಕಡಪ, ಆದೋನಿ ಮುಂತಾದ ಕಡೆಗಳಲ್ಲಿ ವಲಸೆಹೋಗಿ ಅಲ್ಲೇ ನೆಲೆಸಿದರು. ಅಂದು ಈ ನಾಡಿನ ಶ್ರೀಮಂತ ವರ್ಗದವರು ಹಾಗೂ ಊರಿನ ಅಧಿಕಾರಿ (ಗೌಡ, ಪಾಟೀಲ, ದೇಸಾಯಿ, ದೇಶಮುಖ) ವರ್ಗದವರು ಸಂಸ್ಥಾನದ ಅರಸರಂತೆ ತಮ್ಮ ಭಾವಚಿತ್ರಗಳನ್ನು ಸುರಪುರ ಕಲಾವಿದರಿಂದ ಚಿತ್ರಿಸಿಕೊಂಡಿದ್ದಾರೆ'[೧೮].

ಹೀಗೆ ಸುರಪುರ ಸಂಸ್ಥಾನ ಪತನಾ ನಂತರ ನಾಡಿನ ಬೇರೆ ಬೇರೆ ಕಡೆಗಳಲ್ಲಿ ನೆಲೆಸಿದರು ಗರುಡಾದ್ರಿ ವಂಶಸ್ಥರು ಆಶ್ರಯವಾದತರ ಮೇರೆಗೆ ಆಯಾ ಪ್ರದೇಶಗಳ ವೈಶಿಷ್ಟ್ಯಗಳನ್ನು ತಮ್ಮ ಚಿತ್ರಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಈ ಅನ್ಯ ಕಲಾಶೈಲಿಗಳ ಪ್ರಭಾವ ಬಿರಿರುವುದು ಕಾಣಬಹುದು.

ಸುರಪುರ ಚಿತ್ರಗಳ ಈಗಿನ ಸ್ಥಿತಿ :

ಸುರಪುರ ಚಿತ್ರಕಲೆಯಲ್ಲಿ ಹಾಳೆಯ ಮೇಲೆ ರಚಿಸಿದ ಚಿತ್ರಗಳು, ಭಿತ್ತಿ ಚಿತ್ರಗಳು, ಗಾರೆ, ಕಾಷ್ಠ ಮತ್ತು ಶಿಲಾ ಮಾಧ್ಯಮದ ಶಲ್ಪಗಳ ಮೇಲೆ ಚಿತ್ರಸಲಾದ ಚಿತ್ರಗಳು ಎಂದು ವರ್ಗೀಕರಿಸಿಕೊಳ್ಳಲಾಗಿದೆ. ಈ ಚಿತ್ರಗಳಿಂದು ವಿನಾಶದ ಅಂಚಿನಲ್ಲಿವೆ. ಗೋಡೆಯ ಮೇಲೆ ಬರೆದ ಭಿತ್ತಿ ಚಿತ್ರಗಳು ನೈಸರ್ಗಿಕ ಆಪತ್ತು ಮತ್ತು ನಿರ್ಲಕ್ಷ್ಯದಿಂದ ಹಾಳಾದರೆ, ಕಾಗದದ ಮೇಲೆ ಬರೆದ ಚಿತ್ತಗಳು ಎಷ್ಟು ದಿನಗಳಂತ ಉಳಿತವೆ?. ಕೆಲವೊಂದು ಚಿತ್ರಗಳು (ದೇವಾನು-ದೇವತೆಗಳ) ಇಂದಿಗೂ ಪೂಜಿಸುತ್ತಿದ್ದಾರೆ. ಪೂಜೆ ಮಾಡುವ ವೇಳೆ ಈ ಚಿತ್ರಗಳಿಗೆ ನೀರು ಸಿಂಪರಿಸಿ ಕುಂಕುಮವನ್ನು ಹಚ್ಚುವುದರಿಂದ ಚಿತ್ರಗಳು ಹಾನಿಗೊಲಪಡುತ್ತಿವೆ. ಒಂದರ್ಥದಲ್ಲಿ ಈ ಚಿತ್ರಗಳಿಗೆ ಅನೇಕ ಬಗೆಯ ಆಪತ್ತುಗಳು ಬಂದೊದಗಿರುವುದಂತೂ ಸತ್ಯ.

ಪ್ರಮುಖ ಲಕ್ಷಣಗಳು :

'ಸುರಪುರ ಚಿತ್ರಕಲೆಯನ್ನು ವಿಜಯನಗರ ಚಿತ್ರಕಲೆಯ ಒಂದು ಉಪ-ಚಿತ್ರಕಲೆಯೆಂದು ಕೆಲವು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಸುರಪುರ ಶೈಲಿ ವಿಜಯನಗರ ಶೈಲಿಯೊಂದಿಗೆ ಬಿಜಾಪುರ, ಮೊಘಲ, ಹೈದ್ರಾಬಾದ, ಮರಾಠ ಹಾಗೂ ಸ್ಥಳೀಯ ಶೈಲಿಗಳ ಲಕ್ಷಣಗಳೊಂದಿಗೆ ಬೆಳೆದು ಬಂದಿದೆ. ಈ ಕಲೆಯಲ್ಲಿ ಕಂಡುಬರುವ ಪ್ರಮುಖ ಲಕ್ಷಣಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

೧೮. ಎಸ್.ಕೆ.ಅರುಣಿ : ದಖನಿ ಚಿತ್ರಕಲೆ, ಪು.ಸಂ-೨೦

- ಧಾರ್ಮಿಕ ಕಥೆಗಳನ್ನಾಧರಿಸಿದ ಚಿತ್ರಗಳು ಈ ಚಿತ್ರಕಲೆಯಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ವಿಷ್ಣುವಿನ ಅವತಾರಗಳು ಅತಿ ಹೆಚ್ಚು ಜನಪ್ರಿಯವಾಗಿದ್ದವು. ರಾಮನ ಪಟ್ಟಾಭಿಷೇಕ, ಶ್ರೀರಾಮದರ್ಶನ, ವೆಂಕಟೇಶ್ವರ, ಗೋಪಿಕಾ, ಸ್ತ್ರೀಯರೊಡನೆ ಕೃಷ್ಣ ಮುಂತಾದ ದೃಶ್ಯಕಲಾ ಚಿತ್ರಗಳು ಈ ಕಲೆಯಲ್ಲಿ ಹೆಚ್ಚು ಚಿತ್ರಿತವಾಗಿದೆ
- ದೇವ-ದೇವತೆಯರನ್ನು ಚಿತ್ರಿಸುವಲ್ಲಿ ದಕ್ಷಿಣ ಭಾರತದ ಮೂರ್ತಿ ಶಿಲ್ಪಗಳನ್ನು ಮಾದರಿಯನ್ನಾಗಿ ಬಳಸಿರಬಹುದಾದ ಸಾದ್ಯತೆಗಳಿವೆ. ಮೂರ್ತಿ ಶಿಲ್ಪಗಳಲ್ಲಿ ದೇವತೆಗಳು ಹಿಡಿದಿರುವ ಆಯುಧಗಳು, ಆಭರಣಗಳು ಈ ಚಿತ್ರಗಳಲ್ಲಿ ಯಥಾವತ್ತಾಗಿ ಕಂಡುಬರುತ್ತವೆ.
- ಆಕೃತಿಗಳ ಬಾಹ್ಯ ರೇಖೆಗಳು ಅತಿ ಸೂಕ್ಷ್ಮ ರೇಖೆಗಳಿಂದ ಕೂಡಿವೆ. ಇದು ಈ ಕಲಾವಿದರ ಕುಶಲತೆಯನ್ನು ವ್ಯಕ್ತಪಡಿಸುತ್ತದೆ ದಕ್ಷಿಣ ಭಾರತದಿಂದ ವಲಸೆ ಬಂದಿದ್ದ ಕಲಾವಿದರು ದಖನಿ ಶೈಲಿಯ ಸುಕ್ಷ್ಮ ಕಲೆಯನ್ನು ತಮ್ಮ ಕಲೆಯಲ್ಲಿ ಅಳವಡಿಸಿದ್ದಾರೆ.
  ಈ ಕಲೆಯಲ್ಲಿ ಭಾರತದಲ್ಲಿ ಪ್ರಚಲಿತವಿದ್ದ ಉಷ್ಣ ವರ್ಣಗಳಾದ ಹಸಿರು, ಕೆಂಪು, ಹಳದಿ ಮತ್ತು ನೀಲಿ ವರ್ಣಗಳನ್ನು ಹೆಚ್ಚಾಗಿ ಬಳಸಿರುವರು. ಸುರಪುರ ಚಿತ್ರಕಲೆಯ ವರ್ಂಗಳ ಸಂಯೋಜನೆ ಅಮೋಘವಾದದು.
- ಧೋತಿ, ಅಂಗವಸ್ತ್ರಗಳು ಪುರುಷರು ಧರಿಸಿರುವ ಉಡುಪುಗಳಾದರೆ, ಸ್ತ್ರೀಯರು ಮಹಾರಾಷ್ಟ್ರ ಸ್ತ್ರೀಯರು ಧರಿಸುವ ಶೈಲಿಯಲ್ಲಿ ಸೀರೆ ಧರಿಸಿರುವರು. ಅದರಂತೆ ಮಹಾರಾಷ್ಟ್ರ ಶೈಲಿಯ ಉದ್ದನೆಯ ನತ್ತು (ಮೂಗುತಿ) ಚಿತ್ರಗಳಲ್ಲಿಯ ಸ್ತ್ರೀಯರು ಧರಿಸಿರುವರು.
- ಚಿತ್ರದಲ್ಲಿಯ ಕಟ್ಟಡಗಳು ವಿಜಯನಗರ-ದಖನ್ ಸುಲ್ತಾನರ ವಾಸ್ತುಶೈಲಿಯಲ್ಲಿ ಕಂಡುಬರುತ್ತದೆ. ಈ ಮಿಶ್ರ ಶೈಲಿಯ ಕಟ್ಟಡಗಳು ವಿಜಯನಗರರೋತ್ತರ ಕಾಲದಲ್ಲಿ ಪ್ರಚಲಿತವಿದ್ದವು. ಕಲಾವಿದರು ತಮ್ಮ ಚಿತ್ರಗಳಲ್ಲಿ ಈ ಕಟ್ಟಡಗಳನ್ನು ಮಾದರಿಗಳನ್ನಾಗಿ ಬಳಸಿದ್ದಾರೆ.
- ಸುರಪುರದ ಚಿತ್ರಗಳು ಚಿನ್ನದ ಲೇಪನಕ್ಕೆ ಪ್ರಸಿದ್ಧವಾಗಿವೆ. ಸಮಕಾಲೀನ ತಂಜಾವೂರು ಮತ್ತು ಮೈಸೂರು ಚಿತ್ರಕಲೆಗಳಲ್ಲಿ ಪ್ರಚಲಿತವಿದ್ದ ಚಿನ್ನದ ಲೇಪನ ತಂತ್ರ ಈ ಕಲೆಯಲ್ಲಿ ಕಂಡುಬರುತ್ತದೆ. ಆದರೆ ಇದು ಆಭರಣ, ಮುಕುಟ ಇತ್ಯಾದಿಗಳಿಗೆ ಮಾತ್ರ ಸೀಮಿತವಾಗಿದೆ. ಚಿನ್ನದ ಲೇಪನ ಈ ಚಿತ್ರಗಳಲ್ಲಿ ಅತಿ ಮಿತವಾಗಿ ಬಳಸಲಾಗಿದೆ. ವರ್ಣಗಳ ಜೊತೆಗೆ ಸರಿಸಮಾನವಾಗಿ ಕಂಡುಬರುತ್ತದೆ. ತಂಜಾವೂರು ಮತ್ತು ಮೈಸೂರು ಚಿತ್ರಗಳಲ್ಲಿ ಕಂಡುಬರುತವಂತೆ ಅತಿ ದಪ್ಪವಾದ ಲೇಪನ ಇಲ್ಲಿ ಕಂಡುಬರುವುದಿಲ್ಲ'[೧೯].
- ಸುರಪುರದ ಸಾಂಪ್ರದಾಯಿಕ ಚಿತ್ರಗಳಲ್ಲಿ ನಿರ್ಸಗದ ಹೂ, ಎಲೆ, ಗಿಡ, ಪ್ರಾಣಿ, ಪಕ್ಷಿಗಳ, ಗಡೀಯಾರ, ತಟ್ಟೆಗಳು, ದೀಪಗಳು ಮತ್ತು ಸಿಂಹಾಸನಗಳನ್ನು ವಿಶೇಷವಾಗಿ ನೋಡಬಹುದು.
- ಸುರಪುರದ ಸಾಂಪ್ರದಾಯಿಕ ಚಿತ್ರಗಳಲ್ಲಿ ಗಂಧರ್ವರು, ಸೇವಕರು, ಧ್ವಜ ಮತ್ತು ಸಿಂಹಾಸನಗಳು ಕಲಾಕೃತಿಯಲ್ಲಿ ನೋಡಬಹುದು.

೧೯. ಎಸ್.ಕೆ.ಅರುಣಿ : ದಖನಿ ಚಿತ್ರಕಲೆ, ಪು.ಸಂ-೧೦೪

ಮೆಡೋಸ್ ಟೇಲರ್ ಮತ್ತು ಚಿತ್ರಕಲೆ :

ಬ್ರಿಟೀಷ್ ಸರಕಾರದ ರಾಜಕೀಯ ಪ್ರತಿನಿಧಿಯಾಗಿ ಸುರಪುರಕ್ಕೆ ಬರುವ ಪೂರ್ವದಲ್ಲೇ ಟೇಲರನು ರೇಖಾ ಮತ್ತು ವರ್ಣಚಿತ್ರಗಳನ್ನು ಬಿಡಿಸುವ ಪರಿಹಾಠವನ್ನು ಇಟ್ಟುಕೊಂಡಿದ್ದನು. ಸುರಪುರ ಸಂಸ್ಥಾನದಲ್ಲಿ ಅಧಿಕಾರಿಯಾಗಿ ಬಂದ ನಂತರ ಟೇಲರನ ಚಿತ್ರ ರಚನೆಯಲ್ಲಿ ಕೆಲವೊಂದು ಬದಲಾವಣೆಗಳು ಕಾಣಿಸಿ ಕೊಂಡವು. ಟೇಲರನು ಸುರಪುರಕ್ಕೆ ಬರುವ ಪೂರ್ವದಲ್ಲೇ ಸುರಪುರ ಸಂಸ್ಥಾನದಲ್ಲಿ 'ಗರುಡಾದ್ರಿ' ಎಂಬ ಚಿತ್ರಕಲಾವಿದ ಮನೆತನವು ಆಶ್ರಯವನ್ನು ಪಡೆದಿದ್ದು, ಅವರಿಂದ ಸಾಕಷ್ಟು ಚಿತ್ರಗಳೂ ರಚನೆಗೊಂಡಿದ್ದವು. ಟೇಲರನ್ನು ಸ್ಮಾರಕಗಳ ಹಾಗೂ ನಿಸರ್ಗ ದೃಶ್ಯಗಳನ್ನು ಒಳಗೊಂಡಂತೆ ಸಾಕಷ್ಟು ಸಂಯೋಜನ ಚಿತ್ರಗಳನ್ನು ಚಿತ್ರಿಸಿದ್ದಾನೆ. ಕೆಲವು ವರ್ಣಚಿತ್ರಗಳಲ್ಲಿ ನಿಸರ್ಗ ದೃಶ್ಯದೊಂದಿಗೆ ಹಿನ್ನೆಲೆಯಾಗಿ ತೋರಿಸಿರುವ ವ್ಯಕ್ತಿಗಳು ಮತ್ತು ಅವರು ಧರಿಸಿದ ಉಡುಪುಗಳು ಸುರಪುರ ಸಾಂಪ್ರದಾಯಿಕ ಚಿತ್ರಕಲೆಯಲ್ಲಿ ಬರುವ ಮನುಷ್ಯಾಕೃತಿಯನ್ನು ಹೋಲುತ್ತವೆ.

ಟೇಲರನ ಆಗಮನದ ನಂತರ ಸುರಪುರ ಆಸ್ಥಾನ ಕಲಾವಿದರ ಕೃತಿ ರಚನೆಗಳಲ್ಲೂ ಕೆಲವೊಂದು ಬದಲಾವಣೆಗಳು ಕಂಡುಬಂದವು. ಅದರಲ್ಲೂ ಈ ಅವಧಿಯ ಚಿಕಣಿ ಚಿತ್ರಗಳಲ್ಲಿ ಛಾಯಾಚಿತ್ರದ ಬಳಕೆಯು ವಿಶೇಷವಾಗಿ ಕಂಡುಬರುತ್ತದೆ. ೧೮೫೦–೬೦ರ ದಶಕದಲ್ಲೇ ಮೆಡೋಸ್ ಟೇಲರನ ಮೂಲತ ಛಾಯಾಚಿತ್ರಕಲೆಯು ಸುರಪುರಕ್ಕೆ ಪರಿಚಯವಾಯಿತೆಂದು ಹೇಳಬಹುದು. ಈ ಅವಧಿಯಲ್ಲಿ ಸುರಪುರ ಆಸ್ಥಾನ ಪ್ರಮುಖರಲ್ಲದೇ ಶ್ರೀಮಂತ ವರ್ಗದವರು ತಮ್ಮ ಹಾಗೂ ತಮ್ಮ ಪರಿವಾರದವರೊಂದಿಗೆ ಕ್ಲಿಕ್ಕಿಸಿಕೊಂಡು ಸಾಕಷ್ಟು ಛಾಯಾಚಿತಗಳು ನಮಗೆ ಸುರಪುರ ಪ್ರದೇಶದಲ್ಲಿ ಈಗಲೂ ನೋಡಲು ಸಿಗುತ್ತವೆ. ಸುರಪುರ ಆಸ್ಥಾನ ಕಲಾವಿದರಲ್ಲೇ ಶ್ರೇಷ್ಠನಾದ ಗರುಡಾದ್ರಿ ಮೊದಲ ಬಾನಯ್ಯನು ಸಾಂಪ್ರದಾಯಿಕ ಚಿತ್ರಗಳಲ್ಲಿ ಛಾಯಾಚಿತ್ರಗಳನ್ನು ಬಳಸಿ ಕೃತಿರಚನೆ ಮಾಡಿದ್ದಾನೆ. ಸಾಂಪ್ರದಾಯಿಕ ಚಿತ್ರಕಲೆಯಲ್ಲಿ ಛಾಯಾಚಿತ್ರವನ್ನು ಬಳಸಿ ಚಿತ್ರ ರಚಿಸುವ ನವೀನ ತಂತ್ರಗಾರಿಕೆಯನ್ನು ಕಲಾ ಪ್ರಪಂಚಕ್ಕೆ ಪರಿಚಯಿಸಿದ ಕೀರ್ತಿ ಸುರಪುರ ಆಸ್ಥಾನ ಕಲಾವಿದರಿಗೆ ಸಲ್ಲುತ್ತದೆ. ಈ ಯಶಸ್ಸಿನ ಹಿಂದೇ ಟೇಲರನ ಪಾತ್ರವನ್ನೂ ನಾವು ಅಲ್ಲಗಳೆಯುವಂತಿಲ್ಲ.

ಟೇಲರನು ಚಿತ್ರಿಸಿದ ಚಿತ್ರಗಳಲ್ಲಿ ಬಹುಪಾಲು ದಖನ್ ಪ್ರದೇಶದ ಸ್ಮಾರಕಗಳನ್ನು ಯಥಾವತ್ತಾಗಿ ಚಿತ್ರಿಸಲಾಗಿದೆಯಾದರೂ ಕೆಲವೊಮ್ಮೆ ಅವುಗಳಲ್ಲಿ ಸೂಕ್ಷ್ಮ ರೇಖೆಗಳಿಂದ ಅಲಂಕಾರಿಕ ವಿನ್ಯಾಸದ ಸ್ಪರ್ಷವನ್ನು ನೀಡಿ ಅಂದಿನ ವೈಭವವನ್ನು ನೆನಪಿಸಲು ಟೇಲರನು ಯತ್ನಿಸಿರುವುದು ಮೇಲ್ನೋಟಕ್ಕೆ ತೋರುತ್ತದೆ. ಹಾಗಾಗಿ ಟೇಲರನ ರೇಖಾಚಿತ್ರಗಳು ಹೆಚ್ಚು ಆಕರ್ಷಿಸುತ್ತವೆ. ಈ ಚಿತ್ರಗಳಲ್ಲಿ ದೂರ ಮತ್ತು ಸಮೀಪದ ಹಲ್ಪನೆಯು ಸೊಗಸಾಗಿ ಮೂಡಿಬಂದಿದೆ. ಭೂದೃಗ್ದರ್ಶನದ ಕಲ್ಪನೆಗಾಗಿ ಕಪ್ಪು ವರ್ಣದ ರೇಖೆಗಳೊಂದಿಗೆ ಅಲ್ಲಲ್ಲಿ ಬಿಳಿ ವರ್ಣದ ಬಳಕೆಯನ್ನೂ ಮಾಡಿದ್ದು ಟೇಲರನ ಕಲಾ ನೈಪುಣ್ಯತರಯನ್ನು ಸ್ಪಷ್ಟಪಡಿಸುತ್ತದೆ. ದಖನ್ ಪ್ರದೇಶದ ಸ್ಮಾರಕಗಳಲ್ಲಿ ವಿಶೇಷವಾಗಿ ಬೀದರ್‌ನ ಬರೀದಷಾಹಿಗಳ ಸ್ಮಾರಕಗಳು, ಬೀದರ್‌ನ ಮದರಸಾ ಕಟ್ಟಡ, ಕಲಾದಗಿಯ ಪ್ರಾಚೀನ ದೇವಾಲಯದ ಮಹಾದ್ವಾರ, ಶಹಾಪೂರ ತಾಲೂಕಿನ ಭೀಮರಾಯನಗುಡಿ ಸಮೀಪದ ಕಲ್ಲು ಬಂಡೆಗಳ ಸಮೂಹ, ರಾಜನ ಕೊಳ್ಳೆರ ಸಮೀಪದ ಕಲ್ಗೋರಿಗಳ ಚಿತ್ರಣ, ಹೈದರಾಬಾದ ಸಮೀಪದ

ಗೋಲ್ಕೊಂಡ ಕೋಡೆ, ಚಾರಮಿನಾರೆ ಮುಂತಾದ ಸ್ಮಾರಕಗಳನ್ನು ತಮ್ಮ ರೇಖೆ ಹಾಗೂ ಕುಂಚಗಳ ಸೆರೆ ಹಿಡುದ್ದಾರೆ. ಸ್ಮಾರಕಗಳೊಂದಿಗೆ ನಮ್ಮ ಭಾರತೀಯ ಜನಜೀವನ ಹಾಗೂ ಸಾಂಸ್ಕೃತಿಕ ಕುರುಹುಗಳನ್ನೂ ರೇಖೆಸಿದ್ದುಂಟು. ಈ ಚಿತ್ರಗಳಲ್ಲಿ ಭಾರತೀಯ ಸಂಸ್ಕೃತಿಯ ಬಗೆಗೆ ತನಗಿರುವ ವಿಶೇಷ ಕಾಳಜಿಯನ್ನು ಒರೆಗೆ ಹಚ್ಚಿದ್ದನ್ನು ಇಲ್ಲಿ ಕಾಣಬಹುದಾಗಿದೆ.

ಹೀಗೆ ಸುರಪುರ ಸಂಸ್ಥಾನವು ಆಸ್ಥಾನ ಕಲಾವಿದರಾದ ಗರುಡಾದ್ರಿ ಹಾಗೂ ಟೇಲರನ ಕಾಲದಲ್ಲಿ ಲಲಿತಕಲೆಗಳು ಮಹತ್ವಪೂರ್ಣ ಕೇಂದ್ರವಾಯಿತ್ತು.

ಸಮಕಾಲಿನ ಕಲಾವಿದರು :

ಗರುಡಾದ್ರಿ ವಂಶದಲ್ಲಿ ಚಿತ್ರಗಾರ ಮನೆತನದವರು ಈ ಶತಮಾನದಲ್ಲಿ ಯಾರು ಕೂಡ ಕಲಾವಿದರಿ ಚಿತ್ರ ರಚನೆ ಮಾಡುವವರು ಸಿಗುವುದಿಲ್ಲಾ. ಅದರೆ ಈ ಕಲೆಯನ್ನು ಪರಿಪುರಣವಾಗಿ ಅರಿತ್ತು ಕೊಂಡ ಪ್ರಮುಖ ಕಲಾವಿದ್ದರು ಕಲಬುರ್ಗಿಯ ಕಲಾವಿದರಾದ ವಿಜಯ ಹಾಗರಗುಂಡಿಗಿ, ಶಾಹಬಾದನ ಕಿಶೋರಕುಮಾರ ನಾಗುರೆ, ಬೆಂಗಳೂರಿನ ಎಂ ವಿ ಕಂಬಾರ್‌ರರು. ಜಗದೀಶ್ ಎಂ ಕಾಂಬಳೆ, ಜಗನಾಥ್ ಬಿ. ಬೆಲ್ಲದವರು ಕಲಾಕೃತಿಗಳನ್ನು ರಚಿಸುತ್ತಿದ್ದಾರೆ. ಆದರೆ ರೆಹಮಾನ ಪಟೇಲ, ವಿಶ್ವೇಶ್ವರಿ ತಿವಾರಿ, ಮೋಹನ್‌ರಾವ್ ಪಂಚಳ ಇವರು ಕೆಲವು ವರ್ಷಗಳ ಕಾಲ ಕಲಾಕೃತಿಗಳನ್ನು ರಚಿಸಿ ನಂತರ ಇದನ್ನು ತೊರೆದರು. ಇನ್ನು ಕೆಲವು ಮಾತ್ರ ಕಲಾವಿದರನ್ನು ಈ ಸಂಶೋಧನೆಯ ಮೂಲಕ ಕಾಣಬಹುದು.

ಭಿತ್ತಿಚಿತ್ರಗಳು :

'ಭಿತ್ತಿಚಿತ್ರವನ್ನು ಆಂಗ್ಲಭಾಷೆಯಲ್ಲಿ 'Mural Painting' ಎಂದು ಕರೆಯುತ್ತಾರೆ. ಮ್ಯೂರಲ್ ಎನ್ನುವ ಪದವು ಲ್ಯಾಟಿನ್ ಭಾಷೆಯಿಂದ ಬಂದಿದೆ. ಮ್ಯೂರಲ್‌ನ ಅರ್ಥ ಗೋಡೆ (Wall)ಎಂದಾಗುವುದು. ಗೋಡೆಯ ಮೇಲೆ ಬಣ್ಣದಿಂದ ಬರೆದ ಚಿತ್ರ ಮತ್ತು ಕೆತ್ತಿ, ಕೊರೆದು ಅಂಟಿಸಿದ– ಹೀಗೆ ಯಾವುದೇ ವಿಧಾನದಿಂದ ಗೋಡೆಯ ಮೇಲೆ ರೂಪಿಸಿದ ಚಿತ್ರಗಳು 'Mural' ವ್ಯಾಪ್ತಿಯಲ್ಲಿ ಬರುತ್ತವೆ ಎಂದು 'ಕೇಂಬ್ರಿಡ್ಜ್ ವಿಶ್ವಕೋಶ'ವು ತಿಳಿಸುತ್ತದೆ. ಗೋಡೆ ಮತ್ತು ಮೇಲ್ಭಾವಣಿಗಳನ್ನು ವರ್ಣಗಳಿಂದ ಅಲಂಕರಿಸುವ ವಿಧಾನವನ್ನು ಭಿತ್ತಿ ಚಿತ್ರಕಲೆ ಎಂದು 'ಆಕ್ಸಫರ್ಡ ಶಬ್ದಕೋಶ'ದಲ್ಲಿ ಹೇಳಲಾಗಿದೆ. ಗೋಡೆಗಳು ಮೇಲ್ಭಾವಣಿಗಳು ಮತ್ತು ಗುಹೆಗಳನ್ನು ಫ್ರೆಸ್ಕೊ, ಸೆಕ್ಕ, ತೈಲವರ್ಣ, ಟೆಂಪರಾ ಇಲ್ಲವೆ ಎನ್ಕ್ಯಾಸ್ಟಿಕ್ ವಿಧಾನಗಳಿಂದ ಚಿತ್ರಿಸಿ ಅಲಂಕರಿಸುವ ವಿಧಾನವನ್ನೂ ಸಹ ಭಿತ್ತಿ ಚಿತ್ರಕಲೆ ಎಂದು 'ವೆಬ್‌ಸ್ಟರ್ಸ್ ನ್ಯೂ ವರ್ಲ್ಡ್' ಪರಿಗಣಿಸಿದೆ. ಗೋಡೆ ಮತ್ತು ಮೇಲ್ಭಾವಣಿಗಳ ಮೇಲೆ ವರ್ಣದಿಂದ ರಚಿಸಿದ ಚಿತ್ರಗಳು ಮತ್ತು ಬಣ್ಣದ ಕಲ್ಲಿನ ತುಂಡುಗಳನ್ನು (ಸೂಡುಬಿಲ್ಲೆ) ಅಂಟಿಸಿ ರೂಪಿಸಿದ ಮೊಸಾಯಿಕ ಚಿತ್ರಗಳೂ ಭಿತ್ತಿ ಚಿತ್ರಗಳ ವ್ಯಾಪ್ತಿಯಲ್ಲಿ ಬರುತ್ತವೆ ಎಂದು 'ಬ್ರಿಟಾನಿಕಾ ಎನ್‌ಸೈಕ್ಲೊಪೀಡಿಯಾ' ಹೇಳುತ್ತದೆ. ಕನ್ನಡ ಜಾನಪದ ವಿಶ್ವಕೋಶವು ಭಿತ್ತಿಚಿತ್ರ ಎಂದರೆ ಗೋಡೆಯ ಮೇಲೆ ಬರೆದಿರುವ ಚಿತ್ರವೆಂದು ಹೇಳಿದರೆ, ಪ್ರಾಚೀನ ಸಾಹಿತ್ಯ ಕೃತಿಗಳಲ್ಲಿ ಭಿತ್ತಿ

ಎಂಬುದಕ್ಕೆ ಗೋಡೆ, ಕುಡ್ಯ, ಮೂಲ, ತಳ, ಹಿನ್ನೆಲೆ ಚಿತ್ರವನ್ನು ಬರೆಯುವ ಮೂಲಾಧಾರಗಳಾದ ಬಟ್ಟೆ, ಗೋಡೆ ಮೊದಲಾದ ಸಾಧನಗಳು ಎಂಬ ಅರ್ಥಗಳನ್ನು ಕೊಟ್ಟಿದೆ. ಹಾಗೆಯೇ ಪ್ರಾಚೀನ ಶಿಲ್ಪಶಾಸ್ತ್ರಗಳು ಚಿತ್ರ ಬರೆಯಲಾಗುವ ಮೂಲಾಧಾರವಾದ ಗೋಡೆ ಮತ್ತು ಚಿತ್ರಣಕ್ಕಾಗಿ ಆಧಾರದ ಮೇಲೆ ಲೇಪಿಸಲಾಗುವ ಗಾರೆಲೇಪನ ಎರಡಕ್ಕೂ ಭಿತ್ತಿ ಎಂದೇ ಕರೆದಿವೆ. ಗೋಡೆಯ ಮೇಲೆ ಲೇಪಿಸಲಾಗುವ ಗಾರೆ ಲೇಪನವನ್ನು ಭಿತ್ತಿ ಎಂದು ಪರಿಗಣಿಸಿದಾಗ ಗಾರೆ ಲೇಪನದ ಮೇಲೆ ರಚನೆಗೊಂಡ ಚಿತ್ರಗಳನ್ನು 'ಭಿತ್ತಿ ಚಿತ್ರ' ಎಂದು ಹೇಳಬೇಕಾಗುವುದು. ವಿಶಾಲಾರ್ಥದಲ್ಲಿ ಈ ಲೇಪನವನ್ನು ಗೋಡೆಯ ಮೇಲೆ ಲೇಪಿಸಲಾಗುವ ಗಾರೆ ಮಿಶ್ರಣಕ್ಕೆ ಸೀಮಿತಗೊಳಿಸದೇ ಚಿತ್ರರಚನೆಯ ಪೂರ್ವದ ಯಾವುದೇ ಹಿನ್ನಲೆಯ ಲೇಪನಕ್ಕೂ ಅನ್ವಯಿಸಬಹುದಾಗಿದೆ.

ಪ್ರಾಚೀನ ಸಾಹಿತ್ಯ ಕೃತಿಗಳಲ್ಲಿ ಭಿತ್ತಿ ಚಿತ್ರಗಳ ರಚನೆ ಕುರಿತಂತೆ ಪ್ರಾಸಂಗಿಕ ವಿವರಗಳಿರುವದನ್ನು ಕಾಣಬಹುದು. ಚಿತ್ರಕ್ಕೆ ಆಯ್ಕೆ ಮಾಡಿಕೊಳ್ಳುವ ಗೋಡೆಯು ನುಣುಪಾಗಿಯೂ, ಸಮತಲವಾಗಿಯೂ ಇದ್ದು ಬಿರುಕುಗಳು ಇರಬಾರದು. ಗೋಡೆ ಒಣಗಿದ ಮೇಲೆ ಬಿಳಿಯ ಮಣ್ಣು ಮತ್ತು ವಜ್ರ (ಜಿಲೋಟಿನ್) ವನ್ನು ಬೆರೆಸಿ ಒಂದಾದ ಮೇಲೊಂದರಂತೆ ಒಣಗಿದ ಹಾಗೆ ಮೂರು ಬಾರಿ ಹಾಕಬೇಕು. ನಂತರ ಶಂಖಚೂರ್ಣ , ಕಲ್ಲುಸಕ್ಕರೆಯ ನಯವಾದ ಪುಡಿಯನ್ನು ವಜ್ರದೊಂದಿಗೆ ಬೆರೆಸಿ ಪದರ ಪದರವಾಗಿ ಹಾಕಬೇಕು. ಆಮೇಲೆ ನೀಲಗಿರಿಯಲ್ಲಿ ಸಿಗುವ 'ನಗ' ಎಂಬ ಬಿಳಿಯ ಮಣ್ಣನ್ನು ನಯವಾಗಿ ಪುಡಿಮಾಡಿ ವಜ್ರದೊಂದಿಗೆ ಸೇರಿಸಿ ಕೈಯಿಂದ ಭಿತ್ತಿಗೆ ಬಳಿಯಬೇಕು ಎಂದು ಅಭಿಲಷಿತಾರ್ಥ ಚಿಂತಾಮಣಿ ತಿಳಿಸುತ್ತದೆ. ಹಾಗೆಯೇ ವಿಷ್ಣುಧರ್ಮೋತ್ತರ ಪುರಾಣವು ಈ ಮೇಲಿನ ವಿವರವನ್ನೇ ಇನ್ನೂ ವಿಸ್ತಾರವಾಗಿ ವಿವರಿಸುತ್ತದೆ. ಮೂರು ಬಗೆಯ ಇಟ್ಟಿಗೆಯ ಪುಡಿಯನ್ನು ಸಮ ಪ್ರಮಾಣದಲ್ಲಿ ಸೇರಿಸಿ ಮೂರರಷ್ಟು ಜೇಡಿಮಣ್ಣಿನೊಂದಿಗೆ ಸೇರಿಸಿ ಮಿಶ್ರಣ ಮಾಡಬೇಕು. ಅದಕ್ಕೆ ಮುಕ್ಕಾಲು ಭಾಗ ಸುಟ್ಟಿರುವ ಸುಣ್ಣದೊಂದಿಗೆ ಬಿಲ್ವಪತ್ರೆ ಕಾಯಿಯ ಮೇಣ, ಅರೆದ ಉದ್ದಿನ ಹಿಟ್ಟನ್ನು ಸೇರಿಸಿ ಎಲ್ಲವನ್ನು ತಿಂಗಳ ಕಾಲ ಜಿಡ್ಡುಮಿಶ್ರಿತ ನೀರಿನಿಂದ ಸೇಚನ ಮಾಡಿ, ಚಿತ್ರ ರಚಿಸುವ ಗೋಡೆಗೆ ಸಮನಾಗಿ ಹಚ್ಚಬೇಕು. ಒಣಗಿದಂತೆಲ್ಲ ಪುನಃ ಪುನಃ ಸರ್ಜರಸ ಮತ್ತು ಎಣ್ಣೆಯಿಂದ ಮಿಶ್ರಣ ಮಾಡಿದ ಮಣ್ಣಿನ ಲೇಪನ ಮಾಡುತ್ತಿರಬೇಕು. ಅಲ್ಲದೇ ಆಗಾಗ ಹಾಲು ಎರಚಿ ತೊಳೆಯುತ್ತಿರಬೇಕು. ಈ ಬಗೆಯ ಲೇಪನದಿಂದ ಭಿತ್ತಿಯು ನೂರಾರು ವರ್ಷಗಳ ಕಾಲ ಉಳಿಯುತ್ತದೆ ಎಂದು ಹೇಳಿದೆ. ಪ್ರಾಯರ್ಶಃ ಇಂದಿಗೂ ಉಳಿದು ಬಂದಿರುವ ಕೆಲವು ಪ್ರಾಚೀನ ಚಿತ್ರಗಳ ಭಿತ್ತಿಯನ್ನು ಇದೇ ರೀತಿಯಾಗಿ ಮಾಡಿದ್ದಿರಬೇಕು.

ಈ ಮೇಲಿನ ವಿವರಗಳ ಪ್ರಕಾರ ಭಿತ್ತಿ ಚಿತ್ರಕಲೆ ಎಂದರೆ ಗೋಡೆ, ಮೇಲ್ಛಾವಣಿ ಅಥವಾ ಕಟ್ಟಡದ ಯಾವುದೇ ಭಾಗವನ್ನು ವರ್ಣ ಚಿತ್ರದಿಂದ ಮತ್ತು ಉಬ್ಬು ಇಲ್ಲವೆ ತಗ್ಗುಚಿತ್ರ ಇಲ್ಲವೇ ಮೊಸಾಯಿಕನಂತಹ ಚಿತ್ರಗಳಿಂದ ಅಲಂಕರಿಸುವ ವಿಧಾನವೆಂದು ತಿಳಿಯಲಾಯಿತು. ಹಾಗೆಯೇ ಭಿತ್ತಿ ಸಿದ್ಧತೆಯಲ್ಲಿ ೧. ಮಣ್ಣಿನಭಿತ್ತಿ ಮತ್ತು ೨. ಗಾರೆಭಿತ್ತಿ ಎಂಬ ಎರಡು ಪ್ರಕಾರದ ಭಿತ್ತಿಗಳಲ್ಲಿ ಚಿತ್ರಗಳನ್ನು ಚಿತ್ರಿಸಲಾಗುತ್ತದೆ.

ಮಣ್ಣಿನ ಭಿತ್ತಿ :

ಮಣ್ಣಿನಭಿತ್ತಿ ರಚಿಸುವ ವಿಧಾನವು ಕ್ರಿಪೂ. ೩೫೦೦ ವರ್ಷಗಳಿಗೂ ಪೂರ್ವದಲ್ಲೇ ಈಜಿಪ್ತನಲ್ಲಿ ಬಳಸಲಾಗಿದ್ದು, ಈ ವಿಧಾನವು ಕ್ರಿ.ಶ. ೬ನೇ ಶತಮಾನದವರೆಗೂ ಬಳಕೆಯಲ್ಲಿತ್ತು ಎಂದು ಜಯಂತ ಚಕ್ರವರ್ತಿಯವರು ಅಭಿಪ್ರಾಯ ಪಡುತ್ತಾರೆ. ಮಣ್ಣಿನಭಿತ್ತಿ ನಿರ್ಮಾಣಕ್ಕೆ ಜಾಂಗಲ, ಅನುರೂಪ ಹಾಗೂ ಸಮ್ಮಿಶ್ರ ಎಂಬ ಮೂರು ಪ್ರಕಾರದ ಮಣ್ಣನ್ನು ಉಪಯೋಗಿಸಬಹುದೆಂದು ಕಾಶ್ಯಪ ಶಿಲ್ಪಶಾಸ್ತ್ರದಲ್ಲಿ ಹೇಳಿದೆ. ಮಣ್ಣಿನ ಭಿತ್ತಿಯು ಒಂದರ ಮೇಲೊಂದರಂತೆ ಹಲವಾರು ಪದರುಗಳನ್ನು ಹೊಂದಿರುತ್ತದೆ. ತೀರ ಮೇಲಿನ ಪದರು ಅತಿ ತೆಳುವಾಗಿ ನಿರ್ಮಿಸಲಾಗಿರುತ್ತದೆ. ಗೋಡೆಗೆ ಮೆತ್ತಿದ ಮಣ್ಣಿನ ಭಿತ್ತಿಯು ಸೀಳದಂತೆ, ಕಳಚಿ ಬೀಳದಂತೆ ಮಣ್ಣಿನಲ್ಲಿ ಒಣಹುಲ್ಲು, ಹೊಟ್ಟು, ಕೂದಲುಗಳಂತಹ ನಾರು ಪದಾರ್ಥಗಳನ್ನು ಸೇರಿಸಲಾಗಿರುತ್ತದೆ. ಈ ನಾರು ಪದಾರ್ಥಗಳ ಮಿಶ್ರಣವು ಗಟ್ಟಿಯಾಗಿ ಕುಳಿತುಕೊಳ್ಳಲು ಸಹಾಯ ಮಾಡುತ್ತದೆ. ಮಣ್ಣಿನ ಭಿತ್ತಿಯು ಅಜಂತಾ, ಬಾಗ್, ಸಿತ್ತನಿವಾಸಲ್ ಮತ್ತಿತರೆ ಕಂಡುಬರುತ್ತದೆ. ಸುರಪುರ ಸಮೀಪದ ರಂಗಂಪೇಟೆಯ ರುದ್ರಸ್ವಾಮಿಮಠ ಹಾಗೂ ಅಣ್ಣಯ್ಯನ ಮಠಗಳಲ್ಲಿನ ಭಿತ್ತಿಚಿತ್ರಗಳು ಮಣ್ಣಿನ ಭಿತ್ತಿಯ ಮೇಲೆ ರಚನೆಗೊಂಡಿವೆ ಎಂದು ಹೇಳಬಹುದು. ಈ ಭಿತ್ತಿಚಿತ್ರಗಳ ಕಾಲ ೧೮೫೦ ರ ಸಂದರ್ಭ. ಮಧ್ಯಕಾಲೀನ ಸಂದರ್ಭದ ಹೊತ್ತಿಗೆ ಗಾರೆ ಭಿತ್ತಿಯು ಭಿತ್ತಿಚಿತ್ರ ರಚನೆಗೆ ಹೆಚ್ಚು ಬಳಸಲ್ಪಡುವ ಮಾಧ್ಯಮವಾಗಿತ್ತು. ಆದರೂ ಸುರಪುರ ಸಮೀಪದ ಈ ಎರಡೂ ಮಠಗಳಲ್ಲಿನ ಭಿತ್ತಿಚಿತ್ರಗಳು ಮಣ್ಣಿನ ಭಿತ್ತಿಯ ಮೇಲೆ ರಚನೆಗೊಂಡಿರುವುದು ವಿಶೇಷ.

ಗಾರೆಭಿತ್ತಿ :

ಗಾರೆಭಿತ್ತಿ ರಚನೆಯಲ್ಲಿ ಸುಣ್ಣವು ಪ್ರಮುಖ ವಸ್ತು. ಅದರ ಜೊತೆಗೆ ಉಸುಕು, ಕಲ್ಲಿನ ಪುಡಿ, ವಜ್ರಸರಿ ಮುಂತಾದವುಗಳನ್ನು ಉಪಯೋಗಿಸಲಾಗುತ್ತದೆ ಎಂಬುದಾದರೂ ಇವೆಲ್ಲದರ ಜೊತೆಗೆ ಸೇರಿರುವ ಪೂರಕ ವಸ್ತುಗಳಲ್ಲಿ ಲೋಳಸರವೆಂಬ ಸಸ್ಯದ ರೂಪ, ಬೆಲ್ಲ, ಬೇಲದಕಾಯಿ, ಅಂಟು ಹೀಗೆ ವಿವಿಧ ರೀತಿಯ ಮಿಶ್ರಣವನ್ನು ಹೊಂದಿರುತ್ತದೆ. ಮಧ್ಯಯುಗದ ಹೊತ್ತಿಗೆ ಭಾರತದಲ್ಲಿ ಮಣ್ಣಿನ ಭಿತ್ತಿ ರಚನೆಯು ಕಡಿಮೆಯಾಗಿ ಗಾರೆ ಭಿತ್ತಿ ಚಿತ್ರಗಳು ಗಾರೆ ಭಿತ್ತಿಯ ಮೇಲೆ ಚಿತ್ರಿಸಲ್ಪಟ್ಟಿವೆ. ಪ್ರಾಚೀನ ಕಾಲದಲ್ಲಿ ಭಿತ್ತಿಚಿತ್ರ ರಚನೆಯ ವಿಧಾನಗಳಲ್ಲಿ ಪೂರ್ವಾಂಗ ಮತ್ತು ಉತ್ತರಾಂಗ ಎಂಬ ಎರಡು ವಿಧಾನಗಳನ್ನು ಅನುಸರಿಸಲಾಗುತ್ತಿತ್ತು. ಈ ಪ್ರಕ್ರಿಯೆ ಮಧ್ಯಕಾಲೀನ ಚಿತ್ರಗಳಲ್ಲೂ ಕಾಣಬಹುದಾಗಿದೆ. ಪೂರ್ವಾಂಗದಲ್ಲಿ ಚಿತ್ರಗಳ ಪ್ರಮಾಣ, ಅಳತೆ, ಸೂತ್ರಗಳು, ನವಸ್ಥಾನಗಳು, ಚಿತ್ರದ ಷಡಂಗಗಳು ಹೀಗೆ ಚಿತ್ರ ರಚನೆಯ ಪೂರ್ವದಲ್ಲಿ ಕಲಾವಿದರನು ಗಮನಿಸತಕ್ಕ ಅಂಶಗಳು ಒಳಗೊಳ್ಳುತ್ತವೆ. ಕಲಾವಿದನ ಮಾನಸಿಕ ಸಿದ್ದತೆ ಇದಾಗಿದ್ದು, ಮುಂದಿನ ಉತ್ತರಾಂಗದ ಕ್ರಿಯೆಗೆ ಬುನಾದಿ ಹಾಕುವ ಹಂತವು ಈ ಪೂರ್ವಾಂಗದಲ್ಲಿ ನಡೆಯುತ್ತದೆ. ಪೂರ್ವಾಂಗದಲ್ಲಿ ನಡೆದ ಕ್ರಿಯೆಯ ಮುಂದಿನ ಭಾಗವೇ ಉತ್ತರಾಂಗದಲ್ಲಿರುತ್ತದೆ.

ಭಿತ್ತಿಚಿತ್ರ ರಚನೆಯಲ್ಲಿ ೧. ಫ್ರೆಸ್ಕೋಬಾನ್, ೨. ಫ್ರೆಸ್ಕೋಸೆಕ್ಕೋ, ೩. ಟೆಂಪರಾ, ೪. ಸ್ಗ್ರಾಫೀಟೋ ಎಂದು ನಾಲ್ಕು ವಿಧಾನಗಳಿವೆ. ಕಲಾವಿದರು ಚಿತ್ರ ರಚನೆ ಮಾಡುವಾಗ ಒಂದೇ ಹಂತದಲ್ಲಿ ಚಿತ್ರವನ್ನು ಪೂರ್ಣಗೊಳಿಸದೇ ಒಂದಾದ ಮೇಲೆ ಒಂದರಂತೆ ಹಲವು ಹಂತಗಳನ್ನು ಅನುಸರಿಸಿ ಚಿತ್ರ ಪೂರ್ಣಗೊಳಿಸುತ್ತಿದ್ದರು. ಭಿತ್ತಿಚಿತ್ರ ರಚಿಸುವ ಕಲಾವಿದರು ಅನುಸರಿಸುವ ಚಿತ್ರ ರಚನಾ ಹಂತಗಳು ಯಾವಾಗಲೂ ನಿರ್ಧಿಷ್ಟವಾಗಿ ಹೀಗೇ ಎಂದು ಹೇಳಲು ಬರುವಂತಿರಲಿಲ್ಲ. ಆಯಾ ಕಲಾವಿದರ ಕೌಶಲ್ಯವನ್ನಾಧರಿಸಿ ಬದಲಾಗುತ್ತವೆ.

ಸುರಪುರ ಆಸ್ಥಾನ ಕಲಾವಿದರು ಪ್ರಾರಂಭದಲ್ಲಿ ಹಾಳೆ ಇಲ್ಲವೆ ರಟ್ಟುಗಳ ಮೇಲೆ ಚಿತ್ರರಚನೆ ಮಾಡಿದ್ದಾರೆ. ನಂತರದಲ್ಲಿ ಚಿತ್ರರಚನಾ ಕ್ರಮಗಳಲ್ಲಿ ವೈವಿಧ್ಯತೆಗಳನ್ನು ಕಂಡುಕೊಳ್ಳಲು ವಿವಿಧ ನಮೂನೆಯ ಹಾಳೆ, ರಟ್ಟುಗಳನ್ನು ಬಳಸಿರುವರು. ಹಾಗೆಯೇ ಈ ಕಲಾವಿದರಿಂದ ಭಿತ್ತಿಚಿತ್ರಗಳು ಚಿತ್ರಿಸಲ್ಪಟ್ಟಿವೆ. ಸುರಪುರ ಅರಮನೆ, ಮಠ-ಮಂದಿರಗಳಲ್ಲಿ ಸಾಕಷ್ಟು ಭಿತ್ತಿಚಿತ್ರಗಳು ಕಂಡುಬರುತ್ತವೆ. ಸುರಪುರ ಸಮೀಪದ ರುದ್ರಸ್ವಾಮಿ ಮಠದಲ್ಲಿನ ಭಿತ್ತಿಚಿತ್ರಗಳ ಕಾಲ ಕ್ರಿ.ಶ. ೧೮೫೦ ರ ಸಂದರ್ಭ ಎಂದು ಹೇಳಬಹುದು. ಕ್ರಿ.ಶ. ೧೮೫೦ ರ ದಶಕದಲ್ಲಿ ರಾಜಾ ಕೃಷ್ಣಪ್ಪನಾಯಕನ ಕಾಲದಲ್ಲಿ ಈ ಮಠವು ನಿರ್ಮಾಣಗೊಳ್ಳುತ್ತದೆ[೨೦]. ಮಠದಲ್ಲಿರುವ ಚಿತ್ರಗಳಲ್ಲಿ ಶರೀಫಮಠದ ಮೂಲ ಪುರುಷರಾದ ಶ್ರೀ ರುದ್ರಸ್ವಾಮಿಗಳು ಹಾಗೂ ತರುವಾಯದಲ್ಲಿ ಬಂದಂಥ ಶ್ರೀ ರಾಚೋಟೆಪ್ಪನವರ ಭಾವಚಿತ್ರಗಳು ಚಿತ್ರಿಸಲ್ಪಟ್ಟಿವೆ. ಈ ಎಲ್ಲಾ ವಿವರಗಳು ಭಿತ್ತಿಚಿತ್ರಗಳ ರಚನಾ ಕಾಲವನ್ನು ನಿರ್ಧರಿಸುತ್ತವೆ. ಈ ಚಿತ್ರಗಳ ರಚನೆಗೆ ಸಿದ್ದಪಡಿಸಿಕೊಳ್ಳಲಾದ ಭಿತ್ತಿಸಿದ್ದತಾ ಹಾಗೂ ಚಿತ್ರರಚನಾ ವಿಧಾನದಲ್ಲಿ ವಿಶೇಷತೆಯೇನೂ ಕಂಡುಬರುವುದಿಲ್ಲ. ಈ ಚಿತ್ರಗಳು ಕೇವಲ ಒಂದು ಶತಮಾನದವರೆಗೆ ಇದ್ದು, ನಂತರದಲ್ಲಿ ಚಿತ್ರಗಳಲ್ಲಿನ ಬಣ್ಣಗಳು ಉದುರಿ ಹೋಗಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ. ಮಠಗಳಲ್ಲಿನ ಚಿತ್ರಗಳು ಪ್ರಾಕೃತಿಕ ಆಪತ್ತಿನಿಂದಲೇ ವಿನಾಶ ಹೊಂದಿವೆ ಎಂದು ಕಾಣಬಹುದು.

ಭಿತ್ತಿ ಚಿತ್ರಗಳ ವರ್ಣಸಂಯೋಜನೆ :

ಸುರಪುರ ಭಿತ್ತಿ ಚಿತ್ರಗಳು ನೈಸರ್ಗಿಕ ಮೂಲದ ವರ್ಣಗಳಿಂದಲೇ ರಚನೆಗೊಂಡಿವೆ. ಹವಾಮಾನದ ವೈಪರಿತ್ಯದಿಂದಾಗಿ ಭಿತ್ತಿಯು ಉದುರಿ ಹೋಗಿದೆಯೇ ಹೊರತು, ವರ್ಣ ಸಂಯೋಜನೆಯಿಂದ ಈ ಚಿತ್ರಗಳು ಇಂದಿಗೂ ಹೊಳಪಿನಿಂದ ಕಂಗೊಳಿಸುತ್ತವೆ. ಸುರಪುರ ಭಿತ್ತಿ ಚಿತ್ರಗಳಲ್ಲಿ ವೈವಿಧ್ಯಮಯವಾದ ಬಣ್ಣಗಳನ್ನು ಬಳಸಿಕೊಂಡಿದ್ದು, ಅವುಗಳನ್ನು ೧. ಖನಿಜಮೂಲ, ೨. ಸಸ್ಯಮೂಲ, ೩. ರಾಸಾಯನಿಕ ಬಣ್ಣಗಳು ಎಂದು ಮೂರು ವಿವಿಧದಲ್ಲಿ ವಿಂಗಡಿಸಲಾಗಿದೆ.

೧.ಖನಿಜಮೂಲ ವರ್ಣಗಳು :

ಭೂಮಿಯಿಂದ ದೊರೆಯುವ ವಿವಿಧ ರೀತಿಯ ಬಣ್ಣದ ಕಲ್ಲು, ಮಣ್ಣಿನ ಗಟ್ಟಿಗಳಿಂದ ಪಡೆಯುವ ಬಣ್ಣಗಲೂ ಖನಿಜಮೂಲ ಬಣ್ಣಗಳಾಗಿವೆ. ಇವುಗಳಿಂದಲೇ ಪ್ರಾಚೀನರು ಬಣ್ಣಗಳನ್ನು

೨೦. ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ : ಸುರಪುರ ಚಿತ್ರಕಲೆ, ಪು.ಸಂ-೪೭
ಅದೇ. ಪು.ಸಂ-೪೯

ತಯಾರಿಸಿಕೊಳ್ಳುತ್ತಿದ್ದರೆಂಬ ವಿವರಗಳು ನಮಗೆ ಸಾಹಿತ್ಯಿಕ ಆಧಾರಗಳಿಂದ ದೊರೆಯುತ್ತವೆ. ಸುಣ್ಣವು ಭಿತ್ತಿ ಚಿತ್ರಗಳಲ್ಲಿ ಬಳಸುವ ಗುಣ ಹೊಂದಿದ್ದು, ಭಿತ್ತಿಯ ನಿನ್ನಲೆಗೆ ಲೇಪಿಸಿದ ಸುಣ್ಣದ ಮಿಶ್ರಣದಲ್ಲಿ ಬೆರೆಯದೇ ಮೂಲ ಛಾಯೆಯನ್ನು ಉಳಿಸಿಕೊಳ್ಳುತ್ತವೆ. ಅಲ್ಲದೆ ಕೆಲವು ಖನಿಜಮೂಲ ಬಣ್ಣಗಳನ್ನು ಪರಸ್ಪರ ಮಿಶ್ರಣಮಾಡಿ ಬಣ್ಣಗಳ ಗಡಸುತನ ಕಡಿಮೆ ಮಾಡಲು ಬರುತ್ತದೆ. ಕೆಲವು ಖನಿಜಮೂಲ ಬಣ್ಣಕ್ಕೆ ಬಿಳಿ ಬಣ್ಣ ಸೇರಿಸಿದಾಗ ಆ ಬಣ್ಣಗಳು ದಟ್ಟವಾಗುತ್ತವೆ. ಇಂತಹ ಕೆಲವು ಗುಣಗಳಿಂದ ಖನಿಜಮೂಲ ಬಣ್ಣಗಳು ಭಿತ್ತಿಚಿತ್ರಗಳಿಗೆ ಹೆಚ್ಚು ಸೂಕ್ತವಾಗಿದ್ದು, ಭಿತ್ತಿಚಿತ್ರ ರಚನೆಯಲ್ಲಿ ಇವು ಹೆಚ್ಚಾಗಿ ಬಳಕೆಯಾಗಿವೆ ಎಂದು ಹೇಳಲಾಗಿದೆ. ಪ್ರಾಚೀನ ಕಾಲದ ಭಿತ್ತಿ ಚಿತ್ರಗಳಲ್ಲಿ ಬಳಸುತ್ತಿದ್ದ ಖನಿಜಮೂಲ ಬಣ್ಣಗಳಲ್ಲಿ ಆಕರ್ಸ್, ಸಿನ್ನಾಜ್, ಅಂಬಸ್ ಎನ್ನುವ ಬಣ್ಣಗಳು ಪ್ರಮುಖವಾಗಿ ಕಾಣುತ್ತವೆ.

೨.ಸಸ್ಯಮೂಲ ವರ್ಣಗಳು :

ಭಾರತೀಯ ಸಾಂಪ್ರದಾಯಿಕ ಚಿತ್ರಕಲೆಯಲ್ಲಿ ಹೆಚ್ಚಾಗಿ ಬಳಸಲ್ಪಟ್ಟ ವರ್ಣಗಳು ನೈಸರ್ಗಿಕ ಮೂಲದವೇ ಆಗಿರುತ್ತಿದ್ದವು ಎನ್ನುವ ಮಾತು ಅಕ್ಷರಶಃ ನಿಜ. ಮಾತ್ರವಲ್ಲದೇ ಪ್ರಾಚೀನರು ಕೆಲವು ಗಿಡಗಳ ಹೂ, ಎಲೆ, ಹಣ್ಣು, ಬೀಜ, ಕಾಂಡ, ಚಿಗುರೆಲೆ ಮತ್ತು ಬೇರುಗಳಿಂದಲೂ ಬಣ್ಣಗಳನ್ನು ತಯಾರಿಸಿಕೊಳ್ಳುತ್ತಿದ್ದರೆಂಬ ವಿವರಗಳು ದೊರೆಯುತ್ತವೆ. 'ಇಂಡಿಗೋ' ಸಸ್ಯದಿಂದ ನೀಲಿ ಬಣ್ಣ, 'ಬರ್ಚ್' ಎಂಬ ಗಿಡದ ಎಲೆಗಳಿಂದ ಹಳದಿ ಬಣ್ಣ, 'ಮ್ಯಾಡರ್' ಎಂಬ ಹಬ್ಬುವ ಬಳ್ಳಿಯ ಬೇರುಗಳಿಂದ ಕೆಂಪು ಬಣ್ಣವನ್ನು ಪಡೆಯುತ್ತಿದ್ದರೆಂಬ ವಿವರಗಳು ಸಾಹಿತ್ಯಿಕ ಆಧಾರಗಳಿಂದ ತಿಳಿದುಬರುತ್ತದೆ. ಖನಿಜಮೂಲ ಬಣ್ಣಗಳಿಗೆ ಹೋಲಿಸಿದರೆ ಸಸ್ಯಮೂಲಗಳಿಂದ ಪಡೆದ ಬಣ್ಣಗಳು ಬೇಗನೆ ಹೊಳಪನ್ನು ಕಳೆದುಕೊಳ್ಳುತ್ತವೆ ಎಂದು ಇತಿಹಾಸಕಾರರು ಅಭಿಪ್ರಾಯ ಪಡುತ್ತಾರೆ. ಹಾಗಾಗಿ ಖನಿಜಮೂಲದ ಬಣ್ಣಗಳ ತುಲನೆಯಲ್ಲಿ ಇವು ಭಿತ್ತಿ ಚಿತ್ರಗಲ್ಲಿ ಕಡಿಮೆ ಪ್ರಮಾಣದಲ್ಲಿ ಬಳಕೆಯಾಗಿರಬಹುದು ಎಂಬ ಅಂಶಗಳು ತಿಳಿದುಬರುತ್ತದೆ. ಸಸ್ಯಮೂಲ ವರ್ಣಗಳು ಹೆಚ್ಚಾಗಿ ಬಳಸುತ್ತಿದ್ದರು.

೩.ರಾಸಾಯನಿಕ ವರ್ಣಗಳು :

೧೯ನೇ ಶತಮಾನದಿಂದ ಭಿತ್ತಿಚಿತ್ರ ರಚನೆಯಲ್ಲಿ ರಾಸಾಯನಿಕ ಬಣ್ಣಗಳ ಬಳಕೆ ಅಧಿಕಗೊಂಡಿತೆಂದು ಹೇಳಬಹುದು. ಪಾಶ್ಚಾತ್ಯದ ಸಂಪರ್ಕದಿಂದಾಗಿ ರಾಸಾಯನಿಕವಾಗಿ ತಯಾರಿಸಿದ ಜಲವರ್ಣ, ತೈಲವರ್ಣಗಳು ಭಾರತವನ್ನು ಪ್ರವೇಶಿಸಿದವರು. ಸುರಪುರದ ಹೊಸ ಅರಮನೆಯಲ್ಲಿರುವ 'ಶೇಷಶಯನ ವಿಷ್ಣು' ಚಿತ್ರವು ನೈಸರ್ಗಿಕಮೂಲ ವರ್ಣಗಳಿಂದ ರಚನೆಗೊಂಡಿದ್ದರೂ, ನಂತರದಲ್ಲಿ ಈ ಚಿತ್ರದ ಮೇಲೆ ರಾಸಾಯನಿಕ ವರ್ಣಲೇಪನ ಮಾಡಲಾಗಿದ್ದನ್ನು ಇಲ್ಲಿ ಕಾಣಬಹುದು. ಸುರಪುರ ಭಿತ್ತಿ ಚಿತ್ರಗಳಲ್ಲಿ ೧. ಅರಮನೆಗಳಲ್ಲಿನ ಭಿತ್ತಿ ಚಿತ್ರಗಳು ೨. ಮಠಗಳಲ್ಲಿನ ಭಿತ್ತಿ ಚಿತ್ರಗಳು ೩. ಮಂದಿರಗಳಲ್ಲಿನ ಭಿತ್ತಿ ಚಿತ್ರಗಳು ೪. ಆಸ್ಥಾನ ಪ್ರಮುಖರ ಮನೆಗಳಲ್ಲಿನ ಭಿತ್ತಿ ಚಿತ್ರಗಳು ಎಂದು ನಾಲ್ಕು ಬಗೆಯಲ್ಲಿ ವಿಂಗಡಿಸಿಕೊಳ್ಳಲಾಗಿದೆ.

೧. ಅರಮನೆಗಳಲ್ಲಿನ ಭಿತ್ತಿ ಚಿತ್ರಗಳು :

ಕಲಾಸಕ್ತ ರಾಜರುಗಳು ತಮ್ಮ ಅರಮನೆ ಹಾಗೂ ಅಂತಃಪುರಗಳನ್ನು ಭಿತ್ತಿ ಚಿತ್ರಗಳಿಂದ ಅಲಂಕರಿಸುತ್ತ ಬಂದಿರುವುದು ನಮಗೆ ಇತಿಹಾಸದುದ್ದಕ್ಕೂ ತಿಳಿದುಬರುತ್ತದೆ. ಅರಮನೆಗಳನ್ನು ಭಿತ್ತಿ ಚಿತ್ರಗಳಿಂದ ಅಲಂಕರಿಸುವುದು ರಾಮಾಯಣ ಮತ್ತು ಮಹಾಭಾರತ ಕಾಲದಿಂದಲೇ ಪ್ರಚಲಿತದಲ್ಲಿತ್ತೆಂದು ಪುರಾಣಗಳು ಸಾರುತ್ತವೆ. ಪ್ರಾಚೀನ ಕಾಲದ ಅರಮನೆಗಳು ಭಿತ್ತಿ ಚಿತ್ರಗಳಿಂದ ಕಂಗೊಳಿಸುತ್ತಿದ್ದವು. ಈ ಅರಮನೆಗಳು ಮರಗಳಿಂದ ನಿರ್ಮಿಸಲ್ಪಡುತ್ತಿದ್ದುದರಿಂದ ಅವುಗಳು ನಾಶವಾಗಿದ್ದು, ಸರ್ವವಿದೀತ ಕ್ರಿ.ಶ. ೧೭-೧೮ನೇ ಶತಮಾನದಲ್ಲಿ ಕರ್ನಾಟಕದಲ್ಲಿ ಅನೇಕ ಸಣ್ಣ ಪುಟ್ಟ ಸಂಸ್ಥಾನಗಳು ಹುಟ್ಟಿಕೊಂಡಿದ್ದು, ಕೆಲ ಸಂಸ್ಥಾನಿಕರು ತಮ್ಮ ಆಸ್ಥಾನದಲ್ಲಿ ಚಿತ್ರಕಲಾವಿದರಿಗೆ ಆಶ್ರಯವನ್ನು ನೀಡಿದ್ದರಿಂದ ಅಲ್ಲಿಯ ಅರಮನೆ ಹಾಗೂ ಅಂತಃಪುರಗಳಲ್ಲಿ ಭಿತ್ತಿ ಚಿತ್ರಗಳು ರಚನೆಗೊಂಡಿವೆ. ಇದೇ ವೇಳೆ ಸುರಪುರ ಅರಸರು ತಮ್ಮ ಸಂಸ್ಥಾನದಲ್ಲಿ ಚಿತ್ರಕಲಾವಿದರಿಗೆ ಆಶ್ರಯವನ್ನು ನೀಡಿದ್ದರಿಂದ ಅರಮನೆಯಲ್ಲಿ ಸಾಕಷ್ಟು ಚಿತ್ರಗಳು ರಚನೆಗೊಂಡಿದ್ದರಬೇಕು. ಇಂದು ಹೊಸ ಅರಮನೆಯ ಪ್ರವೇಶದ್ವಾರದ ಎದುರಿಗೆ ಶೇಷ ಶಯನ ವಿಷ್ಣುವಿನ ವರ್ಣ ಚಿತ್ರವೊಂದು ಮಾತ್ರ ಉಳಿದಿದ್ದು, ಬಹುಪಾಲು ಚಿತ್ರಗಳು ನಶಿಸಿಹೋಗಿವೆ.

ನಾಯಕರ ಅರಮನೆ :

'ಗುಲಬರ್ಗಾ ಜಿಲ್ಲೆಯ ಸುರಪುರದಲ್ಲಿ ಆ ಸಂಸ್ಥಾನಿಕರ ಅರಮನೆಯು ಇದ್ದು, ಅದರಲ್ಲಿ ಭಿತ್ತಿಚಿತ್ರಗಳು ಕಂಡುಬರುತ್ತವೆ. ದರ್ಬಾರ್ ಹಾಲ್ ಮತ್ತು ಒಳಕೋಣೆಯಲ್ಲಿರುವ ಚಿತ್ರಗಳಲ್ಲಿ ವೈವಿಧ್ಯತೆ ಇದೆ. ಶೇಷತೆಯನ ವಿಷ್ಣು, ಜಯವಿಜಯ, ಲಕ್ಷ್ಮೀ, ಶಿವಪಾರ್ವತಿ, ವೇಣುಗೋಪಾಲ, ಶ್ರೀರಾಮನ ಪಟ್ಟಾಭಿಷೇಕ, ಪಾಂಡುರಂಗ ರುಕ್ಮಿಣಿ, ಪ್ರಾಣಿ, ಪಕ್ಷಿಗಳು ಮುಂತಾದ ಚಿತ್ರಗಳು ಇಲ್ಲಿವೆ. ಗರುಡಾದ್ರಿ ಮನೆತನದ ಕಲಾವಿದರು ರಚನೆ ಮಾಡಿರುವ ಈ ಚಿತ್ರಗಳಲ್ಲಿ ನೀಲಿ, ನಸುಕೆಂಪು, ಹಸಿರು ವರ್ಣಗಳನ್ನು ಹೆಚ್ಚಾಗಿ ಉಪಯೋಗಿಸಲಾಗಿದೆ. ಕ್ರಿ.ಶ. ೧೮ನೇ ಶತಮಾನದ ಕೊನೆಯ ಭಾಗದಲ್ಲಿ ರಚನೆಯಾದ ಈ ಚಿತ್ರಗಳ ಹಚ್ಚಿನ ಭಾಗ ನಾಶವಾಗಿರುವುದು ಕಂಡುಬರುತ್ತದೆ'[೨೧].

ಮಠಗಳಲ್ಲಿನ ಭಿತ್ತಿ ಚಿತ್ರಗಳು :

ನಾಡಿನ ಕಲೆ ಮತ್ತು ಸಂಸ್ಕೃತಿಗೆ ಮಠ–ಮಾನ್ಯಗಳ ಕೊಡುಗೆ ಅಪಾರವಾದುದು. ಯಾವುದೇ ವಿಷಯಗಳನ್ನು ಚಿತ್ರದ ಮುಖಾಂತರ ಹೇಳಿದಾಗ ಅದು ಇನ್ನೂ ಪರಿಣಾಮಕಾರಿಯಾಗುತ್ತದೆ. ಎಂಬುದನ್ನು ತಿಳಿದ ಮಠ–ಮಾನ್ಯಗಳು ತಮ್ಮ ಮತ–ಧರ್ಮಗಳ ಪ್ರಸಾರಕ್ಕಾಗಿ ಚಿತ್ರಕಲೆಯನ್ನು ಬಳಸಿಕೊಂಡವು. ರಾಜ–ಮಹಾರಾಜರು ಹಾಗೂ ಅವರ ತರುವಾಯ ನಾಡಿನ ಭಿತ್ತಿಚಿತ್ರ ಪರಂಪರೆಯನ್ನು ಬೆಳೆಸಿದ ಕೀರ್ತಿ ಮಠ–ಮಾನ್ಯಗಳದ್ದೇ ಆಗಿದೆ. ಆ ಕಾರಣವಾಗಿಯೇ ರಾಜಮಹಲು

೨೧. ಡಾ. ಯಾದಪ್ಪ ಪರದೇಶಿ(ಸಂ) : (ಕರ್ನಾಟಕದ ಭಿತ್ತಿಚಿತ್ರಕಲೆ) ನಿಜದ ನೆಲೆ, ಪು.ಸಂ.–೪೭೮

ಅರಮನೆ, ದೇವಾಲಯಗಳನ್ನು ಹೊರತುಪಡಿಸಿ ಹೆಚ್ಚಿನ ಭಿತ್ತಿಚಿತ್ರಗಳು ಕಂಡುಬರುವ ನೆಲೆಗಳೆಂದರೆ ಈ ಮಠ-ಮಾನ್ಯಗಳಾಗಿವೆ. ಸುರಪುರ ಸಮೀಪದ ರಂಗಂಪೇಟೆಯ ರುದ್ರಸ್ವಾಮಿ ಮಠ ಹಾಗೂ ಅಣ್ಣಯ್ಯನ ಮಠಗಳಲ್ಲಿ ಸಾಕಷ್ಟು ಭಿತ್ತಿ ಚಿತ್ರಗಳಿರುವುದನ್ನು ಇಲ್ಲಿ ಗಮನಿಸಬಹುದು.

ರಾಜಾ ದೇವೇಂದ್ರ ವೆಂಕಟಪ್ಪನಾಯಕನು ಕ್ರಿ.ಶ. ೧೮೨೨ರಲ್ಲಿ ರಾಣಿ ರಂಗಮ್ಮನ ಹೆಸರಿನಲ್ಲಿ ಈ ಗ್ರಾಮವೊಂದನ್ನು ನಿರ್ಮಿಸುತ್ತಾನೆ. ಆಸ್ಥಾನ ಪಂಡಿತರಲ್ಲದೆ ಸಕಲ ಶಾಸ್ತ್ರಗಳನ್ನು ಬಲ್ಲ ವಿದ್ವನ್ಮಣಿಗಳು ಈ ಗ್ರಾಮದಲ್ಲಿ ನೆಲೆಸಿದ್ದರು. ಅದೇ ರೀತಿ ರುದ್ರಸ್ವಾಮಿ ಮಠ ಹಾಗೂ ಅಣ್ಣಯ್ಯನ ಮಠಗಳೂ ಈ ಗ್ರಾಮದಲ್ಲಿರುವುದರಿಂದ ರಂಗಪೇಟೆ ಗ್ರಾಮವು ಸಕಲ ಮಠ-ಧರ್ಮಗಳ ಕೇಂದ್ರವೆನಿಸಿಕೊಂಡಿತ್ತು. ಈ ಎರಡೂ ಮಠಗಳ ನಿರ್ಮಾಣದ ಹಿಂದೆ ಸುರಪುರ ದೊರೆಗಳು ಹಾಗೂ ಆಸ್ಥಾನ ಪ್ರಮುಖರ ಪಾತ್ರ ಬಹಳ ಮಹತ್ವದ್ದಾಗಿದೆ.

ರುದ್ರಸ್ವಾಮಿ ಮಠ :

ಅತೀ ವಿಶಾಲವಾದ ಪ್ರದೇಶದಲ್ಲಿ ಈ ಮಠದ ಮುಂಭಾಗವನ್ನು ಕಾಂಕ್ರಿಟ್ ಕಟ್ಟಡವನ್ನಾಗಿ ನವೀಕರಿಸಲಾಗಿದೆ. ಆದರೆ ತೆರೆದ ಪಡಸಾಲೆಯು ಹಾಗೆಯೇ ಇದೆ. ಈ ಮಠದ ಮೇಲ್ಛಾವಣಿಯು ಸಂಪೂರ್ಣ ಕುಸಿದಿದ್ದು, ಪಡಸಾಲೆಯ ಗೋಡೆಗಳಲ್ಲಿ ಬಿರುಕುಗಳು ಕಾಣಿಸಿಕೊಂಡಿವೆ. ಈ ಗೋಡೆಗಳ ಮೇಲೆ ಹತ್ತಾರು ಬಾರಿ ಬಿಳಿ ಸುಣ್ಣದ ಪದರೊಂದನ್ನು ಉದುರಿಸಿದಾಗ ಮೂಲ ಭಿತ್ತಿಯಲ್ಲಿ ಚಿತ್ರಗಳು ಇಂದಿಗೂ ಕಾಣಿಸುತ್ತವೆ. ಚಿತ್ರಗಳಿರುವ ಪಡಸಾಲೆಯ ಮೇಲ್ಛಾವಣಿಯು ಕುಸಿದಿರುವುದರಿಂದ ಮತ್ತು ಮಳೆಗಾಲದಲ್ಲಿ ಗೋಡೆಗಳಲ್ಲಿ ನೀರು ಸುರಿದು ತೇವಾಂಶ ಗೊಂಡಿರುವುದರಿಂದ ಭಿತ್ತಿಯ ಬಹುಭಾಗ ಉದುರಿ ಹೋಗಿದೆ. ಹೀಗಾಗಿ ಇಂದು ಈ ಗೋಡೆಗಳಲ್ಲಿ ಹೆಚ್ಚಿನ ಚಿತ್ರಗಳು ಕಂಡುಬರುವುದಿಲ್ಲ. ಸುಮಾರು ಎಪ್ಪತ್ತು ಅಡಿಗಳಷ್ಟು ವಿಸ್ತೀರ್ಣವನ್ನು ಹೊಂದಿದ ಈ ಮೂರು ಗೋಡೆಗಳ ತೆರೆದ ಪಡಸಾಲೆಯು ಹತ್ತು ಅಡಿ ಎತ್ತರದಲ್ಲಿದೆ. ನೆಲದಿಂದ ಎರಡು ಅಡಿಗಳಷ್ಟು ಮೇಲ್ಭಾಗದಲ್ಲಿ ಮೂರು ಗೋಡೆಗಳ ಮೇಲೆ ಚಿತ್ರಗಳಿವೆ.

ಮೂರು ಅಡಿ ಉದ್ದ ಹಾಗೂ ಹತ್ತು ಅಡಿ ಎತ್ತರವಾದ ಪೂರ್ವಗೋಡೆಯ ಮಧ್ಯದಲ್ಲಿ ದ್ವಾರವೊಂದಿದ್ದು, ದ್ವಾರದ ಎರಡೂ ಬದಿಗಳಲ್ಲಿ ಅಲಂಕಾರಿಕ ವಿನ್ಯಾಸದ ಚಿತ್ರಗಳು ಕಾಣಿಸುತ್ತವೆ. ಗೋಡೆಗಳಲ್ಲಿ ಗಿಡ ಗಂಟೆಗಳು ಬೆಳೆದಿರುವುದರಿಂದ ಬಹುಪಾಲು ಚಿತ್ರಗಳು ಹಾಳಾಗಿವೆ. ಇಪ್ಪತ್ತು ಅಡಿ ಉದ್ದ ಹಾಗೂ ಹತ್ತು ಅಡಿ ಎತ್ತರವಾದ ಉತ್ತರ ಗೋಡೆಯಲ್ಲಿ ಎರಡು ಅಂಕಣಗಳಿದ್ದು, ಮೊದಲ ಅಂಕಣದ ಮಧ್ಯದಲ್ಲಿ ಮಾಡುವೊಂದಿದೆ. ಈ ಮಾಡುವಿನಲ್ಲಿ ಮಂಟಪದ ಸನ್ನಿವೇಶ ಹಾಗೂ ಅತ್ಯಂತ ಕಿರಿದಾಗಿ ಚಿತ್ರಿಸಿದ ಕೃಷ್ಣ ಯಶೋಧೆಯರ ಎರಡು ವರ್ಣಚಿತ್ರಗಳಿವೆ. ಉತ್ತರ ಗೋಡೆಯಷ್ಟೇ ವಿಸ್ತೀರ್ಣವುಳ್ಳ ದಕ್ಷಿಣ ಗೋಡೆಯಲ್ಲೂ ಎರಡು ಅಂಕಣಗಳಿದ್ದು, ಮೊದಲನೇ ಅಂಕಣದ ಮಧ್ಯದಲ್ಲಿ ದ್ವಾರವೊಂದಿದೆ. ಈ ಗೋಡೆಯಲ್ಲಿನ ಭಿತ್ತಿಯ ಮೇಲೆ ಅರಮನೆಯ ದೃಶ್ಯ, ಮನುಷ್ಯಾಕೃತಿಗಳು, ಹೂ-ಗಿಡಗಳು ಅಲ್ಲದೇ ಬಂಗಾರ ಹಾಗೂ ಬೆಳ್ಳಿ ವರ್ಣಲೇಪಿತ ಅಲಂಕಾರಿಕ ಚಿತ್ರಗಳು ಕಂಡುಬರುತ್ತವೆ. ಈ ಪಡಸಾಲೆಯ ಮೂರು ಗೋಡೆಗಳಲ್ಲಿ ರಚನೆಗೊಂಡಿರುವ ಚಿತ್ರಗಳು ಇಂತಿವೆ.

* **ಮದುವೆ ಸಮಾರಂಭ** : ಈ ಚಿತ್ರದಲ್ಲಿ ಮದುಮಕ್ಕಳ ಜೊತೆಗೆ ಪರಿಜನರೂ ನೆರೆದಿದ್ದಾರೆ. ಪಕ್ಕದಲ್ಲಿ ಋಷಿಯೋರ್ವನು ಮದುಮಕ್ಕಳನ್ನು ಆಶೀರ್ವದಿಸುತ್ತಿದ್ದಾನೆ. ಸ್ವಲ್ಪ ಸಮೀಪದಲ್ಲಿ ಅನೇಕರು ವಿವಿಧ ವಾದ್ಯಗಳನ್ನು ನುಡಿಸುತ್ತಿದ್ದಾರೆ. ಈ ಚಿತ್ರದಲ್ಲಿ ಮುಖ್ಯವಾಗಿ ನೀಲಿ, ಕೆಂಪು ಹಾಗೂ ಕಂದುಗೆಂಪು ವರ್ಣಗಳನ್ನು ಬಳಸಿದ್ದು, ಪ್ರತೀ ಆಕೃತಿಗಳ ಹೊರ ರೇಖೆಯನ್ನು ಕಂದುಗೆಂಪು ವರ್ಣದಿಂದ ಎಳೆಯಲಾಗಿದೆ.

***ಸರಸ್ವತಿ** : ಮದುವೆ ಸಮಾರಂಭದ ಚಿತ್ರದ ಪಕ್ಕದಲ್ಲಿಯೇ ಈ ಚಿತ್ರವಿದೆ. ಚಿತ್ರದಲ್ಲಿ ಸರಸ್ವತಿಯನ್ನು ಕಮಲದ ಮೇಲೆ ಕುಳಿತು ವೀಣೆಯೊಂದನ್ನು ನುಡಿಸುತ್ತಿರುವಂತೆ ಚಿತ್ರಿಸಿದೆ. ಸರಸ್ವತಿಯ ಪಕ್ಕದಲ್ಲಿ ವಾಹನವಾದ ನವಿಲೊಂದನ್ನು ಚಿತ್ರಿಸಿದೆ. ನೀಲಿ, ಕೆಂಪು ಹಾಗೂ ಹಳದಿ ವರ್ಣಗಳನ್ನು ಚಿತ್ರ ರಚನೆಗಾಗಿ ಬಳಸಲಾಗಿದೆ.

* **ಸಮುದ್ರ ಮಂಥನ** : ಈ ಚಿತ್ರದಲ್ಲಿ ಒಂದು ಕಡೆ ದೇವತೆಗಳು ಮತ್ತೊಂದು ಕಡೆ ರಾಕ್ಷಸರನ್ನು ತೋರಿಸಿದ್ದು, ಅವರು ಆದಿಶೇಷನನ್ನು ಹಗ್ಗವನ್ನಾಗಿ, ಮಂದಾರ ಪರ್ವತವನ್ನು ಕಡಗೋಲನ್ನಾಗಿ ಮಾಡಿಕೊಂಡು ಸಮುದ್ರವನ್ನು ಕಡೆಯುತ್ತಿದ್ದಾರೆ. ಮಂದಾರ ಪರ್ವತವು ಸಮುದ್ರದಲ್ಲಿ ಮುಳುಗತೊಡಗಿದಾಗ ವಿಷ್ಣುವು ಆಮೆಯ ರೂಪವನ್ನು ತಾಳಿ ಪರ್ವತವನ್ನು ಮೇಲಕ್ಕೆತ್ತಿ ನಿಲ್ಲಿಸುತ್ತಿರುವಂತೆ ಪರ್ವತದ ಬುಡದಲ್ಲಿ ಆಮೆಯನ್ನು ಚಿತ್ರಿಸಿದೆ. ಸಮುದ್ರ ಮಂಥನದಿಂದ ಹೊರಬಂದ ಕಾಮಧೇನು, ಲಕ್ಷ್ಮೀ, ಐರಾವತ ಮುಂತಾದವುಗಳು ಸಾಂಕೇತಿಕವಾಗಿ ಚಿತ್ರಣಗೊಂಡಿವೆ. ಉಳಿದಂತೆ ವರ್ಣ ಸಂಯೋಜನೆಯಲ್ಲಿ ಮೂಲ ವರ್ಣಗಳನ್ನು ಹೊರತುಪಡಿಸಿ ಹೆಚ್ಚಿನ ಬದಲಾವಣೆಗಳು ಕಂಡುಬರುವುದಿಲ್ಲ.

* **ಹೂಕುಂಡ** : ದೇವಾಸುರರ ಯುದ್ಧದ ಚಿತ್ರದ ಕೆಳಗೆ ಅಲಂಕೃತ ಹೂಕುಂಡವೊಂದನ್ನು ಚಿತ್ರಿಸಿದೆ. ಈ ಹೂಕುಂಡದಲ್ಲಿ ಹೂ-ಎಲೆಗಳೊಂದಿಗೆ ಸಸಿಯೊಂದನ್ನು ತೋರಿಸಿದ್ದು, ಕುಂಡದ ಬಲ ಹಾಗೂ ಎಡಭಾಗದಲ್ಲಿ ಗರುಡ ಪಕ್ಷಿಗಳಿವೆ. ಈ ಗರುಡ ಪಕ್ಷಿಗಳು ಅಲಂಕೃತ ಪೀಠಗಳ ಮೇಲೆ ಕುಳಿತಿವೆ. ಈ ಚಿತ್ರದಲ್ಲಿ ಹಳದಿ ವರ್ಣವನ್ನು ಪ್ರಧಾನವಾಗಿ ಬಳಸಲಾಗಿದ್ದು, ಉಳಿದಂತೆ ಕಂದುಗೆಂಪು ಹಾಗೂ ನೀಲಿ ವರ್ಣಗಳನ್ನು ಬಳಸಿದೆ.

* **ಶೇಷಶಯನ ವಿಷ್ಣು** : ಚಾಮರವನ್ನು ಬೀಸುತ್ತಿರುವ ಮಹಿಳೆಯ ಚಿತ್ರದ ಪಕ್ಕದಲ್ಲಯೇ ಈ ಚಿತ್ರವಿದೆ. ನೀಲವರ್ಣದ ಮೈಬಣ್ಣವನ್ನು ಹೊಂದಿದ ವಿಷ್ಣು ಏಳು ಹೆಡೆಗಳುಳ್ಳ ಆದಿಶೇಷನ ಮೇಲೆ ಪವಡಿಸಿದ್ದಾನೆ. ವಿಷ್ಣುವಿನ ಪಾದದಡಿಯಲ್ಲಿ ಕುಳಿತಿರುವ ಲಕ್ಷ್ಮೀಯು ಪಾದ ಸೇವೆಯಲ್ಲಿ ನಿರತಳಾಗಿದ್ದಾಳೆ. ಈಕೆಯ ಮೈಬಣ್ಣ ಗೌರವರ್ಣದಲ್ಲಿದ್ದು, ತಲೆಯ ಮೇಲೆ ಕಿರೀಟವನ್ನು ಧರಿಸಿದ್ದಾಳೆ. ಬ್ರಹ್ಮದೇವನನ್ನು ಕಮಲದಲ್ಲಿ ಕುಳಿತಿರುವಂತೆ ತೋರಿಸಿದೆ.

* **ದತ್ತಾತ್ರೇಯ** : ಶೇಷ ಶಯನ ವಿಷ್ಣುವಿನ ಚಿತ್ರದ ಪಕ್ಕದಲ್ಲಿಯೇ ಈ ಚಿತ್ರವಿದೆ. ಈ ಚಿತ್ರದಲ್ಲಿ ಶಿವನು ಎದುರುಮುಖವಾಗಿದ್ದು, ತ್ರಿಶೂಲಧಾರಿಯಾದ ಶಿವನ ತಲೆಯ ಮೇಲೆ ಗಂಗೆಯನ್ನು ಚಿತ್ರಿಸಿದೆ. ಎಡಭಾಗದಲ್ಲಿ ವಿಷ್ಣುವನ್ನು ಶಂಖ-ಚಕ್ರಧಾರಿಯಾಗಿಯೂ ಮತ್ತು ಬಲಭಾಗದಲ್ಲಿ ಬ್ರಹ್ಮನನ್ನು ತೋರಿಸಿದೆ. ತ್ರಿಮೂರ್ತಿಯ ಪಾದದಡಿಯಲ್ಲಿ ಮೂರು ಶ್ವಾನಗಳಿದ್ದು, ಈ ಚಿತ್ರದ ಪಕ್ಕದಲ್ಲಿ ಇನ್ನೂ ಕೆಲವು ಚಿತ್ರಗಳು ಇದ್ದವೆಂಬುದಕ್ಕೆ ಅಲ್ಲಲ್ಲಿ ವರ್ಣದ ತುಣುಕುಗಳು ಕಂಡುಬರುತ್ತವೆ.

* **ಕೃಷ್ಣ ಯಶೋಧೆ :** ಈ ಚಿತ್ರದಲ್ಲಿ ಯಶೋಧೆಯು ತೊಡೆಯ ಮೇಲೆ ಮಲಗಿರುವ ಬಾಲಕೃಷ್ಣನನ್ನು ನೀಲಿ ವರ್ಣದಿಂದ ತೋರಿಸಿದೆ. ಯಶೋಧೆಯು ತೊಟ್ಟಿರುವ ಸೀರೆ ಕುಪ್ಪಸಗಳು ಕೆಂಪು ವರ್ಣದಲ್ಲಿದ್ದು, ಹೊರಭಾಗದ ಅಂಚಿನಲ್ಲಿ ಹಳದಿ ವರ್ಣವನ್ನು ಉಪಯೋಗಿಸಿದೆ. ಯಶೋಧೆಯ ಮೈಬಣ್ಣವನ್ನು ಹಳದಿ ವರ್ಣದಲ್ಲೇ ತೋರಿಸಿದೆ. ಹಿನ್ನಲೆಯಲ್ಲಿ ಹಸಿರು ವರ್ಣದ ತೆಕ್ಕೆಯೊಂದನ್ನು ತೋರಿಸಿದ್ದಲ್ಲದೇ ಕೆಳಭಾಗದ ವರ್ಣ ಲೇಪನವೂ ದಟ್ಟವಾಗಿ ಕಂಡುಬರುವುದು.

ಮಂದಿರಗಳಲ್ಲಿನ ಭಿತ್ತಿ ಚಿತ್ರಗಳು :

ಮಠಗಳಂತೆಯೇ ಮಂದಿರಗಳು ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಪ್ರತಿನಿಧಿಸುವ ಕೇಂದ್ರಗಳಾಗಿದ್ದವು. ಈ ಮಂದಿರಗಳಿಗೆ ಆಳರಸರ ಉದಾರ ನೆರವು ದೊರೆಯುತ್ತಿತ್ತು. ಹೀಗಾಗಿ ಅರಮನೆ ಹಾಗೂ ಮಠಗಳಂತೆ ಮಂದಿರಗಳಲ್ಲೂ ಭಿತ್ತಿ ಚಿತ್ರಗಳು ರಚನೆಗೊಂಡಿವೆ. ಸುರಪುರದಲ್ಲಿನ ಒಂದೆರಡು ಮಂದಿರಗಳಲ್ಲಿ ಭಿತ್ತಿ ಚಿತ್ರಗಳು ರಚನೆಗೊಂಡಿದ್ದವೆಂದು ಹೇಳಲಾಗುತ್ತಿದ್ದರೂ, ಇಂದು ಆ ಮಂದಿರಗಳು ನವೀಕರಣಗೊಂಡಿರುವುದರಿಂದ ಅಲ್ಲಿ ಯಾವುದೇ ಚಿತ್ರಗಳು ಕಂಡುಬರುವುದಿಲ್ಲ.ಸುರಪುರದ ಶ್ರೀ ವೇಣುಗೋಪಾಲಸ್ವಾಮಿ ದೇವಾಲಯದ ಎದುರಿಗೆ ನೆಲಮಟ್ಟದಲ್ಲಿ ಆಂಜನೇಯ ದೇವಾಲಯವಿದ್ದು, ಈ ದೇವಾಲಯದ ಗೋಡೆಗಳಲ್ಲದೇ ಒಳಮಾಳಿಗೆಯಲ್ಲಿ ರಾಮಾಯಣ, ಮಹಾಭಾರತ ಮುಂತಾದ ವಿಷಯಗಳ ಚಿತ್ರಗಳು ರಚನೆಗೊಂಡಿದ್ದವೆಂದು ರಾಜ ಗುರುಗಳಾದ ಶ್ರೀ ಬಿ. ಕಋಷ್ಣಮಾಚಾರ್ಯ ಅವರು ಅಭಿಪ್ರಾಯ ಪಡುತ್ತಾರೆ. ಕಳೆದ ಐದಾರು ವರ್ಷಗಳ ಹಿಂದೆ ಈ ದೇವಾಲಯ ನವೀಕರಣಗೊಂಡಿದ್ದರಿಂದ ಇಲ್ಲಿರುವ ಚಿತ್ರಗಳು ವಿನಾಶ ಹೊಂದಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ. ಇದಲ್ಲದೆ ಸುರಪುರದ ಮಹಾಕವಿ ಲಕ್ಷ್ಮೀಶ ರಸ್ತೆಯಲ್ಲಿನ ಪಂಚಮುಖಿ ಹನುಮಾನ ಮಂದಿರದಲ್ಲಿಯೂ ಭಿತ್ತಿ ಚಿತ್ರಗಳಿದ್ದವೆಂದು ಹೇಳುತ್ತಾರೆ. ಈ ಮಂದಿರವು ನವೀಕರಣಗೊಳ್ಳದೇ ಹೋದರೂ ಗೋಡೆಯ ಭಿತ್ತಿಯು ಸಂಪೂರ್ಣ ಉದುರಿ ಹೋಗಿರುವುದರಿಂದ ಮತ್ತು ಕಾಲಕಾಲಕ್ಕೆ ಗೋಡೆಯ ಮೇಲೆ ಸುಣ್ಣ ಬಳಿಯಲಾಗಿರುವುದರಿಂದ ಇಲ್ಲಿ ಯಾವುದೇ ಚಿತ್ರಗಳು ಕಂಡುಬರುವುದಿಲ್ಲ.

ಅಣ್ಣಯ್ಯನಮಠ :

'ಸುರಪುರ ಉತ್ತರ ದಿಕ್ಕಿನಲ್ಲಿರುವ ಈ ಮಠವನ್ನು ಸ್ಥಳೀಯವಾಗಿ ಗೆಜ್ಜೆಸ್ವಾಮಿಮಠ ಎಂತಲೂ ಕರೆಯುತ್ತಾರೆ. ಈ ಮಠದ ಹೊರಪಡಸಾಲೆಯಲ್ಲಿ ಚಿತ್ರಗಳು ರಚನೆಯಾಗಿವೆ. ಮೂರುಗೋಡೆಗಳನ್ನು ಹೊಂದಿದ ಈ ಪಡಸಾಲೆಯಲ್ಲಿನ ಗೋಡೆಗಳು ಚಿತ್ರಗಳಿಂದ ಅಲಂಕೃತಗೊಂಡಿವೆ. ಇಲ್ಲಿಯ ಕೆಲವು ಚಿತ್ರಗಳೂ ಸಹಿತ ನಾಶವಾಗಿದ್ದು ಕೆಲವೇ ಚಿತ್ರಗಳು ಉಳಿದಿವೆ. ಈ ಪಡಸಾಲೆಯ ಪೂರ್ವಗೋಡೆಯಲ್ಲಿ ದ್ರೌಪದಿಯ ಸ್ವಯಂವರ, ಪಾರ್ವತಿ ಕಲ್ಯಾಣ ಮೆರವಣಿಗೆ, ಬಾಗಿಲುಗಳ ಚಿತ್ರಗಳಿದ್ದರೆ. ಎತ್ತರಗೋಡೆಯಲ್ಲಿ ದತ್ತಾತ್ರೇಯ, ಮಹಿಷಾಸುರ ಮರ್ಧನಿ, ವ್ಯಾಯಾಮಶಾಲೆ, ಕೃಷ್ಣನ ಪ್ರಣಯದೃಶ್ಯ, ಮನ್ಮಥವಿಜಯ, ಕೀಚಕವಧೆ ಚಿತ್ರಗಳಿವೆ. ದಕ್ಷಿಣಗೋಡೆಯಯಲ್ಲಿ ಕಾಮಧೆನು,

ಗರುಡ, ಮಂಗ ಮತ್ತು ಹೂಬಳ್ಳಿಯ ನಕ್ಷಾ ಚಿತ್ರಗಳನ್ನು ರಚಿಸಲಾಗಿದೆ. ಇಲ್ಲಿಯೂ ಪ್ರಮುಖವಾಗಿ ದಟ್ಟನೀಲಿ, ಕೆಂಪು ಹಳದಿ ವರ್ಣಗಳು ಬಳಕೆಯಾಗಿರುವುದ್ದನ್ನು ಕಾಣುತ್ತೇವೆ[೨೨].

ಮನೆಗಳಲ್ಲಿನ ಭಿತ್ತಿ ಚಿತ್ರಗಳು :

ಸುರಪುರ ಸಂಸ್ಥಾನದ ಪ್ರಮುಖರಾದ ಮಂತ್ರಿ ವರ್ಗದವರು ಮತ್ತು ಇಲ್ಲಿನ ಶ್ರೀಮಂತರ ಮನೆಗಳಲ್ಲಿಯೂ ಭಿತ್ತಿ ಚಿತ್ರಗಳಿದ್ದವೆಂಬ ಸಂಗತಿ ತಿಳಿದು ಬರುತ್ತದೆ. ಆದರೆ ಈ ಚಿತ್ರಗಳು ನಿಸರ್ಗ ದೃಶ್ಯದೊಂದಿಗೆ ಸುಳುವಿನಾಕಾರ ಚಿತ್ರಗಳಾಗಿರುತ್ತಿದ್ದವು. ಈ ಪ್ರಮುಖರ ಮನೆಗಳ ದ್ವಾರದ ಸುತ್ತಲೂ ಚೌಕಟ್ಟಿನಂಚಿಗೆ ಎರಡೂ ಬದಿಯಲ್ಲಿ ಸುಂದರ ವಿನ್ಯಾಸದ ಹೂಬಳ್ಳಿಯ ಚಿತ್ರಗಳನ್ನು ಚಿತ್ರಿಸಲಾಗುತ್ತಿತ್ತು. ಮನೆಯ ನಾಲ್ಕೂ ಗೋಡೆಗಳಿಗೆ ಹೊಂದಿಕೊಂಡಂತೆ ನೆಲದಿಂದ ಎರಡು ಅಡಿ ಎತ್ತರದಲ್ಲಿ ಏಕವರ್ಣದ ಪಟ್ಟಿಕೆಯೊಂದನ್ನು ಮಾಡಿಕೊಂಡು ಅದರಲ್ಲಿ ವಿವಿಧ ಚಿತ್ರಗಳಿಂದ ವಿನ್ಯಾಸಗೊಳಿಸಲಾಗುತ್ತಿತ್ತೆಂದು ಆಸ್ಥಾನ ಪ್ರಮುಖರಾದ ಮುಜುಂದಾರ ಮನೆತನದ ಹಿರಿಯರು ಅಂದಿನ ದಿನಗಳನ್ನು ನೆನಪಿಸಿಕೊಳ್ಳುತ್ತಾರೆ. ಅರಸೊತ್ತಿಗೆಯ ಕಾಲದಲ್ಲಿ ಆಸ್ಥಾನ ಪ್ರಮುಖರ ಮನೆಗಳಲ್ಲಿ ಮುದುವೆ ಅಥವಾ ಇನ್ನಿತರ ಕಾರ್ಯಗಳಿದ್ದರೆ ಗರುಡಾದ್ರಿಯವರನ್ನು ಕರೆಯಿಸಿ ಚಿತ್ರ ಬರೆಯಿಸುವ ಸಂಪ್ರದಾಯವಿತ್ತು. ಈ ಕಲಾವಿದರು ಬಂದು ಆ ಮನೆಗೊಡೆಯನ ಅಪೇಕ್ಷೆಯ ಮೇರೆಗೆ ವಿವಿಧ ನಮೂನೆಯ ಚಿತ್ತಾರಗಳಿಂದ ಮನೆಯ ಗೋಡೆಗಳನ್ನು ಸಿಂಗರಿಸುತ್ತಿದ್ದರಂತೆ. ಈ ರೀತಿಯ ಚಿತ್ರಗಳನ್ನು ಬರೆಯುವಾಗ ಗರುಡಾದ್ರಿ ಮನೆತನದವರಲ್ಲದೇ ಅವರ ಶಿಷ್ಯಬಳಗವೂ ಭಾಗಿಯಾಗುತ್ತಿತ್ತು. ಕೆಲವೊಮ್ಮೆ ಆಸ್ಥಾನ ಕಲಾವಿದರಲ್ಲದೇ ಅವರ ಶಿಷ್ಯ ಬಳಗವೇ ಹೋಗಿ ಚಿತ್ರಗಳನ್ನು ಚಿತ್ರಿಸಿದ್ದುದುಂಟು. ವಿವಿಧ ಕಾರ್ಯಗಳಲ್ಲಿ ಸಾಂದರ್ಭಿಕವಾಗಿ ಚಿತ್ರಗಳನ್ನು ಬರೆದ ನಂತರ ಆ ಮನೆಯ ಒಡೆಯನು ಕಲಾವಿದರಿಗೆ ವಿಶಿಷ್ಟ ಉಡುಗೊರೆಗಳಿಂದ ಶಸ್ತ್ರೋಕ್ತವಾಗಿ ಸತ್ಕರಿಸುತ್ತಿದ್ದರೆಂಬುದಾಗಿಯೂ ಈ ವಯೋವೃದ್ದರು ಅಂದಿನ ಘಟನೆಗಳನ್ನು ನೆನಪಿಸುತ್ತಾರೆ.

ಇಂದು ಈ ಎಲ್ಲ ಪ್ರಮುಖರ ಮನೆಗಳು ನವೀಕರಣಗೊಂಡಿದ್ದರಿಂದ ಅಲ್ಲಿ ಯಾವುದೇ ರೀತಿಯ ಭಿತ್ತಿ ಚಿತ್ರಗಳು ಕಂಡುಬರುವುದಿಲ್ಲ. ಆದರೆ, ಮುಜುಮ್‌ದಾರ ಅವರ ಹಳೆಯ ಮನೆಯು ಇಂದು ಸಂಪೂರ್ಣ ಬಿದ್ದು ಹೋಗಿದೆಯಾದರೂ, ಗೋಡೆಗಳ ಮಧ್ಯೆ ದ್ವಾರದ ಸುತ್ತಲೂ ನಿರ್ಮಿಸಿದ ಗಾರೆ ವಿನ್ಯಾಸದಲ್ಲಿ ವರ್ಣದ ತುಣುಕುಗಳು ಕಂಡುಬರುತ್ತವೆ. ಇಷ್ಟನ್ನು ಹೊರತುಪಡಿಸಿ ಮತ್ತೆಲ್ಲಿಯೂ ಈ ರೀತಿಯ ಚಿತ್ರಗಳು ದಂಡುಬರುವುದಿಲ್ಲ. ಆದರೆ, ಈ ರೀತಿಯ ವಿನ್ಯಾಸಗಳಿಂದ ಮನೆಯನ್ನಲಂಕರಿಸುವ ಸಂಪ್ರದಾಯವು ಈಗಲು ಮುಂದುವರೆದಿದೆ. ಸುರಪುರ ಮತ್ತು ಸಉತ್ತಮುತ್ತಲಿನ ಹಳೆಯ ತಲೆಮಾರಿನ ಮನೆಗಳ ಗೋಡೆಗಳಲ್ಲಿ ಸುರಪುರ ಆಸ್ಥಾನ ಕಲಾವಿದರು ಚಿತ್ರಿಸುತ್ತಿದ್ದ ಶೈಲಿಯಲ್ಲಿಯೇ ಸುಳುವಿನ ವಿನ್ಯಾಸಗಳನ್ನು ಇಂದಿಗೂ ಬಿಡಿಸುತ್ತ ಬಂದಿರುವುದನ್ನು ನಾವು ಕಾಣಬಹುದಾಗಿದೆ.

೨೨. ಡಾ. ಯಾದಪ್ಪ ಪರದೇಶಿ(ಸಂ) : (ಕರ್ನಾಟಕದ ಭಿತ್ತಿಚಿತ್ರಕಲೆ) ನಿಜದ ನೆಲೆ, ಪು.ಸಂ.-೪೮೧

ಇನ್ನು ಹಲವರು ಪ್ರದೇಶಗಳಲ್ಲಿ ಸುಂದರವಾದ ಭಿತ್ತಿಚಿತ್ರಗಳನ್ನು ನೋಡಬಹುದು ಮತ್ತು ಕೆಲವು ಭಿತ್ತಿಚಿತ್ರಗಳು ಹಳಾಗಿರುವುದನ್ನು ಈ ಸಂಶೋಧನೆಯ ಮೂಲಕ ಕಾಣಬಹುದು.

ಆಸ್ಥಾನ ಪ್ರಮುಖರ ಮನೆಗಳಲ್ಲಿನ ಭಿತ್ತಿ ಚಿತ್ರಗಳು :

ಸುರಪುರ ಸಂಸ್ಥಾನದ ಪ್ರಮುಖರಾದ ಮಂತ್ರಿ ವರ್ಗದವರು ಮತ್ತು ಇಲ್ಲಿನ ಶ್ರೀಮಂತರ ಮನೆಗಳಲ್ಲಿಯೂ ಭಿತ್ತಿ ಚಿತ್ರಗಳಿದ್ದವೆಂಬ ಸಂಗತಿ ತಿಳಿದು ಬರುತ್ತದೆ. ಆದರೆ ಈ ಚಿತ್ರಗಳು ನಿಸರ್ಗ ದೃಶ್ಯದೊಂದಿಗೆ ಸುಳುವಿನಾಕಾರ ಚಿತ್ರಗಳಾಗಿರುತ್ತಿದ್ದವು. ಈ ಪ್ರಮುಖರ ಮನೆಗಳ ದ್ವಾರದ ಸುತ್ತಲೂ ಚೌಕಟ್ಟಿನಂಚಿಗೆ ಎರಡೂ ಬದಿಯಲ್ಲಿ ಸುಂದರ ವಿನ್ಯಾಸದ ಹೂಬಳ್ಳಿಯ ಚಿತ್ರಗಳನ್ನು ಚಿತ್ರಿಸಲಾಗುತ್ತಿತ್ತು. ಮನೆಯ ನಾಲ್ಕೂ ಗೋಡೆಗಳಿಗೆ ಹೊಂದಿಕೊಂಡಂತೆ ನೆಲದಿಂದ ಎರಡು ಅಡಿ ಎತ್ತರದಲ್ಲಿ ಏಕವರ್ಣದ ಪಟ್ಟಿಕೆಯೊಂದನ್ನು ಮಾಡಿಕೊಂಡು ಅದರಲ್ಲಿ ವಿವಿಧ ಚಿತ್ರಗಳಿಂದ ವಿನ್ಯಾಸಗೊಳಿಸಲಾಗುತ್ತಿತ್ತೆಂದು ಆಸ್ಥಾನ ಪ್ರಮುಖರಾದ ಮುಜುಂದಾರ ಮನೆತನದ ಹಿರಿಯರು ಅಂದಿನ ದಿನಗಳನ್ನು ನೆನಪಿಸಿಕೊಳ್ಳುತ್ತಾರೆ. ಅರಸೊತ್ತಿಗೆಯ ಕಾಲದಲ್ಲಿ ಆಸ್ಥಾನ ಪ್ರಮುಖರ ಮನೆಗಳಲ್ಲಿ ಮದುವೆ ಅಥವಾ ಇನ್ನಿತರ ಕಾರ್ಯಗಳಿದ್ದರೆ ಗರುಡಾದ್ರಿಯವರನ್ನು ಕರೆಯಿಸಿ ಚಿತ್ರ ಬರೆಯಿಸುವ ಸಂಪ್ರದಾಯವಿತ್ತು. ಈ ಕಲಾವಿದರು ಬಂದು ಆ ಮನೆಗೊಡೆಯನ ಅಪೇಕ್ಷೆಯ ಮೇರೆಗೆ ವಿವಿಧ ನಮೂನೆಯ ಚಿತ್ತಾರಗಳಿಂದ ಮನೆಯ ಗೋಡೆಗಳನ್ನು ಸಿಂಗರಿಸುತ್ತಿದ್ದರಂತೆ. ಈ ರೀತಿಯ ಚಿತ್ರಗಳನ್ನು ಬರೆಯುವಾಗ ಗರುಡಾದ್ರಿ ಮನೆತನದವರಲ್ಲದೇ ಅವರ ಶಿಷ್ಯಬಳಗವೂ ಭಾಗಿಯಾಗುತ್ತಿತ್ತು. ಕೆಲವೊಮ್ಮೆ ಆಸ್ಥಾನ ಕಲಾವಿದರಲ್ಲದೇ ಅವರ ಶಿಷ್ಯ ಬಳಗವೇ ಹೋಗಿ ಚಿತ್ರಗಳನ್ನು ಚಿತ್ರಿಸಿದ್ದುದುಂಟು. ವಿವಿಧ ಕಾರ್ಯಗಳಲ್ಲಿ ಸಾಂದರ್ಭಿಕವಾಗಿ ಚಿತ್ರಗಳನ್ನು ಬರೆದ ನಂತರ ಆ ಮನೆಯ ಒಡೆಯನು ಕಲಾವಿದರಿಗೆ ವಿಶಿಷ್ಟ ಉಡುಗೊರೆಗಳಿಂದ ಶಸ್ತ್ರೋಕ್ತವಾಗಿ ಸತ್ಕರಿಸುತ್ತಿದ್ದರೆಂಬುದಾಗಿಯೂ ಈ ವಯೋವೃದ್ಧರು ಅಂದಿನ ಘಟನೆಗಳನ್ನು ನೆನಪಿಸುತ್ತಾರೆ. ಇಂದು ಈ ಎಲ್ಲ ಪ್ರಮುಖರ ಮನೆಗಳು ನವೀಕರಣಗೊಂಡಿದ್ದರಿಂದ ಅಲ್ಲಿ ಯಾವುದೇ ರೀತಿಯ ಭಿತ್ತಿ ಚಿತ್ರಗಳು ಕಂಡುಬರುವುದಿಲ್ಲ. ಆದರೆ, ಮುಜುಮ್‌ದಾರ ಅವರ ಹಳೆಯ ಮನೆಯು ಇಂದು ಸಂಪೂರ್ಣ ಬಿದ್ದು ಹೋಗಿದೆಯಾದರೂ, ಗೋಡೆಗಳ ಮಧ್ಯೆ ದ್ವಾರದ ಸುತ್ತಲೂ ನಿರ್ಮಿಸಿದ ಗಾರೆ ವಿನ್ಯಾಸದಲ್ಲಿ ವರ್ಣದ ತುಣುಕುಗಳು ಕಂಡುಬರುತ್ತವೆ. ಇಷ್ಟನ್ನು ಹೊರತುಪಡಿಸಿ ಮತ್ತೆಲ್ಲಿಯೂ ಈ ರೀತಿಯ ಚಿತ್ರಗಳು ದಂಡುಬರುವುದಿಲ್ಲ. ಆದರೆ, ಈ ರೀತಿಯ ವಿನ್ಯಾಸಗಳಿಂದ ಮನೆಯನ್ನಲಂಕರಿಸುವ ಸಂಪ್ರದಾಯವು ಈಗಲು ಮುಂದುವರೆದಿದೆ. ಸುರಪುರ ಮತ್ತು ಸಉತ್ತಮುತ್ತಲಿನ ಹಳೆಯ ತಲೆಮಾರಿನ ಮನೆಗಳ ಗೋಡೆಗಳಲ್ಲಿ ಸುರಪುರ ಆಸ್ಥಾನ ಕಲಾವಿದರು ಚಿತ್ರಿಸುತ್ತಿದ್ದ ಶೈಲಿಯಲ್ಲಿಯೇ ಸುಳುವಿನ ವಿನ್ಯಾಸಗಳನ್ನು ಇಂದಿಗೂ ಬಿಡಿಸುತ್ತ ಬಂದಿರುವುದನ್ನು ನಾವು ಕಾಣಬಹುದಾಗಿದೆ.

ಚಿತ್ರಗಳಲ್ಲಿನ ತಂತ್ರಗಾರಿಕೆ ಮತ್ತು ಶೈಲಿ :

'ಸುರಪುರ ಭಿತ್ತಿಚಿತ್ರಗಳ ವರ್ಣಸಂಯೋಜನೆ ಕುರಿತು ಈ ಹಿಂದೆ ಚರ್ಚಿಸಿದೆಯಾದರೂ ಚಿತ್ರ ರಚನೆಯಲ್ಲಿ ಅಳವಡಿಸಿದ ತಂತ್ರಗಾರಿಕೆಯನ್ನೂ ನಾವು ಸೂಕ್ಷವಾಗಿ ಗಮನಿಸಬೇಕಾಗಿದೆ. ಸುರಪುರ ಅರಮನೆಯಲ್ಲಿರುವ ಒಂದೆರಡು ಚಿತ್ರಗಳನ್ನು ಹೊರತುಪಡಿಸಿ ಉಳಿದವುಗಳೆಲ್ಲ ಮಣ್ಣಿನ ಭಿತ್ತಿಯ ಮೇಲೆ ರಚನೆಗೊಂಡಿದ್ದು, ಈ ಚಿತ್ರಗಳಿಗೆ ತಯಾರಿಸಿಕೊಳ್ಳಲಾದ ಭಿತ್ತಿಯಲ್ಲಿ ಹೆಚ್ಚಿನ ತಂತ್ರಗಾರಿಕೆಯು ಕಂಡುಬರುವುದಿಲ್ಲ. ಅದರೆ ವರ್ಣ ವಿನ್ಯಾಸ ಮತ್ತು ಆಕೃತಿ ಸಂಯೋಜನೆಯಲ್ಲಿ ಈ ಚಿತ್ರಗಳು ವಇಶಿಷ್ಟ ರಚನೆಯಿಂದ ಕೂಡಿವೆ. ಸುರಪುರ ಸಮೀಪದ ರಂಗಂಪೇಟೆಯ ರುದ್ರಸ್ವಾಮಿ ಮಠ ಹಾಗೂ ಅಣ್ಣಯ್ಯನ ಮಠದಲ್ಲಿ ಮಾತ್ರ ಭಿತ್ತಿಚಿತ್ರಗಳು ಕಂಡುಬರುತ್ತವೆ. ರುದ್ರಸ್ವಾಮಿ ಮಠದಲ್ಲಿನ ಭಿತ್ತಿಚಿತ್ರಗಳು ಮೊದಲ ಬಾನಯ್ಯನಿಂದ ಚಿತ್ರಿಸಲ್ಪಟ್ಟಿದ್ದು, ಈ ಚಿತ್ರಗಳಲ್ಲಿನ ರೇಖಾವಿನ್ಯಾಸ, ವರ್ಣ ಸಂಯೋಜನೆ, ಮುಖ್ಯವಾಗಿ ಆಕೃತಿ ಸಂಯೋಜನೆಯಿಂದ ಈ ಚಿತ್ರಗಳು ಬಹು ಮುಖ್ಯವೆನಿಸುತ್ತವೆ. ಮಾತ್ರವಲ್ಲದೇ ಸುರಪುರ ಆಸ್ಥಾನ ಕಲಾವಿದರಲ್ಲೇ ಶ್ರೇಷ್ಟನಾದ ಮೊದಲ ಬಾನಯ್ಯನು ರಚಿಸಿರುವ ಅನೇಕ ಚಿತ್ರಗಳು ರಚನೆ, ಶೈಲಿ ಹಾಗೂ ತಂತ್ರ ವಿಧಾನಗಳಿಂದ ವಿಶಿಷ್ಟ ರಚನೆಗಳಾಗಿವೆ. ನಂತರದಲ್ಲಿ ಅಣ್ಣಯ್ಯನ ಮಠದಲ್ಲೂ ಸಾಕಷ್ಟು ಭಿತ್ತಿ ಚಿತ್ರಗಳು ರಚನೆಗೊಂಡವು. ಈ ಚಿತ್ರಗಳಲ್ಲಿನ ಸ್ಥಳ ವಿಭಜನೆ, ಮನುಷ್ಯಾಕೃತಿಗಳು, ವೇಷ-ಭೂಷಣಗಳಲ್ಲಿ ಸ್ವಲ್ಪ ವ್ಯತ್ಯಾಸವನ್ನು ನಾವು ಕಾಣಬಹುದಾಗಿದೆ

ಭಿತ್ತಿಚಿತ್ರಗಳಲ್ಲಿನ ಲಕ್ಷಣಗಳು :

- ಬಹಳ ಕಡಿಮೆ ಪ್ರಮಾಣದಲ್ಲಿ ಕಂಡುಬಂದರೂ ಸುರಪುರ ಭಿತ್ತಿಚಿತ್ರಗಳು ರೇಖಾಲಾಲಿತ್ಯ, ಸ್ಥಳ ವಿಂಗಡಣೆ, ಆಕೃತಿ ಸಂಯೋಜನೆಯಿಂದ ನೋಡಲು ಸುಂದರವಾಗಿ ಕಾಣಿಸುತ್ತವೆ. ಮಾತ್ರವಲ್ಲದೇ ಈ ಚಿತ್ರಗಳು ಚಿಕಣಿ ಚಿತ್ರಗಳ ವಿಸ್ತೃತ ರೂಪದಂತೆ ಕಂಡು ಬರುತ್ತವೆ.
- ನಸುಗೆಂಪು, ಹಸಿರು, ಹಳದಿ ಮತ್ತು ನೀಲಿ ವರ್ಣಗಳನ್ನು ಪ್ರಮುಖವಾಗಿ ಬಳಸಲಾಗಿದೆ. ಎಲ್ಲ ಚಿತ್ರಗಳಲ್ಲಿ ಈ ವರ್ಣಗಳೇ ಪುನರಾವರ್ತನೆಯಾದರೂ ವಿಶೇಷ ಕಾಂತಿಯಿಂದ ಕೂಡಿವೆ.
- ಚಿತ್ರಗಳಲ್ಲಿಯ ಮನುಷ್ಯಾಕೃತಿಗಳು ಕಾಲಿನಿಂದ ಅವುಗಳ ದೇಹ ಮತ್ತು ತಲೆಗಳು ಹಿಂದಕ್ಕೆ ವಾಲಿದಂತೆ ಕಂಡುಬರುತ್ತವೆ. ಈ ರೀತಿಯ ಮನುಷ್ಯಾಕೃತಿಯ ಲಕ್ಷಣಗಳು ಸಮಕಾಲೀನ ಮರಾಠಾ ಶೈಲಿಯಲ್ಲಿಯೂ ಕಂಡುಬರುತ್ತದೆ. ಅಲ್ಲದೆ ಈ ಚಿತ್ರಗಳಲ್ಲಿ ಹಳದಿ ಹಾಗೂ ಕೆಂಪು ವರ್ಣವನ್ನು ಆಕೃತಿಗಳ ಮೈಬಣ್ಣವಾಗಿ ಹೆಚ್ಚು ಬಳಸಲಾಗಿದೆ.
- ಚಿತ್ರಗಳಲ್ಲಿನ ಸ್ತ್ರೀ ಆಕೃತಿಗಳು ದೊಡ್ಡ ದೊಡ್ಡ ಬಾದಾಮಿಯಾಕಾರದ ಕಣ್ಣುಗಳನ್ನು ಹೊಂದಿವೆ. ಸ್ತ್ರೀಯರು ಧರಿಸಿರುವ ಸೀರೆ ಕುಪ್ಪಸಗಳು ಅಂಚುಗಳನ್ನು ಹೊಂದಿದ್ದು, ಈ ಅಂಚುಗಳಲ್ಲಿ ವೈವಿಧ್ಯಮಯವಾದ ವಿನ್ಯಾಸಗಳು ರಚಿಸಲ್ಪಟ್ಟಿವೆ.
- ಅರಮನೆ ಮತ್ತು ಮಠ-ಮಂದಿರಗಳನ್ನು ಹೊರತುಪಡಿಸಿ ಆಸ್ಥಾನ ಪ್ರಮುಖರು ಹಾಗೂ ಗಣ್ಯವ್ಯಕ್ತಿಗಳ ಮನೆಗಳಲ್ಲಿನ ಭಿತ್ತಿ ಚಿತ್ರಗಳು ನಿಸರ್ಗಚಿತ್ರ, ಅಲಂಕಾರಿಕ ವಿನ್ಯಾಸಗಳಿಂದ ಕೂಡಿವೆ'[೨೩].

೨೩. ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ : ಸುರಪುರ ಚಿತ್ರಕಲೆ, ಪು.ಸಂ-೪೭,೪೪

ಪ್ರಸ್ತುತ ಅಧ್ಯಯನದಿಂದ ಸುರಪುರದ ಆಡಳಿತ, ರಾಜ ಮನೆತನದ ವಂಸ್ಥರು, ರಾಜಕೀಯ, ಸಾಮಾಜಿ, ಆರ್ಥಿಕ, ಕಲಾವಿದರ ಪ್ರೋತ್ಸಹ, ಕಲಾಕೃತಿಗಳ, ರಚನೆ, ತಂತ್ರ, ಶೈಲಿ, ಭಿತ್ತಿಚಿತ್ರಗಳು, ಪಸ್ರುತ್ತ ಸ್ಥಿತಿ ಗತ್ತಿ ಬಗ್ಗೆ ಈ ಅಧ್ಯಯನದಿಂದ ಕಾಣಬಹುದು.

ಸುರಪುರ ಭಿತ್ತಿಚಿತ್ರಗಳು



ಯಶೋಧಾ ಕೃಷ್ಣ



ದತ್ತಾತ್ರೇಯ

ಸುರಪುರ ಸಾಂಪ್ರದಾಯಿಕ ರೇಖಾಚಿತ್ರಗಳು






ಸುರಪುರ ಸಾಂಪ್ರದಾಯಿಕ ರೇಖಾಚಿತ್ರಗಳು







ಸುರಪುರ ಸಾಂಪ್ರದಾಯಿಕ ಚಿತ್ರಗಳು



ಶ್ರೀ ಶಾರದೆ



ಚೆನ್ನಬಸವ ಪುರಾಣ ವಿಷಯಾಧಾರಿತ ಚಿತ್ರ

ಸುರಪುರ ಸಾಂಪ್ರದಾಯಿಕ ಚಿತ್ರಗಳು



ವಿಠ್ಠಲ ರುಕ್ಮಿಣಿ



ರಾಧಾ ಕೃಷ್ಣ

ಸುರಪುರ ಸಾಂಪ್ರದಾಯಿಕ ಚಿತ್ರಗಳು



ಉಗ್ರ ನರಸಿಂಹ



ವಾಮನ ಅವತಾರ

ಸುರಪುರ ಸಾಂಪ್ರದಾಯಿಕ ಚಿತ್ರಗಳು



ಚಕ್ರದೇಶ್ವರ



ಕಾಳಿಕ ದೇವಿ

ಸುರಪುರ ಸಾಂಪ್ರದಾಯಿಕ ಚಿತ್ರಗಳು



ಈಶ್ವರ



ಯಶೋಧ

ಸುರಪುರ ಸಾಂಪ್ರದಾಯಿಕ ಚಿತ್ರಗಳು



ಮಹಿಷಾಸುರ ಮರ್ಧಿನಿ



ದತ್ತಾತ್ರೇಯ

ಸುರಪುರ ಸಾಂಪ್ರದಾಯಿಕ ಚಿತ್ರಗಳು



ಗಣೇಶ



ಶ್ರೀ ಮಾಣಿಕ ಪ್ರಭು

ಸುರಪುರ ಸಾಂಪ್ರದಾಯಿಕ ಚಿತ್ರಗಳು



ಚಕ್ರದಾನಮೂರ್ತಿ



ಶಿವ ಮತ್ತು ಕುಟುಂಬ

ಸುರಪುರ ಸಾಂಪ್ರದಾಯಿಕ ಚಿತ್ರಗಳು



ಗಣೇಶ ನಾಮಕರಣ



ಪಾರ್ವತಿ ವಿವಾಹ ಸಲಾಪ್ಪ

ಸುರಪುರ ಸಾಂಪ್ರದಾಯಿಕ ಚಿತ್ರಗಳು



ಶ್ರೀ ಗಣೇಶ




ಈಶ್ವರ

ಸುರಪುರ ಸಾಂಪ್ರದಾಯಿಕ ಚಿತ್ರಗಳು



ಶಿವನ ಪರಿವಾರ



ಶ್ರೀ ಶರಣಬಸವೇಶ್ವರರು

ಅಧ್ಯಾಯ-ಐದು

ಮೈಸೂರು ಮತ್ತು ಸುರಪುರ ಸಾಂಪ್ರದಾಯಿಕ ಕಲಾಕೃತಿಗಳ ತೌಲನಿಕ ಅಧ್ಯಯನ

ಅಧ್ಯಾಯ ಐದು

ಮೈಸೂರು ಮತ್ತು ಸುರಪುರ ಸಾಂಪ್ರದಾಯಿಕ ಕಲಾಕೃತಿಗಳ ತೌಲನಿಕ ಅಧ್ಯಯನ

ಮೈಸೂರು ಮತ್ತು ಸುರಪುರದ ಪ್ರಾದೇಶಿಕ, ಐತಿಹಾಸಿಕ, ಕಲಾವಿದರಿಗೆ ಪ್ರೋತ್ಸಾಹ, ರಚನಾ ವಿಧಾನ, ತಂತ್ರ, ಪ್ರಭಾವ, ಪ್ರೇರಣೆ, ಕಲಾಕೃತಿಗಳ ಗುಣಲಕ್ಷಣ, ಭಿತ್ತಿಚಿತ್ರಗಳು ಮತ್ತು ಕಲಾಕೃತಿಗಳ ವ್ಯತ್ಯಾಸಗಳನ್ನು ಕುರಿತು ಹಂತ ಹಂತವಾಗಿ ಪ್ರಸ್ತುತ ಈ ಅಧ್ಯಯದಲ್ಲಿ ವಿವರಿಸಲಾಗಿದೆ.

ಮೈಸೂರು ಮತ್ತು ಸುರಪುರ ಈ ಎರಡು ಪ್ರದೇಶಗಳು ಬಹಳ ವೈಶಿಷ್ಟತೆಯಿಂದ ಕೂಡಿವೆ, ಮೈಸೂರು ಕರ್ನಾಟಕ ಪ್ರಮುಖವಾದ ಐತಿಹಾಸಿಕ ಸ್ಥಳಗಳಲ್ಲಿ ಮೈಸೂರು ಕೂಡ ಒಂದಾಗಿದೆ. ಮೈಸೂರು ಸಾಂಸ್ಕೃತಿಕ ರಾಜಧಾನಿಯಾಗಿರುವಂತೆ ಈ ಹಿಂದೆ ಕರ್ನಾಟಕದ ರಾಜಧಾನಿಯಾಗಿತ್ತು, ಸಾಂಸ್ಕೃತಿಕ ಪರಿಸರದ ಇತಿಹಾಸ ತನ್ನ ಒಡಲಿನಲ್ಲಿ ವಿವಿಧ ಕಲಾ ಪ್ರಕಾರಗಳನ್ನು ಹೊಂದಿದ ಕಲೆಗಳ ಪರಂಪರೆಯ ಬೀಡಾಗಿದೆ, ದಕ್ಷಿಣ ಭಾರತದ ಹೃದಯ ಭಾಗದಲ್ಲಿರುವ ಮೈಸೂರು ಅತ್ಯಂತ ಸುಂದರ, ಹಸಿರು, ಅರಮನೆಗಳ ನಾಡು, ಜ್ಞಾನ ಬಂಡಾರದ ಜಿಲ್ಲೆಯಾಗಿದೆ, ಇಂದು ಭಾರತದೊಳಗೆ ಕರುನಾಡಿನ ಪ್ರಾಚೀನ ನಗರಗಳಲ್ಲಿ ಒಂದಾಗಿದೆ. ನೈಸರ್ಗಿಕವಾಗಿ ಸುಂದರ ತಾಣಗಳನ್ನು ಒಳಗೊಂಡ ಸಂಪತ್ತಭರಿತ ನೆಲೆಯಾಗಿ ಸಾಂಸ್ಕೃತಿಕ ರಂಗಕ್ಕೆ ಅತ್ಯಂತ ಮಹತ್ವ ಪೂರ್ಣವಾದ ಕೊಡುಗೆಗಳನ್ನು ನೀಡುತ್ತಿದೆ.

ಸುರಪುರವು ಬೆಟ್ಟಗುಡ್ಡಗಳ ಸಾಲುಗಳಿಂದ ತುಂಬಿದ ಹಾಸು ಬಂಡೆಗಳಿಂದಲೂ, ಭೀಮಾಕಾರದ ದುಂಡು ಶಿಲೆಗಳಿಂದಲೂ ತುಂಬಿದ ಬೆಟ್ಟದ ಸಾಲುಗಳು ಇಲ್ಲಿ ವಿಸ್ತಾರವಾಗಿ ಹರಡಿಕೊಂಡಿವೆ. ಗುಲಬರ್ಗಾದಿಂದ ಬೆಂಗಳೂರಿಗೆ ಹೋಗುವ ಹೆದ್ದಾರಿಗೆ ಹೊಂದಿಕೊಂಡ ಸುರಪುರ ಈ ತಾಲ್ಲೂಕಿನ ಉತ್ತರಕ್ಕೆ ಜೇವರ್ಗಿ, ಪೂರ್ವಕ್ಕೆ ಶಹಾಪುರ ತಾಲೂಕುಗಳಿವೆ, ದಕ್ಷಿಣದಲ್ಲಿ ಹರಿದು ಹೋಗುವ ಕೃಷ್ಣಾನದಿ ಈ ತಾಲೂಕನ್ನು ರಾಯಚೂರು ಜಿಲ್ಲೆಯಿಂದ ಪ್ರತ್ಯೇಕಗೊಳಿಸುತ್ತದೆ. ಅಲ್ಲದೇ ಪಶ್ಚಿಮಕ್ಕೆ ವಿಜಾಪುರ ಜಿಲ್ಲೆಯ ತಾಲ್ಲೂಕುಗಳ ಸೀಮೆಯನ್ನು ಹೊಂದಿದೆ. ಇವು ಸುರಪುರ ತಾಲ್ಲೂಕಿನ ಗಡಿಗಳನ್ನು ನಿರ್ಧರಿಸುತ್ತವೆ. ಸುರಪುರ ತಾಲ್ಲೂಕು ಯಾದಗಿರಿ, ರಾಯಚೂರು ಮತ್ತು ವಿಜಾಪುರ ಜಿಲ್ಲೆಗಳಿಗೆ ಮಧ್ಯದಲ್ಲಿದೆ. ಕೋಟೆ ಕೊತ್ತಲಗಳಿಂದ, ಅರಮನೆಗಳಿಂದ ಶೋಭಿಸುವ ಐತಿಹಾಸಿಕ ನಗರ ಸುರಪುರ ಕಂಡವರ ಕಣ್ಮನಗಳನ್ನು ಸೂರೆಗೊಂಡು ತಡೆದು ನಿಲ್ಲಿಸುತ್ತದೆ. ಸುರಪುರ ಒಂದು ಚಿಕ್ಕ ಪ್ರದೇಶವಾಗಿದೆ, ಹೀಗಾಗಿ ಮೈಸೂರು ಮತ್ತು ಸುರಪುರ ಪ್ರದೇಶಗಳು ತನ್ನದೆ ಆದ ವಿಶೇಷತೆಯನ್ನು ಹೊಂದಿರುವುದನ್ನು ಕಾಣಬಹುದು.

ಐತಿಹಾಸಿಕ :

ಮೈಸೂರು ಮತ್ತು ಸುರಪುರ ಇತಿಹಾಸ ಬಹಳ ವೈಶಿಷ್ಟತೆಯಿಂದ ಕೂಡಿದೆ, ಮೈಸೂರಿನ ಮೂಲ ಹೆಸರು "ಮಹಿಷಾಪುರಿ" ಎಂದು ಕರೆಯುತ್ತಿದ್ದರು, ನಂತರ ಮಹಿಷೂರು ಎಂಬ ಹೆಸರಿನಿಂದ ಮೈಸೂರು ಆಗಿ ಬದಲಾವಣೆಯಾಯಿತ್ತು. ಸುರಪುರ ಮೂಲ ಹೆಸರು "ಸಗರನಾಡು" ಎಂದು ಪುರಾಣದ ಕಾಲದಿಂದಲೂ ಕರೆಯುತ್ತಿದ್ದರು. ಮೈಸೂರು ಪ್ರದೇಶವು ೧೪ನೇ ಶತಮಾನದಲ್ಲಿ ಆರಂಭವಾಯಿತ್ತು. ಅದ್ದೇರೀತಿ ಸುಪರುರ ಪ್ರದೇಶವು ೧೬೩೬ ರಲ್ಲಿ ಆರಂಭವಾಯಿತ್ತು. ಇದರ ಪೂರ್ವದಲ್ಲಿ ಮೈಸೂರು ಪ್ರದೇಶವು ಮೊದಲು ಪ್ರಾರಂಭಗೊಂಡಿತ್ತು. ಇವೆರಡು ಸ್ಥಾಪನೆಯ ಪೂರ್ವದಲ್ಲಿ ಇವು ವಿಜಯನಗರ ಆಸ್ಥಾನಕ್ಕೆ ಸೇರಿದವು.

ಮೈಸೂರು ಆಳಿದವರು ಬ್ರಿಟೀಷರು, ಸುಲ್ತಾನರು ಮತ್ತು ಒಡೆಯರು ಆಳ್ವಿಕೆಯನ್ನು ನಡೆಸಿದ್ದಾರೆ. ಸುರಪುರ ಆಳಿದವರು ಶಾತವಾಹನರು, ಬಾದಾಮಿಯ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಹೈದರರು, ಬಹುಮನಿ ಸುಲ್ತಾನರು, ಆದಿಲ್ ಷಾಹಿಗಳು ಅಲ್ಲದೆ ಸುರಪುರದ ಗೋಸಲ ವಂಶದ ಶೂರ ನಾಯಕರು ಮತ್ತು ಕಂಪನಿ ಹಾಗೂ ನಿಜಾಮ ಸರಕಾರಗಳೂ ಇಲ್ಲಿ ತಮ್ಮ ಪ್ರಭುತ್ವದ ಪ್ರಾಬಲ್ಯವನ್ನು ಆಳಿದ್ದಾರೆ. ಇದ್ದರಿಂದ ಮೈಸೂರು ಚಿಕ್ಕ ಪ್ರದೇಶವಾದರೂ ಸುರಪುರದಲ್ಲಿ ಅನೇಕ ರಾಜರು ತಮ್ಮ ಆಡಳಿತ ನಡೆಸಿರುವುದನ್ನು ನೋಡಬಹುದು.

ಕಲಾವಿದರಿಗೆ ಪ್ರೋತ್ಸಾಹ :

ಹದಿನಾರನೇ ಶತಮಾನದಲ್ಲಿ ವಿಜಯನಗರ ಪತನವಾದ ನಂತರ ಅಲ್ಲಿನ ಕಲಾವಿದರು ಒಲಸೇ ಬೇರೆ ಪ್ರದೇಶಗಳಿಗೆ ಹೋಗುವುದು ಅನಿವಾರ್ಯವಾಗಿತ್ತು. ಅದರಲ್ಲಿ ಕೆಲವರು ವಿಜಯನರದ ದಕ್ಷಿಣದತ್ತ ಮೈಸೂರಿಗೆ ಹೋದರು, ಇನ್ನೂ ಕೆಲವರು ಉತ್ತರದತ್ತ ಸುರಪುರಕ್ಕೆ ಒಲಸೇ ಹೋದರು ಮತ್ತು ತಜಾವೂರಿಗೆ ಹೋಗಿ ರಾಜಾಶ್ರಯದಲ್ಲಿ ನೆಲೆಸಿದರು. ಮೈಸೂರಿಗೆ

ಹೋದ ಕಲಾವಿದರು ಸೋಮ ವಂಶದವರು ಮತ್ತು ಸುರಪುರಗೆ ಹೋದ ಕಲಾವಿದರು ದೇಶ, ವಿದೇಶದ ದೊರ ಸಂಪರ್ಕ ಮೂಲತ ಆಂಧ್ರ ಪ್ರದೇಶದ ರತ್ನಗಿರಿಯ ವರ್ಮಾ ವಂಶದವರು. ಮೈಸೂರು ಪ್ರದೇಶ ಶ್ರೀಮಂತವಾಗಿರುವುದರಿಂದ ಚಿತ್ರಕಲೆಗೆ ಹೆಚ್ಚು ಪ್ರೋತ್ಸಾಹ ನೀಡಿತ್ತಿದ್ದರು. ಆದರೆ ಸುರಪುರ ಒಂದು ಚಿಕ್ಕ ಪ್ರದೇಶವಾಗಿರುವುದರಿಂದ ಚಿತ್ರಕಲೆಗೆ ಪ್ರೋತ್ಸಾಹ ದೊರೆಯಲ್ಲಿಲವೆನ್ನಿಸುತ್ತದೆ. ಮೈಸೂರು ಸಾಂಪ್ರದಾಯಿಕ ಚಿತ್ರಕಲೆಯು ೧೯ನೇ ಶತಮಾನದಲ್ಲಿ ಬಹಳಷ್ಟು ಉಚ್ಚಾಯ (ಎತ್ತರದ) ಸ್ಥಿತಿಯಲ್ಲಿತ್ತು, ಇದಕ್ಕೆ ಕಾರಣ ಒಡೆಯರು ಕಲಾವಿದರಿಗೆ ಹೆಚ್ಚು ಗೌರವ ಮತ್ತು ಪ್ರೋತ್ಸಾಹ ನೀಡಿದ್ದರು. ಹಾಗೇ ಸುರಪುರ ಸಂಸ್ಥಾನವು ಕೂಡ ಕ್ರಿಶ ೧೭೫೨ ರಿಂದ ೧೮೫೭ರ ವರೆಗೆ 'ಸುವರ್ಣ ಯುಗ'ವೆಂದು ಕರೆಯಲಾಗುತ್ತಿತು, ಏಕೆಂದರೆ ರಾಜಾ ನಾಲ್ವಡಿ ವೆಂಕಟಪ್ಪ ನಾಯಕ ಆಳ್ವಿಕೆಯಲ್ಲಿ ಲಲಿತಕಲೆಗೆ ಹೆಚ್ಚು ಪ್ರೋತ್ಸಾಹ ನೀಡಿದ್ದರು.

ಮೈಸೂರ ಒಡೆಯರ ಆಡಳಿತದಲ್ಲಿ ಕಲಾವಿದರಿಗೆ ಪೂಜ್ಯ ಭಾವದಿಂದ ಗೌರವಿಸುತ್ತಿದ್ದರು, ಕಾರಣ ಮುಮ್ಮಡಿ ಕೃಷ್ಣರಾಜ ಒಡೆಯರು ಕೂಡ ಶ್ರೇಷ್ಠ ಕಲಾವಿದರಾಗಿದ್ದರು. ಇವರ ಆಡಳಿತದಲ್ಲಿ ಭಿತ್ತಿಚಿತ್ರ ರಚನೆ ಮಾಡುವುದು, ಕಲಾಕೃತಿಗಳ ರಚಿಸಿಸುವುದು, ಕಲಾ ಶಾಲೆಗಳನ್ನು ಸಹ ಪ್ರಾರಂಭಿಸಿದ್ದರು ಇದ್ದರಿಂದ ಸಾಂಪ್ರದಾಯಿಕ ಕಲೆಗಳು ಹೆಚ್ಚು ಬೆಳೆಯಲು ಪ್ರಮುಖವಾದ ಪಾತ್ರವಹಿಸಿವೆ. ಸುರಪುರ ಆಡಳಿತದಲ್ಲಿ ಕಲಾವಿದರಿಗೆ ಗೌರವ ಮತ್ತು ಪ್ರೋತ್ಸಾಹ ನೀಡಿದ್ದರು ಸಹಾ ಮೈಸೂರು ಒಡೆಯರ್‌ಷ್ಟು ಪ್ರಾಮುಖ್ಯತೆ ದೊರೆಯ ಬೇಕಾದಷ್ಟು ದೊರೆಯಲಿಲ್ಲವೆನ್ನಿಸುತ್ತದೆ. ಈ ಎರಡು ಆಡಳಿತ ವ್ಯವಸ್ಥೆಗಳ ನಡುವೆ ಅನೇಕ ವ್ಯತ್ಯಾಸಗಳನ್ನು ಆದರೆ ಸುರಪುರ ಶೈಲಿಯ ಚಿತ್ರಕಲೆ ನಾಲ್ಕು-ಐದು ಕಲಾವಿದರ ನಂತರ ಮುಂದುವರೆಯುವುದು ತುಂಬಾ ಕಷ್ಟವೆನಿಸುತ್ತದೆ. ಪ್ರಸುತ್ತ ಸಂದರ್ಭದಲ್ಲಿ ಮೈಸೂರು ಭಿತ್ತಿಚಿತ್ರಗಳು ಉತ್ತಮ ಸ್ಥಿತಿಯಲ್ಲಿರುವುದು ಕಾಣುತೇವೆ.

ರಚನಾ ವಿಧಾನ ಮತ್ತು ತಂತ್ರ

ಮೈಸೂರು ಸಾಂಪ್ರದಾಯಿಕ ಕಲಾಕೃತಿಗಳು ಮೊದಲು ಮರದ ಫಲಕ ಅಥವಾ ಕಾಗದಗಳ ಮೇಲೆ ಸೀಸದ ಕಡ್ಡಿ ಸಂಯೋಜನೆ ಸಿದ್ಧಗೊಳಿಸಿ ನಂತರ ಕಪ್ಪು, ಕಂದು ಬಣ್ಣಗಳಿಂದ ಕುಂಚದ ಮೂಲಕ ರೇಖೆಗಳನ್ನು ರಚಿಸುತ್ತಿದ್ದರು. ಹಿನ್ನೆಲೆಯ ವರ್ಣಗಳನ್ನು ತುಂಬಿದ ಮೇಲೆ ವಿಷಯದ ತಳಹದಿಯ ಮೇಲೆ ವರ್ಣಗಳ ವಿಂಗಡಣೆಯನ್ನು ಊಹಿಸಿಕೊಳ್ಳುತ್ತಿದ್ದರು. ಮುಖ್ಯ ವಸ್ತುವಿಗೆ ಅಲಂಕರಣ ವಿಧಾನವನ್ನು ಕಲಾವಿದರ ಸ್ಫೂರ್ತಿಗನುಗುಣವಾಗಿ ಪರಿಭಾವಿಸಿಕೊಳ್ಳುತ್ತಿದ್ದರು. ಜೆಸ್ಸೊ ಕೆಲಸವನ್ನು ಕುಂಚದ ಸಹಾಯದಿಂದ ನಿರ್ಮಿಸಿಕೊಳ್ಳುತ್ತಿದ್ದರು. ಜೆಸ್ಸೊ ಕೆಲಸಕ್ಕೆ ರೇವಣ ಚಿನ್ನಿ ಹಾಲು, ಸಫೇದ ಹಾಗೂ ಮರವಜ್ರದ ಮಿಶ್ರಣವನ್ನು ಚೆನ್ನಾಗಿ ಅರೆದು ಮುಲಾಮನ್ನು (ಮಕ್ಕಿ ಸಫೇದ) ತಯಾರಿಸಿಕೊಳ್ಳುತ್ತಾರೆ. ಈ ಭಾಗ ಒಣಗಿದ ನಂತರ ಬಂಗಾರದ ಲಿಫ್ ಅಂಟಿಸುವ ಭಾಗಕ್ಕೆ ಬೆಲ್ಲದ ನೀರನ್ನು ಸವರುತ್ತಾರೆ. ಬಿಸಿಲು ಜಾಸ್ತಿಯಾಗುವ ಮೊದಲು ಬಂಗಾರದ ಲಿಫ್ ಚಿತ್ರದಲ್ಲಿನ ಬೇಕಾದ ಭಾಗಕ್ಕೆ ಅಂಟಿಸುತ್ತಾರೆ. ಈ ಕ್ರಿಯೆಗೆ ಗಾಳಿ ಕಡಿಮೆ ಇರುವ ಬೆಳಗಿನ ಸಮಯ ಸೂಕ್ತ. ಬಂಗಾರದ ಲಿಫ್ ಶುದ್ಧ ಅಪರಂಜಿಯಿಂದ ತಯಾರಿಸಿದ ಅತ್ಯಂತ ತೆಳುವಾದ ಹಾಳೆಯೆನ್ನಬಹುದು. ಬಂಗಾರದ ಲಿಫ್ ಅಂಟಿಸಿದ ಮೇಲೆ ಇತರ ವರ್ಣಗಳಿಂದ ಅದರ ಮೇಲೆ ಗೆರೆಗಳನ್ನು

ಎಳೆಯುವುದಕ್ಕೆ ಮೊದಲು ಅಂಟವಾಳದ ಕಾಯಿಯ ನೀರನ್ನು ಸವರಬೇಕಾಗುವುದು ಈ ರೀತಿಯ ಎರಡು ಸಾಂಪ್ರದಾಯಿಕ ಶೈಲಿಗಳಲ್ಲಿ ನೋಡಬಹುದು.

ಚಿತ್ರಗಳ ವಿಷಯ ಬಳಕೆಯಲ್ಲಿ ಮೈಸೂರು ಸಾಂಪ್ರದಾಯಿಕ ಶೈಲಿಯ ಕಲಾಕೃತಿಗಳಲ್ಲಿ ಪುರಾಣ ಇತಿಹಾಸಗಳಿಗೆ ಸೇರಿದ ಅಸಂಖ್ಯಾತ ವಿಷಯಗಳನ್ನು ಬಳಸಿದ್ದಾರೆ. ಈ ಶೈಲಿಯಲ್ಲಿ ರೇಖೆಗಳು ಹಾಗೂ ಅಲಂಕರಣ ಭಾಗಗಳು ಚುಕ್ಕಾಣಿ ಚಿತ್ರಗಳ ಸಾಲಿನಲ್ಲಿ ಅದ್ವಿತೀಯವಾಗಿವೆ. ಹಾಗೇ ಸುರಪುರ ಆಸ್ಥಾನ ಕಲಾವಿದರಾದ ಗರುಡಾದ್ರಿ ಮನೆತನದವರಿಂದ ಚಿತ್ರಸಲ್ಪಟ್ಟ ಚಿತ್ರಗಳು ಹಲವು ಮಾಧ್ಯಮಗಳಲ್ಲಿವೆ. ಇವುಗಳಲ್ಲಿ ಹಾಳೆಯ ಮೇಲೆ ಬರೆದ ಚಿತ್ರಗಳು ಅತ್ಯಂತ ಉನ್ನತ ಮಟ್ಟದ್ದಾಗಿದ್ದು, ಕಿರೂರೂಪ ಮಾದರಿಯಲ್ಲಿವೆ. ಕೆಲವು ದೊಡ್ಡಗಾತ್ರದ ಚಿತ್ರಗಳೂ ಈ ಕಲೆಯಲ್ಲಿ ಕಂಡುಬರುತ್ತವೆ. ಈ ಎಲ್ಲ ಚಿತ್ರಗಳಲ್ಲಿ ಕೆಲವೇ ವರ್ಣಗಳನ್ನು ಪುನರಾವರ್ತಿಸಿದೆಯಾದರೂ ವಿನ್ಯಾಸ, ಅಲಂಕಾರಿಕೆಯಲ್ಲಿ ಕಲಾವಿದರು ಹೆಚ್ಚಿನ ಜಾಣ್ಮೆಯನ್ನು ತೋರಿಸಿದ್ದಾರೆ. ಚಿತ್ರಗಳಲ್ಲಿ ಬರುವ ಮನುಷ್ಯಾಕೃತಿಗಳ ಮೈಮೇಲಿನ ಆಭರಣಗಳು, ಸೀರೆ, ಕುಪ್ಪಸ, ತಲೆಗೆ ಸುತ್ತಿಕೊಂಡು ಪೇಟ, ಶಾಲು ಮುಂತಾದ ವಸ್ತ್ರಗಳ ಅಂಚುಗಳು ಮತ್ತು ನಕ್ಷೆಗಳು ಬಹು ಸುಂದರವಾಗಿ ಮೂಡಿಬಂದಿವೆ. ದೇವಾನು-ದೇವತೆಗಳ ಚಿತ್ರಗಳಲ್ಲಿನ ಹಿನ್ನೆಲೆಯ ಪ್ರಭಾವಳಿ, ಕೀರಿಟ ಸಂಯೋಜನೆಯ ಅನುಕೂಲಕ್ಕಾಗಿ ಮಾಡಿಕೊಂಡಿರುವ ಪಟ್ಟಿಕೆಗಳಲ್ಲಿ ಬಳಸಿರುವ ಬಂಗಾರದ ವರ್ಣ ಲೇಪನವು ಚಿತ್ರಗಳ ಸೌಂದರ್ಯವನ್ನು ಮತ್ತಷ್ಟು ಹೆಚ್ಚಿಸುತ್ತದೆ. ಚಿತ್ರಗಳಲ್ಲಿನ ಆಕೃತಿಗಳಿಗೆ ಅತ್ಯಂತ ತೆಳುವಾದ ಮತ್ತು ಸೂಕ್ಷ್ಮವಾದ ಬಾಹ್ಯ ರೇಖೆಗಳಿಂದ ಪೂರ್ಣಗೊಳಿಸಿರುವುದು ನೋಡುಗರಿಗೆ ಅತೀಂದ್ರಿಯ ಅನುಭವ ಕೊಡುತ್ತದೆ. ಚಿತ್ರಗಳಲ್ಲಿನ ಮನುಷ್ಯಾಕೃತಿಗಳನ್ನು ಗಮನಿಸಲು ಅವು ಸ್ವಲ್ಪಮಟ್ಟಿಗೆ ಲೇಪಾಕ್ಷಿಯ ಚಿತ್ರಗಳಲ್ಲಿನ ಮನುಷ್ಯಾಕೃತಿಗಳನ್ನು ಹೋಲುತ್ತವೆ.

ಪ್ರಭಾವ ಮತ್ತು ಪ್ರೇರಣೆ :

ದಖನಿ ಶೈಲಿಯ ಪ್ರೇರಣೆ ಮತ್ತು ಪ್ರಭಾವದಿಂದ ಮೈಸೂರು ಮತ್ತು ಸುರಪುರ ಸಾಂಪ್ರದಾಯಿಕ ಕಲಾಕೃತಿಗಳು ಬೆಳೆಯಲು ಕಾರಣವಾಯಿತು. ಮೈಸೂರು ಸಾಂಪ್ರದಾಯಿಕ ಚಿತ್ರಗಳಲ್ಲಿ ಪ್ರಮುಖವಾಗಿ ವಿಜಯನಗರದ ಭಿತ್ತಿಚಿತ್ರಗಳ ಆಕೃತಿಗಳ ಪ್ರಭಾವ ಮತ್ತು ಒಡೆಯರು ಧರಿಸುತ್ತಿರುವ ವೇಷ ಭೂಷಣಗಳು, ಆಭರಣಗಳು, ವಸ್ತುಗಳು ಇನ್ನೂ ಹಲವಾರು ರೀತಿಯ ಕಲಾಕೃತಿಗಳಲ್ಲಿ ಇವರ ಪ್ರಭಾವ ಅಥವಾ ಪ್ರೇರಣೆ ಬೀರಿದೆ ಎಂದು ಕಲಾಕೃತಿಗಳಲ್ಲಿ ನೋಡಬಹುದು. ಸುರಪುರ ಸಾಂಪ್ರದಾಯಿಕ ಚಿತ್ರಕಲೆಯಲ್ಲಿ ಪ್ರಮುಖವಾಗಿ ವಿಜಯನಗರದ ಮೂರ್ತಿ ಶಿಲ್ಪಗಳ ಪ್ರಭಾವ ಹೆಚ್ಚಾಗಿ ಬೀರಿದೆ ಎಂದು ಅಧ್ಯಯನದ ಮೂಲಕ ತಿಳಿಯಬಹುದು, ಕಾರಣ ಎಲ್ಲಾ ಚಿತ್ರಗಳಲ್ಲಿ ಮನುಷ್ಯಾಕೃತಿಗಳು ಕಾಲಿನಿಂದ ಅವುಗಳ ದೇಹ ಮತ್ತು ತಲೆ ಹಿಂದಕ್ಕೆ ವಾಲಿದಂತೆ ಕಾಣುತ್ತವೆ ಮತ್ತು ಮೂರ್ತಿ ಶಿಲ್ಪಗಳಲ್ಲಿದ ಆಭರಣದ ವಿನ್ಯಾಸವು ಎಥಾವತ್ತಾಗಿ ಕಲಾಕೃತಿಗಳಲ್ಲಿ ಚಿತ್ರಿಸಿದ್ದಾರೆ. ಸುರಪುರ ಚಿತ್ರಕಲೆಯು ವಿಜಯನಗರದ ಚಿತ್ರಕಲೆಯ ಒಂದು ಉಪ-ಚಿತ್ರಕಲೆ ಎಂದು ಕೆಲವು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಸುರಪುರ ಶೈಲಿ ವಿಜಯನಗರ ಶೈಲಿಯೊಂದಿಗೆ ಬಿಜಾಪುರ, ಮೊಘಲ್, ಹೈದ್ರಾಬಾದ, ಮರಾಠ ಹಾಗೂ ಸ್ಥಳಿಯ ಶೈಲಿಯ ಗುಣಲಕ್ಷಣಗಳನ್ನು ಬಂದಿವೆ.

ಇದ್ದರಿಂದ ಮೈಸೂರು ಸಾಂಪ್ರದಾಯಿಕ ಶೈಲಿಗಿಂತ ಸುರಪುರ ಸಾಂಪ್ರದಾಯಿಕ ಶೈಲಿಯಲ್ಲಿ ಅನೇಕ ಶೈಲಿಯ ಪ್ರಭಾವವನ್ನು ಬೀರಿವುದನ್ನು ಕಾಣಬಹುದು. ಎರಡು ಸಾಂಪ್ರದಾಯಿಕ ಕಲಾಕೃತಿಗಳಲ್ಲಿ ಧಾರ್ಮಿಕ ಕಥೆಗಳ ಮೇಲೆ ಚಿತ್ರಗಳನ್ನು ರಚಿಸಿರುವುದನ್ನು ಕಾಣಬಹುದು. ಪ್ರಮುಖವಾಗಿ ಸುರಪುರ ಕಲಾಕೃತಿಗಳಲ್ಲಿ ಮುಖದ ಬಾಗದಲ್ಲಿ ಪೋಟೋ ಅಂಟಿಸುವುದು ವಿಶೇಷವಾಗಿದೆ ಇದು ಬೇರೆ ಯಾವ ಶೈಲಿಯ ಕಲಾಕೃತಿಗಳಲ್ಲಿ ನೋಡಲು ಸಿಗುವುದಿಲ್ಲಾ.

ಮೈಸೂರು ಮತ್ತು ಸುರಪುರ ಸಾಂಪ್ರದಾಯಿಕ ಚಿತ್ರಗಳಲ್ಲಿ ಹೆಚ್ಚಾಗಿ ರಾಮಾಯಣ, ಮಹಾಭಾರತ, ಕೃಷ್ಣನ ಲೀಲೆಗಳು, ದೇವಾನು-ದೇವತಾ, ಪುರಾಣಗಳ ಕಥೆಗಳ ಮೇಲೆ ಚಿತ್ರಗಳ ರಚನೆಯಾಗಿವೆ. ಮೈಸೂರ ಚಿತ್ರಗಳಲ್ಲಿ ಒಡೆಯರ್ ಚಿತ್ರಗಳು ವಿಶೇಷವಾಗಿ ಕಾಣುತ್ತವೆ, ಅದರಂತೆ ಸುರಪುರ ಚಿತ್ರಗಳಲ್ಲಿ ರಾಜರ ವಂಶಸ್ಥರ ಚಿತ್ರಗಳು, ಅರಸರ ಚಿತ್ರಗಳು, ಧರ್ಮ ಗುರುಗಳು, ಮಠಾಧೀಶರ ಚಿತ್ರಗಳು ಪ್ರಮುಖವಾಗಿ ರಚಿಸುತ್ತಿದ್ದರು. ಪ್ರಸ್ತುತ ಮೈಸೂರು ಕಲಾಕೃತಿಗಳಲ್ಲಿ ಇಗಲು ಬಾಲ ಕೃಷ್ಣನ ಕಲಾಕೃತಿಗಳು ಪ್ರಚಲಿತ್ತದಲ್ಲಿವೆ.

ಕಲಾಕೃತಿಗಳ ಗುಣಲಕ್ಷಣಗಳು :

ಮೈಸೂರು ಸಾಂಪ್ರದಾಯಿಕ ಕಲಾಕೃತಿಗಳ ಪ್ರಮುಖ ಗುಣಲಕ್ಷಣಗಳೆಂದರೆ ಮುದ್ದ ಮುದ್ದಾಗಿ ದುಂಡಾಕಾರ ಆಕೃತಿಗಳು, ಮುಖದಲ್ಲಿ ಗದ್ದ ಭಾಗ, ಕಣ್ಣು ಅಗಲವಾಗಿ ಇರುವುದು, ತೂಗು ದೀಪಗಳು, ಗಾಜಿನ ಗೊಳಾಪು, ಗಡಿಯಾರ, ಮೇಜು, ಹೂದಾನಿ ಪ್ರಮುಖವಾಗಿ (ಜೆಸ್ಸೊ) ಚಿನ್ನದ ಲೇಪನ ಅಮೋಘವಾಗಿರುತ್ತದೆ. ಮತ್ತು ಆಕೃತಿಗಳ ಸಂಯೋಜನೆ, ವರ್ಣಗಳ ಸಂಯೋಜನೆ, ಚಿತ್ರಗಳಲ್ಲಿ ಪ್ರಾಣಿ, ಪಕ್ಷಿ, ನಿರ್ಸಗದ ಬಳಕೆ ಹೆಚ್ಚು ಕಲಾಕೃತಿಗಳಲ್ಲಿ ರಚಿಸಿರುವುದು ಕಾಣಬಹುದು. ಹಾಗೇ ಸುರಪುರ ಕಲಾಕೃತಿಗಳಲ್ಲಿ ಆಕೃತಿಗಳಲ್ಲಿ ಬಾಹ್ಯ ರೇಖೆಗಳಿಂದ ಅತಿ ಸೂಕ್ಷ್ಮವಾದ ರೇಖೆಯಿಂದ ಕೂಡಿದೆ. ವಿಷಯಕ್ಕೆ ಸಂಬಂಧಿಸಿದ ಚಿತ್ರ ದೊಡ್ಡದಾಗಿ ರಚಿಸಿ ಇನ್ನಿತರೆ ಚಿತ್ರಗಳು ಚಿಕ್ಕ ಗಾತ್ರದಲ್ಲಿ ರಚಿಸಿರುವುದು ಕಲಾಕೃತಿಗಳಲ್ಲಿ ಕಾಣಬಹುದು. ಪ್ರಮುಖವಾಗಿ ಗಾಜಿನ ತೂಗು ದೀಪಗಳು, ಆಭರಣಗಳು, ಆಕೃತಿಗಳ ಸಂಯೋಜನೆ, ವರ್ಣಗಳ ಸಂಯೋಜನೆ, ಪ್ರಾಣಿ, ಪಕ್ಷಿಗಳ ಚಿತ್ರಗಳು ಹೆಚ್ಚಾಗಿ ಕಲಾಕೃತಿಗಳಲ್ಲಿ ಕಾಣಬಹುದು. ಮೈಸೂರ ಶೈಲಿಯಲ್ಲಿ ಸೌಮ್ಯ ವರ್ಣಗಳನ್ನು ಬಳಸುತ್ತಿದ್ದರು, ಸುರಪುರ ಶೈಲಿಯಲ್ಲಿ ಉಷ್ಣ ವರ್ಣಗಳನ್ನು ಹೆಚ್ಚಾಗಿ ಬಳಸುತ್ತಿದ್ದರು. ಎರಡು ಸಾಂಪ್ರದಾಯಿಕ ವರ್ಣಗಳ ಸಂಯೋಜನೆ ಅಮೋಘವಾದದ್ದು. ಮೈಸೂರು ಸಾಂಪ್ರದಾಯಿಕದಲ್ಲಿ ದೊಡ್ಡ ದೊಡ್ಡ ಪ್ರಮಾಣದ ಕಲಾಕೃತಿಗಳನ್ನುರಚಿಸಿರುವುದನ್ನು ನೋಡಬಹುದು, ಉದಾ: ರಾಮಾಯಣ, ಮಹಾಭಾರತ, ಕೃಷ್ಣನ ಲೀಲೆಗಳು. ದಶಾವತಾರಗಳ ಕಥೆಗಳು ಒಂದೇ ಚಿತ್ರದಲ್ಲಿ ರಚಿಸಿರುವುದನ್ನಾ ನೋಡಬಹುದು. ಸುರಪುರ ಕಲಾಕೃತಿಗಳಲ್ಲಿ ಚಿಕ್ಕ ಚಿಕ್ಕ ಗಾತ್ರದ ಕಲಾಕೃತಿಗಳು ನೋಡಬಹುದು. ಅದಕ್ಕೆ ವಿದ್ವಾಂಸರು ಈ ಕಲೆಯನ್ನು ಚಿಕಣಿ ಚಿತ್ರಕಲೆಗೆ ಸರಿಸಮ ಎಂದು ಹೇಳಿದ್ದಾರೆ. ವಿಶೇಷವಾಗಿ ಸುರಪುರ ಕಲಾಕೃತಿಗಳಲ್ಲಿ ಛಾಯಚಿತ್ರವನ್ನು ಕತ್ತರಿಸಿ ಮುಖದ ಭಾಗದಲ್ಲಿ ಅಂಟಿಸಿರುವುದು ಕಲಾಕೃತಿಗಳಲ್ಲಿ ಕಾಣುತ್ತೇವೆ.

ಮೈಸೂರ ಚಿತ್ರಗಳಲ್ಲಿ ವಿಜಯನಗರ ಮತ್ತು ಒಡೆಯರ್ ವಾಸ್ತುಶೈಲಿಗಳು ಕಾಣುತ್ತವೆ ಹಾಗೆ ಸುರಪುರ ಚಿತ್ರಗಳಲ್ಲಿ ವಿಜಯನಗರ ಮತ್ತು ದಖನ್ ಸುಲ್ತಾನರ್ ವಾಸ್ತುಶೈಲಿಯನ್ನು ಕಾಣಬಹುದು. ಎರಡು ಪ್ರದೇಶದ ಕಲಾವಿದರು ಕಟ್ಟಡದ ಮಾದರಿಯನ್ನು ಬಳಸಿಕೊಂಡು ಚಿತ್ರ ರಚಿಸಿದ್ದಾರೆ. ಮೈಸೂರ ಶೈಲಿಯಲ್ಲಿ ಚಿನ್ನದ ಲೇಪನದ ಬಳಕೆ ಹೆಚ್ಚಾಗಿ ಕಂಡುಬಂದರೆ ಸುರಪುರ ಚಿತ್ರಗಳಲ್ಲಿ ಚಿನ್ನದ ಲೇಪನ ಅತಿ ಸೂಕ್ಷ್ಮ ಹಾಗೂ ಮಿತವಾಗಿ ಬಳಸಲಾಗಿದೆ. ಕೀರಿಟ ಮತ್ತು ಆಭರಣಗಳಿಗೆ ಮಾತ್ರ ಸಿಮೀತವಾಗಿತ್ತು. ತೌಲನಿಕವಾಗಿ ನೋಡಿದ್ದಾಗ ಸುರಪುರಕ್ಕಿಂತ ಮೈಸೂರ ಶೈಲಿಯ ಹೆಚ್ಚು ಪ್ರಚಲಿತ ಮತ್ತು ಪ್ರಸಿದ್ಧಿ ಪಡೆದಿದೆ.

ಭಿತ್ತಿಚಿತ್ರಗಳು :

ಮೈಸೂರು ಮತ್ತು ಸುರಪುರ ಚಿತ್ರಕಲಾವಿದರು ಭಿತ್ತಿಚಿತ್ರಗಳ ರಚನೆಯಲ್ಲಿ 'ಫ್ರೆಶ್ಕೊಬ್ಯಾನೊ' ಮತ್ತು 'ಫ್ರೆಶ್ಕೊ ಸೆಕ್ಕೋ' ಎಂಬ ಎರಡು ರೀತಿಯ ವಿಧಾನದಲ್ಲಿ ರಚಿಸುತ್ತಿದ್ದರು. ಭಿತ್ತಿಚಿತ್ರಗಳ ರಚನೆಯಲ್ಲಿ ರಾಸಾಯನಿಕ, ಸಸ್ಯಮೂಲ, ನೈಸರ್ಗಿಕ ವರ್ಣಗಳು ಪ್ರಮುಖವಾಗಿ ಬಳಸುತ್ತಿದ್ದರು. ವರ್ಣಗಳು ನೆಸುಗೆಂಪು, ಹಸಿರು, ಹಳದಿ ಮತ್ತು ನೀಲಿ ವರ್ಣಗಳು ಉಪಯೋಗಿಸುತ್ತಿದ್ದರು. ಮೈಸೂರು ಪ್ರದೇಶ ಭಿತ್ತಿಚಿತ್ರಗಳನ್ನು ಪ್ರಮುಖವಾಗಿ, ಅರಮನೆ, ದೇವಾಲಯ, ಚರ್ಚ್‌ಗಳಲ್ಲಿ ಕಂಡರೆ ಸುರಪುರದಲ್ಲಿ ಮನೆ, ದೇವಾಲಯ, ಮಠ, ವಾಡೆ, ಅರಮನೆಗಳಲ್ಲಿ ನೋಡಬಹುದು. ಮೈಸೂರಗಿಂತ ಸುರಪುರದಲ್ಲಿ ಬಹಳ ಕಡಿಮೆ ಪ್ರಮಾಣದಲ್ಲಿ ಭಿತ್ತಿಚಿತ್ರಗಳು ಕಂಡುಬರುತ್ತವೆ. ಆದರೂ ಈ ಎರಡು ಪ್ರದೇಶದಲ್ಲಿ ಭಿತ್ತಿಚಿತ್ರ ರಚನೆಯ ರೇಖಾ ವಿನ್ಯಾಸ, ಸಂಯೋಜನೆ, ವರ್ಣಗಳ ವಿನ್ಯಾಸ ಬಳಕೆ ಸುಂದರವಾಗಿ ಕಂಡುಬರುತ್ತದೆ. ಇಲ್ಲಿ ವಿಶೇಷವಾಗಿ ಮೈಸೂರಿನಲ್ಲಿ ೧೭ನೇ ಶತಮಾನದಿಂದ ೨೦ನೇ ಶತಮಾನದ ಅಸುಪಾಸಿನಲ್ಲಿ ಧಾರ್ಮಿಕ, ದೇಶಿಯ ಗುಣಲಕ್ಷಣಗಳಿಂದ ಕೂಡಿದ ಭಿತ್ತಿಚಿತ್ರಗಳು, ಬ್ರಿಟೀಷರ್ ಪ್ರೇರಣೆಯಿಂದ "ರಿಯಾಲಿಸ್ಟಿಕ್" ಕಲಾಕೃತಿಗಳು ಮೂಡಿ ಬಂದಿವೆ. ಈ ಕಾರಣದಿಂದ ಹೆಚ್ಚು ಬದಲಾವಣೆಯಾದವು.

ಎರಡು ಪ್ರದೇಶದ ಭಿತ್ತಿಚಿತ್ರಗಳಲ್ಲಿ ರಾಜ ವಂಶಸ್ಥರ ಆಡಳಿತದ, ರಾಜ ಮನೆತನದ, ಸೈನಿಕರು, ಮನುಷ್ಯ, ಪ್ರಾಣಿ, ಪಕ್ಷಿ, ಹೂ, ಬಳಿ, ನಕ್ಷೆಗಳ, ನೈಸರ್ಗಿಕ ದೃಶ್ಯಗಳು ಇನ್ನೂ ಹಲವಾರು ರೀತಿಯ ಚಿತ್ರಗಳು ನೋಡಬಹುದು. ಮೈಸೂರ ಭಿತ್ತಿಚಿತ್ರಗಳಲ್ಲಿ ಒಡೆಯರ್ ಆಭರಣಗಳು, ಬಟ್ಟೆ ವಿನ್ಯಾಸ, ಮುದ ಮುದಾದ ಮುಖದ ಆಕೃತಿಗಳು, ಕೆಲವು ಕಲಾಕೃತಿಗಳಲ್ಲಿ ಬಂಗಾರದ ಲೇಪನವು ಕೊಡ ಕಾಣಬಹುದು. ಅದ್ದರಂತೆ ಸುರಪುರ ಭಿತ್ತಿಚಿತ್ರಗಳಲ್ಲಿ ಸ್ತ್ರೀಯರ ಆಕೃತಿಗಳಲ್ಲಿ ದೊಡ್ಡ ದೊಡ್ಡ ಬಾದಾಮಿಯಾಕಾರದ ಕಣ್ಣುಗಳು ಹೊಂದಿರುವುದು ಕಂಡುಬರುತ್ತವೆ. ಎಲ್ಲಾ ಚಿತ್ರಗಳಲ್ಲಿ ಮನಷ್ಯಾಕೃತಿಗಳು ಕಾಲಿನಿಂದ ಅವುಗಳ ದೇಹ ಮತ್ತು ತಲೆ ಹಿಂದಕ್ಕೆ ವಾಲಿದಂತೆ ಕಂಡುಬರುತ್ತವೆ. ತೌಲನಿಕವಾಗಿ ಅಧ್ಯಯನ ಮಾಡಿದ್ದಾಗ ಮೈಸೂರು ಮತ್ತು ಸುರಪುರ ಭಿತ್ತಿಚಿತ್ರಗಳ ಪರಸ್ಪರ ಸಾಮ್ಯ-ವೈಸಾಮ್ಯಗಳು ಕಂಡು ಬರುತ್ತವೆ.

ಕಲಾವಿದರು :

ಸೋಮ ವಂಶ ಕ್ಷತ್ರಿಯರೆಂದು ಪ್ರಸಿದ್ಧಿಗೆ ಬಂದಿರುವ ಚಿತ್ರಗಾರರ ಮನೆತನದವರು ಹಿಂದಿನ ಶತಮಾನಗಳಲ್ಲಿ ಗ್ವಾಲಿಯರ್ ಕಡೆಯಿಂದ ಬಂದವರೆಂದು ಹೇಳಲಾಗಿದೆ. ಇವರು ನಿಮಿಷಾಂಬ ದೇವಿಯ ಭಕ್ತರು. ಈಗ ಮಹಾರಾಷ್ಟ್ರದ ಕೆಲವು ನಗರಗಳಲ್ಲಿ, ಕರ್ನಾಟಕದ ಒಂದೆರಡು ನಗರಗಳಲ್ಲಿ ಮುಖ್ಯವಾಗಿ ಶ್ರೀರಂಗಪಟ್ಟಣದಲ್ಲಿ ನಿಮಿಷಾಂಬ ದೇವಿಯ ದೇವಸ್ಥಾನಗಳು ಸ್ಥಾಪಿತವಾಗಿವೆ. ಸೋಮ ವಂಶ ಕ್ಷತ್ರಿಯ ಕಲಾವಿದರು ರಾಜಾಶ್ರಯದಲ್ಲಿ ಉನ್ನತ ಸ್ಥಾನ ಪಡೆದಿದ್ದುದರಿಂದ ಸಮಾಜದಲ್ಲಿ ಗೌರವವನ್ನು ಪಡೆದಿದ್ದಾರೆ. ಪ್ರಸ್ತುತ ಮೈಸೂರು ಸಾಂಪ್ರದಾಯಿಕ ಶೈಲಿಯ ಚಿತ್ರಕಲೆಯು ವಿಶ್ವವಿಖ್ಯಾತಿ ಪಡೆದವು ಹೀಗಾಗಿ ರಾಜ್ಯ ಮತ್ತು ಹೊರರಾಜ್ಯದಲ್ಲಿ ಈ ಸಾಂಪ್ರದಾಯಿಕ ಶೈಲಿಯನ್ನು ಮುಂದುವರಿಸಿಕೊಂಡು ಬರುವ ಕಲಾವಿದರ ಸಂಖ್ಯೆ ಹೆಚ್ಚಾಗಿದೆ, ಅದಲ್ಲದೆ ಹವ್ಯಾಸಿ ಕಲಾವಿದರ ಸಂಖ್ಯೆಯು ಹೇರಳವಾಗಿದ್ದು. ಇದು ಅನೇಕ ಜನ ಕಲಾವಿದರಿಗೆ ಜೀವನೊಪಾಯಗಿಕೊಂಡು ಬಂದರೆ ಇದ್ದು ಕಲಾವಿದರಿಗೆ ಹವ್ಯಾಸದ ಹಿನ್ನೆಲೆಯಲ್ಲಿ ಬೆಳೆಯುತ್ತಿರುವುದನ್ನು ಕಾಣುತ್ತವೆ. ಸುರಪುರ ಸಾಂಪ್ರದಾಯಿಕ ಶೈಲಿಯ ಚಿತ್ರಕಲೆಯು ವಿಶ್ವವಿಖ್ಯಾತಿ ಪಡೆದಿದೆ ಆದರೂ ಕಲಾವಿದರ ಸಂಖ್ಯೆ ಅತೀ ವಿರಳ ಅದರಲ್ಲಿ ಈ ಕಲೆಯನ್ನು ಬೆಳೆಸುತ್ತಿರುವುದು ಮತ್ತು ಸಂರಕ್ಷಣೆ ಮಾಡುತ್ತಿರುವವರು ಕಲಬುರ್ಗಿಯ ವಿಜಯ ಹಾಗರಗುಂಡಗಿಯವರು ಅದರಿಂದ ಮೈಸೂರು ಶೈಲಿಯು ಹೆಚ್ಚು ಪ್ರಸಿದ್ಧಿಯನ್ನು ಪಡೆದಿದೆ ಎಂದು ಹೇಳಬಹುದು. ಸುರಪುರ ಶೈಲಿಯಲ್ಲಿ ಕಲಾವಿದರ ಕುರಿತು ಯಾವುದೆ ಹೆಚ್ಚಿನ ಮಾಹಿತಿ ದೊರೆಯುವುದಿಲ್ಲ.

ಮೈಸೂರು ಮತ್ತು ಸುರಪುರ ಕಲಾಕೃತಿಗಳಲ್ಲಿರುವ ವ್ಯತ್ಯಾಸಗಳು :

ರಾಧ ಕೃಷ್ಣ

ಸುರಪುರ ಶೈಲಿಯ ರಾಧ ಕೃಷ್ಣ ಕಲಾಕೃತಿಯಲ್ಲಿ ಕೃಷ್ಣನು ತನ್ನ ಪ್ರೇಯಸಿಯೋಡನೆ ರಾಸಲೀಲಾ ಮಾಡುತ್ತಿರುವ ದೃಶ್ಯವನ್ನು ಕಾಣಬಹುದು. ಇಲ್ಲಿ ಕೃಷ್ಣನ ಮೈ ಬಣ್ಣ ಜಾಂಬಳಿ, ರಾಧೆಯ ಮೈ ಬಣ್ಣ ಗುಲಾಬಿ ಬಣ್ಣವಾಗಿದ್ದು. ಈ ಕಲಾಕೃತಿಯಲ್ಲಿ ಬಾಹ್ಯ ರೇಖೆಗಳು ಅತೀ ಸೂಕ್ಷ್ಮ ರೇಖೆಗಳಾಗಿದ್ದು ಮತ್ತು ಜೆಸ್ಸೊ ಪ್ರಮಾಣ ಕಡಿಮೆಯಾಗಿ ಉಪಯೋಗಿಸಿ ಅದರ ಮೇಲೆ ಬಂಗಾರದ ಲೇಪನವನ್ನು ಅಮೋಘವಾಗಿ ಬಳಸಿದ್ದಾರೆ. ಪ್ರಮುಖವಾಗಿ ಗಾಢ ನೀಲಿ, ಕೆಂಪು, ಜಾಂಬಳಿ, ಕೇಸರಿ, ಹಳದಿ ವರ್ಣಗಳನ್ನು ಈ ಕಲಾಕೃತಿಯಲ್ಲಿ ಉಪಯೋಗಿಸಿದ್ದಾರೆ. ಇಲ್ಲಿ ಸಂಯೋಜನೆಗೆ ಹೆಚ್ಚು ಮಹತ್ವ ನೀಡಲಾಗಿದೆ. ಕಲಾಕೃತಿಯಲ್ಲಿ ಗಾಜಿನ ತೂಗು ದೀಪಗಳು, ಕಮಾನುಗಳಲ್ಲಿ ಅತೀ ಸುಂದರ ಮತ್ತು ಸೂಕ್ಷ್ಮವಾದ ವಿನ್ಯಾಸವನ್ನು ಚಿತ್ರಿಸಿದ್ದಾರೆ. ಕಾರ್ಪೆಟ ವಿನ್ಯಾಸವು ಸುಂದರವಾಗಿದ್ದರು ಕೂಡ ಉಷ್ಣ ವರ್ಣಗಳನ್ನು ಬಳಸಿದರಿಂದ ಕಣ್ಣಿಗೆ ಆಕರ್ಷಿಸುತ್ತವೆ.

ಮೈಸೂರು ಶೈಲಿಯ ರಾಧ ಕೃಷ್ಣ ಕಲಾಕೃತಿಯಲ್ಲಿ ಕೃಷ್ಣನು ತನ್ನ ಪ್ರೇಯಸಿಯಾದ ರಾಧ ಮತ್ತು ಗೋಪಿಯರನ್ನು ತೋಡೆಯ ಮೇಲೆ ಕೂಳಿಸಿಕೊಂಡು ಸಿಂಹಾಸನದ ಮೇಲೆ ಕೂಳಿತಿರುವ ದೃಶ್ಯವನ್ನು ಕಾಣಬಹುದು. ಕಲಾಕೃತಿಯಲ್ಲಿ ಕೃಷ್ಣ, ರಾಧ, ಗೋಪಿಯರ ಮೈ ಬಣ್ಣ ಗುಲಾಬಿ ವರ್ಣಗಳಿಂದ ರಚಿಸಿದ್ದಾರೆ. ಜೆಸ್ಸೊ ಮತ್ತು ಬಂಗಾರದ ಲೇಪನವನ್ನು ಕಲಾಕೃತಿಯ ಆಕೃತಿಗಳಲ್ಲಿ

ಮತ್ತು ಕಮಾನುಗಳಲ್ಲಿ ಸುಂದರವಾಗಿ ಕಾಣುವಂತೆ ರಚಿಸಿದ್ದಾರೆ, ಪ್ರಮುಖವಾಗಿ ಕೆಂಪು, ನೀಲಿ, ಹಸಿರು, ಕೇಸರಿ ವರ್ಣಗಳನ್ನು ಬಳಸಿಕೊಂಡು ಕಲಾಕೃತಿಯನ್ನು ಚಿತ್ರಿಸಿದ್ದಾರೆ. ಕಮಾನಿನಲ್ಲಿ ಹಳದಿ ಬಣ್ಣದ ಪರದೆ ಮತ್ತು ಹೂ ಬಳ್ಳಿಯ ವಿನ್ಯಾಸಗಳನ್ನು ಬಳಸಿಕೊಂಡಿದ್ದಾರೆ. ಆಭರಣ ಮತ್ತು ವೇಷಭೂಷಣ ವಿನ್ಯಾಸದಲ್ಲಿ ಮುತ್ತು, ಹವಳಗಳ ಹಾಗೇ ಬಿಳಿ ಬಣ್ಣದ ಚುಕ್ಕಿಗಳನ್ನು ಇಡಲಾಗಿದೆ. ಇದ್ದರಿಂದ ಕಲಾಕೃತಿಯು ಸುಂದರವಾಗಿ ಕಾಣುತ್ತಿದೆ.

ಎರಡು ಕಲಾಕೃತಿಗಳಲ್ಲಿ ಸಂಯೋಜನೆ ಬಹಳ ಸುಂದರವಾಗಿ ರಚಿಸಿದ್ದಾರೆ, ಆದರೂ ಕೆಲವು ವ್ಯತ್ಯಾಸಗಳನ್ನು ಕಾಣಬಹುದು. ಅವುಗಳೆಂದರೆ ಮೈಸೂರ ಕಲಾಕೃತಿಯಲ್ಲಿ ಬಾಹ್ಯ ರೇಖೆಗಳು ದಪ್ಪವಾಗಿ, ಸುರಪುರ ಕಲಾಕೃತಿಯಲ್ಲಿ ಬಾಹ್ಯ ರೇಖೆಗಳು ಅತೀ ಸೂಕ್ಷ್ಮವಾಗಿ ರಚಿಸಿದ್ದು ಇಲ್ಲಿ ರೇಖೆಗೆ ಹೆಚ್ಚು ಮಹತ್ವ ನೀಡಲಾಗಿದೆ. ಮೈಸೂರು ಶೈಲಿಯಲ್ಲಿ ರಾಧ ಕೃಷ್ಣ ಕಲಾಕೃತಿಯಲ್ಲಿ ಆಕೃತಿಗಳು ಮುದ್ದ ಮುದ್ದಾದ ಮತ್ತು ಗುಂಡಾಕಾರದ ಆಕೃತಿಗಳನ್ನು ಕಾಣಬಹುದು ಅದೆ ರೀತಿ ಸುರಪುರ ಶೈಲಿಯಲ್ಲಿ ರಾಧ ಕೃಷ್ಣ ಕಲಾಕೃತಿಯಲ್ಲಿ ವಿಜಯನಗರ ಶಿಲ್ಪಗಳ ಹಾಗೆ ಆಕೃತಿಗಳನ್ನು ಕಾಣಬಹುದು. ಮೈಸೂರು ಕಲಾಕೃತಿಯಲ್ಲಿ ಜೆಸ್ಸೊ ಬಳಕೆಯು ವೇಷ ಭೂಷಣ, ಕಮಾನು, ಆಭರಣಗಳಿಲ್ಲಿ ದಪ್ಪ ಪ್ರಮಾಣದಲ್ಲಿ ಬಳಸಿ ಇದರ ಮೇಲೆ ಬಂಗಾರದ ಲೇಪನವನ್ನು ಮಾಡಿದ್ದಾರೆ. ಆಭರಣಗಳು ಮೈಸೂರು ಒಡೆಯರು ಧರಿಸುತ್ತಿರುವ ಆಭರಣಗಳನ್ನು ಯಥಾವತ್ತಾಗಿ ರಚಿಸಿದ್ದಾರೆ. ಸುರಪುರದ ಕಲಾಕೃತಿಯಲ್ಲಿ ಜೆಸ್ಸೊ ಕುಂಚದ ಬಳಕೆಯಿಂದ ಅತೀ ಸೂಕ್ಷ್ಮವಾದ ರಚಿಸಿದ್ದಾರೆ. ಕಲಾಕೃತಿಯ ಆಭರಣಗಳು ವಿಜಯನಗರದ ಶಿಲ್ಪಗಳಲ್ಲಿರುವ ಆಭರಣಗಳನ್ನು ಯಥಾವತ್ತಾಗಿ ಬಳಸಿದ್ದು ಇದು ಅಮೋಘವಾಗಿದೆ. ಕಲಾಕೃತಿಯ ಆಭರಣಗಳು ವಿಜಯನಗರದ ಶಿಲ್ಪಗಳಲ್ಲಿರುವ ಆಭರಣಗಳನ್ನು ಯಥಾವತ್ತಾಗಿ ಬಳಸಿಕೊಂಡು ಚಿತ್ರಿಸಿದ್ದಾರೆ. ಬಂಗಾರದ ಬಳಕೆಯು ಕೀರಿಟ ಮತ್ತು ಆಭರಣಗಳಲ್ಲಿ ಮಾತ್ರ ಬಳಸಿದ್ದಾರೆ. ಬಂಗಾರದ ಬಳಕೆಯು ಮೈಸೂರು ಕಲಾಕೃತಿಯಲ್ಲಿ ಹೆಚ್ಚು ಬಳಸಿದ್ದರು ಕೂಡ ಸುರಪುರ ಕಲಾಕೃತಿಯಲ್ಲಿ ಮೀತಿಯಾಗಿ ಬಳಸಿದ್ದರು ಸಹಾ ಸುಂದರ ಮತ್ತು ಸೂಕ್ಷ್ಮ ಸುರಪುರದ ಕಲಾಕೃತಿಯಲ್ಲಿ ಕಾಣಬಹುದು. ಮೈಸೂರು ಕಲಾಕೃತಿಯಲ್ಲಿ ಮುತು, ಹವಳದ ಹಾಗೇ ಬಿಳಿ ಚುಕ್ಕಿಗಳನ್ನು ರಚಿಸಲಾಗಿದೆ. ಸುರಪುರ ಕಲಾಕೃತಿಯಲ್ಲಿ ಉಷ್ಣ ವರ್ಣಗಳನ್ನು ಬಳಸಿದ್ದಾರೆ ಹಾಗೇ ಮೈಸೂರು ಕಲಾಕೃತಿಯಲ್ಲಿ ಸೌಮ್ಯ ವರ್ಣಗಳನ್ನು ಬಳಸಿದ್ದಾರೆ. ಇವು ಎರಡು ಕಲಾಕೃತಿಗಳಲ್ಲಿರುವ ವ್ಯತ್ಯಾಸಗಳನ್ನು ನೋಡಬಹುದು.

ಶಿವ ಪಾರ್ವತಿ

ಸುರಪುರ ಶೈಲಿಯ ಶಿವ ಪಾರ್ವತಿ ಕಲಾಕೃತಿಯಲ್ಲಿ ಶಿವನು ತನ್ನ ಕುಟುಂಬ ಮತ್ತು ನಂದಿಯ ಜೊತೆಗೆ ಸಂಚಾರ ಹೋಗುತ್ತಿರುವ ದೃಶ್ಯವನ್ನು ಕಾಣಬಹುದು. ಕಲಾಕೃತಿಯಲ್ಲಿ ಶಿವನು ತನ್ನ ಭೂಜದ ಮೇಲೆ ಗಣೇಶನನ್ನು ಕುಡಿಸಿಕೊಂಡಿರುವುದು ಮತ್ತು ಪಾರ್ವತಿಯು ಕಾರ್ತಿಕನನ್ನು ಎತ್ತಿಕೊಂಡಿರುವುದು ವಿಶೇಷವಾಗಿದೆ. ಈ ಕಲಾಕೃತಿಯಲ್ಲಿ ಶಿವನ ಮೈ ಬಣ್ಣ ನೀಲಿಯಾಗಿದ್ದು, ಗಣೇಶನ ಮುಖ ಬಣ್ಣ ಕೆಂಪಾಗಿದು, ಪಾರ್ವತಿಯ ಮೈ ಬಣ್ಣವು ಹಸಿರಾಗಿರುವುದು ಮತ್ತು ನಂದಿ ಮೈ ಬಣ್ಣ ಬಿಳಿ ವರ್ಣಗಳಿಂದ ಕೂಡಿದೆ. ಕಲಾಕೃತಿಯ ಸಂಯೋಜನೆಯಲ್ಲಿ ಪ್ರಕೃತಿಯ ದೃಶ್ಯವನ್ನು

ಬಳಸಿಕೊಂಡಿದ್ದಾರೆ, ಅವು ಪರಿಸರ, ಆಕಾಶ, ಮೋಡ, ರಸ್ತೆ, ಹೂ ಬಳಿಗಳು ಕಲಾಕೃತಿಯಲ್ಲಿ ರಚಿಸಿದ್ದಾರೆ. ಇಲ್ಲಿ ಪ್ರಮುಖವಾಗಿ ಹಸಿರು, ಕೆಂಪು, ಕೇಸರಿ ವರ್ಣಗಳಿಂದ ಸುಂದರವಾದ ಕಲಾಕೃತಿಯನ್ನು ರಚಿಸಿದ್ದಾರೆ. ಆಕೃತಿಯಲ್ಲಿ ಧರಿಸಿರುವ ಬಟ್ಟೆಗಳಾದ ಧೋತಿ, ಸೀರೆ, ಕುಪ್ಪಸ, ಶಾಲುಗಳಲ್ಲಿ ವಿನ್ಯಾಸವು ಅತೀ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಜೆಸ್ಸೊ ಮತ್ತು ಬಂಗಾರದ ಲೇಪನ ಸುಂದರವಾದರು ಕೂಡ ಕಡಿಮೆ ಪ್ರಮಾಣದಲ್ಲಿ ಬಳಸಿದ್ದಾರೆ. ಒಟ್ಟಾರೆ ಕಲಾಕೃತಿಯಲ್ಲಿ ಶಿವನ ಪಾತ್ರ ಮುಖ್ಯವಾಗಿರುವುದರಿಂದ ದೊಡ್ಡ ಪ್ರಮಾಣದಲ್ಲಿ ಆಕೃತಿಯನ್ನು ರಚಿಸಿ ಉಳಿದ ಆಕೃತಿಗಳನ್ನು ಸಣ್ಣ ಪ್ರಮಾಣದಲ್ಲಿ ರಚಿಸಿದ್ದಾರೆ.

ಮೈಸೂರ ಶೈಲಿಯ ಶಿವ ಪಾರ್ವತಿ ಕಲಾಕೃತಿಯಲ್ಲಿ ಶಿವ ಪಾರ್ವತಿ ಊಯ್ಯಾಲೆ (ಜೋಕಾಲಿ) ಮೇಲೆ ಕುಳಿತಿರುವ ದೃಶ್ಯ ನೋಡಬಹುದು. ಕಲಾಕೃತಿಯಲ್ಲಿ ಶಿವನು ಪಾರ್ವತಿಯನ್ನು ತೊಡೆಯ ಮೇಲೆ ಕುಡಿಸಿಕೊಂಡಿರುವುದು ವಿಶೇಷವಾಗಿದೆ. ಶಿವ ಮತ್ತು ಪಾರ್ವತಿಯ ಮೈ ಬಣ್ಣ ಗುಲಾಬಿ ಬಣ್ಣವಾಗಿದೆ. ಶಿವನ ಕೈಯಲ್ಲಿ ಆಯುದಗಳು, ಜಿಂಕೆ ಮತ್ತು ಪಾರ್ವತಿ ಕೈಯಲ್ಲಿ ಖಬ್ಬು, ಆಯುದಗಳು, ದಾರ ಹಿಡಿದಿರುವುದು ವಿಶೇಷವಾಗಿದೆ. ನೀಲಿ, ಬಿಳಿ, ಕೆಂಪು, ಜಾಂಬಳಿ ವರ್ಣಗಳನ್ನು ಕಲಾಕೃತಿಯಲ್ಲಿ ಬಳಸಿದ್ದಾರೆ. ಪ್ರಮುಖವಾಗಿ ಜೆಸ್ಸೊ ದಪ್ಪ ಪ್ರಮಾಣದಲ್ಲಿ ಬಳಸಿದ್ದಾರೆ. ಅವು ಕಮಾನು, ಕಿರೀಟ, ಆಭರಣಗಳು, ಊಯ್ಯಾಲೆಗಳಲ್ಲಿ ಜೆಸ್ಸೊ ಬಳಸಿ ಅದರ ಮೇಲೆ ಬಂಗಾರದ ಲೇಪನವನ್ನು ಬಳಸಿದ್ದಾರೆ. ಕಲಾಕೃತಿಯ ಭಾಪೆಯ ಮೇಲೆ ವಿನ್ಯಾಸದ ಜೊತೆಗೆ ಸೇವಕರು ಮತ್ತು ಹಣ್ಣಿನ ತಟ್ಟೆಯ ಆಕೃತಿಗಳ ಸಂಯೋಜನೆಯನ್ನು ಸುಂದರವಾಗಿ ರಚಿಸಿದ್ದಾರೆ.

ಎರಡು ಕಲಾಕೃತಿಗಳಲ್ಲಿ ಸಂಯೋಜನೆ ಮತ್ತು ವಿನ್ಯಾಸಕ್ಕೆ ಹೆಚ್ಚು ಮಹತ್ವ ನೀಡಿದ್ದಾರೆ. ಆದರೂ ಕೆಲವು ವ್ಯತ್ಯಾಸಗಳನ್ನು ನೋಡಬಹುದು, ಅವುಗಳೆಂದರೆ ಮೈಸೂರ ಕಲಾಕೃತಿಯಲ್ಲಿ ಬಾಹ್ಯ ರೇಖೆಗಳು ದಪ್ಪಗಿದ್ದು, ಸುರಪುರ ಕಲಾಕೃತಿಯಲ್ಲಿ ಬಾಹ್ಯ ರೇಖೆಗಳು ಕುಂಚದ ಮೂಲಕ ಅತೀ ಸೂಕ್ಷ್ಮವಾದ ರೇಖೆಗಳನ್ನು ರಚಿಸಿರುವುದನ್ನು ನೋಡಬಹುದು. ಸುರಪುರದ ಶಿವ ಪಾರ್ವತಿ ಕಲಾಕೃತಿಯಲ್ಲಿ ಪರಿಸರ ದೃಶ್ಯದಲ್ಲಿ ನಿಂತಿರುವ ಹಾಗೇ ರಚಿಸಿದ್ದಾರೆ. ಆದರೆ ಮೈಸೂರು ಶಿವ ಪಾರ್ವತಿ ಕಲಾಕೃತಿಯಲ್ಲಿ ಅರಮನೆಯಲ್ಲಿ ಇರುವ ದೃಶ್ಯವನ್ನು ರಚಿಸಿದ್ದಾರೆ. ಸುರಪುರ ಶಿವ ಪಾರ್ವತಿ ಕಲಾಕೃತಿಯಲ್ಲಿ ಆಕೃತಿಗಳು ಉದ್ದನೆಯ ದೇಹ ಮತ್ತು ವಿಜಯನಗರ ಶೈಲಿ, ಶಿಲ್ಪದ ರೀತಿಯಲ್ಲಿ ರಚಿಸಿದ್ದಾರೆ, ಹಾಗೇ ಬಟ್ಟೆ ವಿನ್ಯಾಸವು ಮರಾಠರ ಶೈಲಿಯ ಸೀರೆ, ಧೋತ್ತಿ ಮತ್ತು ಕುಪ್ಪಸಗಳನ್ನು ರಚಿಸಿದ್ದಾರೆ. ಅದ್ದರಂತೆ ಮೈಸೂರು ಶಿವ ಪಾರ್ವತಿ ಕಲಾಕೃತಿಯಲ್ಲಿ ಮುದ್ದ ಮುದ್ದಾದ ಆಕೃತಿಯ ಮುಖಗಳು ಗುಂಡಾಕರದ ದೇಹವನ್ನು ನೋಡಬಹುದು. ಮೈಸೂರು ಕಲಾಕೃತಿಯಲ್ಲಿ ಧರಿಸಿರುವ ಧೋತ್ತಿ ಮತ್ತು ಪಾರ್ವತಿ ಧರಿಸಿರುವ ಕುಪ್ಪಸ, ಸೀರೆಗಳಲ್ಲಿ ವಿನ್ಯಾಸವು ಸುಂದರವಾಗಿದೆ. ಎರಡು ಕಲಾಕೃತಿಯಲ್ಲಿ ಸುರಪುರದ ಕಲಾಕೃತಿಗಳಲ್ಲಿ ವಿಜಯನಗರ ಶೈಲಿ ಅಷ್ಟೇ ಅಲ್ಲದೇ ಮರಾಠರ ಶೈಲಿ ಪ್ರಭಾವ ಬೀರಿರುವುದು ಈ ಕಲಾಕೃತಿಯಲ್ಲಿ ಕಾಣಬಹುದು. ಜೆಸ್ಸೊ ಮತ್ತು ಬಂಗಾರದ ಲೇಪನ ಸುರಪುರ ಕಲಾಕೃತಿಯಲ್ಲಿ ಕೀರಿಟ ಮತ್ತು ಆಭರಣಗಳ ಮೇಲೆ ಉಪಯೋಗಿಸಿದ್ದಾರೆ ಆದ್ದರೆ ಮೈಸೂರು ಕಲಾಕೃತಿಯಲ್ಲಿ ಆಭರಣ, ಕಮಾನು, ಊಯ್ಯಾಲೆ, ತಟ್ಟೆ ಮತ್ತು ಬಟ್ಟೆಯ ವಿನ್ಯಾಸದಲ್ಲೂ ಕೂಡ ಜೆಸ್ಸೊ ಮತ್ತು ಬಂಗಾರದವನ್ನು ಬಳಸಿದ್ದಾರೆ, ಇಲ್ಲಿ ಸುರಪುರ

ಕಲಾಕೃತಿಕ್ಕಿಂತ ಮೈಸೂರು ಕಲಾಕೃತಿಯಲ್ಲಿ ಜೆಸೊ ಮತ್ತು ಬಂಗಾರ ಲೇಪನ ಬಹಳ ಸುಂದರವಾಗಿ ಕಾಣುತ್ತಿದೆ. ಎರಡು ಕಲಾಕೃತಿಗಳಲ್ಲಿ ಸೌಮ್ಯ ವರ್ಣಗಳನ್ನು ಬಳಸಿದ್ದಾರೆ. ಇವು ಕೆಲವು ವ್ಯತ್ಯಾಸಗಳನ್ನು ಈ ಎರಡು ಕಲಾಕೃತಿಗಳಲ್ಲಿ ನೋಡಬಹುದು.

ಸರಸ್ವತಿ ಮತ್ತು ಶಾರದೆ

ಮೈಸೂರು ಶೈಲಿಯ ಸರಸ್ವತಿ ಕಲಾಕೃತಿಯಲ್ಲಿ ಸರಸ್ವತಿ ಸಿಂಹಾಸನದ ಮೇಲೆ ವೀಣೆಯನ್ನು ಹಿಡಿದ್ದು ಸಂಗೀತ ನುಡಿಸುತ್ತಿರುವ ದೃಶ್ಯ ಕಲಾಕೃತಿಯಲ್ಲಿ ನೋಡಬಹುದು. ಇಲ್ಲಿ ಸರಸ್ವತಿಯ ಮೈ ಬಣ್ಣ ಗುಲಾಬಿ ವರ್ಣವಾಗಿದ್ದು, ಕಲಾಕೃತಿಯಲ್ಲಿ ಕಮಾನು, ಸಿಂಹಾಸನ, ಆಭರಣಗಳು, ಆಯುದಗಳು ಮತ್ತು ಸೀರೆಯಲ್ಲಿ ಜೆಸ್ಸೊ ಬಳಸಿ ಅದರ ಮೇಲೆ ಬಂಗಾರದ ಲೇಪನವನ್ನು ಮಾಡಿದ್ದಾರೆ, ಇಲ್ಲಿ ಬಂಗಾರದ ಲೇಪನಕ್ಕೆ ಹೆಚ್ಚು ಮಹತ್ವ ನೀಡಿದ್ದಾರೆ. ಪ್ರಮುಖವಾಗಿ ಹಸಿರು, ಕೆಂಪು, ಜಾಂಬಳಿ ವರ್ಣಗಳನ್ನು ಉಪಯೋಗಿಸಿದ್ದಾರೆ. ವಿಶೇಷವಾಗಿ ಎರಡು ಕಡೆ ಕಾಮಾನಿನಲ್ಲಿ ಗಂಧರ್ವರನ್ನು ರಚಿಸಿದ್ದಾರೆ. ಸೀರೆಯ ಮೇಲೆ ವರ್ಣ ವಿನ್ಯಾಸವನ್ನು ಸುಂದರ ವಾಗಿ ಚಿತ್ರಿಸಿದ್ದು ಕಂಡು ಬರುತ್ತದೆ. ಛಾಪ್ಪೆಯಲ್ಲಿ ಹೂ ಬಳ್ಳಿಗಳನ್ನು ಸುಂದರವಾಗಿ ರಚಿಸಿದ್ದಾರೆ. ಆಭರಣಗಳಿಲ್ಲಿ ಮುತ್ತು, ಹವಳದ ಹಾಗೇ ಹಸಿರು ಚುಕ್ಕಿಗಳನ್ನು ಇಡಲಾಗಿದೆ. ಒಟ್ಟಾರೆ ಸಂಪೂರ್ಣ ಕಲಾಕೃತಿಯು ಸುಂದರ ವಿನ್ಯಾಸದಿಂದ ಕೂಡಿದೆ.

ಸುರಪುರ ಶೈಲಿಯ ಶಾರದೆ ಕಲಾಕೃತಿಯಲ್ಲಿ ಶಾರದೆಯು ವೀಣೆ ನುಡಿಸುತ್ತಿರುವ ದೃಶ್ಯವನ್ನು ನೋಡಬಹುದು. ಕಲಾಕೃತಿಯಲ್ಲಿ ಶಾರದೆಯ ಮೈ ಬಣ್ಣ ಬಿಳಿ ವರ್ಣದಿಂದ ರಚಿಸಿದ್ದಾರೆ. ಬಾಹ್ಯ ರೇಖೆಗಳು ಅತೀ ಸೂಕ್ಷ್ಮವಾಗಿದ್ದು ಮತ್ತು ಜೆಸ್ಸೊ ಬಳಸಿ ಅದರ ಮೇಲೆ ಬಂಗಾರದ ಲೇಪನವು ಕಿರೀಟ, ವೀಣೆ, ಕಮಾನುಗಳಲ್ಲಿ ಮಾತ್ರ ಸೂಕ್ಷ್ಮವಾಗಿ ಬಳಸಿದ್ದಾರೆ. ಪ್ರಮುಖವಾಗಿ ಗಂಧರ್ವರು ಮೇಲಿನಿಂದ ಹೂ ಚೆಲುತ್ತಿರುವುದು, ಗಾಜಿನ ತೂಗು ದೀಪಗಳು, ಸೇವಕರು, ನವಿಲುನ ಚಿತ್ರಗಳನ್ನು ಕಲಾಕೃತಿಯಲ್ಲಿ ನೋಡಬಹುದು. ಗಾಢ ನೀಲಿ, ಕಪ್ಪು, ತಿಳಿ ನೀಲಿ ಕೆಲವು ವರ್ಣಗಳನ್ನು ಬಳಸಿದ್ದಾರೆ. ಇಲ್ಲಿ ಶಾರದೆಯ ಸೀರೆ ಕಪ್ಪು ವರ್ಣದಿಂದ ರಚಿಸಿದ್ದಾರೆ, ಮುಖ್ಯವಾಗಿ ಈ ಆಕೃತಿಯು ದುಂಡಾಗಿರುವುದು ಇಲ್ಲಿ ವಿಶೇಷವಾಗಿದೆ. ಸಂಯೋಜನೆಗೆ ಹೆಚ್ಚು ಮಹತ್ವ ನೀಡಲಾಗಿದೆ.

ಎರಡು ಕಲಾಕೃತಿಯಲ್ಲಿ ಸಂಯೋಜನೆ ಬಹಳ ಸುಂದರವಾಗಿ ರಚಿಸಿದ್ದಾರೆ. ಅವುಗಳಲ್ಲಿ ಕೆಲವು ವ್ಯತ್ಯಾಸಗಳನ್ನು ನೋಡಬಹುದು. ಸರಸ್ವತಿ ಕಲಾಕೃತಿಯಲ್ಲಿ ಬಾಹ್ಯ ರೇಖೆಗಳು ದಪ್ಪವಾಗಿ ರಚಿಸಿದ್ದಾರೆ ಅದರಂತೆ ಶಾರದೆ ಕಲಾಕೃತಿಯಲ್ಲಿ ಸೂಕ್ಷ್ಮವಾದ ಬಾಹ್ಯ ರೇಖೆಗಳನ್ನು ಚಿತ್ರಿಸಿದ್ದಾರೆ. ವಿಶೇಷವೆಂದರೆ ಎರಡು ಕಲಾಕೃತಿಯಲ್ಲಿ ಆಕೃತಿಗಳು ಮುದ್ದು ಮುದ್ದಾಗಿ ಮತ್ತು ದುಂಡಾಕಾರದ ಆಕೃತಿಗಳನ್ನು ನೋಡಬಹುದು. ಸರಸ್ವತಿ ಕಲಾಕೃತಿಯಲ್ಲಿ ಜೆಸ್ಸೊ ಮತ್ತು ಬಂಗಾದ ಲೇಪನ ಬಳಕೆಯು ಆಕೃತಿಗಳಲ್ಲಿ, ಕಮಾನುಗಳಲ್ಲಿ, ಸಿಂಹಾಸನಗಳಲ್ಲಿ, ಬಟ್ಟೆಯ ವಿನ್ಯಾಸದಲ್ಲೂ ಕೂಡ ಹೆಚ್ಚು ಪ್ರಮಾಣದಲ್ಲಿ ಉಪಯೋಗಿಸಿದ್ದಾರೆ. ಶಾರದೆ ಕಲಾಕೃತಿಯಲ್ಲಿ ಜೆಸ್ಸೊ ಮತ್ತು ಬಂಗಾರದ ಬಳಕೆಯು ಕೀರಿಟ, ವೀಣೆ, ಕಮಾನಿನಲ್ಲಿ ಮಾತ್ರ ಬಳಸಲಾಗಿದೆ. ವಿಶೇಷವೆಂದರೆ ಶಾರದೆ ಕಲಾಕೃತಿಯಲ್ಲಿ

ನವಿಲು, ಸೇವಕರು, ಗಂಧರ್ವರು, ಗಾಜಿನ ತೂಗು ದೀಪಗಳು ಕಲಾಕೃತಿಯಲ್ಲಿ ಕಾಣಬಹುದು, ಸರಸ್ವತಿ ಕಲಾಕೃತಿಯಲ್ಲಿ ನೋಡಲು ಸಿಗುವುದಿಲ್ಲಾ. ಮೈಸೂರ ಕಲಾಕೃತಿಯಲ್ಲಿ ವಿಶೇಷವಾಗಿ ಮುತ್ತು, ಹವಳ ಹಾಗೇ ಹಸಿರು ಬಣ್ಣಗಳಿಂದ ಚುಕ್ಕಿಗಳನ್ನು ಚಿತ್ರಿಸಿದ್ದಾರೆ. ಶಾರದೆ ಕಲಾಕೃತಿಯಲ್ಲಿ ಉಷ್ಣ ವರ್ಣಗಳನ್ನು ಮತ್ತು ಸರಸ್ವತಿ ಕಲಾಕೃತಿಯಲ್ಲಿ ಸೌಮ್ಯ ವರ್ಣಗಳನ್ನು ಉಪಯೋಗಿಸಿದ್ದಾರೆ. ಇಲ್ಲಿ ಎರಡು ಕಲಾಕೃತಿಗಳ ವ್ಯತ್ಯಾಸಗಳನ್ನು ನೋಡಬಹುದು.

ನರಸಿಂಹ

ಸುರಪುರ ಶೈಲಿಯಲ್ಲಿ ನರಸಿಂಹನ ಕಲಾಕೃತಿಯಲ್ಲಿ ನರಸಿಂಹನು ರುದ್ರ ಅವತಾರ ತಾಳಿರುವ ದೃಶ್ಯವನ್ನು ನೋಡಬಹುದು. ಕಲಾಕೃತಿಯಲ್ಲಿ ನರಸಿಂಹನ ದೇಹವು ಮತ್ತು ಕಮಾನುಗಳನ್ನು ಸಂಪೂರ್ಣವಾಗಿ ಕುಂಚದ ಸಹಾಯದಿಂದ ಅತೀ ಸೂಕ್ಷ್ಮವಾಗಿ ಜೆಸ್ಸೊ ಬಳಸಿ ಅದರ ಮೇಲೆ ಬಂಗಾರದ ಲೇಪನವನ್ನು ಮಾಡಿ ಅಲ್ಲಿ ಕೆಂಪು ಬಣ್ಣದಿಂದ ಬಂಗಾದ ಲೇಪನದ ಮೇಲೆ ಗೇರೆಗಳನ್ನು ಎಳೆದಿದ್ದಾರೆ. ಕಲಾಕೃತಿಯಲ್ಲಿ ನರಸಿಂಹನ ಆಕೃತಿಯ ಜೊತೆಗೆ ವಿಕೃತವಾದ ಪ್ರಾಣಿಯ ಚಿತ್ರವನ್ನು ಕೂಡ ರಚಿಸಿದ್ದಾರೆ. ಬಾಹ್ಯ ರೇಖೆಗಳು ಕುಂಚದ ಮೂಲಕ ಅತೀ ಸಣ್ಣ ಮತ್ತು ಸೂಕ್ಷ್ಮವಾಗಿ ರಚಿಸಿದ್ದಾರೆ. ಕಲಾಕೃತಿಯಲ್ಲಿ ಸಂಯೋಜನೆಗೆ ಹೆಚ್ಚು ಮಹತ್ವ ನೀಡಲಾಗಿದೆ. ಕಮಾನುಗಳಲ್ಲಿ ಸೂಕ್ಷ್ಮವಾದ ಕುಂಚದಿಂದ ವಿನ್ಯಾಸವನ್ನು, ಹೂ ಬಳ್ಳಿಗಳನ್ನು ಚಿತ್ರಿಸಿದ್ದಾರೆ. ಪ್ರಮುಖವಾಗಿ ಈ ಕಲಾಕೃತಿಯಲ್ಲಿ ಗಾಜಿನ ತೂಗು ದೀಪಗಳು, ಗಂಧರ್ವರು, ಪರದೆಗಳು, ಹೂ ಬಳ್ಳಿಗಳನ್ನು ಕಲಾಕೃತಿಯಲ್ಲಿ ನೋಡಬಹುದು. ಗಾಢ ನೀಲಿ, ಕೇಸರಿ, ಹಸಿರು, ಗುಲಾಬಿ ವರ್ಣಗಳನ್ನು ಬಳಸಿಕೊಂಡು ಕಲಾಕೃತಿಯನ್ನು ಬಳಸಿದ್ದಾರೆ. ಇಲ್ಲಿ ಉಷ್ಣ ವರ್ಣಗಳನ್ನು ಹೆಚ್ಚಾಗಿ ಬಳಸಿಕೊಂಡಿದ್ದಾರೆ.

ಮೈಸೂರು ಶೈಲಿಯ ನರಸಿಂಹನ ಕಲಾಕೃತಿಯಲ್ಲಿ ನರಸಿಂಹನು ಹೀರಣ್ಯಕಶಪನನ್ನು ಸಂಹಾರಮಾಡುತ್ತಿರುವ ದೃಶ್ಯವನ್ನು ನೋಡಬಹುದು. ಕಲಾಕೃತಿಯಲ್ಲಿ ನರಸಿಂಹನು ಸ್ತಂಭದಿಂದ ಬಂದು ಹಿರಣ್ಯಕಶಪನನ್ನು ಸಂಹಾರ ಮಾಡುತ್ತಿರುವುದು ಮತ್ತು ಕಶಪನಮಗ ಪ್ರಹ್ಲಾದ ನಿಂತಿರುವುದನ್ನು ಕಲಾಕೃತಿಯಲ್ಲಿ ಸಂಯೋಜನೇಯು ಸುಂದರವಾಗಿ ರಚಿಸಿದ್ದಾರೆ. ನರಸಿಂಹ, ಕಶಪ ಮತ್ತು ಪ್ರಹ್ಲಾದನ ಮೈಬಣ್ಣವು ಗುಲಾಬಿ ವರ್ಣವಾಗಿದೆ. ಈ ಕಲಾಕೃತಿಯಲ್ಲಿ ನರಸಿಂಹನ ಕೈಯಲ್ಲಿ ಆಯುದಗಳನ್ನು ಹಿಡಿದುಕೊಂಡಿರುವ ದೃಶ್ಯ ಕಾಣಬಹುದು. ಇಲ್ಲಿ ಸ್ತಂಭಕ್ಕೆ ಮತ್ತು ಆಭರಣಗಳಿಗೆ ಜೇಸ್ಸೊ ಬಳಸಿ ಅದರ ಮೇಲೆ ಬಂಗಾರದ ಲೇಪನ ಮಾಡಿದ್ದಾರೆ. ನಿಸರ್ಗದ ದೃಶ್ಯದಲ್ಲಿ ಈ ಕಲಾಕೃತಿಯ ಆಕೃತಿಗಳನ್ನು ರಚಿಸಿದ್ದಾರೆ. ಪ್ರಮುಖ್ಯವಾಗಿ ನೀಲಿ, ಗುಲಾಬಿ, ಹಳದಿ, ಬಣ್ಣಗಳನ್ನು ಉಪಯೋಗಿಸಿದ್ದಾರೆ. ಆಭರಣಗಳಲ್ಲಿ ಮುತ್ತು, ಹವಳದ ಹಾಗೇ ಬಿಳಿ ಮತ್ತು ಹಸಿರು ಚುಕ್ಕೆಗಳನ್ನು ಇಡಲಾಗಿದೆ. ಸಂಪೂರ್ಣ ಕಲಾಕೃತಿಯು ಸೌಮ್ಯವರ್ಣಗಳಿಂದ ಕೂಡಿದೆ.

ಎರಡು ಕಲಾಕೃತಿಗಳು ಸಂಯೋಜನೆ ಬಹಳ ಸುಂದರವಾಗಿ ರಚಿಸಿದ್ದಾರೆ. ಇವುಗಳಲ್ಲಿ ಕೆಲವು ವ್ಯತ್ಯಾಸಗಳನ್ನು ನೋಡಬಹುದು. ಸುರಪುರ ಕಲಾಕೃತಿಯಲ್ಲಿ ಬಾಹ್ಯಾರೇಖೆಗಳು ಸೂಕ್ಷ್ಮವಾಗಿವೆ. ಹಾಗೇ ಮೈಸೂರು ಕಲಾಕೃತಿಯಲ್ಲಿ ದಪ್ಪ ರೇಖೆಗಳನ್ನು ಕಾಣಬಹುದು. ಇಲ್ಲಿ ವಿಭಿನ್ನವಾಗಿ ಸುರಪುರ

ಕಲಾಕೃತಿಯ ಸಂಪೂರ್ಣ ಜೇಸ್ಸೊ ಬಳಸಿ ಅದರ ಮೇಲೆ ಬಂಗಾರವನ್ನು ಬಳಸಿದ್ದಾರೆ. ಇಷ್ಟು ಜೇಸ್ಸೊ ಮತ್ತು ಬಂಗಾರ ಲೇಪನ ಬಳಕೆ ಯಾವ ಸುರಪುರ ಕಲಾಕೃತಿಗಳಲ್ಲಿ ನೋಡಲು ಸಿಗುವುದಿಲ್ಲಾ ಅದರಂತೆ ಮೈಸೂರು ನರಸಿಂಹ ಕಲಾಕೃತಿಯಲ್ಲಿ ನರಸಿಂಹನು ನಿಂತು ಹೀರಣ್ಯ ಕಶಪನನ್ನು ಸಂಹಾರ ಮಾಡುತ್ತಿರುವಾಗ ವಿಶೇಷ ಆಯುಧಗಳನ್ನು ನೋಡಬಹುದು. ಇಲ್ಲಿ ಸಂಪೂರ್ಣ ವರ್ಣಗಳಿಂದ ಕಲಾಕೃತಿಗಳನ್ನು ರಚಿಸಿದ್ದು ವಿಶೇಷವಾಗಿದೆ. ಸುರಪುರ ಕಲಾಕೃತಿಯಲ್ಲಿ ಗಂಧರ್ವರು, ಗಾಜಿನ ತೂಗು ದೀಪಗಳು, ಕಮಾನುಗಳನ್ನು ನೋಡಬಹುದು. ಇವು ಮೈಸೂರು ಕಲಾಕೃತಿಯಲ್ಲಿ ನೋಡಲು ಸಿಗುವುದಿಲ್ಲಾ, ಮೈಸೂರು ಕಲಾಕೃತಿಯಲ್ಲಿ ಸೌಮ್ಯವರ್ಣಗಳನ್ನು ಉಪಯೋಗಿಸಿದ್ದಾರೆ, ಆದರೆ ಸುರಪುರ ಕಲಾಕೃತಿಯಲ್ಲಿ ಉಷ್ಣವರ್ಣಗಳನ್ನು ಉಪಯೋಗಿಸಿದ್ದಾರೆ. ಸುರಪುರ ಕಲಾಕೃತಿಯಲ್ಲಿ ಕಮಾನು, ವೇದಿಕೆ, ಪ್ರಾಣಿಯನ್ನು ಬಳಸಿಕೊಂಡು ಚಿತ್ರ ರಚನೆ ಮಾಡಿದ್ದಾರೆ. ಇದೆರೀತಿ ಮೈಸೂರು ಕಲಾಕೃತಿಯಲ್ಲಿ ನಿಸರ್ಗದ ದೃಶ್ಯದಲ್ಲಿ ಕಲಾಕೃತಿಯನ್ನು ರಚಿಸಿದ್ದಾರೆ. ಮೈಸೂರ ಕಲಾಕೃತಿಯಲ್ಲಿ ವಿಶೇಷವಾಗಿ ಮುತ್ತು, ಹವಳ ಹಾಗೇ ಹಸಿರು ಬಣ್ಣಗಳಿಂದ ಚುಕ್ಕಿಗಳನ್ನು ಚಿತ್ರಿಸಿದ್ದಾರೆ. ಸುರಪುರ ಕಲಾಕೃತಿಯಲ್ಲಿ ನೋಡಲು ದೊರೆಯುವುದಿಲ್ಲ. ಇವು ಎರಡು ಕಲಾಕೃತಿಗಳಲ್ಲಿರುವ ವ್ಯತ್ಯಾಸಗಳನ್ನು ನೋಡಬಹುದು.

ಗಣೇಶ

ಸುರಪುರ ಶೈಲಿಯಲ್ಲಿ ಗಣೇಶನ ಕಲಾಕೃತಿಯಲ್ಲಿ ಗಣೇಶನ ಸಿಂಹಾಸನದ ಮೇಲೆ ಕುಳಿತಿರುವ ದೃಶ್ಯವನ್ನು ಕಾಣಬಹುದು. ಗಣೇಶನ ಮುಖ ಬಣ್ಣ ಕೆಂಪು ಮೈ ಬಣ್ಣ ನೀಲಿಯಾಗಿ ರಚಿಸಿದ್ದಾರೆ. ಎರಡು ಕಡೆ ಸೇವಕಿಯರು ನಿಂತಿರುವದನ್ನು ಕಾಣಬಹುದು. ಇಲ್ಲಿ ಪ್ರಮುಖವಾಗಿ ಬಾಹ್ಯಾ ರೇಖೆಗಳು ಸೂಕ್ಷ್ಮವಾಗಿ ರಚಿಸಿದ್ದಾರೆ. ಕಮಾನಿನಲ್ಲಿ ಬಹಳ ಸುಂದರವಾಗಿ ವಿನ್ಯಾಸವನ್ನು ರಚಿಸಿದ್ದಾರೆ. ಪ್ರಮುಖವಾಗಿ ಹಸಿರು, ಕೆಂಪು, ಹಳದಿ, ನೀಲಿ, ಜಾಂಬಳಿ ವರ್ಣಗಳನ್ನು ಬಳಸಿಕೊಂಡು ಅಮೋಘವಾದ ಕಲಾಕೃತಿಯನ್ನು ಚಿತ್ರಿಸಿದ್ದಾರೆ. ಕಮಾನಿನಲ್ಲಿ ಬಣ್ಣದ ಹೂಬಳ್ಳಿಯನ್ನು ರಚಿಸಿದ್ದಾರೆ. ಕಲಾಕೃತಿಯಲ್ಲಿ ತೂಗುವ ದೀಪಗಳನ್ನು ನೋಡಬಹುದು. ಸೇವಕಿಯರು ಧರಿಸಿರುವ ಬಟ್ಟೆಯು ಮರಾಠರ ಶೈಲಿಯಾಗಿದ್ದು ವಿನ್ಯಾಸವು ಸುಂದರವಾಗಿದೆ. ಇವರ ಕೈಯಲ್ಲಿ ಹೂಗಳನ್ನು ಹಿಡಿದುಕೊಂಡು ನಿಂತಿದ್ದಾರೆ. ಈ ಕಲಾಕೃತಿಯಲ್ಲಿ ಕೆಲವು ದಪ್ಪ ರೇಖೆಗಳನ್ನು ಕಾಣಬಹುದು. ಒಟ್ಟಾರೆ ಕಲಾಕೃತಿಯು ಸಂಯೋಜನೆಯು ಸುಂದರವಾಗಿದೆ.

ಮೈಸೂರು ಶೈಲಿಯ ಗಣೇಶನ ಕಲಾಕೃತಿಯಲ್ಲಿ ಗಣೇಶನು ಕಮಲದ ಮೇಲೆ ಕುಳಿತಿರುವ ದೃಶ್ಯವನ್ನು ನೋಡಬಹುದು. ಈ ಕಲಾಕೃತಿಯಲ್ಲಿ ಗಣೇಶನ ಮೈ ಬಣ್ಣ ಗುಲಾಬಿ ಬಣ್ಣವಾಗಿದ್ದು, ಬಂಗಾರ ಮತ್ತು ವಿನ್ಯಾಸಕ್ಕೆ ಹೆಚ್ಚು ಮಹತ್ವ ನೀಡಲಾಗಿದೆ. ಜೇಸ್ಸೂ ಬಳಕೆಯು ಕಮಾನು, ಆಭರಣಗಳು, ಬಟೇಗಳಲ್ಲಿ ಅತಿ ಸೂಕ್ಷ್ಮವಾಗಿ ಜೆಸ್ಸೂ ಉಪಯೋಗಿಸಿದ್ದಾರೆ. ಕೆಂಪು, ನೀಲಿ, ಹಳದಿ, ಹಸಿರು, ಜಾಂಬಳಿ, ವರ್ಣಗಳನ್ನು ಉಪಯೋಗಿಸಿಕೊಂಡು ಕಲಾಕೃತಿಯನ್ನು ರಚಿಸಿದ್ದಾರೆ. ಗಣೇಶನ ಕೈಯಲ್ಲಿ ಆಯುಧಗಳು, ಮುರಿದ ದಂತ, ಲಾಡು ಹಿಡಿದು ಕೊಂಡಿರುವುದು ಕಾಣಬಹುದು. ಗಣೇಶನ ಪ್ರೀಯಾ ವಾಹನ, ಮೂಶಕ, ಬಂಗಾರ ತಟ್ಟೆಗಳು, ಹಣ್ಣಿನ ತಟ್ಟೆಗಳನ್ನು ಬಳಸಿದ್ದಾರೆ.

ಹೂವಿನ ಹಾರ, ಹೊಟ್ಟೆಗೆ ಹಾವು ಸುತ್ತಿಕೊಂಡಿರುವುದು ನೋಡಬಹುದು. ಕಲಾಕೃತಿಗಳಲ್ಲಿ ಆಭರಣಗಳು ಕೆಂಪು ಮುತ್ತು, ಮತ್ತು ಹವಳದ ಹಾಗೆ ಜಾಂಬಳಿ ಚುಕ್ಕೆಗಳನ್ನು ಬಳಸಿದ್ದಾರೆ. ಓಟ್ಟಾರೆ ಕಲಾಕೃತಿಯನ್ನು ಸುಂದರವಾಗಿ ರಚಿಸಿದ್ದಾರೆ.

ಎರಡು ಕಲಾಕೃತಿಗಳ ಸಂಯೋಜನೆಯನ್ನು ಬಹಳ ಸುಂದರವಾಗಿ ರಚಿಸಿದ್ದಾರೆ. ಆದರೂ ಕೆಲವು ವ್ಯತ್ಯಾಸಗಳನ್ನು ನೋಡಬಹುದು ಅವುಗಳೆಂದರೆ ಮೈಸೂರು ಕಲಾಕೃತಿಗಳಲ್ಲಿ ಬಾಹ್ಯರೇಖೆಗಳು ದಪ್ಪವಾಗಿ, ಸುರಪುರ ಕಲಾಕೃತಿಯಲ್ಲಿ ಬಾಹ್ಯಾರೇಖೆಗಳು ಅತಿ ಸೂಕ್ಷ್ಮವಾಗಿ ರಚಿಸಿದ್ದಾರೆ. ಮೈಸೂರು ಮತ್ತು ಸುರಪುರ ಗಣೇಶನ ಕಲಾಕೃತಿಯಲ್ಲಿ ಮುಖದ ಬಣ್ಣ ವ್ಯತ್ಯಾಸವನ್ನು ನೋಡಬಹುದು. ಸುರಪುರದಲ್ಲಿ ಗಣೇಶನ ಮುಖ ಬಣ್ಣ ಕೆಂಪಾಗಿ ರಚಿಸಿರುತ್ತಾರೆ. ಆದರೆ ಮೈಸೂರು ಕಲಾಕೃತಿಯಲ್ಲಿ ಮುಖ ಮತ್ತು ದೇಹದ ಬಣ್ಣ ಒಂದೇ ವರ್ಣದಿಂದ ಕೂಡಿರುತ್ತದೆ. ಸುರಪುರ ಕಲಾಕೃತಿಯಲ್ಲಿ ಮರಾಠರ ಶೈಲಿಯ ಬಟ್ಟೆವಿನ್ಯಾಸವನ್ನು, ಮೈಸೂರು ಕಲಾಕೃತಿಯಲ್ಲಿ ವಿಜಯನಗರದ, ಒಡೆಯರ ಶೈಲಿಯ ಬಟ್ಟೆವಿನ್ಯಾಸವನ್ನು ಕಾಣಬಹುದು. ಸುರಪುರ ಕಲಾಕೃತಿಯಲ್ಲಿ ಗಾಜಿನ ದೀಪಗಳು, ಸೇವಕಿಯರು ಮತ್ತು ಗಂಧರ್ವರು ಕಾಣುತ್ತಾರೆ. ಆದರೆ ಮೈಸೂರು ಕಲಾಕೃತಿಯಲ್ಲಿ ಮೂಶಕ, ಬಂಗಾರದ ತಟ್ಟೆಗಳು, ಹೂವಿನ ಹಾರಗಳನ್ನು ನೋಡಬಹುದು. ಈ ಎರಡು ಕಲಾಕೃತಿಗಳಲ್ಲಿ ಉಷ್ಣ ವರ್ಣಗಳನ್ನು ಬಳಸಿದ್ದಾರೆ. ಮೈಸೂರು ಕಲಾಕೃತಿಯಲ್ಲಿ ಬಿಳಿ ಬಣ್ಣದ ಚುಕ್ಕೆಗಳು ಮತ್ತು ಜಾಂಬಳಿ ಬಣ್ಣದ ಚುಕ್ಕೆಗಳನ್ನು ಬಳಸಿಕೊಂಡಿರುವುದು ವಿಷೇಶವಾಗಿದೆ. ಈ ರೀತಿ ಕಲಾಕೃತಿಗಳಲ್ಲಿರುವ ವ್ಯತ್ಯಾಸಗಳನ್ನು ನೋಡಬಹುದು.

ಅಧ್ಯಾಯ-ಆರು

ಸಮಾರೋಪ

ಅಧ್ಯಾಯ ಆರು

ಸಮಾರೋಪ

ಕಲೆ ಎಂಬುದು ಮನುಷ್ಯನ ಆತಂರಿಕ ಮತ್ತು ಬಾಹ್ಯ ಬದುಕಿನ ನಿರ್ದೇಶನಗಳನ್ನು ನೀಡುತ್ತದೆ. ಜೊತೆಗೆ ಅವನ ಈ ಎರಡು ಬದುಕುಗಳನ್ನು ಸುಂದರವಾಗಿ ಕಟ್ಟಿಕೊಡುವ ಮಾಧ್ಯಮವೂ ಕೂಡ ಕಲೆಯೇ ಆಗಿರುತ್ತದೆ. ಈ ಹಿನ್ನಲೆಯಲ್ಲಿ ಕಲೆ ಮತ್ತು ಕಲಾವಿದ ಸಮಾಜದ ಆಗುಹೋಗುಗಳನ್ನು ನಿಯಂತ್ರಿಸುವ ಮತ್ತು ಸಮಾಜವನ್ನು ಸರಿದಾರಿಗೆ ತರುವ ಮತ್ತು ಸಮಾಜವನ್ನು ಅಪಾಯದಿಂದ ಕಾಪಾಡುವ ಜವಾಬ್ಧಾರಿಯುತ ನೆಲೆಯಲ್ಲಿ ಕಲಾವಿದನಿದ್ದಾನೆ, ಎಂದರೆ ಬಹುಶಃ ತಪ್ಪಾಗಲಾರದು. ಈ ನಿಟ್ಟಿನಲ್ಲಿ ಪ್ರಾಚೀನ ಕಾಲದ ಚಿತ್ರಕಲಾವಿದರು ತಮ್ಮ ಕೆಲಸವನ್ನು ಅತ್ಯಂತ ದಕ್ಷತೆಯಿಂದ ನಿರ್ವಹಿಸಿದ್ದಾರೆ ಎನ್ನುವುದಕ್ಕೆ ಕರ್ನಾಟಕ ತುಂಬೇಲ್ಲಾ ಹರಿದಾಡುತ್ತಿರುವ ಸುಂದರ ಸಾಂಪ್ರದಾಯಿಕ ಶೈಲಿಯ ಕಲಾಕೃತಿಗಳೇ ಸಾಕ್ಷಿ.

ಕಲೆಯು ಸುಸಂಸ್ಕೃತಿ ಜೀವನದ ಪ್ರತಿಬಿಂಬ ಮಾತ್ರವಲ್ಲದೆ ನಾಗರಿಕ ಜೀವನದ ತಳಹದಿಯು ಆಗಿದೆ. ಒಂದು ದೇಶದ ಸಾಂಸ್ಕೃತಿಯ ಇತಿಹಾಸದಲ್ಲಿ ಅಲ್ಲಿನ ಚಿತ್ರಕಲಾಕೃತಿಗಳು ಪ್ರಮುಖ ಪಾತ್ರವಹಿಸುತ್ತವೆ. ನಾಡಿನ ಕಲಾ ಶ್ರೀಮಂತಿಕೆಯನ್ನು ಹೆಚ್ಚಿಸುವಲ್ಲಿ ಗಮನಾರ್ಹ ಪಾತ್ರವಹಿಸುತ್ತವೆ.

ಕರ್ನಾಟಕದ ಕಲಾ ಇತಿಹಾಸದಲ್ಲಿ ಮೈಸೂರು ಮತ್ತು ಸುರಪುರ ಸಾಂಪ್ರದಾಯಿಕ ಕಲಾಕೃತಿಗಳ ತೌಲನಿಕ ಅಧ್ಯಯನದ ಅಂಶಗಳು ಕೂಡ ಇಲ್ಲಿ ಪ್ರಸ್ತುತ ಪಡಿಸಲಾಗಿದೆ. ಕರ್ನಾಟಕ ಪ್ರದೇಶದಲ್ಲಿ ಸಿಗುವ ಸಾಂಪ್ರದಾಯಿಕ ಕಲಾಕೃತಿಗಳು ತನ್ನದೆ ಆದ ವಿಶಿಷ್ಟ ಸ್ಥಾನವಿದ್ದು, ಇವುಗಳ ಮಹತ್ವವನ್ನು ಪ್ರಸುತ್ತ ಅಧ್ಯಯನವು ಕಟ್ಟಿಕೊಡಲಾಗಿದೆ. ಈ ಅಧ್ಯಾಯನವನ್ನು ಒಟ್ಟು ಆರು ಅಧ್ಯಾಯಗಳನ್ನಾಗಿ ಮಾಡಿಕೊಂಡು ವಿಶ್ಲೇಷಿಸಲಾಗಿದೆ. ಪ್ರತಿಯೊಂದು ಅಧ್ಯಾಯಗಳಲ್ಲಿ ಚರ್ಚಿತಗೊಂಡು ಗಮನಾರ್ಹ ಅಂಶಗಳನ್ನು ಕೆಳಗಿನಂತಿವೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವಿಧಾನ ಮತ್ತು ವ್ಯಾಪ್ತಿಯನ್ನು ಕುರಿತು ಹೇಳಲಾಗಿದೆ. ಇಲ್ಲಿ ಯಾವ ಕಾರಣಗಳಿಗೆ ಅಧ್ಯಯನವನ್ನು ಕೈಗೊಳ್ಳಲಾಯಿತು. ಇದರ ಮಹತ್ವವೇನು ಎಂಬುದನ್ನು ಹೇಳಲಾಗಿದೆ. ಅಲ್ಲದೆ ಸಾಮಾಜಿಕವಾಗಿ, ರಾಜಕೀಯವಾಗಿ, ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ, ಕಲಾತ್ಮಕವಾಗಿ ಈ ಅಧ್ಯಯನವು ಯಾವ ರೀತಿಯ ಪ್ರಸುತ್ತತೆಯನ್ನು ಪಡೆದುಕೊಂಡಿದೆ ಎಂಬುದನ್ನು ವಿವರಿಸಲಾಗಿದೆ. ಅಲ್ಲದೇ ಈ ಅಧ್ಯಯನದಲ್ಲಿ ಮೂಲ ಆಕರ ಸಾಮಗ್ರಿ, ಆನುಷಂಗಿಕ ಆಕರ ಸಾಮಗ್ರಿ ಇವುಗಳಿಂದ ಮಾಹಿತಿಯನ್ನು ಸಂಗ್ರಹಿಸಿಕೊಂಡು ಯಾವ ವಿಧಾನದಲ್ಲಿ ಅಧ್ಯಯನವನ್ನು ಕೈಗೊಳ್ಳಲಾಗಿದೆ ಎಂಬುವುದನ್ನು ತಿಳಿಸಲಾಗಿದೆ.

ಎರಡನೆಯ ಅಧ್ಯಾಯನವು ಭಾರತೀಯ ಸಾಂಪ್ರದಾಯಿಕ ಕಲಾಕೃತಿಗಳ ಐತಿಹಾಸಿಕ ನೋಟ ಕುರಿತು ವಿವರಿಸಲಾಗಿದೆ. ಈ ಅಧ್ಯಾಯದಲ್ಲಿ ಭಾರತದಲ್ಲಿ ಸಾಂಪ್ರದಾಯಿಕ ಕಲಾಕೃತಿಗಳ ಹುಟ್ಟು-ಬೆಳವಣಿಗೆ ಹೇಗೆ ಎಂಬುವುದು ವಿವರಿಸಿದೆ, ಇದರಲ್ಲಿ ಪ್ರಮುಖವಾದ ಚಿಕಣಿ ಚಿತ್ರಕಲೆ , ಮೊಘಲ್ ಶೈಲಿ, ರಾಜಸ್ಥಾನಿ ಮತ್ತು ಪಹಾಡಿ ಶೈಲಿಗಳು, ಮೇವಾರ್ ಶೈಲಿ, ಬುಂದಿ, ಕಿಷನ್‌ಗರ್, ಜೈಪುರ, ಬಾಸೋಲಿ, ಕಾಂಗ್ರಾ ಇನ್ನು ಹಲವಾರು ಸಾಂಪ್ರದಾಯಿಕ ಚಿತ್ರಕಲೆಗಳ ಉಗಮ ಮತ್ತು ಕಲಾಕೃತಿಗಳ ಪರಿಚಯ ನೀಡಲಾಗಿದೆ. ಆ ಪ್ರದೇಶದ ವಿಶಿಷ್ಟತೆ ಮತ್ತು ಕಲಾವಿದರ ಬಗ್ಗೆ ವಿವರಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಮೈಸೂರು ಕಲಾಕೃತಿಗಳ ಹುಟ್ಟು ಮತ್ತು ಬೆಳೆವಣಿಗೆ ಕುರಿತು ಹೇಳಲಾಗಿದೆ. ಈ ಅಧ್ಯಾಯದಲ್ಲಿ ಮೈಸೂರ ಪ್ರದೇಶದ ಹುಟ್ಟು, ಬೆಳವಣಿಗೆ, ಪರಿಸರ, ಆಡಳಿತ, ರಾಜ್ಯವಂಶಸ್ಥರ ಪರಿಚಯ, ಕಲೆಗಳಗೆ ನೀಡಿದ ಪ್ರೋತ್ಸಹಾ, ಕಲಾವಿದರಿಗೆ ನೀಡಿದ ಪ್ರೋತ್ಸಹಾ, ಒಡೆಯರು ತಮ್ಮ ಕಾಲದಲ್ಲಿ ರಚಿಸಿದ ಭಿತ್ತಿಚಿತ್ರಗಳ ರಚನೆ ಕುರಿತು ವಿವರವಾಗಿ ಹೇಳಲಾಗಿದೆ. ಮೈಸೂರ ಸಾಂಪ್ರದಾಯಿಕ ಕಲಾಕೃತಿಗಳ ಪರಿಚಯ, ರಚನಾ ವಿಧಾನ, ರೇಖೆ, ಸಂಯೋಜನೆ, ತಂತ್ರಗಾರಿಕೆ, ಶೈಲಿ, ಚಿತ್ರಗಾರರ ವಂಶ, ಕಲಾವಿದರು, ಕಲಾಕೃತಿಗಳ ವಸ್ತುವಿಷಯ ಮತ್ತು ಚಿತ್ರಗಳ ಮಹತ್ವ ಕುರಿತು ವಿವರವಾಗಿ ವಿವರಿಸಲಾಗಿದೆ. ಹಾಗೂ ಚಿತ್ರಕಲಾ ಪರಿಷತ್ತಿನ ಕೊಡುಗೆ, ಪ್ರಸ್ತುತ ಸ್ಥಿತಿ ಗತ್ತಿ ಬಗ್ಗೆ ಈ ಅಧ್ಯಾಯದಲ್ಲಿ ಹೇಳಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಸುರಪುರ ಕಲಾಕೃತಿಗಳ ಹುಟ್ಟು ಮತ್ತು ಬೆಳೆವಣಿಗೆ ಕುರಿತು ಹೇಳಲಾಗಿದೆ. ಈ ಅಧ್ಯಾಯದಲ್ಲಿ ಸುರಪುರ ಪ್ರದೇಶದ ಹುಟ್ಟು, ಬೆಳವಣಿಗೆ, ಆಡಳಿತ,

ರಾಜ್ಯವಂಶಸ್ಥರ ಪರಿಚಯ, ಕಲೆಗೆ ನೀಡಿದ ಪ್ರೋತ್ಸಹಾ, ಕಲಾವಿದರಿಗೆ ನೀಡಿದ ಪ್ರೋತ್ಸಹಾ, ಸುರಪುರ ತಮ್ಮ ಕಾಲದಲ್ಲಿ ರಚಿಸಿದ ಭಿತ್ತಿಚಿತ್ರಗಳ ರಚನೆ ಕುರಿತು ವಿವರವಾಗಿ ಹೇಳಲಾಗಿದೆ. ಸುರಪುರ ಸಾಂಪ್ರದಾಯಿಕ ಕಲಾಕೃತಿಗಳ ಪರಿಚಯ, ರಚನಾ ವಿಧಾನ, ರೇಖೆ, ಸಂಯೋಜನೆ, ತಂತ್ರಗಾರಿಕೆ, ಶೈಲಿ, ಚಿತ್ರಗಾರರ ವಂಶ, ಕಲಾಕೃತಿಗಳ ವಸ್ತು ಮತ್ತು ಚಿತ್ರಗಳ ಮಹತ್ವ ಕುರಿತು ವಿವರವಾಗಿ ವಿವರಿಸಲಾಗಿದೆ. ಸುರಪುರ ಚಿತ್ರಗಳ ಗುಣಲಕ್ಷಣ ಕುರಿತು ಹಾಗೂ ಪ್ರಸ್ತುತ ಸ್ಥಿತಿ ಗತ್ತಿ ಬಗ್ಗೆ ಈ ಅಧ್ಯಾಯದಲ್ಲಿ ಹೇಳಲಾಗಿದೆ.

ಐದನೇ ಅಧ್ಯಾಯವು ಮೈಸೂರ ಮತ್ತು ಸುರಪುರ ಸಾಂಪ್ರದಾಯಿಕ ಕಲಾಕೃತಿಗಳಲ್ಲಿನ ವ್ಯತ್ಯಾಸಗಳು. ಈ ಅಧ್ಯಾಯದಲ್ಲಿ ಮೈಸೂರ ಮತ್ತು ಸುರಪುರ ಸಾಂಪ್ರದಾಯಿಕ ಕಲಾಕೃತಿಗಳ ಕುರಿತಾದ ಸಾಮ್ಯ-ವೈಷಮ್ಯ, ಸಮಾನತೆ-ಅಸಮಾನತೆ, ವೈವಿಧ್ಯತೆಗಳನ್ನು ತೌಲನಿಕವಾಗಿ ವಿವರಿಸಿದೆ. ಇಲ್ಲಿ ಎರಡು ಪ್ರದೇಶದ ನಡುವೆ ಇರುವ, ರಾಜ್ಯ ವಂಶ್ಥರ ಆಡಳಿತ, ಕಲಾವಿದರಿಗೆ ನೀಡಿದ ಪ್ರೋತ್ಸಹಾಗಳ ವ್ಯತ್ಯಾಸಗಳನ್ನು ವಿವರಿಸಿ. ಹಾಗೇ ಎರಡೂ ಕಲಾಕೃತಿಗಳ ನಡುವೆ ಕಲಾಕೃತಿ ರಚನಾ ವಿಧಾನ, ಪ್ರಭಾವ, ಪ್ರೇರಣೆ, ತಂತ್ರಗಾರಿಕೆ, ಶೈಲಿ, ಗುಣಲಕ್ಷಣಗಳ ವ್ಯತ್ಯಾಸಗಳನ್ನು ಕುರಿತು ವಿಸ್ತಾರವಾಗಿ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಈ ಸಂಪ್ರಬಂಧವು ಕೊನೆಯ ಹಾಗೂ ಆರನೇ ಅಧ್ಯಾಯವು ಸಮಾರೊಪವಾಗಿದ್ದು ಒಟ್ಟು ಐದು ಅಧ್ಯಯನದಿಂದ ನಾನು ಕಂಡುಕೊಂಡಂತಹ ಹಲವು ಪ್ರಮುಖವಾದ ಫಲಿಗಳನ್ನು ಈ ಕೆಳಗಿನಂತಿವೆ.

ಅಧ್ಯಯನದ ಫಲಿತಗಳು

- ಭಾರತದಲ್ಲಿ ಸಾಂಪ್ರದಾಯಿಕ ಶೈಲಿಯ ಕಲಾಕೃತಿಗಳನ್ನು ರಾಜ ವಂಶಸ್ಥರ ಆಡಳಿತದಲ್ಲಿ ಹೆಚ್ಚು ಪ್ರೋತ್ಸಾಹಿಸಿರುವುದನ್ನು ಕಾಣಬಹುದು.
- ಮೈಸೂರು ಮತ್ತು ಸುರಪುರ ಸಾಂಪ್ರದಾಯಿಕ ಕಲಾಕೃತ್ರಿಗಳು ಹಲವು ವೈಶಿಷ್ಟತೆಗಳಿಂದ ಕೂಡಿದ್ದು ನಾಡಿನ ಕಲಾ ಇತಿಹಾಸದಲ್ಲಿ ತನ್ನದೇ ಆದ ಒಂದು ಪ್ರತ್ಯೇಕ ಛಾಪನ್ನು ಮೂಡಿಸಿವೆ.
- ಮೈಸೂರು ಮತ್ತು ಸುರಪುರ ರಾಜ್ಯರು ಕಲಾವಿದರನ್ನು ಪ್ರೋತ್ಸಾಹಿಸಿದನ್ನು ಈ ಅಧ್ಯಯನದಿಂದ ಕಾಣಬಹುದು.
- ಸಾಂಪ್ರದಾಯಿಕ ಶೈಲಿಯ ಕಲಾಕೃತಿಗಳಲ್ಲಿ ಪ್ರಮುಖವಾಗಿ ಎದ್ದು ಕಾಣುವುದು ಶ್ರೀಮಂತವಾದ ಬಾಹ್ಯ ರೇಖೆಗಳು ಇಲ್ಲಿ ಚಿತ್ರದ ಜೀವಾಳವೇ ರೇಖೆಯಾಗಿದ್ದು, ಕಲಾಕೃತಿಗಳ ಸಂಯೊಜನೆ, ವರ್ಣಗಳ ವಿಶಿಷ್ಠ ಇವು ಕಲಾವಿದನ ಕಲಾ ಕೌಶಲ್ಯವನ್ನು ಈ ಕಲಾಕೃತಿಗಳಲ್ಲಿ ಪರಿಚಯಿಸುತ್ತದೆ.
- ರಾಜಾಶ್ರಯದ ಕಲಾವಿದರು ರಾಜರ ಆಜ್ಞೆಯಂತೆ ಚಿತ್ರಕಲೆಗಳನ್ನು ರಚಿಸುವುದರ ಜೊತೆಗೆ ರಾಜರ ಮೇಲೆ ಇಟ್ಟ ಭಯ, ಭಕ್ತಿ, ಗೌರವದೊಂದಿಗೆ ತಮ್ಮ ಕೌಶ್ಯಲ, ಕಲಾ ಅರ್ಪಣಾಭಾವವನ್ನು ಗುರುತಿಸಬಹುದು.
- ಮೈಸೂರು ಅರಸರು ಎಲ್ಲಾ ಲಲಿತಕಲೆಗಳಿಗೂ ಸಾಕಷ್ಟು ಪ್ರೋತ್ಸಾಹ ನೀಡಿದ ಕಾರಣದಿಂದಾಗಿ ಸಂಗೀತ, ಸಾಹಿತ್ಯ, ನೃತ್ಯ, ನಾಟಕ, ವಾಸ್ತು ಶಿಲ್ಪ, ಚಿತ್ರಕಲೆ ಹೀಗೆ ಎಲ್ಲಾ ಕಲೆಗಳಿಗೆ ಏಕೈಕ

ಕೇಂದ್ರವಾಗಿದು ತನ್ನ ವರ್ಚಸ್ಸು ಇಂದಿಗೂ ಹಚ್ಚಿಕೊಳ್ಳುತ್ತಿರುವುದು ಒಂದು ಗಮನಾರ್ಯವಾದ ಅಂಶವಾಗಿದೆ.

- ಮೈಸೂರು ಮತ್ತು ಸುರಪುರ ಕಲಾಕೃತಿಗಳು ಅವಲೋಕಿಸಿದಾಗ ಕಾಣುವ ಭಿತ್ತಿಚಿತ್ರಗಳ ರಚನಾ ವಿಧಾನ, ವರ್ಣ ಸಂಯೋಜನೆ ಹಾಗೂ ತಂತ್ರಗಾರಿಕೆ ವಿಶಿಷ್ಟವೆನಿಸುತ್ತದೆ.
- ಎರಡು ಪ್ರದೇಶದ ಭಿತ್ತಿಚಿತ್ರಕಲೆಯ ಪರಂಪರೆಯಲ್ಲಿ ಧಾರ್ಮಿಕತೆಯ ಜೊತೆ ಸಾಮಾಜಿಕ ಅಂಶಗಳನ್ನು ಗುರುತ್ತಿಸುವುದರ ಜೊತೆಯಲ್ಲಿ ಕಲಾವಿದರ ತಾಳ್ಮೆ, ಸೌಂದರ್ಯ ಪ್ರಜ್ಞೆಯೊಂದಿಗೆ ಪಾಶ್ಚತ್ಯಕಲೆಗಳ ತಂತ್ರ, ವಿಧಾನವನ್ನು ನಮ್ಮವರು ಒದಗ್ಗಿಸಿ ಕೊಂಡು ಅಲ್ಲದೆ ಸ್ಥಳಿಯ ವಿಷಯ ಆಧಾರಿತ ಭಿತ್ತಿಚಿತ್ರಗಳು ಅದ್ಭುತವಾಗಿ ರಚಿಸಿರುವುದು ಕಂಡುಬರುತ್ತದೆ.
- ಕಳೆದು ಹೊದ ಒಂದು ಸಂಪ್ರದಾಯಿಕ ಚಿತ್ರಗಳನ್ನು ಪ್ರತಿನಿಧಿಸುವುದರಿಂದ ಇಂದಿನವರಿಗೆ ಹಿಂದಿನವರ ಪರಿಚಯವಾಗುದರಲ್ಲಿ ಈ ಸಾಂಪ್ರದಾಯಿಕ ಚಿತ್ರಗಳು ಒಂದು ಪ್ರಮುಖವಾದ ದೃಶ್ಯಮಾಧ್ಯಮವಾಗಿರುತ್ತದೆ.
- ಪ್ರಸ್ತುತ ಸಂದರ್ಭದಲ್ಲಿ ಸಾಂಪ್ರದಾಯಿಕ ಶೈಲಿಯ ಕಲಾವಿದರು ಸಮ್ಮಿಶ್ರಣ ಮಾದರಿಯಾ ಚಿತ್ರಗಳು ಕಂಡುಬರುತ್ತವೆ.
- ಈ ಅಧ್ಯಾಯನದಿಂದ ಮೈಸೂರ ಮತ್ತು ಸುರಪುರ ಸಂಸ್ಥಾಪಕರು ಲಲಿತಕಲೆಗಳಿಗೆ ಹೆಚ್ಚು ಪ್ರೋತ್ಸಾಹ ನೀಡಿರುದನ್ನು ಕಂಡುಬರುತ್ತದೆ.
- ಸುರಪುರ ಚಿತ್ರಕಲೆಗಳು ವಿನಾಶಿನದ ಅಂಚ್ಚಿನಲ್ಲಿದು ಇದಕ್ಕೆ ಪ್ರತೇಕ ಕಲಾ ಗ್ಯಾಲರಿ ಮಾಡಬೇಕು.
- ಈ ಅಧ್ಯಯನವು ಕಲಾತ್ಮಕ ಮತ್ತು ಐತಿಹಾಸಿಕ ಹೀಗೆ ಎರಡನ್ನು ಸಮಾನ ದೃಷ್ಟಿಕೊನದಿಂದ ನೊಡಲಾಗಿದೆ. ಇಲ್ಲಿ ಮೈಸೂರ ಮತ್ತು ಸುರಪುರ ಕಲಾಕೃತಿಗಳು ಕಲಾತ್ಮಕ ಅಂಶಗಳಂತೆ ಇಂತಹ ಕಲಾಸಂಪತ್ತು ನಮ್ಮ ಮುಂದಿನ ಜನಾಂಗಕ್ಕೆ ಉಳಿಸಿಕೊಂಡುವ ಕಾರ್ಯವಾಗಿದೆ.
- ಈ ಅಧ್ಯಾಯನದಿಂದ ಮೈಸೂರು ಮತ್ತು ಕರ್ನಾಟಕ ಹಲವು ಭಾಗಗಳಲ್ಲಿ ಮೈಸೂರು ಶೈಲಿಯ ಕಲಾಕೃತಿಗಳನ್ನು ರಚನೆ ಮಾಡುವವರು ದೊರೆಯುತ್ತಾರೆ, ಆದರೆ ಸುರಪುರ ಮತ್ತು ಕರ್ನಾಟಕದಲ್ಲಿ ಬೆರಳೆಣಿಕೆಯಷ್ಟು ಕಲಾವಿದರು ಗುರುತಿಸಿಕೊಂಡಿದ್ದಾರೆ. ಅದ್ದರಿಂದ ನಾಡಿನ ಸುರಪುರ ಶೈಲಿಯ ಹಿರಿಯ ಕಲಾವಿದರು ಕಲಾಶಿಬಿರ, ಕಲಾ ಪ್ರಾತ್ಯೆಕ್ಷಕೆ, ವಿಚಾರ ಸಂಕೀರ್ಣ, ಪ್ರದರ್ಶನ ಮಾಡುವ ಮೂಲಕ ಕಲೆಯನ್ನು ಸಂರಕ್ಷಣೆ ಮಾಡಬೇಕು.
- ಮೈಸೂರು ಐತಿಹಾಸಿಕ ಪ್ರೇಕ್ಷಣೆ ಸ್ಥಳವಾಗಿರುವದರಿಂದ ಕಲಾವಿದರೆ ಜನರಿಗೆ ಕಲಾಕೃತಿಗಳನ್ನು ನೋಡುವ ಒಂದು ಮಹತ್ವದ ಕೇಂದ್ರವಾಗಿದೆ.
- ಮೈಸೂರು ಮತ್ತು ಸುರಪುರ ಕಲಾಕೃತಿಗಳಲ್ಲಿ ಬಂಗಾರದ ಲೇಪನ ಬಹಳಷ್ಟು ವಿಶೇಷತೆ ಇಂದ ಕೂಡಿದೆ.
- ಮೈಸೂರು ಮತ್ತು ಸುರಪುರ ಕಲಾಕೃತಿಗಳಲ್ಲಿರುವ ವ್ಯತ್ಯಾಸಗಳನ್ನು ಈ ಅಧ್ಯಯನದಿಂದ ತಿಳಿದು ಕೊಳ್ಳಬಹುದು.

ಸಲಹೆಗಳು :

- ಭಾರತೀಯ ಚಿತ್ರಕಲೆಯಲ್ಲಿ 'ಸ್ವತಂತ್ರ ಶೈಲಿ'ಯೆಂದು ಗುರಿತಿಸಿಕೊಂಡ ಸುರಪುರ ಸಾಂಪ್ರದಾಯಿಕ ಚಿತ್ರಕಲೆಯು ಪುನಶ್ಚೇತನಗೊಳ್ಳಬೇಕಿದೆ.
- ಸುರಪುರದ ಭಿತ್ತಿಚಿತ್ರಗಳು ಹಲವಾರು ನಾಶವಾಗಿವೆ, ಇನ್ನೂ ಕೆಲವು ವಿನಾಶದ ಅಂಚಿನಲ್ಲಿವೆ ಇದಕ್ಕೆ ಸರ್ಕಾರ ಸಂರಕ್ಷಣೆ ನೀಡಬೇಕಿದೆ.
- ಕರ್ನಾಟಕ ಸರ್ಕಾರವು ಪ್ರತ್ಯೇಕವಾದ ಸಾಂಪ್ರದಾಯಿಕ ಶೈಲಿಗಳ ಕಾರ್ಯಗಾರ, ಕಲಾಶಿಬಿರ, ವಿಚಾರ ಸಂಕೀರ್ಣ ಇನ್ನೂ ಹಲವಾರು ಯೋಜನೆಗಳನ್ನು ಮಾಡಿ ಸಾಂಪ್ರದಾಯಿಕ ಶೈಲಿಯನ್ನು ಉಳಿಸುವುದು ಅವಶಕವಾಗಿದೆ.
- ಸುರಪುರ ಚಿತ್ರಕಲೆಗಳು ಒಂದು ಕಡೆಗೆ ಸಂಗ್ರಹಿಸಿ ಪ್ರತ್ಯೇಕ ಕಲಾಗ್ಯಾಲರಿ ಮಾಡುವುದು ಸೂಕ್ತ.
- ಈ ಅಧ್ಯಾಯನದಿಂದ ಮೈಸೂರು ಮತ್ತು ಕರ್ನಾಟಕ ಹಲವು ಭಾಗಗಳಲ್ಲಿ ಮೈಸೂರು ಶೈಲಿಯ ಕಲಾಕೃತಿಗಳನ್ನು ರಚನೆ ಮಾಡುವವರು ದೊರೆಯುತ್ತಾರೆ, ಆದರೆ ಸುರಪುರ ಸಾಂಪ್ರದಾಯಿಕ ಕಲಾಕೃತಿಗಳನ್ನು ರಚನೆ ಮಾಡುವವರು ಬಹಳ ಕಲಾವಿದರೂ ಇದ್ದರೂ ಕೂಡಾ ಕರ್ನಾಟಕದ ಇತರೆ ಭಾಗದಲ್ಲಿ ಈ ಶೈಲಿಯನ್ನು ಬಳಸಿಕೊಂಡು ಕಲಾಕೃತಿಗಳನ್ನು ರಚನೆ ಮಾಡುವವರ ಸಂಖ್ಯೆ ಬಹಳ ವಿರಳ, ಅದ್ದರಿಂದ ನಾಡಿನ ಸುರಪುರ ಶೈಲಿಯ ಯುವ, ಹಿರಿಯ ಕಲಾವಿದರು ಕಲಾಶಿಬಿರ, ಕಲಾ ಪ್ರಾತ್ಯಕ್ಷಿತೆ, ವಿಚಾರ ಸಂಕೀರ್ಣ, ಪ್ರದರ್ಶನ ಮಾಡುವ ಮೂಲಕ ಕಲೆಯನ್ನು ಪೋತ್ಸಾಹಿಸುವುದು ಸೂಕ್ತ.

ಅನುಬಂಧ – ೧

೧. ಗ್ರಂಥ ಋಣ

೦೧. ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ ಒಂದು ಅಧ್ಯಯನ — ಡಾ. ಯಾದಪ್ಪ ಬಿ. ಪರದೇಶಿ
ಪಿಹೆಚ್.ಡಿ. ಮಹಾಪ್ರಬಂಧ, (ಅಪ್ರಕಟಿತ)
ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೦೨. ಕರ್ನಾಟಕದ ಭಿತ್ತಿ ಚಿತ್ರಗಳು — ಬಿ.ವಿ.ಕೆ. ಶಾಸ್ತ್ರಿ
ಕರ್ನಾಟಕದ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೧೯೮೩

೦೩. ಕರ್ನಾಟಕದ ಚಿತ್ರಕಲೆಯಲ್ಲಿ ಬಣ್ಣದ ಬಳಕೆ — ಕೆ.ವಿ. ಕಾಳೆ
ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೦

೦೪. ಕರ್ನಾಟಕ ಭಿತ್ತಿಚಿತ್ರ ಪರಂಪರೆ — ಅ.ಲ. ನರಸಿಂಹನ್
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೧೯೯೮

೦೫. ಕಲಾ ಸಂಸ್ಕೃತಿ — ಎಂ.ಎಚ್. ಕೃಷ್ಣಯ್ಯ
ಸಪ್ನ ಬುಕ್ ಹೌಸ್, ಬೆಂಗಳೂರು. ೨೦೧೨

೦೬. ಕಲಾಕೋಶ — ಪಿ.ಆರ್. ತಿಪ್ಪೇಸ್ವಾಮಿ
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೧೯೯೪

೦೭. ಕೆರೆಗೋಡಿ ಮತ್ತು ರಂಗಾಪುರದ ಭಿತ್ತಿಚಿತ್ರಗಳು ಒಂದು
ತೌಲನಿಕ ಅಧ್ಯಯನ — ಕಾಂತರಾಜ ಸಿ.ಎಸ್
ಎಂ.ವಿ.ಎ ಪ್ರಬಂಧ, (ಅಪ್ರಕಟಿತ)
ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೧೨

೦೮. ಚಾರಿತ್ರಿಕ ಸುರಪುರ ಅಧ್ಯಯನಾತ್ಮಕ ನೋಟಗಳು — ಡಾ. ಅಮರೇಶ ಯತಗಲ್
ಪಲ್ಲವಿ ಪಬ್ಲಿಕೇಷನ್, ಲಿಂಗಸೂರು, ೨೦೧೮

೦೯. ಚಿತ್ರಕಲಾ ಪ್ರಪಂಚ — ಪಿ.ಆರ್.ತಿಪ್ಪೇಸ್ವಾಮಿ
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು, ೧೧೯೨

೧೦. ಚಿತ್ರಲೇಖ — ಡಾ. ಮಲ್ಲಿಕಾರ್ಜುನ ಬಾಗೋಡಿ
ಸರಚಂದ್ರ ಪ್ರಕಾಶನ, ಚಿತ್ತಾಪೂರ, ೨೦೧೦

೧೧. ದಖನಿ ಚಿತ್ರಕಲೆ — ಎಸ್.ಕೆ. ಅರುಣಿ
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು.೨೦೦೦

೧೨. ದೃಶ್ಯ ಕಲೆಗಳು ಒಂದು ತೌಲನಿಕ ಅಧ್ಯಯನ — ಡಾ.ಡಿ.ಎ. ಉಪಾಧ್ಯ
ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂ ೨೦೧೧

೧೩. ದಕ್ಷಿಣ ಕರ್ನಾಟಕದ ಭಿತ್ತ ಚಿತ್ರಕಲೆ — ಡಿ.ಆರ್.ಸುರೇಂದ್ರನಾಥ
ಪಿ.ಹೆಚ್.ಡಿ. ಮಹಾಪ್ರಬಂಧ, (ಅಪ್ರಕಟಿತ)
ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೧೭

೧೪. ದೃಶ್ಯಾನುಭವ — ಡಾ.ಮೋಹನರಾವ್ ಬಿ.ಪಂಚಾಳ
ಅನ್ನಪೂರ್ಣ ಪ್ರಕಾಶನ,
ಬೀದರ, ೨೦೧೦

೧೫. ನಿಜದ ನೆಲೆ — ಡಾ. ಎಸ್.ಸಿ. ಪಾಟೀಲ ಮತ್ತು ಸತ್ಯಾನಂದ ಪಾತ್ರೋಟ
(ಡಾ. ಬಿ.ಕೆ. ಹಿರೇಮಠ ಅಭಿನಂದನ ಗ್ರಂಥ)
ವೈರಾಗ್ಯದ ಮಲ್ಲಣಾರ್ಯ ಪ್ರಕಾಶನ,
ಬಸವೇಶ್ವರ ವಿದ್ಯಾವರ್ಧಕ ಸಂಘ,
ಬಾಗಲಕೋಟ, ೨೦೦೩

೧೬. ಬಾನ್ನಯ ಗರುಡಾದ್ರಿ — ಬಸವರಾಜ ಉಪ್ಪಿನ
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೧೯೯೫

೧೭. ಭಾರತೀಯ ಕಲೆ — ಎನ್. ಮರಿಶಾಮಾಚಾರ್
ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೧

೧೮. ಭಾರತೀಯ ಚಿತ್ರಕಲೆ — ಆರ್.ಜಿ. ರಾಯಕರ್
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೧೯೯೬

೧೯. ಮೈಸೂರು ಜಿಲ್ಲೆಯ ಚಿತ್ರಕಲೆ — ಹೇಮಂತಕುಮಾರ್ ಎ
ಎಂ.ಫಿಲ್. ಪ್ರಬಂಧ, (ಅಪ್ರಕಟಿತ)
ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೧೨

೨೦. ಮೈಸೂರಿನ ಚಿತ್ರಕಲೆ ಪರಂಪರೆ — ಆರ್.ನಂ.೩೦೫೩೧೬೪೧೨೮೪೮
ಕಿರು ಪ್ರಬಂಧ, (ಅಪ್ರಕಟಿತ)
ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೯

೨೧. ಮೈಸೂರು ಅರಮನೆ ದೇವಾಲಯದ ಭಿತ್ತ ಚಿತ್ರಕಲೆ — ಸಂಗಮೇಶ್ವರ ಪಾಟಿಲ
ಕಿರು ಪ್ರಬಂಧ, (ಅಪ್ರಕಟಿತ)

ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೮

೨೨. **ಸುರಪುರ ಚಿತ್ರಕಲೆ** — **ಡಾ. ಮಲ್ಲಿಕಾರ್ಜುನ ಸಿ.ಬಾಗೋಡಿ**
ಸರಚಂದ್ರ ಪ್ರಕಾಶನ, ಚಿತ್ತಾಪುರ ೨೦೦೯

೨೩. **ಸುರಪುರ ವಾಸ್ತು ಶಿಲ್ಪ ಮತ್ತು ಚಿತ್ರಕಲೆ** — **ಬೂದಯ್ಯ**
ಕಿರು ಪ್ರಬಂಧ, (ಅಪ್ರಕಟಿತ)
ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೧೦

೨೪. **ಸುರಪುರ ಚಿತ್ರಕಲೆ** — **ಸಚೀನ**
ಕಿರು ಪ್ರಬಂಧ, (ಅಪ್ರಕಟಿತ)
ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೧೮

೨. ಸಂಕ್ಷೇಪಗಳು

ಕ.ವಿ.ವಿ.ಹಂ	:	ಕನ್ನಡ ವಿಶ್ವವಿದ್ಯಾಲಯ, ಹಂಪಿ
ಕ.ವಿ.ವಿ.ಧಾ	:	ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಕ.ಲ.ಅ.ಬೆಂ	:	ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು
ಕ.ಸಾ.ಪ.ಬೆಂ	:	ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
ಮೈ.ವಿ.ವಿ	:	ಮೈಸೂರು ವಿಶ್ವವಿದ್ಯಾಲಯ, ಮೈಸೂರು
ಚಿ.ಪ.ಬೆಂ	:	ಚಿತ್ರಕಲಾ ಪರಿಷತ್ತು, ಬೆಂಗಳೂರು
ಪ್ರ.ಮೈ.ವಿ.ವಿ	:	ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ
ಪ್ರ.ಕ.ವಿ.ವಿ	:	ಪ್ರಸಾರಾಂಗ, ಕನ್ನಡವಿಶ್ವವಿದ್ಯಾಲಯ
ಪು	:	ಪುಸ್ತಕ
ಅ.ಪ್ರ	:	ಅಪ್ರಕಟಿತ
ಮ.ಪ್ರ	:	ಮಹಾಪ್ರಬಂಧ
ಸಂ	:	ಸಂಪಾದಕರು
ಪ್ರ.ಸಂ	:	ಪ್ರಧಾನ ಸಂಪಾದಕರು
ಲೇ	:	ಲೇಖಕರು
ಸಂ.ಪ್ರ	:	ಸಂಪ್ರಬಂಧ
ಕಿ.ಪ್ರ	:	ಕಿರುಪ್ರಬಂಧ
ಪು.ಸಂ	:	ಪುಟ ಸಂಖೆ

ಅಂತರಜಾಲ :

೧. **www.Mysore Tredinational Paintings.com**
೨. **www.Surpur Traditional Paintings.com**
೩. **www.Vijay Hagargundgi Painting.com**

ವಕ್ತೃಗಳ ಪಟ್ಟಿ :

೧. **ವಿ.ಜಿ. ಅಂದಾನಿ.** ಹಿರಿಯ ಕಲಾವಿದರು, ಕಲಬುರಗಿ.
೨. **ಸಿವಲಿಂಗಪ್ಪಾ.** ಹಿರಿಯ ಕಲಾವಿದರು, ಮೈಸೂರು.
೩. **ಪ್ರೊ.ಎಂ.ಜೆ. ಕಮಲಾಕ್ಷಿ.** ಹಿರಿಯ ಕಲಾವಿದರು, ಬೆಂಗಳೂರು.
೪. **ಕಿಶೋರ ನಾಗೂರೆ.** ಹಿರಿಯ ಕಲಾವಿದರು, ಶಾಹಬಾದ.
೫. **ಎಂ. ಗೀರಿಜಾ.** ಕಲಾವಿದರು, ಮೈಸೂರು.
೬. **ಶಿವಕುಮಾರ ಕೆ.** ಕಲಾವಿದರು, ಮೈಸೂರು.
೭. **ಎಂ.ಎಸ್. ಆನಂದ.** ಕಲಾವಿದರು, ಮೈಸೂರು.
೮. **ಡಾ. ರೆಹಮಾನ ಪಟೇಲ್.** ಕಲಾವಿದರು, ಕಲಬುರಗಿ







